ಸಂಪುಟ ೧೧
ಸಂಚಿಕೆ ೨

# ಕರ್ನಾಟಕ ಭಾರತಿ

ರಾಜ್ಯೋತ್ಸವ ಸಂಚಿಕೆ
ನವಂಬರ, ೧೯೭೮

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ,

# ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ, ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಕರ್ನಾಟಕ ಭಾರತಿ', ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಬರೆಯಬೇಕು.

# ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೧೧ ಸಂಚಿಕೆ : ೨

ಪ್ರಧಾನ ಸಂಪಾದಕರು :

**ಡಾ. ಎಂ. ಎಸ್. ಸುಂಕಾಪುರ**

ಸಹಾಯಕ ಸಂಪಾದಕರು :

**ಡಾ. ಕೆ. ಜಿ. ಶಾಸ್ತ್ರಿ**

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

# ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೧ ಸಂಚಿಕೆ : ೨

ನವಂಬರ ೧೯೭೮

## ರಾಜ್ಯೋತ್ಸವ ಸಂಚಿಕೆ





ಪ್ರಕಾಶಕರು :

ಶ್ರೀ ಸಿ. ಎಸ್. ಕಣವಿ
ನಿರ್ದೇಶಕರು, ವ್ಯಾಸಂಗ ವಿಸ್ತರಣ-ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಮುದ್ರಕರು :

ಪಿ. ಎಸ್. ಹೊಂಬಾಳಿ,
ಹೊಂಬಾಳಿ ಪ್ರಿಂಟರಿ,
ಶಕ್ತಿ ಟಾಕೀಜ ಕಂಪೌಂಡ್, ಕೊಯಿನ್ ರೋಡ, ಹುಬ್ಬಳ್ಳಿ.

# ಪ ರಿ ವಿ ಡಿ

# ದುರ್ಗಸಿಂಹನ ಪಂಚತಂತ್ರದ ಪಾಠಪರಿಷ್ಕರಣ

● ಗುಂಡ್ಮಿ, ಚಂದ್ರಶೇಖರ ಐತಾಳ.

## ೧.

ದುರ್ಗಸಿಂಹನ 'ಕರ್ಣಾಟಕ ಪಂಚತಂತ್ರಂ' ಕೃತಿಯು ಮೂರು ಆವೃತ್ತಿಗಳು ಇಷ್ಟರ ವರೆಗೆ ಬಂದಿವೆ. ಮೊದಲನೆಯದು 'ಕರ್ಣಾಟಕ ಕಾವ್ಯಮಂಜರಿ' ಗ್ರಂಥ ಮಾಲೆಯಲ್ಲಿ ೧೮೯೮ರಲ್ಲಿ ಪ್ರಕಟವಾದ ಆವೃತ್ತಿ. ಇದನ್ನು ಎಸ್. ಜಿ. ನರಸಿಂಹಾಚಾರ್ ಮತ್ತು ಮ. ಆ. ರಾಮಾನುಜಯ್ಯಂಗಾರ್ ಅವರು ಸಂಪಾದಿಸಿದರು. ಇದು ಮೂರು ಹಸ್ತಪ್ರತಿಗಳ ಸಹಾಯದಿಂದ ಸಂಪಾದಿತವಾಯಿತು ಎಂದು ಆ ಸಂಪಾದಕರು ಹೇಳಿದ್ದಾರೆ. ಎಪ್ಪತ್ತೈದು ವರ್ಷಗಳ ಅನಂತರ ೧೯೭೩ರಲ್ಲಿ ಎನ್. ಅನಂತರಂಗಾಚಾರ್ ಅವರು ಈ ಕೃತಿಯ ಪ್ರತಿಗಳ ಅಭಾವದಿಂದಾಗಿ ಇದನ್ನು ಪುನಃ ಸಂಪಾದಿಸಿ ಪ್ರಕಟಿಸಿದರು. ಈ ಆವೃತ್ತಿಯಲ್ಲಿ ಕಾವ್ಯಮಂಜರಿಯ ಪ್ರತಿಯಲ್ಲಿ ಉಪಯೋಗಿಸಿದ ಹಸ್ತಪ್ರತಿಗಳನ್ನಲ್ಲದೆ ಮತ್ತೆ ಮೂರು ಪ್ರತಿಗಳನ್ನು ಬಳಸಿದೆ ಎಂದು ಅದರ ಸಂಪಾದಕರು ಹೇಳಿದ್ದಾರೆ. ಇವುಗಳಲ್ಲಿ ಒಂದು ಉತ್ತರ ಭಾರತದ ಆರಾನಗರದ ಜೈನಸಿದ್ಧಾಂತ ಭವನದಲ್ಲಿ ಸಿಕ್ಕಿದ ಓಲೆಯ ಪ್ರತಿ. ಮೂರನೆಯದು ಕನ್ನಡ ಸಾಹಿತ್ಯ ಪರಿಷತ್ತು ಸಾಮಾನ್ಯ ಜನರಿಗಾಗಿ ಸಿದ್ಧಪಡಿಸಿದ, ಮೂಲ ಕೃತಿಯೊಡನೆ ಕನ್ನಡ ಗದ್ಯಾನುವಾದವನ್ನು ಸೇರಿಸಿದ ೧೯೭೬ರ ಆವೃತ್ತಿ. ಇದು ಮೊದಲ ಎರಡು ಆವೃತ್ತಿಗಳನ್ನು ಆಧರಿಸಿ ಜನಸಾಮಾನ್ಯರಿಗಾಗಿ ಸಿದ್ಧವಾದುದರಿಂದ ಪಾಠಾಂತರಗಳ ಹಾವಳಿಯನ್ನು ಒಳಗೊಂಡಿಲ್ಲ. ಪ್ರಸ್ತುತ ಲೇಖಕರು ಇದನ್ನು ಸಂಪಾದಿಸಿದ್ದಾರೆ.

ಇವುಗಳಲ್ಲಿ 'ಕಾವ್ಯಮಂಜರಿ'ಯ ಆವೃತ್ತಿ ದುರ್ಗಸಿಂಹನ ಪಂಚತಂತ್ರವನ್ನು ಸಂಪಾದಿಸುವವರಿಗೆಲ್ಲ ಮೂಲಾಧಾರವಾಗಿದೆ. ಪ್ರಕಟಿತವಾದ ಕಾವ್ಯಭಾಗವನ್ನು ಬಿಟ್ಟರೆ ಉಳಿದವೆಲ್ಲ ಹೆಚ್ಚಿನ ಮಟ್ಟಿಗೆ ಶುದ್ಧವಾಗಿದೆ. ಇಲ್ಲಿ ಕೊಟ್ಟ ಪಾಠದಲ್ಲಿ ಪ್ರಕ್ಷಿಪ್ತ ಭಾಗಗಳನ್ನು ಸದ್ಯಃ ಸ್ಥಿತಿಯಲ್ಲಿ ನಿರ್ಣಯಿಸುವದು ಕಷ್ಟ. ಪಂಚತಂತ್ರದ ಇನ್ನೂ ಕೆಲವು ಪ್ರತಿಗಳು ಸಿಕ್ಕಿದಲ್ಲಿ ಈ ಕೃತಿಯನ್ನು ಶಾಸ್ತ್ರೀಯವಾಗಿ ಸಂಪಾದಿಸುವ ಕೆಲಸ

ಇನ್ನೂ ಉಳಿದಿದೆ. ಎನ್. ಅನಂತರಂಗಾಚಾರ್ ಅವರಿಗೆ ಸಿಕ್ಕಿದ ಆರಾ ಹಾಗೂ ಶ್ರವಣಬೆಳಗೊಳದ ಪ್ರತಿಗಳು ಪೂರ್ಣಪಾಠಗಳಲ್ಲ. "ಇವುಗಳಲ್ಲಿ ದುರ್ಗಸಿಂಹನ ಪದ್ಯಭಾಗಗಳನ್ನು ಮಾತ್ರ ಉಳಿಸಿಕೊಂಡು ಗದ್ಯಭಾಗದ ಹೊಸಗನ್ನಡ ಅನುವಾದ ಕೊಟ್ಟಿದೆ. ಆದುದರಿಂದ ಪದ್ಯಭಾಗದಲ್ಲಿ ಸಂದೇಹ ಬಂದಾಗ ಮಾತ್ರ ಇದರ ಪಾಠ ವನ್ನು ಅಪೂರ್ವವಾಗಿ ಕೊಟ್ಟಿದೆ."[1]

ಈ ಲೇಖಕನು ಸಂಪಾದಿಸುವಾಗ ಕನ್ನಡ ಸಾಹಿತ್ಯ ಪರಿಷತ್ತು ಹಾಕಿಕೊಂಡ ಯೋಜನೆಯ ಉದ್ದೇಶಕ್ಕೆ ತಕ್ಕಂತೆ ಗ್ರಂಥವನ್ನು ಸಿದ್ಧಪಡಿಸಬೇಕಾಗಿದುದ್ದರಿಂದ ಶಾಸ್ತ್ರೀಯವಾದ ಗ್ರಂಥ ಸಂಪಾದನೆಯನ್ನು ಮಾಡುವುದು ಸಾಧ್ಯವಾಗಲಿಲ್ಲ. ಆದರೂ ಅಲ್ಲಲ್ಲಿ ಪಾಠಪರಿಷ್ಕರಣದ ದೃಷ್ಟಿಯಿಂದ ಸಂಪಾದಕ ನಿಯೋಜಿತವಾದ ಪಾಠಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪರಿಚಯ ಮಾಡಿಕೊಡಬಹುದು.

'ಪೀಠಿಕಾ ಪ್ರಕರಣ' ದಲ್ಲಿ ಬರುವ ಐದನೆಯ ಮತ್ತು ಆರನೆಯ ಪದ್ಯಗಳು 'ಕಾವ್ಯಮಂಜರಿ' ಆವೃತ್ತಿಯಲ್ಲಿ ಪ್ರಕಟಿತವಾಗಿ ಭಾಗಶಃ ಅಚ್ಚಾಗಿವೆ: ಅವು ಹೀಗಿವೆ :

ಅತನುಶ್ರೀ ಜನ್ಮಗೇಹಂ ಕುಮುದವನ ಸಖಂ ತಾರಕಾನೀಕ ಲಕ್ಷ್ಮೀ
ಪತಿಸದ್ಯೋಮಾರ್ಜಿತಾಂಧ್ರೀಜನ ದಶನ ನಿಭ ಚ್ಛಾಯನದ್ರೀಂದ್ರ ಪುತ್ರೀ
...........................................................................
...................... ಗೆಮಗತಿ ಮುದಮಂ ರೋಹಿಣೀಜೀವಿತೇಶಂ ॥
...................... ಶತಪತ್ರಾರಾತಿ ವೀರಪ್ರಥ ......................
.............................................. (ತ್ರ ಉ) ದ್ವಾರಂಗುದಾರಂ
...........................................................................
.................. ರತಿವಲ್ಲಭಂ ಕುಡುಗೆ ಮತ್ಕಾವ್ಯಕ್ಕೆ ಸೌಭಾಗ್ಯಮಂ ॥[2]

ಈ ಎರಡು ಪದ್ಯಗಳನ್ನು ಎನ್. ಅನಂತರಂಗಾಚಾರ್ ಅವರ ಆವೃತ್ತಿಯಲ್ಲಿ ಹೀಗೆ ಕೊಡಲಾಗಿದೆ :

ಅತನು ಶ್ರೀ ಜನ್ಮಗೇಹಂ ಕುಮುದವನಸಖಂ ತಾರಕಾನೀಕ ಲಕ್ಷ್ಮೀ–
ಪತಿ ಸದ್ಯೋ್ಯೀಮಂ **ದ್ವಿಜೇಂದ್ರಾ**ಮಲ ದಶನನಿಭಚ್ಛಾಯನದ್ರೀಂದ್ರ ಪುತ್ರೀ–

---

1. ಎನ್. ಅನಂತರಂಗಾಚಾರ್ : ಕರ್ಣಾಟಕ ಪಂಚತಂತ್ರಂ : ಪೀಠಿಕೆ : ಪು. ೩೫. ೧೯೭೩ ; ಶಾರದಾ ಮಂದಿರ ; ರಾಮಯ್ಯರ್ ರಸ್ತೆ, ಮೈಸೂರು.

2. ಎಸ್. ಜಿ. ನರಸಿಂಹಾಚಾರ್ ಮತ್ತು ಮ. ಅ. ರಾಮಾನುಜಯ್ಯಂಗಾರ್ : ಪಂಚತಂತ್ರಂ : ಕರ್ಣಾಟಕ ಕಾವ್ಯಮಂಜರಿ : ಪು. ೨ ; ೧೮೯೮ ;

ಪತಿ ಚೂಡಾರತ್ನಗೀಗಾಗಳು ಪತಿ ಮುದಮಂ ರೋಹಿಣೀಜೀವಿತೇಶಂ
ಶತಪತ್ರಾರಾತಿ ವಿಪ್ರಾನ್ವಯ ಗಗನಚರಚ್ಛಾರು ಚಂದ್ರಂಗೆ ಚಂದ್ರಂ ॥
ನನೆಯಂಬಿಂ ಹಿಮವನ್ಮಹೀಧರ ತನೂಜಾಧೀಶನಂ ಗೆಲ್ದ ವೀ-
ರನಜೇಯಂ ಮಧುರೋಹಿಣೀಪ್ರಿಯಸಖಂ ಮೀನಧ್ವಜಂ ಕಾಮಿನೀ-
ಜನಕೇಳೀಗುರು ಚಿತ್ತಜಂ ಸುರತಲೀಲಾ **ನಾಟಿಕಾ** ಸೂತ್ರಧಾ-
ರನುದಾರಂ ರತಿವಲ್ಲಭಂ ಕುಡುಗೆ ಮತ್ಕಾವ್ಯಕ್ಕೆ ಸೌಭಾಗ್ಯಮಂ ॥ [3]

ಇಲ್ಲಿ ಎನ್. ಅನಂತರಂಗಾಚಾರ್ ಅವರು ಐದನೆಯ ಪದ್ಯದ 'ದ್ವಿಜೇಂದ್ರಾಮಲ ........ಚ್ಛಾಯನ್' ಎಂಬ ಭಾಗಕ್ಕೆ 'ಐರಾವತದ ದಂತಕ್ಕೆ ಸಮಾನವಾದ ಛಾಯೆಯುಳ್ಳವನು' ಎಂಬ ಅರ್ಥವನ್ನು ಕೊಟ್ಟಿದ್ದಾರೆ.[4] '**ದ್ವಿಜೇಂದ್ರ**' ಎಂಬ ಶಬ್ದಕ್ಕೆ ಐರಾವತ ಎಂಬ ಅರ್ಥವಿಲ್ಲ. ಇದಕ್ಕೆ ಪಾಠಾಂತರವನ್ನು ಅವರು ಸೂಚಿಸಿಲ್ಲ. ಆದುದರಿಂದ ಆ ಪಾಠವನ್ನು '**ದ್ವಿ [ಪೆ] ೦ದ್ರ**' ಎಂದು ಪರಿಷ್ಕರಿಸಬಹುದು. ಹಾಗೆಯೇ ಆರನೆಯ ಪದ್ಯದಲ್ಲಿ 'ಸುರತಲೀಲಾ ನಾಟಕಾಸೂತ್ರಧಾರನ್' ಎಂಬ ಪಾಠ ಸರಿಯಲ್ಲ. ಇದಕ್ಕೂ ಪಾಠಾಂತರವನ್ನು ಸಂಪಾದಕರು ಕೊಟ್ಟಿಲ್ಲ. '**ನಾಟಿಕಾ**' ಎಂಬ ಶಬ್ದ ಸಂಸ್ಕೃತದಲ್ಲಿಲ್ಲ. ಆದುದರಿಂದ ಆ ಪಾಠವನ್ನು '**ನಾ [ಟ] ಕಾ**' ಎಂದು ಪರಿಷ್ಕರಿಸಬೇಕಾಗುತ್ತದೆ. ಈ ರೀತಿಯ ಪಾಠಪರಿಷ್ಕರಣವನ್ನು ಪರಿಷತ್ ಆವೃತ್ತಿಯಲ್ಲಿ ಕಾಣಬಹುದು. [5]

## ೨.

ದುರ್ಗಸಿಂಹನ ಪಂಚತಂತ್ರದ ಮೊದಲನೆಯ 'ನರಿಯ ಕತೆ' ಯೇ ಯಾವುದು ಎಂಬ ಬಗೆಗೆ ಚರ್ಚೆಯಿದೆ. 'ಕರ್ಣಾಟಕ ಕಾವ್ಯ ಮಂಜರಿ' ಯ ಸಂಪಾದಕರು ಕೊಟ್ಟ ಕಥೆ 'ಕ' ಪ್ರತಿಯಲ್ಲಿ ಮಾತ್ರವಿದೆಯೆಂದೂ, "ಈ ವಾಕ್ಯಸರಣಿಯ ರೀತಿಯಿಂದಲೂ ಇದು ಏತತ್ಕವಿ ಕರ್ತೃಕವಲ್ಲವೆಂದು ತೋರುತ್ತದೆ." [6] ಎಂದೂ ಟಿಪ್ಪಣಿಯನ್ನು ಬರೆದಿದ್ದಾರೆ. ಎನ್. ಅನಂತರಂಗಾಚಾರ್ ಅವರ ಆವೃತ್ತಿಯಲ್ಲಿ ಬೇರೊಂದು ಕಥೆಯನ್ನು ಕೊಡಲಾಗಿದೆ. ಪರಿಷತ್ ಪ್ರಕಟಿಸಿದ 'ಕರ್ಣಾಟಕ ಪಂಚತಂತ್ರಂ' ಕೃತಿಯಲ್ಲಿ ಸಂಪಾದಕರ ಅಭಿಪ್ರಾಯದ ವಿರುದ್ಧವಾಗಿ ಎನ್. ಅನಂತರಂಗಾಚಾರ್ ಅವರ ಆವೃತ್ತಿಯ ಕಥೆಯನ್ನೇ ಪಠ್ಯ ಭಾಗದಲ್ಲಿ ಕೊಟ್ಟು, 'ಕಾವ್ಯಮಂಜರಿ' ಯಲ್ಲಿದ್ದ ಏಕೈಕ

3. ಎನ್. ಅನಂತರಂಗಾಚಾರ್ : ಕರ್ಣಾಟಕ ಪಂಚತಂತ್ರಂ : ಪು. ೨, ಪ. ೫, ೬.

4. ಅದೇ : ಪು. ೨೯೯-೩೦೦.

5. ಗುಂಡ್ಮಿ ಚಂದ್ರಶೇಖರ ಐತಾಳ : ಕರ್ಣಾಟಕ ಪಂಚತಂತ್ರಂ : ಪು. ೨೨ : ಪ. ೫, ೬.

6. ಎಸ್. ಜಿ. ನರಸಿಂಹಾಚಾರ್ : ಪಂಚತಂತ್ರಂ : ಪು. ೧೯ : ಅಡಿಟಿಪ್ಪಣಿ.

ಹಸ್ತಪ್ರತಿಯ ಕಥೆಯನ್ನು 'ಅನುಬಂಧ' ದಲ್ಲಿ ಕೊಡಲಾಗಿದೆ. ಈಗ ಮೊದಲು 'ಕರ್ಣಾಟಕ ಕಾವ್ಯಮಂಜರಿ' ಯ ಪಾಠವನ್ನೂ. ಅನಂತರ ಎನ್. ಅನಂತರಂಗಾಚಾರ್ ಅವರ ಆವೃತ್ತಿಯ ಪಾಠವನ್ನೂ ಸಹೃದಯರ ಮುಂದೆ ಇಡುತ್ತೇನೆ :

## ೧. ನರಿಯ ಕಥೆ

ಅಡವಿ [ಯೊಳ್]* ಒಂದು ನರಿಯಾಹಾರಂ ಬಡೆಯದೆ ಬರಬರುತ್ತೆ ಒಂದು ಸತ್ತ ಎತ್ತಂ ಕಂಡು ಸಡಗರಿಸಿ ಅದಱ ಪೃಷ್ಠನಾಳದಿನೊಡಲೊಳಪೊಕ್ಕು ತಿನುತಿರ್ಪನ್ನೆವರಂ ನಿರ್ದ್ರವಮಪ್ಪುದೇ ಕಾರಣಮಾಗಿ ಕಡುವಿಸಿಲಿಂಗೆ ತಟ್ಟಾಱಿದ ಚರ್ಮದಿಂ ಪೃಷ್ಠದ್ವಾರಂ ಮುಚ್ಚಲಾ ಜಂಬುಕಂ ತನಗೆಲ್ಲಿಯುಂ ಪೋಗಲಿಂಬಿಲ್ಲದೆ ಚಿಂತಾಕ್ರಾಂತನಾಗಿರಲನಿತರ್ಕೆ ಆಪೂರ ಅಂತ್ಯಜರ್ ಸಾರಮೇಯಂಗಳಿನೆಯ್ತಂದು ಸತ್ತಿರ್ದಡ್ವಾಹನಂ ಕಂಡದಱ ಪೊಡೆಯಂ ದಾಣೆಯಿಂ ಪೊಯ್ಯಲ್ಕೆಯಾ ಕ್ರೋಷ್ಟು ನಿರ್ವೇದಂಗೊಂಡೊಂದುಪಾಯಮಂ ಕಂಡು, ಎಲವೊ ಮ್ಲೇಚ್ಛರುಗಳಿರಾ ! ಬ್ರಾಹ್ಮಣೋತ್ತಮನಪ್ಪ ನಾವೊಂದು ಪಾಪ ನಿವಾರಣಾರ್ಥವಾಗಿ ಗೋವಿನ ಜಠರಮಂ ಪೊಕ್ಕಿರ್ದೆವು. ನೀವೀ ಪಶುವಿನ ಪೃಷ್ಠ ಕುಷ್ಣೋದಕಮಂ ತಂದೆಱೆದು ದೂರಂ ಪೋಗಿಮೆನಲಾ ಶ್ವಪಚಕರ್ ಬೆದಱಿಯಾ ಗೋವಿನ ಪೃಷ್ಠ ಭಾಗಕ್ಕೆ ಕಾಯ್ದನೀರಂ ತಂದೆಱೆದು, ಎಲೈಸ್ವಾಮೀ, ನೀವತ್ತ ಪೋ [ ಗಿಮೆ ] + ನಲಾ ಸೃಗಾಲಂ, ಎಲೆ ಅಂತ್ಯಜರುಗಳಿರಾ, ನಾವು ಪೊಸಲಾಂಛನಧಾರಿ ಗಳಪ್ಪುದಱಿಂ ನಿಮ್ಮೊಡನಿರ್ಪ ಜಾಯಿಲಂಗಳ್ ಕಂಡು ತಗುಳ್ದು ಬಂದೆಮ್ಮಂ ಕಡಿದುವಾದೊಡಾದೋಷಂ ನಿಮಗಪ್ಪುದಾಗಿಯಾ ಕುಕ್ಕುರಂಗಳಂ ಕಟ್ಟಿರ್ದ ಪಾಸಿನ ನೇಣಂ ನಿಮ್ಮ ಕರ್ಣದ್ವಾರದೊಳ್ ಬಂಧಿಸಿಕೊಳ್ಳಿಮೆನೆಲಾ ಕುನ್ನಿಗಳಂ ತಮ್ಮ ಶ್ರೋತ್ರ ನಾಳದೊಳ್ ತೊಡರ್ಚಿಕೊಂಬುದುಂ, ಬಳ್ಳು ಎತ್ತಿನುದರದಿಂ ಪೊಱಮಟ್ಟು ಓಡುವುದುಂ, ಶ್ವಾನಂಗಳ್ ಕಂಡು ತೂನುತ್ತಿರಲಾ ಚಂಡಾಲರ್ ತಮ್ಮ ಕಿವಿಗಳ್ ಪಱಿಗುಮೆಂದು ಪಿಂದಕ್ಕೆ ತೆಗೆವುದೆ ಪೇತ್ರಾಗಲ್ ಬಳ್ಳುವತ್ತಂ ಪೋಗಿ ಗುಡ್ಡಮಂ ಪೊಕ್ಕುದು.[7]

### ನರಿಯ ಕತೆ

ಸಿರಿವಾಸಿಯೆಂಬ ಪುರದೊಳ್
ಸಿರಿವಂತನೆಂಬನೊರ್ವ ಪಾದಜನಧಿಕಂ
ಸ್ಮರಚಾಪನೊಡನೆ ದೊರೆಯೆನೆ
ಧರೆಯೊಳ್ ತಾಂ ಕರ್ಪ್ರವಿತ್ತಿ ಪಾಲಿಸುತಿರ್ದಂ ॥ ೭೩

* ಯಲ್ಲಿ (ಕರ್ನಾಟಕ ಕಾವ್ಯಮಂಜರಿ ಆವೃತ್ತಿ.)
\+ ಗೆ (ಕರ್ಣಾಟಕ ಕಾವ್ಯಮಂಜರಿ ಆವೃತ್ತಿ.)
7. ಕರ್ಣಾಟಕ ಕಾವ್ಯಮಂಜರಿ ಆವೃತ್ತಿ : ಪು. ೧೯-೨೦.

ವ ॥ ಅಂತಾತಂ **ಕರ್ವುನಿತ್ತಿ** ಸುತ್ತಂ ಬೇಲಿಯಂ ಕಟ್ಟಿ ಪಾಲಿಸುತ್ತುಮಿರೆ ಕೆಲವಾನೊಂದು ದಿವಸಕ್ಕೆ ಕರ್ವುನೆಱೆದು ಗಿಣ್ಣೇಱುವುದುಂ ಮೃಗಧೂರ್ತನೆಂಬು-ದೊಂದು ನರಿಯದಂ ಕಂಡು ಸಮೀಪಕ್ಕೆವಂದು ಬೇಲಿಯಂ ಸುತ್ತಿವಂದು ನೋಡಿ ಯೊಂದೆಡೆಯೊಳೊಂದು ಕಳ್ಳದಾರಿಯಂ ಕಂಡು ನಿಚ್ಚನಿಚ್ಚಂ ಬಂದು ಕರ್ವೆಲ್ಲಮಂ ತಿಂದು ಬೇಸಱಿಸುತ್ತಿರೆ ಆ ಶೂದ್ರಂ ನರಿಯ ಕಾಟಕ್ಕೆ ಬೇಸತ್ತುವೊಂದು ದಿವಸಮಾ ನರಿಯಂ ಕೊಲಲುಪಾಯಮಂ ಕಂಡುವೊಂದು ಮಾರಗಲದ ಬೇಲಿಯಂ ಕಿಱ್ತು ಪೆರ್ಬಟ್ಟೆಯಂ ಮಾಡಿ ತಾನುಮಾ ಬಟ್ಟೆಯೊಳ್ ಬಯ್ಗಿನ ಸಮಯದೊಳವೊಂದು ಕಯ್ಯೊಳ್ ಕೂಬಿ ಬುತ್ತಿಯಂ ಪಿಡಿದು ಮತ್ತೊಂದು ಕಯ್ಯೊಳ್ ದೊಡ್ಡಿತಪ್ಪದೊಂದು ದಂಡಮಂ ಪಿಡಿದು ತಲೆಯಂ ಕೆದಱಿ ಕಣ್ಣಂ ಮುಚ್ಚಿ ಸತ್ತ ಪೆಣನಂತೆ ಬಿಟ್ಟಿರ್ಪುದುಂ ಆ ನರಿ ಬಂದು ಸಮೀಪದೊಳ್ ನಿಂದು ನೋಡಿ ತನ್ನ ಮನದೊಳ್ ಸಂಶಯಂ ಪುಟ್ಟಿ ಮತ್ತಂ ಕಿಱಿದಂತರಂ ತೊಲಗಿ ತನ್ನೊಳಿಯಿಂತೆಂದುದು : ನಾಂ ಕಾಣದ ಸಂಗ್ರಾಮ ರಂಗಮಿಲ್ಲ. ತೊಬಿಲದ ವಿಷಯಮಿಲ್ಲ. ಪೋಗದ ಪೆರ್ಬಟ್ಟೆಯಿಲ್ಲ. ಆವೆಡೆಯೊಳಂ ಇಂತಪ್ಪ ಸಾವಂ ಕಂಡುದಿಲ್ಲ. ಇವನೇಂ ಕಾರಣಮಿಂತು ಬಿಟ್ಟಿಪನೋ ? ಎನ್ನಂ ಕೊಲ-ಲ್ಕೆಂದು ಕಪಟ ಮರಣಮಂ ತಾಳ್ದಿರ್ಪನೋ ? ಮೇಣಿವಂ ಪೋಗುತ್ತುಂ ಬಟ್ಟೆಯೊಳ್ ಪಸಿದು ಬುತ್ತಿಯನುಣಲ್ಕೆಂದು ಕುಳ್ಳಿರ್ದುಣುತ್ತುಂ ಗಂಟಲ್ ಸಿಲ್ಕಿ ಸತ್ತನೋ ? ಇದಂ ನಂಬಲ್ ಬಾರದು. ಪೆಣನಂ ಮುಟ್ಟಲುಂ ಬಾರದು. ಕರ್ಬಿನ ತೋಟಮಂ ಪುಗಲುಂ ಬಾರದು. ಇದಂ ವಿಚಾರಿಸುವೊಡೆ ಇವಂ ಸತ್ತುದು ಪುಸಿದಿಟಮೆಂದು ಅಱಿವೊಡೆ ಊರ ಸಮೀಪಕ್ಕೆ ಪೋದಂದು ಇವಂ ಸತ್ತ ಸಾವುಳ್ಳೊಡೆ ಊರೊಳಗೆ **ಹಲುಬುತ್ತು**ಮಱು-ತಿರ್ಕುಂ. ಅಲ್ಲದಾಗಳ್ ಸುಮ್ಮನಿರ್ಕುಮೆಂದು ತನ್ನೊಳ್ ನಿಶ್ಚೈಸಿ ಊರ ಸಮೀಪಕ್ಕೆ ಪೋಗಿ ನಾಲ್ಕುಂ ಕಡೆಯುನಾರೈದು ಆವಕಳಕಳಮಂ ಕೇಳದೆ ಮಗುಟಿವಂದು ಎನ್ನುಮಂ ಕೊಲಲ್ಕಿವಂ ಮಾಡಿದ ಮಾಯಮಿದೆಂದು ನಿಶ್ಚೈಸಿ ತನ್ನ ಬುದ್ಧಿಗೆ ತಾನೆ ಮೆಚ್ಚಿ ನಕ್ಕು-ಯಿಂತೆಂದುದು :

ಶ್ಲೋ ॥ ಆಶ್ಚರ್ಯಮರಣಂ ದೃಷ್ಟಂ ಹಸ್ತೇ ದಂಡಕಪಿಂಡಯೋಃ
ಗ್ರಾಮೇ ಕಳಕಳಂ ನಾಸ್ತಿ ಯಃ ಪಲಾಯನ್ ಸ ಜೀವತಿ ॥ ೪ ॥

ಟೀ ॥ ಅಪೂರ್ವಮಪ್ಪ ಸಾವಂ ಕಂಡೆಂ, ಕೈಯ್ಯೊಳೆರಡರೊಳಂ ಕೂಬಿಬುತ್ತಿಯಂ ಡಾಣೆಯಂ ಪಿಡಿದುಕೊಂಡಿರ್ಪುದು. ಊರೊಳಗೆ ಆವ ಕಳಕಳಮುಮಿಲ್ಲ ಎಂದು **ತನ್ನ ಬದ್ಧಿಗೆ** ತಾನೇ ಮೆಚ್ಚಿ ಓಡಿಪೋಗಿ ಬರ್ದುಂಕಿದತ್ತು.[8]

---

8. ಎನ್. ಅನಂತರಂಗಾಚಾರ್ ಆವೃತ್ತಿ : ಪು. ೧೭-೧೮.

ಈ ಎರಡು ಪಾಠಗಳಲ್ಲಿ ದುರ್ಗಸಿಂಹನ ಪಾಠ ಯಾವುದು ಎಂಬುದನ್ನು ನಿರ್ಣಯಿಸುವುದು ಹೇಗೆ? ಇದು ಗ್ರಂಥಸಂಪಾದಕನಿಗೆ ಕಾಲವು ಒಡ್ಡಿದ ಸವಾಲು. ನಾವು ಇಲ್ಲಿ 'ಕರ್ಣಾಟಕ ಕಾವ್ಯಮಂಜರಿ'ಯ ಏಕೈಕ ಹಸ್ತಪ್ರತಿಯ ಪಾಠವೇ ದುರ್ಗಸಿಂಹನ ಪಾಠ ಎಂಬುದನ್ನು ಸಮರ್ಥಿಸುತ್ತೇವೆ. ಕಾವ್ಯಮಂಜರಿಯ ಸಂಪಾದಕರು "ಈ ಕಥೆ ಖ, ಗ, ಪ್ರತಿಗಳಲ್ಲಿಲ್ಲದುದರಿಂದಲೂ, ಈ ವಾಕ್ಯಸರಣಿಯ ರೀತಿಯಿಂದಲೂ ಇದು ಏತತ್ಕವಿ ಕರ್ತೃಕವಲ್ಲವೆಂದು ತೋರುತ್ತದೆ" ಎಂದು ಹೇಳಿದ ಕಾರಣಕ್ಕಾಗಿಯೇ ನಾವು ಇದು ಏತತ್ಕವಿಕರ್ತೃಕ ಎಂದು ಹೇಳುತ್ತೇವೆ. ಒಂದು ಪಾಠವು ಏಕೈಕ ಹಸ್ತಪ್ರತಿಯಲ್ಲಿದೆ ಎಂಬ ಕಾರಣಕ್ಕಾಗಿ ಆ ಪಾಠವು ಪರಿತ್ಯಾಜ್ಯವಲ್ಲ. ಎಷ್ಟೋ ವೇಳೆ ಏಕೈಕ ಹಸ್ತಪ್ರತಿಯ ಪಾಠವೇ ಸ್ವೀಕಾರಾರ್ಹವೆನಿಸಿದೆ.

ಈ ನಮ್ಮ ಅಭಿಪ್ರಾಯವನ್ನು ಶೈಲಿಯ ದೃಷ್ಟಿಯಿಂದಲೂ ಸಮರ್ಥಿಸಬಹುದು. "ದುರ್ಗಸಿಂಹನ ಶೈಲಿಯ ಪ್ರಧಾನಗುಣ ವಿಡಂಬನ ವೀರತೆ (mock heroism). ಸಣ್ಣ ಮಾತಿನಲ್ಲಿ ಹೇಳಬಹುದಾದುದನ್ನು ದೊಡ್ಡ ಮಾತಿನಲ್ಲಿ ಸಂಸ್ಕೃತ ಭೂಯಿಷ್ಠ ಸಮಾಸಪುಂಜ ಪಿಂಜರಿತ ರೀತಿಯಲ್ಲಿ ಹೇಳಿ ಲೇವಡಿ ಮಾಡುತ್ತಾನೆ.... 'ಬ್ರಾಹ್ಮಣೋತ್ತಮನಪ್ಪ ನಾವೊಂದು ಪಾಪನಿವಾರಣಾರ್ಥವಾಗಿ ಗೋವಿನ ಜಠರಮಂಪೊಕ್ಕಿರ್ದೆವು' ಎಂದು ಸತ್ತ ಎತ್ತಿನ ಹೊಟ್ಟೆಯೊಳಗಿಂದ ಹೊರಬರಲಾರದೆ ಒದ್ದಾಡುವ ನರಿ ಈ ಮಾತನ್ನು ಹೇಳುವಾಗ ನಾವು ನಗದಿರಲಾರೆವು."[9] ಅಲ್ಲದೆ, ದುರ್ಗಸಿಂಹನು ಒಮ್ಮೆ ಬಳಸಿದ ಪದವನ್ನು ಮತ್ತೊಮ್ಮೆ ಬಳಸುವುದು ಅಪೂರ್ವ; ಅವನ ಗ್ರಂಥದ ಉದ್ದಕ್ಕೂ ಪರ್ಯಾಯನಾಮಗಳನ್ನು ಪ್ರಯೋಗಿಸಿರುವುದನ್ನು ಕಾಣಬಹುದು. ಇದು ಸತ್ತ ಎತ್ತಿನ ಕಥೆಯಲ್ಲಿ ಅಚ್ಚೊತ್ತಿ ಕಾಣುವ ಹಾಗೆ ಕಬ್ಬಿನ ತೋಟದ ಕಥೆಯಲ್ಲಿ ಕಾಣುವುದಿಲ್ಲ. ಸತ್ತ ಎತ್ತಿನ ಕಥೆಯಲ್ಲಿ ಬಳಸಿದ ಪರ್ಯಾಯನಾಮಗಳ ವೈವಿಧ್ಯವನ್ನು ನೋಡಿರಿ :

| (1) | (2) | (3) | (4) | (5) |
|---|---|---|---|---|
| ನರಿ | ಎತ್ತು | ಅಂತ್ಯಜರ್ | ಸಾರಮೇಯಂಗಳ್ | ಕರ್ಣದ್ವಾರ |
| ಜಂಬುಕ | ಅಡ್ವಾಹ | ಮ್ಲೇಚ್ಛರುಗಳ್ | ಜಾಯಿಲಂಗಳ್ | ಶ್ರೋತ್ರನಾಳ |
| ಕ್ರೋಷ್ಟು | ಗೋವು | ಶ್ವಪಚರ್ | ಕುಕ್ಕುರಂಗಳ್ | ಕಿವಿಗಳ್ |
| ಸೃಗಾಲ | ಪಶು | ಚಂಡಾಲರ್ | ಕುನ್ನಿಗಳ್ | |
| ಬಳ್ಳು | | | ಶ್ವಾನಂಗಳ್ | |

9. ಗುಂಡ್ಮಿ ಚಂದ್ರಶೇಖರ ಐತಾಳ : ಕರ್ನಾಟಕ ಪಂಚತಂತ್ರಂ : ಉಪೋದ್ಘಾತ : ಪು. ೧೨; ಕನ್ನಡ ಸಾಹಿತ್ಯ ಪರಿಷತ್ತು ; ೧೯೭೬.

ಅಲ್ಲದೆ ಸತ್ತ ಎತ್ತಿನ ಕಥೆಯಲ್ಲಿ ಕುತೂಹಲವನ್ನು ಕೆರಳಿಸುವ ಅಂಶವಿದೆ. ನರಿಯು ಹೇಗೆ ತಪ್ಪಿಸಿಕೊಳ್ಳುತ್ತದೆ ಎಂಬುದೇ ಅಲ್ಲಿಯ ಕುತೂಹಲಾಂಶ. ಈ ಕಥೆಯ ಕ್ರಿಯೆ ಬೇಗ ಮುಗಿದು ವಸುಭಾಗ ಭಟ್ಟನು ಆ ಮೂವರು ರಾಜಕುಮಾರರ ಮನಸ್ಸನ್ನು ಆದಷ್ಟು ಬೇಗನೆ ಸೆಳೆಯಲು ಅನುಕೂಲವಾಗಿದೆ. ಎನ್. ಅನಂತರಂಗಾಚಾರ್ ಅವರ ಆವೃತ್ತಿಯ ಕಥೆ ತದ್ವಿರುದ್ಧವಾಗಿದೆ. ಅಲ್ಲಿ ಮೊತ್ತ ಮೊದಲೇ ಬಂದ ಕಂದಪದ್ಯ ಮಕ್ಕಳ ಮನಸ್ಸನ್ನು ಸೆಳೆಯುವ ಬದಲು ದೂರ ಹೋಗುವಂತೆ ಮಾಡುತ್ತದೆ. ನರಿಯು ಆ ಶೂದ್ರನ ಗ್ರಾಮದಲ್ಲಿ ಕಳಕಳವಿಲ್ಲದಿರುವುದನ್ನು ಯೋಚಿಸುವುದೂ ಅಸ್ವಾಭಾವಿಕ ವಾಗಿದೆ. ಆ ಶೂದ್ರ ಕಬ್ಬಿನ ಹಿತ್ತಲಿನಲ್ಲಿ ಸತ್ತು ಬಿದ್ದಿರುವಾಗ ಊರಿನಲ್ಲಿ ಹಾಹಾಕಾರ ಹೇಗಾಗುತ್ತದೆ ? ಅವನ ಹೆಣ ಬಿದ್ದಿರುವುದು ಊರಿನವರಿಗೆ ಗೊತ್ತಿಲ್ಲ. ಈ ಕಥೆ ಬೇರೆ ಯಾವುದೋ ಕಥಾಸಾಹಿತ್ಯ ಕೃತಿಯಿಂದ ಇಲ್ಲಿಗೆ ಅನುವಾದಗೊಂಡು ಬಂದಿರ ಬೇಕು. ಇದು ವಸುಭಾಗ ಭಟ್ಟನ ಪರಂಪರೆಯಿಂದ ಬಂದುದಲ್ಲ. ಸತ್ತ ಎತ್ತಿನ ಕಥೆಯಲ್ಲಿ ಕಂಡು ಬರುವ ವಿಡಂಬನ ವೀರಶೈಲಿಯಾಗಲೀ, ಪರ್ಯಾಯನಾಮಗಳನ್ನು ಬಳಸುವ ರೀತಿಯಾಗಲೀ ಕಬ್ಬಿನ ತೋಟದ ಕಥೆಯಲ್ಲಿ ಕಂಡುಬರುವುದಿಲ್ಲ. 'ಕರ್ವುವಿತ್ತಿ' ಎಂದು ಆ ಕಥೆಯಲ್ಲಿ ಪ್ರಯೋಗವಾಗಿದೆ. ಕಬ್ಬನ್ನು ನೆಡುವುದೇ ಹೊರತು ಬಿತ್ತುವುದಲ್ಲ ಬಿತ್ತಲಿಕ್ಕೆ ಅದು ಬೀಜವಲ್ಲ. 'ಹಲುಬುತ್ತಮುಬುತಿರ್ಕುಂ' ಎಂಬಲ್ಲಿಯ ಪ್ರಯೋಗ ಇತ್ತೀಚಿನದಾಗಿ ತೋರುತ್ತದೆ. ದುರ್ಗಸಿಂಹನ ಕಾಲ ಹನ್ನೊಂದನೆಯ ಶತಮಾನದ ಆದಿಭಾಗವಾದುದರಿಂದ ಆಗ 'ಪ' ಕಾರ ಇನ್ನೂ 'ಹ' ಕಾರವಾಗಿ ಪರಿವರ್ತಿತ ವಾಗಿರಲಿಲ್ಲ. ಆ ಪ್ರಯೋಗ ಹಳಗನ್ನಡದ ಪ್ರಕಾರ 'ಪಲುಂಬುತ್ತಮುಬುತಿರ್ಕುಂ' ಎಂದಿರಬೇಕಿತ್ತು. ಜೊತೆಗೆ 'ಕರ್ಬಿನ' ಎಂಬ ನಡುಗನ್ನಡದ ಪ್ರಯೋಗವೂ ಒಂದು ಕಡೆಯಲ್ಲಿದೆ. ಇದನ್ನು ಬರೆದವನು ದುರ್ಗಸಿಂಹನಾಗಿದ್ದಿದ್ದರೆ 'ನರಿ' ಎಂಬ ಮಾತನ್ನು ಆ ಕಥೆಯಲ್ಲಿ ನಾಲ್ಕು ಬಾರಿ ಒಂದೇ ರೀತಿಯಾಗಿ ಬಳಸುತ್ತಿರಲಿಲ್ಲ. 'ಕರ್ವು' ಎಂಬ ಮಾತನ್ನು ಪರ್ಯಾಯನಾಮವನ್ನು ಬಳಸದೆ ಐದುಬಾರಿ ಅದೇ ಮಾತಿನಿಂದ ನಿರೂಪಿಸು ತ್ತಿರಲಿಲ್ಲ. ಈ ಕಾರಣಗಳಿಂದಾಗಿ 'ಕರ್ಣಾಟಕ ಕಾವ್ಯಮಂಜರಿ' ಯ ಆವೃತ್ತಿಯಲ್ಲಿ ಕೊಟ್ಟ ಸತ್ತ ಎತ್ತನ್ನುಳ್ಳ 'ನರಿಯ ಕತೆ' ಯೇ ದುರ್ಗಸಿಂಹನ ಪಾಠ ಎಂದರೆ ಕವಿಪಾಠ ಎಂಬುದಾಗಿ ನಮಗೆ ತೋರುತ್ತದೆ – ಅದಿರುವುದು ಏಕೈಕ ಹಸ್ತಪ್ರತಿಯಲ್ಲಿಯಾದರೂ.

೩.

" ಅಂತು ಸೊಗಯಿಸುವಗ್ರಹಾರದೊಳ್ ತರ್ಕವ್ಯಾಕರಣ ವಾತ್ಸ್ಯಾಯನಾದ್ಯ ಶೇಷ ವಿದ್ಯಾಪ್ರಕರಣನುಂ ಸಕಲಧರ್ಮಕ್ಕೆಲ್ಲಂ ಕೆಯ್ಯಾಲ್ ಮಾಡಿದಂತೆ ದುರ್ಗಸಿಂಹ ಬ್ರಾಹ್ಮಣನುಂಟು. ಆತನ ಪತ್ನಿ ರೇವಕಬ್ಬೆ ಗೌರೀದೇವಿಯೋಪಾದಿಯೊಳ್ ತನ್ನ ಪತಿಭಕ್ತಿಯಿಂದಿರಲ್ ಆ ದಂಪತಿಗಳ್ಗೆ ತಮ್ಮ ಕುಲಕ್ಕೆ ಪ್ರದೀಪನುಮಾಗಿ ಗೌತಮ ಕುಲದೊಳ್ ಸಮುದ್ರದೊಳ್ ಚಂದ್ರಂ ಪುಟ್ಟುವಂತೆ ಪುಟ್ಟಿ ".........

ಈ ಗದ್ಯಭಾಗವನ್ನು ಎನ್. ಅನಂತರಂಗಾಚಾರ್ ಅವರ ಆವೃತ್ತಿಯಲ್ಲಿ ಕೊಡಲಾಗಿದೆ[10]. ಈ ಪಾಠವನ್ನು ಯಾವ ಪ್ರತಿಯಿಂದ ತೆಗೆದುಕೊಳ್ಳಲಾಗಿದೆ ಎಂಬ ಪಾಠಾಂತರವನ್ನೂ ಅವರು ಸೂಚಿಸಿಲ್ಲ. ಈ ಭಾಗ 'ಕರ್ಣಾಟಕ ಕಾವ್ಯಮಂಜರಿ' ಆವೃತ್ತಿಯಲ್ಲಿಲ್ಲ. ಅವರೂ ಇದನ್ನು ಪಾಠಾಂತರವಾಗಿ ಸೂಚಿಸಿಲ್ಲ. ಇದೆಲ್ಲಿಂದ ಬಂತು ? ಇದು ಪ್ರಕ್ಷೇಪ ಎಂಬುದು ಸ್ಪಷ್ಟವಾಗಿ ನಮಗೆ ಗೋಚರಿಸಿದುದರಿಂದ ಕನ್ನಡ ಸಾಹಿತ್ಯ ಪರಿಷತ್ತಿನ ನಮ್ಮ ಆವೃತ್ತಿಯಲ್ಲಿ ಈ ಪಾಠವನ್ನು ನಾವು ವರ್ಜಿಸಿದ್ದೇವೆ. ಆದರೆ ಅಲ್ಲಿ ನಮ್ಮ ಇಚ್ಛೆಗೆ ವಿರುದ್ಧವಾಗಿ ಆ ಪಾಠವನ್ನು ಸೇರಿಸಲಾಗಿದೆ ![11] ಇದು ಸರಿಯಲ್ಲ. ಅಲ್ಲಿಯೇ ಮುಂದೆ ಈ ಗದ್ಯಭಾಗದ ವಿಚಾರವನ್ನು ಮುಂದಿನ ಕಂದ ವೃತ್ತಗಳಲ್ಲಿ ಸರಿಯಾಗಿ ಹೇಳಿರುವುದರಿಂದ ಈ ಗದ್ಯಭಾಗವು ಅನಾವಶ್ಯಕ. ಅಲ್ಲದೆ ಈ ಗದ್ಯಭಾಗದ ವಾಕ್ಯರಚನೆ ತಪ್ಪುತಪ್ಪಾಗಿದೆ. 'ದುರ್ಗಸಿಂಹ ಬ್ರಾಹ್ಮಣನುಂಟು' ಎಂಬುದು ಯಾವ ಸೀಮೆಯ ಕನ್ನಡ ? 'ರೇವಕಬ್ಬೆ ಗೌರೀದೇವಿಯೋಪಾದಿಯೊಳ್' ಎಂಬಲ್ಲಿರುವ 'ಯೋಪಾದಿಯೊಳ್' ಎಂಬ ಪ್ರಯೋಗ ದುರ್ಗಸಿಂಹನ ಪಂಚತಂತ್ರದಲ್ಲಿ ಎಲ್ಲಿಯೂ ಬರುವುದಿಲ್ಲ; ಅದು ಹಳಗನ್ನಡದ ಶಿಷ್ಟ ಪ್ರಯೋಗವೂ ಅಲ್ಲ. 'ತನ್ನ ಪತಿಭಕ್ತಿಯಿಂದಿರಲ್' ಎಂಬುದೂ ಸರಿಯಾದ ಪ್ರಯೋಗವಲ್ಲ. 'ತನ್ನ ಪತಿಯೊಳ್ ಭಕ್ತಿಯಿಂದಿರಲ್' ಎಂದಿದ್ದರೆ ಸರಿಯಾಗುತ್ತಿತ್ತು. ಅಥವಾ 'ತನ್ನ ಪತಿಯೊಳ್ ಪತಿಭಕ್ತಿಯಿಂದಿರಲ್' ಎಂದಾದರೂ ಇರಬೇಕಿತ್ತು. ಈ ಕಾರಣಗಳಿಂದ ಮೇಲೆ ಹೇಳಿದ ಈ ಗದ್ಯಭಾಗವನ್ನು ಪ್ರಕ್ಷಿಪ್ತ ಎಂದು ನಿರ್ಣಯಿಸಬಹುದು. ಈ ಗದ್ಯಭಾಗವನ್ನು ಬಿಟ್ಟಲ್ಲಿ ಅರ್ಥಕ್ಕೇನೂ ಚ್ಯುತಿ ಬರುವುದಿಲ್ಲ; ಅಲ್ಲದೆ ಗ್ರಂಥದ ಕಥಾಭಾಗವು ಪುನರುಕ್ತಿಯಿಲ್ಲದೆ ಸರಿಯಾಗಿ ಅರ್ಥವಾಗುವುದು.

## ೪.

ಭೇದ ಪ್ರಕರಣದ ನಾಲ್ಕನೆಯ ಕಥೆಯಾದ 'ನರಿಯುಂ ಬಿಲನುಂ' ಎಂಬುದರಲ್ಲಿ ಮೊದಲಿನ ಕಂದಪದ್ಯವಾದ ಮೇಲೆ ಎನ್. ಅನಂತರಂಗಾಚಾರ್ ಅವರ ಆವೃತ್ತಿಯಲ್ಲಿ ಒಂದು ಹೊಸ ಗದ್ಯಭಾಗ ಸೇರಿದೆ.[12] ಇದು 'ಕರ್ಣಾಟಕ ಕಾವ್ಯಮಂಜರಿ' ಆವೃತ್ತಿಯಲ್ಲಿಲ್ಲ. ಈ ಭಾಗವನ್ನು ನಾವು ಪರಿಷತ್ ಆವೃತ್ತಿಯಲ್ಲಿ ಪ್ರಕ್ಷಿಪ್ತವೆಂದು ಬಿಟ್ಟಿದ್ದೇವೆ.[13] ಎನ್. ಅನಂತರಂಗಾಚಾರ್ ಅವರ ಆವೃತ್ತಿಯಲ್ಲಿ ಆ ಗದ್ಯಭಾಗ ಹೀಗಿದೆ :

---

10. ಎನ್. ಅನಂತರಂಗಾಚಾರ್ : ಕರ್ಣಾಟಕ ಪಂಚತಂತ್ರಂ : ಪು. ೮.
11. ಗುಂಡ್ಮಿ ಚಂದ್ರಶೇಖರ ಐತಾಳ : ಕರ್ಣಾಟಕ ಪಂಚತಂತ್ರಂ : ಪು. ೩೨.
12. ಎನ್. ಅನಂತರಂಗಾಚಾರ್ : ಕರ್ಣಾಟಕ ಪಂಚತಂತ್ರಂ : ಪು. ೩೨.
13. ಗುಂಡ್ಮಿ ಚಂದ್ರಶೇಖರ ಐತಾಳ ; ಕರ್ಣಾಟಕ ಪಂಚತಂತ್ರಂ : ಪು. ೬೮.

" ಮತ್ತ ಮಾವನ**ದೊಳು** ಪುಂಡರೀಕಮೆಂಬ ಪುಲಿ **ಇರುವುದು.** ಆ ಪುಲಿಯುಂ ಬೇಂಟೆಗೆ ಪೋಗಿ ಮಾಂಸಮಂ ತಂದು ತನ್ನ ಗುಹೆಯೊಳಗೆ ಮಡಗಿ **ತಾನು ಮರು** ದಿವಸಂ ಮುನ್ನ ತಂದ ಮಾಂಸಮಂ ಸಂಚಿತಾರ್ಥಂ ಎಂದು ಮಡಗಿ ಮತ್ತಂ **ಬೇಟೆ**ಗೆ ಪೋಪ್ಪುದುಂ; ಆ ಪುಲಿಯ ಗುಹೆಯಂ **ಉಪಾಯನಿಪುಣನೆಂಬ ಜಂಬುಕಂ ಕಂಡು** ಒಳಗಂ ಪೊಕ್ಕು **ಅಲ್ಲಿದ್ದ** ಮಾಂಸಮಂ ತಿಂದು ಪೋಪ್ಪುದುಂ; ಪುಲಿ ಬಂದು ತನ್ನ ಪೊಸ ಮಾಂಸಮಂ ಮಡಗಿ ಮುನ್ನ ತಂದ ಮಾಂಸಮಂ ಕಾಣದೆ ಬೆಱಗಾಗಿ **ಮರುದಿವಸ** ಬೇಂಟೆಗೆ ಪೋಪ್ಪುದುಂ; ಮತ್ತಾ ನರಿ ಬಂದು **ಅಲ್ಲಿರ್ದ** ಮಾಂಸಮೆಲ್ಲಮಂ ತಿಂದು ಪೋಪ್ಪುದುಂ ಈ ಪ್ರಕಾರ**ದೊಳು** ನಿಚ್ಚ **ನಿಚ್ಚ** ಬಂದು ತುಡುವಂ ತಿಂದು ಬೇಸರಿಸುತ್ತಿರೆ ಪುಲಿ ಬಂದು ಎನ್ನ ಮನೆಯಂ **ನಿಚ್ಚಂ** ಪೊಕ್ಕು ತುಡುವಂ ತಿಂಬ **ಕಳ್ಳನ ಸಿಕ್ಕಿಸುವೆ** ನೆಂದು ತನ್ನ ಗುಹೆಯ **ಪೊರೆಗೆ** ಅಡಗಿ**ಪ್ಪುದುಂ** ಆ ನರಿ ಬಂದು ಮನೆಯಂ ಪೊಕ್ಕು **ಅಲ್ಲಿರ್ದ** ಮಾಂಸಮಂ ತಿನ್ನುತ್ತಿರೆ ಪುಲಿಕಂಡು ಇದನಿಲ್ಲಿಯೇ ಕೊಲಲ್ಕೆ **ಅಳವಲ್ಲದೆ** ಆ ನರಿ ಪೋಪಾಗ ಅದಱ ಕೂಡ ಪೋಗಿ ಅದಱ **ಮನೆಯು** ಕಂಡು **ಮರುದಿವಸಂ** ನರಿ ತನ್ನ **ಮನೆ ಬಪ್ಪುದುಂ ತಾನು** ಆ ನರಿಯ **ಬಿಲವ ಪೊಗುವಾಗ ಹೆಜ್ಜೆ** ಯಲ್ಲಡಸಿ **ಹಿಂದುಮುಂದಾ**ಗಿ ಬಂದು ಪೊಕ್ಕಿರ್ಪುದುಂ".

ಈ ಗದ್ಯದ ಭಾಷೆಯಲ್ಲಿ ಹಳಗನ್ನಡ, ನಡುಗನ್ನಡ, ಹೊಸಗನ್ನಡ, ಮೂರೂ ರೂಪಗಳು ಮಿಶ್ರವಾಗಿವೆ ಎಂಬುದು ಯಾರಿಗಾದರೂ ತೋರದಿರದು. ಮೇಲಿನ ರೂಪಗಳಲ್ಲಿ ಕೆಲವು ಎರಡೂ ರೂಪಗಳಲ್ಲಿವೆ. ಉದಾ :

| | | |
|---|---|---|
| ಮರುದಿವಸ | ಮರುದಿವಸಂ | |
| ಅಲ್ಲಿರ್ದ | ಅಲ್ಲಿದ್ದ | |
| ನಿಚ್ಚ ನಿಚ್ಚ | ನಿಚ್ಚಂ | |
| ಇಪ್ಪುದುಂ | ಇರ್ಪುದುಂ | |
| ಬೇಟೆ | ಬೇಂಟೆ. | ಇತ್ಯಾದಿ. |

ಇನ್ನು ಕೆಲವು ಹಳಗನ್ನಡ ರೂಪಗಳೇ ಆಗಿಲ್ಲ.

| ಹಳಗನ್ನಡ ರೂಪ | ಇಲ್ಲಿಯ (ಅಬದ್ಧ) ರೂಪ |
|---|---|
| ವನದೊಳ್ | ವನದೊಳು |
| ಇರ್ಪುದು | ಇರುವುದು |
| ತಾನ್ | ತಾನು |
| ಬೇಂಟೆ | ಬೇಟೆ |

| | |
|---|---|
| ಅಲ್ಲಿರ್ದ | ಅಲ್ಲಿದ್ದ |
| ಮಱುದಿವಸಂ | ಮರುದಿವಸ |
| ಪ್ರಕಾರದೊಳ್ | ಪ್ರಕಾರದೊಳು |
| ನಿಚ್ಚ ನಿಚ್ಚಂ | ನಿಚ್ಚ ನಿಚ್ಚ |
| ಕಳ್ಳನಂ | ಕಳ್ಳನ |
| ಸಿಲ್ಕಿಸಿರ್ಪೆನ್ | ಸಿಕ್ಕಿಸುವೆ |
| ಪೊರೆಯೊಳ್ಅಡಗಿರ್ಪುದುಂ | ಪೊರೆಗೆ ಅಡಗಿಪ್ಪುದುಂ |
| ಮನೆಯಂ ಕಂಡು | ಮನೆಯ ಕಂಡು |
| ಮನೆಗೆ ಬರ್ಪುದುಂ | ಮನೆ ಬಪ್ಪುದುಂ |
| ಬಿಲವಂ ಪುಗುವಾಗಳ್ | ಬಿಲವ ಪೊಗುವಾಗ |
| ಪಜ್ಜೆ | ಹೆಜ್ಜೆ |
| ಪಿಂತುಮುಂದಾಗಿ | ಹಿಂದೆಮುಂದಾಗಿ |

ಅಲ್ಲದೆ 'ಉಪಾಯನಿಪುಣನೆಂಬ ಜಂಬುಕನಿರ್ಪುದು' ಎಂಬ ವಿಚಾರ ಮೊದಲಿನ ಕಂದಪದ್ಯದಲ್ಲಿಯೇ ಬಂದಿರುವುದರಿಂದ ಇಲ್ಲಿ ಅದನ್ನು ಪುನಃ ಹೇಳಿರುವುದರಿಂದ ಈ ಗದ್ಯಭಾಗ ಪ್ರಕ್ಷಿಪ್ತ ಎಂಬುದು ಸ್ಪಷ್ಟ. ಅಲ್ಲಿಯೇ ಮುಂದಿನ ಪರಿಚ್ಛೇದದಲ್ಲಿ 'ಪುಲಿಯ ಪಜ್ಜೆಯುಮಂ' ಎಂಬ ಪ್ರಯೋಗವಿರುವುದರಿಂದ 'ಹೆಜ್ಜೆಯಲ್ಲಡಸಿ' ಎಂಬ ಪ್ರಯೋಗ ದುರ್ಗಸಿಂಹನದಲ್ಲ ಎಂದು ಖಚಿತವಾಗಿ ಹೇಳಬಹುದು. ಈ ಪಾಠವನ್ನು ಯಾವ ಆಧಾರದಿಂದ ಮೂಲ ಪಾಠವೆಂದು ಸ್ವೀಕರಿಸಿದರೋ ತಿಳಿಯದು! ಹೀಗೆ ಭಾಷೆ, ಪೂರ್ವಾಪರ ಕಾವ್ಯಭಾಗ ಎರಡೂ ದೃಷ್ಟಿಗಳಿಂದ ಈ ಗದ್ಯಭಾಗ ಪ್ರಕ್ಷಿಪ್ತ ಎಂಬುದು ಸ್ಪಷ್ಟವಾಗಿದೆ.

## ೫.

ದುರ್ಗಸಿಂಹನ ಪಂಚತಂತ್ರದಲ್ಲಿ ಒಂದು ತ್ರಿಪದಿ ಇದೆ. ಅದು 'ಕರ್ಣಾಟಕ ಕಾವ್ಯಮಂಜರಿ' ಆವೃತ್ತಿಯಲ್ಲಿ ಹೀಗಿದೆ :

ಹಿತವನತಿಭಕ್ತನನ್ವಿತನಿವಂ ಸುಭೃತ್ಯಂ
ಕೃತಕೃತ್ಯನೆನ್ನರ್ ಪಿಸುಣಿಂದೆ ಕಿಡಿಪರೀ
ಕ್ಷಿತಿಪತಿಗಳಿಂತವಿಚಾರದಿ ‖[14]

14. ಕರ್ಣಾಟಕ ಕಾವ್ಯಮಂಜರಿ : ಪಂಚತಂತ್ರಂ : ಪು. ೫೨.

ಎನ್. ಅನಂತರಂಗಾಚಾರ್ ಅವರ ಆವೃತ್ತಿಯಲ್ಲಿ ಅದು ಹೀಗಿದೆ :

ಹಿತವನತಿ ಭಕ್ತನನ್ವಿತನಿವಂ ಸುಭೃತ್ಯಂ
ಕೃತಕೃತ್ಯನೆನ್ನರ್ ಪಿಸುಣಿಂದೆ ಕಿಡಿಪರೀ
ಕ್ಷಿತಿಪತಿಗಳಿಂತವಿಚಾರದಿಂ ॥[15]

ಇದಕ್ಕೆ ಎಂ. ಚಿದಾನಂದ ಮೂರ್ತಿಯವರು ಪ್ರಸ್ತಾರ ಹಾಕುತ್ತ ಅದನ್ನು ಹೀಗೆ ಗಣವಿಭಾಗ ಮಾಡಿದ್ದಾರೆ :

ರು          ?
ಹಿತವನತಿ | ಭಕ್ತನನ್ವಿತನಿವಂ | ಸುಭೃತ್ಯಂ |
ಕೃತಕೃತ್ಯನೆನ್ನರ್ ಪಿಸುಣಿಂದೆ ಕಿಡಿಪರೀ
ಬ್ರ. ಬ್ರ. ರು.
ಕ್ಷಿತಿಪ | ತಿಗಳಿಂ | ತವಿಚಾರದಿ ॥[16]

ಮೊದಲಾಗಿ ಇಲ್ಲಿ ಆದಿ ಅಂತ್ಯಗಳಲ್ಲಿ ಎರಡು ರುದ್ರಗಣಗಳು ಬಂದು ನಾಗವರ್ಮನ ಚಿತ್ರಲತೆಯನ್ನು ನೆನಪಿಗೆ ತರುತ್ತವೆ ಎಂದು ಎಂ. ಚಿದಾನಂದ ಮೂರ್ತಿಯವರು ಅಭಿಪ್ರಾಯಪಡುತ್ತಾರೆ.[17] ಈ ಇಡಿಯ ತ್ರಿಪದಿಯೇ ಪಾಠಾಂತರಗಳ ಗೊಂದಲದಿಂದ ಕೆಟ್ಟುಹೋಗಿದೆ ಎಂಬುದನ್ನು ಪಾಠಾಂತರಗಳಿಂದ ಗುರುತಿಸಬಹುದು. 'ನನ್ವಿತನಿವಂ' ಎಂಬುವದಕ್ಕೆ ಪಾಠಾಂತರಗಳಿವೆ. ಅನಂತರ ಮೊದಲ ಪಾದದ ಕೊನೆಯ ಅಕ್ಷರದಿಂದ ತ್ರಿಪದಿಯ ಕೊನೆಯ ವರೆಗೂ ಪಾಠಾಂತರಗಳಿವೆ. ನಾಗವರ್ಮನ ಚಿತ್ರಲತೆಗೆ ಆದಿಯಲ್ಲಿ ರುದ್ರಗಣ ಬರುವದಿಲ್ಲ. ಈ ಪದ್ಯಕ್ಕೆ ಹಲವು ಪಾಠಾಂತರಗಳಿವೆ ಎಂಬುದೇ ಇದರ ಮೂಲಪಾಠ ಕೆಟ್ಟಿದೆ ಎಂಬುವದಕ್ಕೆ ಒಳ್ಳೆಯ ಆಧಾರ. ಇಲ್ಲಿ ಆದಿಯಲ್ಲಿ ರುದ್ರಗಣ ಬರುವುದಿಲ್ಲ ಎಂಬುದಕ್ಕೆ ಪದ್ಯದಲ್ಲಿಯೇ ಅಂತರಂಗ ಸಾಕ್ಷಿ ಇದೆ. ಈ ಪದ್ಯದಲ್ಲಿ ಬರುವ ಅತಿಭಕ್ತನ್, ಅನ್ವಿತನ್, ಕೃತಕೃತ್ಯನ್ ಎಂಬ ಪದ ಪರಂಪರೆಯನ್ನು ನೋಡಿದರೆ 'ಹಿತವನತಿ' ಎಂಬ ಪಾಠ ತಪ್ಪು ಎಂಬುದು ತಿಳಿಯುತ್ತದೆ. ಅದು **'ಹಿತನ್'** ಎಂದಾಗಬೇಕು. ಅಲ್ಲಿಗೆ ಅದು ವಿಷ್ಣುಗಣವಾಯಿತು. 'ಸುಭೃತ್ಯಂ' ಎಂಬುವದಕ್ಕೆ

---

15. ಎನ್. ಅನಂತರಂಗಾಚಾರ್ : ಕರ್ಣಾಟಕ ಪಂಚತಂತ್ರಂ : ಪು. ೪೩.

16. ಎಂ. ಚಿದಾನಂದ ಮೂರ್ತಿ : ಸಂಶೋಧನ ತರಂಗ : ಮೊದಲನೆಯ ಆವೃತಿ : ಪು. ೨೧೬.

17. ಅಲ್ಲೇ.

ಪಾಠಾಂತರವುಂಟು ; ಎಂದರೆ ಅದು ಏನೋ ಕಾರಣದಿಂದ ಕೆಟ್ಟಿದೆ ಎನ್ನಬೇಕು. ಇದು ಮೂಲತಃ '[ಸದ್ಭಲ]ತ್ಯಂ' ಎಂಬ ಪಾಠವಾಗಿದ್ದಿರಬೇಕು. ಅಲ್ಲಿಗೆ ಅದೂ ವಿಷ್ಣುಗಣವಾಯಿತು. ಇನ್ನು ಮೂರನೆಯ ಪಾದವೂ ಪಾಠಾಂತರಗಳ ಗೊಂದಲದಿಂದ ಮೂಲಪಾಠವನ್ನು ಅಡಗಿಸಿಕೊಂಡಿದೆ ಎಂಬುದು ತಿಳಿಯುವುದು. ಅದು ಬಹುಶಃ ಮೂಲತಃ ಹೀಗಿದ್ದಿರಬೇಕು.

ಹಿತನತಿ । ಭಕ್ತನ । ನ್ವಿತನಿವಂ । [ಸದ್ಭಲ]ತ್ಯಂ ।

ಬ್ರ.

ಕೃತಕೃತ್ಯ । ನೆನ್ನರ್ । ಪಿಸುಣೆಂದೆ । ಕಿಡಿಪರೀ ।

ಬ್ರ. ರು.

ಕ್ಷಿತಿಪತಿ । ಗ[ಳವಿ] । ಚಾರದಿ[ಂದೆ] ॥

ಈಗ ಇದು ಶುದ್ಧ ಲಕ್ಷಣಬದ್ಧ ತ್ರಿಪದಿಯಾಯಿತು. ಇಲ್ಲಿ ಕೊನೆಯ ಗಣ ರುದ್ರವಾಗುವುದರಿಂದ ಇದು ಜಯಕೀರ್ತಿ ಹೇಳಿದ ವಿಚಿತ್ರಾ ತ್ರಿಪದಿಯನ್ನು ಅನುಸರಿಸಿ ಬರೆದಂತಿದೆ. ಕೊನೆಯ ಗಣದ ಆರಂಭವು ಗುರುವೂ ಆಗಿದೆ. ಈ ತ್ರಿಪದಿಯನ್ನು ಎಂ. ಚಿದಾನಂದ ಮೂರ್ತಿಯವರು ಅಂಶಗಣ ಘಟಿತವಾಗಿಲ್ಲ ಎಂದು ಗುರುತಿಸಿದ್ದಾರೆ. ಇದು ಸರಿಯಲ್ಲ. ಅಂಶಗಣವಲ್ಲದಿದ್ದಲ್ಲಿ ಆರನೆಯ ಸ್ಥಾನದಲ್ಲಿ ಬ್ರಹ್ಮ ನಿಯತವಾಗಿರುತ್ತಿರಲಿಲ್ಲ. ಪಾಠಾಂತರಗಳ ಗೊಂದಲದಿಂದ ಶುದ್ಧ ಲಕ್ಷಣಬದ್ಧ ತ್ರಿಪದಿ ಕೆಟ್ಟು ಹೋಗಿದೆ, ಅಷ್ಟೇ.

೬.

ಹೀಗೆ ದುರ್ಗಸಿಂಹನ 'ಕರ್ಣಾಟಕ ಪಂಚತಂತ್ರಂ' ಕೃತಿಯನ್ನು ಶಾಸ್ತ್ರೀಯವಾಗಿ ಸಂಪಾದಿಸುವ ಅವಶ್ಯಕತೆ ಇದೆ. ಎನ್. ಅನಂತರಂಗಾಚಾರ್ ಅವರು ಸೂಚಿಸಿದ ಇನ್ನೂ ಎರಡು-ಮೂರು ಹಸ್ತಪ್ರತಿಗಳನ್ನು ಪತ್ತೆಹಚ್ಚಿ ಈ ಕಾರ್ಯವನ್ನು ಇನ್ನೂ ಸಮರ್ಪಕವಾಗಿ ಮಾಡಬೇಕಾಗಿದೆ. ಮೇಲೆ ಉಲ್ಲೇಖಿಸಿದ ಇಂಥ ನಿದರ್ಶನಗಳನ್ನು ಇನ್ನೂ ಹಲವಾರು ಕಡೆಗಳಿಂದ ಸಂಗ್ರಹಿಸಿ ತೋರಿಸಬಹುದು. ಇಲ್ಲಿ ಪಾಠಪರಿಷ್ಕರಣ ಹೇಗಾಗಬೇಕಾಗಿತ್ತು ಎಂಬುದರ ಒಂದು ಮಾದರಿ ನಿರ್ದೇಶನವಿದೆ. ದುರ್ಗಸಿಂಹನ 'ಕರ್ಣಾಟಕ ಪಂಚತಂತ್ರಂ' ಕೃತಿಯ ಮೂಲಸ್ವರೂಪವನ್ನು ಪುನಃ ಸೃಷ್ಟಿಸುವುದು ಕಷ್ಟವೇನೂ ಅಲ್ಲ. ಅದಕ್ಕೆ ಅಗಾಧ ಪರಿಶ್ರಮ, ಪಾಂಡಿತ್ಯ, ಪ್ರತಿಭೆ, ಗ್ರಂಥ ಸಂಪಾದನ ಶಾಸ್ತ್ರದ ಪರಿಚಯ, ತಾಳ್ಮೆ ಎಲ್ಲವೂ ಒಂದು ಕಡೆ ಸೇರಿರಬೇಕು. ಆ ಕಾಲ ಕನ್ನಡಕ್ಕೆ, ದುರ್ಗಸಿಂಹನ ಕೃತಿಗೆ ಬರಲಿ ಎಂದು ನಾವು ಹಾರೈಸೋಣ.

●

# ಭಾಷಾ ಸಂಪರ್ಕದ ಅಧ್ಯಯನ

## ( ಕೋಲಾರ ಜಿಲ್ಲೆಯ ಒಂದು ಗ್ರಾಮ)

● ವಿ. ಗೋಪಾಲಕೃಷ್ಣ

ಕೋಲಾರ ಜಿಲ್ಲೆಯು ಪಶ್ಚಿಮದಲ್ಲಿ ಬೆಂಗಳೂರು, ತುಮಕೂರು ಜಿಲ್ಲೆಗಳಿಂದಲೂ ದಕ್ಷಿಣದಲ್ಲಿ ತಮಿಳುನಾಡಿನ ಧರ್ಮಪುರಿ ಹಾಗೂ ಉತ್ತರ ಆರ್ಕಾಟು ಜಿಲ್ಲೆಗಳಿಂದಲೂ ಉಳಿದ ದಿಕ್ಕುಗಳಲ್ಲಿ ಆಂಧ್ರಪ್ರದೇಶದಿಂದಲೂ ಸುತ್ತುವರಿದಿದೆ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಪ್ರತಿಶತ 53 ಜನರು ತೆಲಗು ಮಾತೃಭಾಷೆಯುಳ್ಳವ-ರಿದ್ದಾರೆ. ಆಡಳಿತ ಭಾಷೆಯಾದ ಕನ್ನಡ ಎರಡನೆಯ ಸ್ಥಾನವನ್ನು ಪಡೆಯುತ್ತದೆ.

ಪ್ರಸ್ತುತ ಅಧ್ಯಯನದಲ್ಲಿ ಮಾತೃಭಾಷೆಯ ಮೇಲೆ ದ್ವಿತೀಯ ಭಾಷೆಯೂ, ದ್ವೀತಿಯ ಭಾಷೆಯ ಮೇಲೆ ಮಾತೃಭಾಷೆಯೂ ಉಂಟುಮಾಡಿರುವ ಪರಸ್ಪರ ಪ್ರಭಾವ ವನ್ನು ಅವಲೋಕನ ಮಾಡಲಾಗಿದೆ. ಎರಡು ಭಾಷೆಗಳ ಪರಸ್ಪರ ಪ್ರಭಾವವನ್ನು ಮೊದಲನೆಯ ಭಾಗದಲ್ಲೂ ಪರಸ್ಪರ ಭಾಷಾಂತರವಾಗುವ ಪ್ರವೃತ್ತಿಯನ್ನು ಎರಡನೆಯ ಭಾಗದಲ್ಲೂ ಭಾಷಾ ಬಳಕೆಯ ( Code Switching ) ಸಂದರ್ಭಗಳನ್ನು ಕುರಿತು ಮೂರನೆಯ ಭಾಗದಲ್ಲೂ ಪರಿಶೀಲಿಸಲಾಗಿದೆ.

ಕೋಲಾರ ಜಿಲ್ಲೆಯ ತೆಲುಗು (ಕೋ. ತೆ) ಹಾಗೂ ಕನ್ನಡ (ಕೋ. ಕ) ಭಾಷಾ ವರ್ಗಗಳ ಗ್ರಾಮೀಣ ಜನರ ಆಡುವ ಮಾತನ್ನು ಆಧಾರವಾಗಿಸಿಕೊಂಡು ಈ ಅಧ್ಯ ಯನಕ್ಕೆ ಬೇಕಾದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

### ಭಾಗ – I

### (a) ಕೋಲಾರ ಕನ್ನಡದ ಮೇಲೆ ತೆಲುಗಿನ ಪ್ರಭಾವ ಆಕೃತಿಮಾ ಮಟ್ಟದಲ್ಲಿ

* ಬೆಂಗಳೂರಿನಲ್ಲಿ ನಡೆದ ಅಖಿಲಭಾರತ ದ್ರಾವಿಡ ಭಾಷಾ ವಿಜ್ಞಾನಿಗಳ ಏಳನೆಯ ಸಮ್ಮೇಳನದಲ್ಲಿ ಇಂಗ್ಲಿಷಿನಲ್ಲಿ ಮಂಡಿಸಿದ ಲೇಖನದ ಕನ್ನಡ ರೂಪ.

(i) —ಅ ದಿಂದ ಕೊನೆಗೊಳ್ಳುವ ಪುಲ್ಲಿಂಗ ಪ್ರಕೃತಿಗೆ —ನು ಪ್ರಥಮಾ ವಿಭಕ್ತಿ ಪ್ರತ್ಯಯ ಸೇರುತ್ತದೆ.

ಉದಾ : ರೈತ್ನು
ಹುಡುಗ್ನು
ಮಾತುಗಾರ್ನು
ಮುದುಕ್ನು
ಚಿಕ್ಕಪ್ನು

(ii) ಚತುರ್ಥೀ ವಿಭಕ್ತಿ ಪ್ರತ್ಯಯ –ಗೆ/–ಗ > –ಕೆ/–ಕ ಆಗುತ್ತದೆ. ತೆಲುಗಿನ ಪ್ರಭಾವದಿಂದ ಘೋಷವು ಅಘೋಷವಾಗುತ್ತದೆ.

ಉದಾ : ಅವನ್ಗೆ > ಅವನ್ಕೆ / ಅವನ್ಕ
ಊರ್ಗೆ > ಊರ್ಕೆ / ಊರ್ಕ
ಅವಳ್ಗೆ > ಅವಳ್ಕೆ / ಅವಳ್ಕ
ಮನ್ಗೆ / ಮನೇಗೆ > ಮನ್ಕೆ / ಮನೇಕೆ
ಮೈಗೆ > ಮೈಕೆ

(iii) ತೆಲುಗು ಅನ್ವರ್ಥನಾಮಗಳಲ್ಲಿ ಬಳಕೆಯಿರುವಂತೆ –ವಾಡು / –ಅದಿ ಪುರುಷ ವಾಚಕ ಪ್ರತ್ಯಯಗಳು ಕನ್ನಡದಲ್ಲಿ –ಅನು /– ಅಳು ಆಗಿ ಸೇರುತ್ತವೆ. ತೆಲುಗು ಪದಗಳಿಗೂ ಇವು ಸೇರುವುದುಂಟು.

ಉದಾ : ಮೂಗೋನು
ಕುಂಬಾರೋನು
ತಳವಾರೋನು
ಮುಸಿಲೋನು (ಮುದುಕ)
ಚೌಟೋಳು (ಕಿವುಡಿ)
ಸಾಕಲೋಳು (ಅಗಸಗಿತ್ತಿ)

(iv) ಸಮಸ್ತ ಪದಗಳಲ್ಲಿಯೂ ಇಂತಹ ಪ್ರಭಾವವನ್ನು ಗಮನಿಸಬಹುದು. ಕ್ರಿಯಾಪದ + ಆಖ್ಯಾತಪ್ರತ್ಯಯ.

ಉದಾ ; ಚೆದುವುಕೊಂತಾನೆ (ಓದಿಕೊಳ್ಳುತ್ತಾನೆ)
ದೂಬ್ಕೊಂತಾಳೆ (ತಲೆ ಬಾಚಿಕೊಳ್ಳುತ್ತಾಳೆ)
ದುನ್ನುತ್ತೆ (ಉಳುತ್ತದೆ)
ಎರುಸುಕೊಂಡೆ (ಹೆದರಿಕೊಂಡೆನು)
ಉದುಕ್ಕೊಂಡ್ ಬಾ (ಬಟ್ಟೆ ಒಗೆದುಕೊಂಡು ಬಾ)
ತಿಟ್ತಾರೆ (ಬೈಯುತ್ತಾರೆ)

(v) ನಾಮಪದ + ಕ್ರಿಯಾಪದ + ಆಖ್ಯಾತಪ್ರತ್ಯಯ.

ಉದಾ : ತ್ಯಾನೆ ಕಟ್ಟಿದೆ (ಜೇನು ಕಟ್ಟಿದೆ)
ತೂಮೆತ್ತುತಾನೆ (ತೂಬೆತ್ತುತ್ತಾನೆ)
ತಲಂಟಿಕೊಂಡಿದಾಳೆ (ಎಣ್ಣೆ ಸ್ನಾನ ಮಾಡಿದ್ದಾಳೆ)

(vi) ನಾಮಪದ + ನಾಮಪದ.

ಉದಾ : ವಂಟಸಾಲೆ (ಅಡಿಗೆಸಾಲೆ)
ಏಟಗಡ್ಡೆ (ಹಳ್ಳದ ಗಡ್ಡೆ)
ತೂಮಕಾಲುವೆ (ತೂಬುಕಾಲುವೆ)

(vii) ಗುಣವಾಚಕ/ಕ್ರಿಯಾವಿಶೇಷಣ

ಉದಾ : ಯಾಸಾಗಿದೆ (ಗೋಡಿಯಾಗಿದೆ)
ಗಿತ್ತೆಮ್ಮೆ (ಗಿಡ್ಡನಾದ ಎಮ್ಮೆ)

(viii) ಅವ್ಯಯ :

ಉದಾ : ಬೇಕುಲೇದು (ಬೇಕಿಲ್ಲ)
ನಿಮ್ಮತಟ್ಟು (ನಿಮ್ಮಕಡೆ)
ಸಾಲಕಾ ಬರುತ್ತೆ (ಸಾಲದೆ ಬರುತ್ತೆ)

**ಶಬ್ದ ಕೋಶ**

(i) ಕೆಲವು ತೆಲುಗು ಪದಗಳು ಯಾವ ಬದಲಾವಣೆಯೂ ಹೊಂದದೆ ಕನ್ನಡದಲ್ಲಿ ಬಳಕೆಯಾಗುತ್ತವೆ.

| ಉದಾ : ಕೋ. (ಕ) ರೂಪ | ಶಿಷ್ಟ ಕನ್ನಡ ರೂಪ |
|---|---|
| ಕುಂದ್ಲಿ | ' ಮೊಲ ' |
| ಆಕರಾಮಿ | ' ಅರ ' |
| ಮುಕ್ಕುನತ್ತು | ' ಮೂಗುತಿ ' |
| ಮೋಪು | ' ಹೊರೆ ' |
| ಸುಲಕ್ನ | ' ಸುಲಭ ' |
| ಚೇದು | ' ಕಹಿ ' |

(ii) ಕನ್ನಡದ ಜಾಯಮಾನಕ್ಕೆ ಹೊಂದುವಂತೆ ಧ್ವನಿಬದಲಾವಣೆಯಾಗುವ ಕೆಲವು ಪದಗಳು :

| ಕೊ. (ಕ) ರೂಪ | ಶಿಷ್ಟ (ಕ) ರೂಪ | ಶಿಷ್ಟ (ತೆ) ರೂಪ |
|---|---|---|
| ಗುಟ್ಟಿ | ' ಗುಡ್ಡ ' | ಗುಟ್ಟ |
| ವಾಮೆ | ' ಬಣವೆ ' | ವಾಮಿ |
| ಚಾಪೆ | ' ಮೀನು ' | ಚಾಪ |
| ಗುವ್ವೆ | ' ಗುಬ್ಬಚ್ಚಿ ' | ಗುವ್ವ |
| ಗದ್ದೆ | ' ಹದ್ದು ' | ಗದ್ದ |

(iii) ತೆಲುಗು ರೂಪವನ್ನು ಅನುಸರಿಸಿ ಕನ್ನಡಕ್ಕೆ ಭಾಷಾಂತವಾಗಿರುವ ಕೆಲವು ಪದಗಳು :

| ಕೋ. (ಕ) ರೂಪ | ಶಿಷ್ಟ (ಕ) ರೂಪ | ಶಿಷ್ಟ (ತೆ) ರೂಪ |
|---|---|---|
| ಹೊಸ್ಲುಮರ | ' ಹೊಸಿಲು ' | ಕಡಪಮಾನು |
| ಬೆಳ್ಳಾಗಡ್ಡೆ | ' ಬೆಳ್ಳುಳ್ಳಿ ' | ತೆಲ್ಲಗಡ್ಲು |
| ರಾಗಿಮರ | ' ಅರಳಿಮರ ' | ರಾಗಿಮಾನು |
| ಬಟ್ನಬೆರಳು | ' ಹೆಬ್ಬೆರಳು ' | ಬಟ್ನೇಲು |

### (b) ಕೋಲಾರ ತೆಲುಗಿನ ಮೇಲೆ ಕನ್ನಡದ ಪ್ರಭಾವ :

ತೆಲುಗು ಜನ–ಸಾಮಾನ್ಯರ ಭಾಷೆ ಹಾಗೂ ಪ್ರಬಲ ( dominant ) ಭಾಷೆಯಾಗಿರುವುದರಿಂದ ಅದು ಕನ್ನಡದಿಂದ ಪ್ರಭಾವಿತವಾಗಿರುವುದು ಬಹಳ ಕಡಿಮೆ. ವಿದ್ಯಾವಂತರ ಭಾಷೆಯಲ್ಲಿ ಮಾತ್ರ ಅದು ಸ್ವಲ್ಪ ಮಟ್ಟಿನ ಪ್ರಭಾವ ಬೀರುವುದನ್ನು ಈ ಉದಾಹರಣೆಗಳು ಸ್ಪಷ್ಟಪಡಿಸುತ್ತವೆ :

| **ಕೊ. (ಕ) ರೂಪ** | **ಶಿಷ್ಟ (ತೆ) ರೂಪ** | **ಕೋಲಾರ (ತೆ) ರೂಪ** |
|---|---|---|
| ಸಂಬಳ | 'ಜೀತಮು' | ಸಂಬಳಮು |
| ರಜ/ರಜಾ | 'ಸೆಲವು' | ರಜಾ/ರಜಮು |
| ಚುನಾವಣೆ | 'ಎನ್ನಿಕಲು' | ಚುನಾವಣ |
| ಮುಷ್ಕರ | 'ಸಮ್ಮೆ' | ಮುಷ್ಕರಮು |
| ರಾಷ್ಟ್ರ | 'ರಾಜ್ಯಮು' | ರಾಷ್ಟ್ರಮು |

## ಕೋಲಾರ ತೆಲುಗಿನಲ್ಲಿ ನಿಷೇಧಾರ್ಥ ಪ್ರಯೋಗ :

ಶಿಷ್ಟ ತೆಲುಗು ಭಾಷೆಯ ಅಭೂತ ನಿಷೇಧಾರ್ಥ ಕ್ರಿಯಾಪದದ ರಚನೆಯಲ್ಲಿ ಆಖ್ಯಾತ ಪ್ರತ್ಯಯವನ್ನು ಅಂಟಿಸಬೇಕಾಗುತ್ತದೆ. ಕೋಲಾರ ತೆಲುಗಿನಲ್ಲಿ ಇದು ಕನ್ನಡ ದಂತೆ ಸರಳವಾಗಿದೆ.

| **ಶಿಷ್ಟ (ತೆ) ಪ್ರಯೋಗ** | | **ಕೋ. (ತೆ) ಪ್ರಯೋಗ** | **ಕೋ. (ಕ) ಪ್ರಯೋಗ** |
|---|---|---|---|
| ಉತ್ತಮಪುರುಷ | ತಾಗನು<br>ತಾಗಮು | ತಾಗೇಲೇದು/ತಾಗೇಲ್ಲ | ಕೂಡಿಯೋದಿಲ್ಲ/ಕುಡಿಯಲ್ಲ |
| ಮಧ್ಯಮಪುರುಷ | ತಾಗವು<br>ತಾಗರು | —,,— | —,,— |
| ಪ್ರಥಮಪುರುಷ | ತಾಗಡು<br>ತಾಗದು<br>ತಾಗರು | —,,— | —,,— |

ಶಿಷ್ಟ (ತೆ) ಪ್ರಯೋಗದಲ್ಲಿರುವ ಪದಗಳಿಗೆ ಸಂವಾದಿಯಾಗಿ ಕನ್ನಡ ಪದಗಳು ಕ್ರಮವಾಗಿ ಹೀಗಿವೆ : ಕುಡಿಯೆನು. ಕುಡಿಯೆವು; ಕುಡಿಯೆ. ಕುಡಿಯರಿ; ಕುಡಿಯನು, ಕುಡಿಯಳು, ಕುಡಿಯರು. ಈ ರೂಪಗಳು ಕೋ. (ಕ) ದಲ್ಲಿ ಪ್ರಯೋಗದಲ್ಲಿರುವುದು ಕಡಿಮೆ.

ಕುಡಿಯೋದಿಲ್ಲ / ಕುಡಿಯಲ್ಲ < ಕುಡಿಯುವುದಿಲ್ಲ– ಇದು ತಾಗೇಲೇದು < ತಾಗಡಂಲೇದು– ಇದರ ಸಂವಾದಿ ರೂಪ. ಇಂತಹ ಪ್ರಯೋಗ ಆಂಧ್ರಪ್ರದೇಶದ ತೆಲುಗಿನಲ್ಲಿ ಬಹಳ ಕಡಿಮೆ ಬಳಕೆಯಲ್ಲಿದೆ.

## ಭಾಗ – II

ಅಂಕಿತನಾಮಗಳು ಹಾಗೂ ಸ್ಥಳನಾಮಗಳು ಮಾತೃಭಾಷೆಯಿಂದ ದ್ವಿತೀಯ ಭಾಷೆಗೂ ದ್ವಿತೀಯ ಭಾಷೆಯಿಂದ ಮಾತೃಭಾಷೆಗೂ ಭಾಷಾಂತರವಾಗುವ ಪ್ರವೃತ್ತಿ

ಕೋಲಾರ ಉಪಭಾಷೆಗಳಲ್ಲಿ ಕಂಡು ಬರುತ್ತದೆ. ಭಾಷಾಂತರವಾಗುವುದು ನಿಯಮ-ವಿದ್ದಂತೆ ಕಂಡು ಬರುವುದಿಲ್ಲ. ಭಾಷಾಂತರವಾದಾಗ ಯಾವುದೇ ನಿರ್ದಿಷ್ಟ ನಿಯಮ-ವನ್ನು ಅನುಸರಿಸುವಂತೆ ಕಂಡುಬರುವುದಿಲ್ಲ.

ಈ ಅಧ್ಯಯನದಲ್ಲಿ ಕಂಡುಬಂದ ಕೆಲವು ಅಂಶಗಳನ್ನು ಇಲ್ಲಿ ಉದಾಹರಿಸಲಾಗಿದೆ:

1) ಎರಡು ಉಪಭಾಷೆಗಳಲ್ಲೂ ಸಮಾನಾರ್ಥದಲ್ಲಿ ಪ್ರಯೋಗಿಸುವ ಪದಗಳು ಭಾಷಾಂತರವಾಗುವುದಿಲ್ಲ.

| | | | |
|---|---|---|---|
| ಉದಾ : | ಚಿಕ್ಕಮರೆಪ್ಪ | > < | ಚಿನ್ನಮರೆಪ್ಪ |
| | ದೊಡ್ಡಪ್ಪಯ್ಯ | > < | ಪೆದ್ದಪ್ಪಯ್ಯ |
| | ಗುಡಿಬಂಡೆ | > < | ಗುಡಿಬಂಡ |
| | ಕಳ್ಳಿಕೊಪ್ಪ | > < | ಕಳ್ಳಿಕೊಪ್ಪಮು |

2) ಎರವಲು ಪದಗಳು (loan words) ಭಾಷಾಂತರವಾಗುವುದಿಲ್ಲ.

| | | | |
|---|---|---|---|
| ಉದಾ : | ರಾಮಶಾಸ್ತ್ರಿಗಳು | > < | ರಾಮಾಶಾಸ್ತ್ರುಲು |
| | ಕಾಮೇಗೌಡ | > < | ಕಾಮೇಗೌಡು |
| | ಚಿಂತಾಮಣಿ | > < | ಚಿಂತಾಮಣಿ |
| | ಹಿರಣ್ಯಗೌಡನಹಳ್ಳಿ | > < | ಹಿರಣ್ಯಗೌಡುನಿಪಲ್ಲಿ |

3) ಅಡ್ಡಹೆಸರು / ಉಪನಾಮ (Nicknames/Surnames) ಭಾಷಾಂತರ-ವಾಗುವುದಿಲ್ಲ.

| | | | |
|---|---|---|---|
| ಉದಾ : | ಕಡುಪೋನು (ಕ) | > < | ಕಡುಪೋಡು (ತೆ) |
| | ಗಿತ್ತೋನು (ಕ) | > < | ಗಿತ್ತೋಡು (ತೆ) |
| | ಮಿದ್ದೋರು (ಕ) | > < | ಮಿದ್ದೋಳ್ಳು (ತೆ) |
| | ಮ್ಯಾಕಲನ್ನೋರು (ಕ) | > < | ಮ್ಯಾಕಲನ್ನೋಳ್ಳು (ತೆ) |

4) ಹೆಸರುಗಳನ್ನು ಅರ್ಥವತ್ತಾಗಿ ಎರಡು ಅಥವಾ ಹೆಚ್ಚು ಭಾಗಗಳನ್ನಾಗಿ ವಿಭಜಿಸಿ-ದಾಗ ಎಲ್ಲಾ ಭಾಗಗಳೂ ಭಾಷಾಂತರವಾಗಬಹುದು.

| | | | |
|---|---|---|---|
| ಉದಾ : | ಕರೇಕಲ್ಲಹಳ್ಳಿ | > < | ನಲ್ಲರಾಳ್ಳಪಲ್ಲಿ |
| | ಕಟ್ಟೀಮೇಲಿನಹಳ್ಳಿ | > < | ಕಟ್ಟಿಮಿಂದಪಲ್ಲಿ |

5) ಹೆಸರಿನ ಒಂದೆರಡು ಭಾಗ ಮಾತ್ರ ಭಾಷಾಂತರವಾಗಬಹುದು.

ಉದಾ : ನಂದಿಬೆಟ್ಟ > < ನಂದಿಕೊಂಡ

ದೊಡ್ಡಮಲ್ಲೇಕೆರೆ > < ಪೆದ್ದಮಲ್ಲೇಚೆಗುವು

6) ಕೆಲವು ಹೆಸರುಗಳು ಭಾಷಾಂತರವಾಗದೆ ಹಾಗೆಯೇ ಉಳಿದುಕೊಂಡು ಬರುತ್ತವೆ.

ಉದಾ : ವರಲಕೊಂಡ ಹುಚ್ಚಪ್ಪ

ಹೊಸೂರು ಕೊಂಡಪ್ಪ

ಕೊತ್ತಮಂಗಲ ನ್ಯಾತಪ್ಪ

## ಭಾಗ – III

## ಭಾಷಾ ಬಳಕೆ (Code Switching)

ಕೋಲಾರ ಜಿಲ್ಲೆಯ ಪ್ರಮುಖ ಜಾತಿಗಳು–ಅಕ್ಕಸಾಲಿ, ಅಗಸ, ಆದಿಕರ್ನಾಟಕ (ಹರಿಜನ), ಒಕ್ಕಲಿಗ, ಕುರುಬ, ಗೊಲ್ಲ, ನಾಯಿಂದ, ನೇಯ್ಗೆ, ಬಣಜಿಗ, ಬೇಡ, ಬ್ರಾಹ್ಮಣ, ಮತ್ತು ವೈಶ್ಯ. ಬಹುಮಟ್ಟಿಗೆ ಎಲ್ಲಾ ಜಾತಿಗಳಲ್ಲೂ ತೆಲುಗು ಮಾತೃಭಾಷೆಯುಳ್ಳವರು ಮತ್ತು ಕನ್ನಡ ಮಾತೃಭಾಷೆಯುಳ್ಳವರು ಎಂಬ ಎರಡು ಭಾಷಾವರ್ಗಗಳಿವೆ.

ಈ ಅಧ್ಯಯನದಲ್ಲಿ ಎರಡೂ ಭಾಷಾವರ್ಗಗಳಿಗೆ ಸೇರಿದ ವ್ಯಕ್ತಿಗಳ ಭಾಷಾ ಬಳಕೆಯನ್ನು ಅಧ್ಯಯನ ಮಾಡಲಾಗಿದೆ. ಇದಕ್ಕೆ ಬೇಕಾದ ಮಾಹಿತಿಯನ್ನು ಕಲೆಹಾಕುವಾಗ ಈ ಕೆಳಗೆ ನಮೂದಿಸಿರುವ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಲಾಗಿದೆ.

1) ಎರಡು ಭಾಷಾವರ್ಗಗಳ ಗ್ರಾಮೀಣ ವ್ಯಕ್ತಿಗಳ ಭಾಷಾವರ್ತನೆ.
2) ಎರಡೂ ಭಾಷೆಗಳನ್ನು ನಿರರ್ಗಳವಾಗಿ ಮಾತನಾಡುವ ವ್ಯಕ್ತಿಗಳು.
3) ಸಾಮಾಜಿಕವಾಗಿ ಮೇಲುಜಾತಿಯೆಂದು ಪರಿಗಣಿಸಲಾಗಿರುವ ವ್ಯಕ್ತಿ ಕೆಳಜಾತಿಯ ವ್ಯಕ್ತಿಯೊಡನೆ.
4) ಭಿನ್ನ ಭಾಷಾವರ್ಗದ ಆದರೆ ಒಂದೇ ಜಾತಿಗೆ ಸೇರಿದ ವ್ಯಕ್ತಿಗಳ ನಡುವೆ.
5) ವಿದ್ಯಾವಂತರ ನಡುವೆ (ವಿ × ವಿ)
6) ವಿದ್ಯಾವಂತ ಹಾಗೂ ಅವಿದ್ಯಾವಂತನ ನಡುವೆ (ವಿ × ಅ. ವಿ.)
7) ಅವಿದ್ಯಾವಂತರ ನಡುವೆ (ಅ. ವಿ. × ಅ. ವಿ.)
8) ಪರಿಚಿತ ವ್ಯಕ್ತಿಗಳ ನಡುವೆ.
9) ಅಪರಿಚಿತ ವ್ಯಕ್ತಿಗಳ ನಡುವೆ.
10) ಔಪಚಾರಿಕ ಸಂದರ್ಭದಲ್ಲಿ.
11) ಅನೌಪಚಾರಿಕ ಸಂದರ್ಭದಲ್ಲಿ.
12) ವಿವಿಧ ಪರಿಸರಗಳಲ್ಲಿ (ಉದಾ : ಮನೆ, ಆಫೀಸು, ಬೀದಿ ಇತ್ಯಾದಿ)

## ಭಾಷಾ ಬಳಕೆಯನ್ನು ತೋರಿಸುವ ಪಟ್ಟಿ

| ಜಾತಿ ಹಾಗೂ ಮಾತೃಭಾಷೆ | ಔಪಚಾರಿಕ | | | | | | ಅನೌಪಚಾರಿಕ | | | | | |
|---|---|---|---|---|---|---|---|---|---|---|---|---|
| | ಪರಿಚಿತ | | | ಅಪರಿಚಿತ | | | ಪರಿಚಿತ | | | ಅಪರಿಚಿತ | | |
| | ವಿ × ವಿ | ವಿ × ಅವಿ | ಅವಿ × ಅವಿ | ವಿ × ವಿ | ವಿ × ಅವಿ | ಅವಿ × ಅವಿ | ವಿ × ವಿ | ವಿ × ಅವಿ | ಅವಿ × ಅವಿ | ವಿ × ವಿ | ವಿ × ಅವಿ | ಅವಿ × ಅವಿ |
| ಬ್ರಾಹ್ಮಣ (ಕ) × ಒಕ್ಕಲಿಗ (ತೆ) | (ಕ) | (ಕ) | (ತೆ) | (ಕ) | (ಕ) | (ತೆ) | (ಕ)/(ತೆ) | ಅವಿ.ನ ಮಾ.ಭಾ | (ತೆ) | (ಕ) | ಅವಿ.ನ ಮಾ.ಭಾ | (ತೆ) |
| ಬ್ರಾಹ್ಮಣ (ತೆ) × ಹರಿಜನ (ಕ) | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — |
| ಅಕ್ಕಸಾಲಿ (ಕ) × ಅಕ್ಕಸಾಲಿ (ತೆ) | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — |
| ಅಗಸ (ಕ) × ವೈಶ್ಯ (ತೆ) | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — |
| ಬ್ರಾಹ್ಮಣ (ಕ) × ಬ್ರಾಹ್ಮಣ (ತೆ) | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — |
| ಒಕ್ಕಲಿಗ (ಕ) × ಹರಿಜನ (ತೆ) | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — | — ,, — |

ಈ ಅಧ್ಯಯನದಿಂದ ಹೊರಬಂದ ತೀರ್ಮಾನವನ್ನು ಕೆಳಗಿನ ರೇಖಾಪಟ ಸಂಕ್ಷಿಪ್ತವಾಗಿ ತೋರಿಸುತ್ತದೆ :

ಔಪಚಾರಿಕ ಸಂದರ್ಭ

- ವಿ×ವಿ (ಕ)
- ವಿ×ಅವಿ (ಕ)
- ಅ ವಿ×ಅ.ವಿ (ತೆ)

ಅನೌಪಚಾರಿಕ ಸಂದರ್ಭ

- ಪರಿಚಿತರು
  - ವಿ×ವಿ (ಕ)/(ತೆ)
  - ವಿ×ಅ.ವಿ (ಅವಿ.ನಮಾ.ಭಾ)
  - ಅ.ವಿ×ಅ.ವಿ (ತೆ)
- ಅಪರಿಚಿತರು
  - ವಿ×ವಿ (ಕ)
  - ವಿ×ಅ.ವಿ (ಅವಿ.ನಮಾ.ಭಾ)
  - ಅ.ವಿ×ಅ.ವಿ (ತೆ)

1) ಪ್ರದೇಶದ ಪ್ರಬಲಭಾಷೆ ಭಾಷಾ ಸಂಪರ್ಕದಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ.

2) ವಿದ್ಯಾವಂತರು–ಅವಿದ್ಯಾವಂತರು, ಪರಿಚಿತರು–ಅಪರಿಚಿತರು, ಔಪಚಾರಿಕ ಸಂದರ್ಭ, ಅನೌಪಚಾರಿಕ ಸಂದರ್ಭ– ಇವು ಭಾಷಾಬಳಕೆಯಲ್ಲಿ ಪಾತ್ರವಹಿಸುವ ಇತರ ಅಂಶಗಳು.

3) ಭಾಷಾ ಸಂಪರ್ಕದಲ್ಲಿ ಜಾತಿಯು ಯಾವುದೇ ಮುಖ್ಯ ಪಾತ್ರವಹಿಸಿ ಪರಿಣಾಮ ಬೀರುವಂತೆ ಈ ಅಧ್ಯಯನದಲ್ಲಿ ಕಂಡು ಬಂದಿಲ್ಲ.

# ಎಕ್ಕಸಂಬುಗೆಯ ಶಾಸನ; ಕ್ರಿ. ಶ. ೧೧೬೫

● ಆರ್. ಎಸ್. ಗುರವ್

**ಎಕ್ಕಸಂಬುಗೆ** ಈಗಿನ ಎಕ್ಸಂಬಾ ಗ್ರಾಮ. ಅದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲೂಕಿನಲ್ಲಿ, ಚಿಕ್ಕೋಡಿಯಿಂದ ಉತ್ತರಕ್ಕೆ ಸುಮಾರು ಎಂಟು ಮೈಲು ಅಂತರದಲ್ಲಿರುವ ಒಂದು ದೊಡ್ಡ ಗ್ರಾಮವಾಗಿದೆ. ಪ್ರಸ್ತುತ ಶಾಸನವನ್ನು[1] ಎಕ್ಸಂಬೆಯ ಶ್ರೀ ಆದಿನಾಥ ತೀರ್ಥಂಕರರ ಬಸದಿಯಲ್ಲಿ ಗರ್ಭಗೃಹಬಾಗಿಲದ ಎಡಬದಿಗೆ ಗೋಡೆಗೆ ಆನಿಸಿ ನಿಲ್ಲಿಸಲಾಗಿದೆ. ಶಾಸನವು ಸುಸ್ಥಿತಿಯಲ್ಲಿದೆ. ಆದರೆ, ಅದರ ಮೇಲೆ ಬಹುಕಾಲ-ದಿಂದ ನೀರು, ಹಾಲು, ಎಣ್ಣೆ, ಗಿಣ್ಣ ಮುಂತಾದವುಗಳನ್ನು ಹೊಯ್ದುದರಿಂದ ನಡುವಿನ ಭಾಗದ ಅಕ್ಷರಗಳಲ್ಲಿ ಸಿಮೆಂಟಿನಂತಹ ಕಠಿನ ಪದಾರ್ಥ ಬೆಳೆದು ಅವು ತುಂಬಿಕೊಂಡು ಸಪಾಟಾಗಿವೆ. ಆದ್ದರಿಂದ, ಈ ಭಾಗದ ಪಡಿಯಚ್ಚುಗಳು ಸರಿಯಾಗಿ ಮೂಡಿ ಬರುವುದಿಲ್ಲ. ಕಾರಣ, ಈ ಭಾಗದ ಅಕ್ಷರಗಳನ್ನು ಸ್ಥಳದಲ್ಲಿ ಓದಿ ಶಾಸನದ ಪಾಠವನ್ನು ಪೂರ್ಣಮಾಡಲಾಗಿದೆ.

ಶಾಸನದಲ್ಲಿ ಉಕ್ತವಾಗಿರುವ ನೇಮಿನಾಥಸ್ವಾಮಿಯ ಬಸದಿ ಇದೇ. ಈಗ ಅಲ್ಲಿ ಆದಿನಾಥಸ್ವಾಮಿಯ ವಿಗ್ರಹವಿದೆ. ನೇಮಿನಾಥ ತೀರ್ಥಂಕರರ ವಿಗ್ರಹವನ್ನು ಯಾವ ಕಾಲದಲ್ಲಿ ಏಕೆ ಬದಲಾಯಿಸಲಾಯಿತೆಂಬುದರ ಬಗ್ಗೆ ಗ್ರಾಮದ ಜನರಿಗೆ ಇಲ್ಲವೆ ಅಲ್ಲಿಯ ಜೈನಸಮಾಜದವರಿಗೆ ಯಾವ ತಿಳುವಳಿಕೆಯೂ ಇರುವುದಿಲ್ಲ. ಆದಿನಾಥಸ್ವಾಮಿಯ ಮೂರ್ತಿಯನ್ನು ನಿಲ್ಲಿಸಿದ ಪೀಠದ ಕೆಳಬದಿಗೆ ನೇಮಿನಾಥಸ್ವಾಮಿಯ ವಿಗ್ರಹವನ್ನು ಮಾಡಿಸಿದ ಶಾಸನವಿರುವುದರಿಂದ ಇದೇ ಬಸದಿ ಶಾಸನದಲ್ಲಿ ಹೇಳಿದ ಬಸದಿ ಎಂಬುದು ಸ್ಪಷ್ಟ.

---

1. ಈ ಶಾಸನವನ್ನು ಡಾ. ಫ್ಲೀಟ ಅವರು ತಮ್ಮ 'Dynasties of the Kanerese Districts' ಎಂಬ ಗ್ರಂಥದಲ್ಲಿ ನಮೂದಿಸಿದ್ದಾರೆ; Bombay Govt. Gazetteer, Vol. I, P. II, ಪುಟ 476 ನೋಡಿ. A. R. I. E. (1959 - 60, ಕ್ರಮಾಂಕ 394) ದಲ್ಲಿಯೂ ಈ ಶಾಸನದ ಉಲ್ಲೇಖ ಬರುತ್ತದೆ. ಶಾಸನವು ಇನ್ನೂ ಪ್ರಕಟವಾಗಿಲ್ಲ.

**ಶಾಸನದ ಭಾಷೆ ಮತ್ತು ಲಿಪಿ ಕನ್ನಡ.** ಆದರೆ, ಮೊದಲಿನ ಎರಡು ಮಂಗಲ ಪದ್ಯಗಳು (ಕ್ರಮಾಂಕ 1, 2), ನಡುವಿನದೊಂದು ವರ್ಣನಾತ್ಮಕಪದ್ಯ (ಕ್ರ. 33) ಹಾಗು ಕೊನೆಯಲ್ಲಿಯ ಮೂರು ಫಲಶ್ರುತಿಯ ಪದ್ಯಗಳು (ಕ್ರ. 37–39) ಸಂಸ್ಕೃತ ಭಾಷೆಯಲ್ಲಿವೆ. ಶಾಸನ ಚಂಪೂಶೈಲಿಯಲ್ಲಿದ್ದು, ಆ ಕಾಲದ ಬೇರೆ ಜೈನ ಶಾಸನಗಳಂತೆ ಪಾಂಡಿತ್ಯಪ್ರಚುರವಾಗಿದೆ. ಅಕ್ಷರಗಳನ್ನು ಸುಂದರವಾಗಿ ಕಂಡರಿಸಿದ್ದು ಲೇಖನದೋಷಗಳು ಅತ್ಯಲ್ಪವಾಗಿವೆ. ಕವಿ ಹಾಗು ಕಂಡರಿಸಿದವನ ಹೆಸರುಗಳನ್ನು ಕೊಟ್ಟಿರುವದಿಲ್ಲ.

**ಅಕ್ಷರರೀತಿ** (Palaeography) **ಮತ್ತು ಅಕ್ಷರವಿನ್ಯಾಸ** (Orthography) :

1. ಉಪಧ್ಮಾನೀಯವನ್ನು 'ಭಾವಿನಜಾರ್ತ್ಥಿಃವೇಂದ್ರಾನ್' (ಸಾಲು 73) ಈ ಪದಸಮುಚ್ಚಯದಲ್ಲಿ ಉಪಯೋಗಿಸಲಾಗಿದೆ.

2. ಮುಂನೀರ್ವ್ವರ (ಸಾ. 3), ವರದರ್ಶನ (ಸಾ. 27) ಮತ್ತು ತನಗವತ್ರೈವಿದ್ಯವಿದ್ಯಾಧರರ್ (ಸಾ. 43) ಇವಿಷ್ಟನ್ನು ಹೊರತುಪಡಿಸಿ ಉಳಿದೆಲ್ಲಕಡೆ ರೇಫೆಯ ಮುಂದೆ ಬರುವ ವ್ಯಂಜನಕ್ಕೆ ದ್ವಿತ್ವವನ್ನುಪಯೋಗಿಸಲಾಗಿದೆ. ಉದಾ: ನೃಪಪ್ಪಾರ್ಳಿಸುತ್ತಿರ್ದ್ದರ್ (ಸಾ. 2); ಸುವಣ್ಣ್ರಗರುಡಧ್ವಜಂ (ಸಾ. 20); ಧರ್ಮ್ಮನಿರ್ಮ್ಮಳನುಮಾಗಿ (ಸಾ. 54); ಇತ್ಯಾದಿ.

3. ಸಾಮಾನ್ಯವಾಗಿ ಅನುನಾಸಿಕಗಳು ಬಿಂದುವಿನಿಂದ ಬರೆಯಲ್ಪಟ್ಟಿವೆ. ಉದಾ: ವೀರಾಂಗನಾ (ಸಾ. 7); ಮಂಡಳೇಶ್ವರ (ಸಾ. 15); ಇಂತೀ (ಸಾ. 70). ಆದರೆ, ಕೆಲವು ಕಡೆ ವರ್ಗಪಂಚಮವನ್ನು ಬಳಸಲಾಗಿದೆ. ಉದಾ: ಇನ್ತೀ (ಸಾ. 28); ಅನ್ತು (ಸಾ. 15).

4. ಅನುನಾಸಿಕಗಳ ದ್ವಿತ್ವಪ್ರಸಂಗದಲ್ಲಿ ಸಾಮಾನ್ಯವಾಗಿ ಬಿಂದುವನ್ನು ಉಪಯೋಗಿಸಲಾಗಿದೆ. ಉದಾ: ಕಂನರ (ಸಾ. 3); ಉಂನತಿ (ಸಾ. 17); ಕಾಳಿಯಂಣ (ಸಾ. 49); ತಂಮ (ಸಾ. 37); ಪುಂನಾಗ (ಸಾ. 42); ನಿತ್ಯಾಂನ (ಸಾ. 50). ಕೆಲವುಕಡೆ ಒತ್ತಕ್ಷರಗಳನ್ನೂ ಬಳಸಿರುವುದುಂಟು. ಉದಾ: ಜಿನ್ನಣಂ (ಸಾ. 28); ಕಾಳಿಯಣ್ಣ (ಸಾ. 66).

5. ಲಾಂಛನಂ (ಸಾ. 1) ಶಬ್ದವನ್ನು ಬಿಟ್ಟು ಉಳಿದೆಲ್ಲಕಡೆ 'ಛ' ಅಕ್ಷರಕ್ಕೆ ಪ್ರತಿಯಾಗಿ 'ಚ್ಛ' ಪ್ರಯೋಗ ಮಾಡಲಾಗಿದೆ. ಉದಾ: ಸಿಂದೂರಲಾಂಚ್ಛನಂ (ಸಾ. 20).

6. ಸ, ಶ, ಮತ್ತು ಷ ಅಕ್ಷರಗಳನ್ನು ಸರಿಯಾಗಿ ವಿಂಗಡಿಸಿ ಬರೆಯಲಾಗಿದೆ. ಅಪವಾದವೆಂಬಂತೆ ಎರಡುಕಡೆ ಮಾತ್ರ ಶ್ವಾಮಿಗಳು (ಸಾ. 65, 67) ಎಂದು

'ಸ' ಕಾರದ ಬದಲು 'ಶ' ಕಾರವನ್ನು ಬಳಸಲಾಗಿದೆ. ಪ್ರಸಸ್ತಿ (ಸಾ. 24) ಮತ್ತು ಸುದ್ಧ (ಸಾ. 55) ಈ ಶಬ್ದಗಳನ್ನು ತದ್ಭವದ ರೂಪಾಂತರಗಳೆಂದು ಭಾವಿಸಬಹುದು.

7. ವ್ಯಂಜನದಿಂದ ಕೂಡಿದ 'ಋ' ಕಾರವನ್ನು ಎಲ್ಲ ಕಡೆಯಲ್ಲಿ ಸರಿಯಾಗಿ ಬರೆಯ-ಲಾಗಿದೆ. ಉದಾ: ಭೃಂಗ (ಸಾ. 33); ಸುಕೃತಾಳಂಕೃತವೃತ್ತನ್ (ಸಾ. 39); ನೃಪಾಣುಂ (ಸಾ. 73). ಆದರೆ, ಬ್ರಿಹಸ್ಪತಿವಾರ (ಸಾ. 56) ಮತ್ತು ಕ್ರಿಮಿಃ (ಸಾ. 72) ಈ ಶಬ್ದಗಳಲ್ಲಿ ಅದನ್ನು 'ರಿ' ಕಾರದಲ್ಲಿ ಪರಿವರ್ತಿಸಿ ಬರೆಯಲಾಗಿದೆ. ಆರಂಭದ ಋ 'ರಿ' ಕಾರವಾಗಿ ಒಂದೇ ಕಡೆ 'ರಿಷಿಯರ' (ಸಾ. 54) ಶಬ್ದದಲ್ಲಿ ಬಂದಿದೆ.

**ಶಾಸನದ ಸಾರಾಂಶ :**

ಜೈನಶಾಸನಕ್ಕೆ ಜಯವಾಗಲಿ, ಯಾಪನೀಯ ಸಂಘದ ಪುನ್ನಾಗವೃಕ್ಷಮೂಲಗಣವು ಬೆಳೆಯಲಿ ಎಂದು ಆರಂಭದಲ್ಲಿ ಹಾರೈಸಿ ಶಾಸನವು ರಾಜಾವಳಿಯತ್ತ ಸಾಗುತ್ತದೆ. (ಸಾ. 1-2). ಕನ್ನರದೇವಮುಖ್ಯ ರಾಷ್ಟ್ರಕೂಟವಂಶದವರು ರಾಜ್ಯವಾಳಿದ ಬಳಿಕ ತೈಲಭೂಪಪ್ರಮುಖ ಚಾಲುಕ್ಯರ ಆಳಿಕೆ ನಡೆಯಿತೆಂದು ಪ್ರಸ್ತಾಪಿಸಿ, ಕಲಚುರಿ ಮನೆತನದ ಬಿಜ್ಜಲದೇವನು ಆ ಸಾಮ್ರಾಜ್ಯಕ್ಕೆ ಚಕ್ರವರ್ತಿಯಾದನೆಂದು ಶಾಸನವು ಹೇಳುತ್ತದೆ (ಸಾ. 2-5). ಈ ಶಾಸನಕಾಲದಲ್ಲಿ ಬಿಜ್ಜಲದೇವನಿಗೆ ಅಧೀನರಾಗಿ ಸೌದತ್ತಿಯ ರಟ್ಟಕುಲದ ಮಹಾಮಂಡಳೇಶ್ವರ ಮುಮ್ಮಡಿ ಕಾರ್ತವೀರ್ಯದೇವ ಹಾಗು ವಳವಾಡದ (ಕೊಲ್ಲಾಪುರದ) ಶಿಲಾಹಾರವಂಶದ ಮಹಾಮಂಡಳೇಶ್ವರ ವಿಜಯಾದಿತ್ಯ-ದೇವ ಇವರು ತಂತಮ್ಮ ನಾಡುಗಳನ್ನು ಆಳುತ್ತಿದ್ದರು. ಶಿಲಾಹಾರ ವಂಶದಲ್ಲಿ ಮಾರಸಿಂಗನೃಪ, ಆತನ ತನೂಭವ ಭೋಜ, ಭೋಜನ ತಮ್ಮ ಗಂಡರಾದಿತ್ಯ, ಗಂಡರಾ-ದಿತ್ಯನ ಅಗ್ರಸೂನು ವಿಜಯಾದಿತ್ಯ ಹೀಗೆ ಶಿಲಾಹಾರ ದೊರೆಗಳ ವಿವರಣೆ ಬರುತ್ತದೆ (ಸಾ. 6-16). ತರುವಾಯ, ಮೂರು ಜಗಕ್ಕೆ ಪಾವನವಾದ ರಟ್ಟವಂಶದಲ್ಲಿ ಹುಟ್ಟಿದ ಪೆರ್ಮಾಡಿಭೂಪ, ಆತನ ತನಯ ಸೇನನೃಪ ಹಾಗು ಸೇನನ ಪುತ್ರ ಕತ್ತಮ ಹೀಗೆ ಸೌದತ್ತಿಯ ರಟ್ಟವಂಶವನ್ನು ಹೇಳಲಾಗಿದೆ (ಸಾ. 16-19). ಕತ್ತಮನೆಂದರೆ ಮುಮ್ಮಡಿ ಕಾರ್ತವೀರ್ಯ. ಆಮೇಲೆ, ಮುಮ್ಮಡಿ ಕಾರ್ತವೀರ್ಯನ ಪ್ರಶಸ್ತಿಯನ್ನು ಕೊಡಲಾಗಿದೆ (ಸಾ. 19-24).

ಎಕ್ಸಂಬಾ ಗ್ರಾಮದಲ್ಲಿ ಶ್ರೀ ನೇಮಿನಾಥಸ್ವಾಮಿಯ ಬಸದಿಯನ್ನು ಕಟ್ಟಿಸಿದ ಮಹಾಪ್ರಧಾನ ಪಡವಳಕಾಳಿಯಣ್ಣನ ವಂಶವರ್ಣನೆ ಮುಂದೆ ಸುದೀರ್ಘವಾಗಿ ಬರುತ್ತದೆ (ಸಾ. 24-41). ಈ ಕುಲದವರು ಜಿನಧರ್ಮಪರಾಯಣರಾಗಿದ್ದರು. ವಿನುತಾರ್ಹ-ತ್ಪಾವನಪ್ರತತತ್ಪರ ಮಾರಗೌಂಡ, ಆತನ ಸುತ ನೀತಿವಿದ ಅಜಗೌಂಡ, ಅಜಣನ ಜ್ಯೇಷ್ಠ

ಪುತ್ರ ಜಗಜ್ಜನತಾಸಂಸ್ತವಪಾತ್ರ "ಹೊಲ್ಲಿಗೌಂಡ, ಆ ಹೊಲ್ಲಿಗೌಂಡನಿಗೆ ಜಿನ್ನಣ, ಕಾಳಣ ಹಾಗು ಮಧುವಣ ಎಂಬ ಮೂವರು ಮಕ್ಕಳು. ಅವರ ಗುಣಗಳನ್ನು ಪದ್ಯ 21 ರಿಂದ 24 ರಲ್ಲಿ ವರ್ಣಿಸಲಾಗಿದೆ. ಜಿನ್ನಣನು ಶಿಲಾಹಾರನರೇಂದ್ರ ಗಂಡರಾದಿತ್ಯದೇವನ ಪಡವಳ ಎಂದರೆ ಸೈನ್ಯಾಧಿಕಾರಿಯಾಗಿದ್ದನು. ಕಾಳಣನು ಗಂಡರಾದಿತ್ಯನ ಮಗನಾದ ವಿಜಯಾದಿತ್ಯದೇವನ ಪಡವಳನಾಗಿದ್ದನು. ಮಧುವಣನೂ ಪಡವಳನಾಗಿದ್ದನು. ಕಾಳಣನ ಪತ್ನಿ ಲಚ್ಚಲದೇವಿ (ಲಕ್ಷ್ಮೀದೇವಿ). ಈ ದಂಪತಿಗೆ ಜಿನ್ನಣ, ಆಚಣ ಹಾಗು ರಾಮಣನೆಂಬ ಮೂವರು ತನಯರು. ಇವರ ವರ್ಣನೆ ಮೂರು ಪದ್ಯಗಳಲ್ಲಿ ಬರುತ್ತದೆ (ಕ್ರಮಾಂಕ 26, 27, 28). ಹೀಗೆ ನೆಗಳ್ತೆ ಹೊಂದಿದ ಪುತ್ರರು, ಪತಿವ್ರತೆಯಾದ ಹೆಂಡತಿ ಮತ್ತು ಒಳ್ಳೆಯ ಮಿತ್ರರು ಇವರೊಡನೆ ಕಾಳಿಯಣ್ಣ ಸುಖದಿಂದ ಕಾಲ ಕಳೆಯುತ್ತಿದ್ದನು. ಒಂದು ದಿವಸ, ಜೈನಧರ್ಮಕಥಾಗೋಷ್ಠಿ ನಡೆದ ಸಮಯದಲ್ಲಿ ಕಾಳಿಯಣ್ಣನಿಗೆ ಬಸದಿಯೊಂದನ್ನು ಕಟ್ಟಿಸುವ ಬಯಕೆಯುಂಟಾಯಿತು (ಪ. 29-30). ಕೂಡಲೆ ಕಾರ್ಯೋನ್ಮುಖನಾಗಿ ಕೂಂಡಿ ಮಂಡಳದ ಕೊರವಳ್ಳಿಕಂಪಣದಲ್ಲಿಯ ಎಕ್ಕಸಂಬುಗೆ ಗ್ರಾಮದಲ್ಲಿ ಶ್ರೀ ನೇಮಿನಾಥಸ್ವಾಮಿಯ ಬಸದಿಯನ್ನು ಕಟ್ಟಿಸಿದನು (ಪ. 31). ಈ ಬಸದಿ ಉತ್ತುಂಗವಾದ ಗೋಪುರದಿಂದಲೂ, ಶೋಭಾಯಮಾನ ಮತ್ತು ಚಿತ್ರವಿಚಿತ್ರವಾದ ಕಲಾಕುಸರಿಯ ಕೆಲಸದಿಂದ ಕೂಡಿದ ಶಿಲಾಬಾಲಿಕೆಯರಿಂದಲೂ ರಂಜಿತವಾಗಿತ್ತು (ಸಾ. 52-53).

ತರುವಾಯ, ಕಾಳಿಯಣ್ಣನ ಗುರುಕುಳದ ವಿವರಣೆ ಬರುತ್ತದೆ (ಪ. 32). ಯಾಪನೀಯ ಸಂಘದಲ್ಲಿ ಪುನ್ನಾಗವೃಕ್ಷಮೂಲಗಣಕ್ಕೆ ಸೇರಿದ ಮುನಿಚಂದ್ರೋತ್ತಮಪುತ್ರ ವಿಜಯಕೀರ್ತಿ ಪಂಡಿತದೇವರ ಗುರುಗಳಾದ ಶ್ರೀಮನ್ಮಹಾಮಂಡಳಾಚಾರ್ಯ ಕುಮಾರ ಕೀರ್ತಿ ಪಂಡಿತದೇವರು ಕಾಳಿಯಣ್ಣನ ಗುರುಗಳಾಗಿದ್ದರು. ಕುಮಾರಕೀರ್ತಿ ಹಾಗೂ ವಿಜಯಕೀರ್ತಿ ಇವರ ಪಾಂಡಿತ್ಯತಪಶ್ಚರ್ಯಾದಿಗಳ ವರ್ಣನೆ ಪದ್ಯ 33–34 ರಲ್ಲಿ ಬರುತ್ತದೆ. ಕಾಳಣನು ಶ್ರೀವಿಜಯಕೀರ್ತಿ ಪಂಡಿತದೇವರ ಪಾದಪ್ರಕ್ಷಾಳನವನ್ನು ಮಾಡಿ, ತಾನು ಕಟ್ಟಿಸಿದ ನೇಮಿಜಿನಾಲಯವನ್ನು ಅವರಿಗೆ ಒಪ್ಪಿಸಿಕೊಟ್ಟನು.

ಈ ಜಿನಾಲಯದ ಮಹಿಮೆಯನ್ನು ಕೇಳಿ, ಅದನ್ನು ನೋಡಲು ಹಾಗೂ ಜಿನದರ್ಶನವನ್ನು ಪಡೆಯಲು ಶ್ರೀಮನ್ಮಹಾಮಂಡಳೇಶ್ವರ ದೇವತಾಗೃಹವನ್ನು ನೋಡಿ ಸಂತೋಷಪಟ್ಟು ಬಸದಿಯಲ್ಲಿ ನಡೆಯುವ ಪೂಜೆಗೆ, ತ್ರಿಕಾಲಸಂಧ್ಯಾವಸರದ ಮಧುರ ವಾದ್ಯಕ್ಕೆ ಉಕ್ತವಾದ ತಿಥಿಯಲ್ಲಿ ಎರಡು ಸಾವಿರ ಕಂಬ ಭೂಮಿಯನ್ನು ದಾನಮಾಡಿ ಕೊಟ್ಟನು. ಅದೇ ಪ್ರಕಾರ, ದಾನಶಾಲೆ ಹಾಗೂ ಬಣಬೆಯ ನಿವೇಶನಗಳನ್ನು, ಹೂದೋಟವನ್ನು ಮತ್ತು ಕಲ್ಹೊಳೆ ಗ್ರಾಮದಲ್ಲಿ ಇನ್ನೂ ಕೆಲವು ಭೂಮಿಯನ್ನು ಮಹಾಮಂಡಳೇಶ್ವರನು ದೇವರಿಗೆ ಬಿಟ್ಟು ಕೊಟ್ಟನು. ಭೂಮಿ ಹಾಗೂ ನಿವೇಶನಗಳ ಸೀಮೆಗಳನ್ನು ಸವಿಸ್ತರವಾಗಿ ವಿವರಿಸಲಾಗಿದೆ (ಸಾ. 52–64).

ಇದಲ್ಲದೆ, ಅಯ್ಯಾವೊಳೆಯ ಅಯ್ನೂರ ಸ್ವಾಮಿಗಳು ಎಂಬ ವರ್ತಕರ ಸಂಘವು, ಗವರೆ ಹಾಗು ಮುಮ್ಮುರಿದಂಡ ಎಂಬ ಸರಕುಗಳ ಸಾಗಾಟ ಮತ್ತು ವ್ಯಾಪಾರ ಮಾಡುವ ಸಂಘಗಳು, ಸ್ವದೇಶ ಪರದೇಶಗಳಲ್ಲಿ ವ್ಯಾಪಾರ ಮಾಡುವ ಉಭಯ ನಾನಾ ದೇಸಿಗಳು ಹಾಗು ಎಕ್ಸಂಬೆಯ ಸ್ಥಳದ ಸಮಸ್ತ ಜನರು ಕೂಡಿಕೊಂಡು ಮಹಾಪ್ರಧಾನ ಪಡವಳ ಕಾಳಿಯಣ್ಣ ಮಾಡಿಸಿದ ಬಸದಿಯ ಶ್ರೀ ನೇಮಿನಾಥ ಸ್ವಾಮಿಗಳ ಅಷ್ಟವಿಧಾರ್ಚನೆಗೆ ಹಾಗು ನಂದಾದೇವಿಗೆ ಒಂದು ಗಾಣದ ಮೇಲೆ ವಿಧಿಸಲ್ಪಡುವ ಒಕ್ಕಲುದೆರೆ, ಬೆಣ್ಣೆ, ಮತ್ತು ಬೀರವಣ ಎಂಬ ತೆರಿಗೆಗಳನ್ನು ಬಿಟ್ಟು ಕೊಟ್ಟರು. ಮತ್ತು ಕೋಣನ ಮೇಲೆ ಸಾಗಿಸುವ ಹೇರಿಗೆ ಎರಡು ಮಾನ, ಎತ್ತಿನ ಹೇರಿಗೆ ಒಂದು ಮಾನ, ಕತ್ತೆಯ ಹೇರಿಗೆ ಅರ್ಧಮಾನ ಧಾನ್ಯವನ್ನು, ಒಂದು ಹೊನ್ನ ಬೆಲೆಯ ಅಡಕೆಗೆ ಐದು ಅಡಕೆಗಳು, ಎಲೆಯ ಹೇರಿಗೆ ಅಯ್ವತ್ತು ಎಲೆ ಮತ್ತು ಹೊರಗಿನಿಂದ ತಂದು ಮಾರುವ ಎಣ್ಣೆಯ ಕೊಡಕ್ಕೆ ಅರ್ಧಮಾನ ಎಣ್ಣೆಯನ್ನು ಕೊಟ್ಟರು. ಹಾಗೆಯೇ, ದೇವರ ದೆಸೆಯಿಂದ ಎತ್ತಿನ ಮೇಲೆ ಸಾಗಾಟ ಮಾಡಲ್ಪಡುವ ಸರಕುಗಳಿಗೆ, ಹದಿನೈದು ಎತ್ತುಗಳವರೆಗೆ, ಲಂಕೆಯಿಂದ ಹಿಮಾಲಯದ ವರೆಗೆ ಹಾಗು ಪೂರ್ವ ಪಶ್ಚಿಮ ಸಮುದ್ರಗಳ ವರೆಗೆ ಎಲ್ಲಿ ಹೋದರೂ, ಆ ಎತ್ತುಗಳ ಮೇಲಿನ ಸುಂಕವನ್ನು ಪರಿಹಾರ ಮಾಡಿ ಕೊಟ್ಟರು (ಸಾ. 64–70).

ಶಾಸನದ ಕೊನೆಗೆ ಈ ಧರ್ಮವನ್ನು ಪಾಲಿಸಿದವರಿಗೆ ಬರುವ ಪುಣ್ಯ ಮತ್ತು ಅದನ್ನು ಕೆಡಿಸಿದವರಿಗೆ ಉಂಟಾಗುವ ಪಾಪ ಇವುಗಳನ್ನು ಹೇಳುವ ಫಲಶ್ರುತಿಯ ಏಳು ಪದ್ಯಗಳು ಬರುತ್ತವೆ (ಸಾ. 70–80).

ಕುಮಾರಕೀರ್ತಿ ಪಂಡಿತದೇವರ ಉಲ್ಲೇಖ ರಾಯಬಾಗದ ಶಾಸನವೊಂದರಲ್ಲಿ[3] (ಕ್ರಿ. ಶ. 1139) ಬರುತ್ತದೆ. ಅದರಲ್ಲಿ, ಅವರು ಹೂವಿನಬಾಗೆಯಲ್ಲಿ (ರಾಯಬಾಗದಲ್ಲಿ) ಮಾರಸಿಂಗಸೆಟ್ಟಿ ಕಟ್ಟಿಸಿದ ಜಿನಾಲಯಕ್ಕೆ ಆಚಾರ್ಯರಾಗಿದ್ದರೆಂದು ಹಾಗು ಯಾಪನೀಯ ಸಂಘ ಪುನ್ನಾಗವೃಕ್ಷಮೂಲಗಣಕ್ಕೆ ಸೇರಿದವರೆಂದು ಹೇಳಲಾಗಿದೆ. ಪ್ರಸ್ತುತ ಎಕ್ಸಂಬೆಯ ಶಾಸನದಲ್ಲಿ (ಕ್ರಿ. ಶ. 1165) ಅವರ ಸ್ಥಾನ ಉನ್ನತಗೊಂಡಿದ್ದು ಅವರು ಆ ಸಂಘದಲ್ಲಿ ಮಂಡಳಾಚಾರ್ಯರಾಗಿದ್ದರೆಂದು ತಿಳಿದು ಬರುತ್ತದೆ. ಪುನ್ನಾಗ ವೃಕ್ಷ ಮೂಲಗಣದ ಉಲ್ಲೇಖ ಎರಡನೆಯ ಕನ್ನಕೈರನ ರಾಯಬಾಗದ ಇನ್ನೊಂದು ಶಾಸನದಲ್ಲಿ[3] (ಕ್ರಿ. ಶ. ಸು. 1080) ಮತ್ತು ಮೂರನೆಯ ಕಾರ್ತವೀರ್ಯನ ಹುಕ್ಕೇರಿ ತಾಲೂಕಿನ ಖಾನಾಪೂರ ಗ್ರಾಮದ ಶಾಸನದಲ್ಲಿ[4] (ಕ್ರಿ. ಶ. 1143) ಬರುತ್ತದೆ.

2. Karnatak Inscriptions, Vol. V; No. 25, pp. 93-97.
3. ನಾನು ತೆಗೆದುಕೊಂಡ ಪಡಿಯಚ್ಚುಗಳಿಂದ ಕ್ರಿ. ಶ. 1951 ರಲ್ಲಿ ಈ ಶಾಸನ ಕೊಲ್ಹಾಪುರದ ಐರ್ವಿನ್ ಅಗ್ರಿಕಲ್ಚರಲ್ ಮ್ಯುಜಿಯಮ್‌ದಲ್ಲಿ ಇತ್ತು. ತ್ರುಟಿತ ಹಾಗು ಸವೆದ ಸ್ಥಿತಿಯಲ್ಲಿದ್ದ ಈ ಶಾಸನದ ತೇದಿ ನಷ್ಟವಾಗಿದೆ. ಆದರೆ, ಅದು ಆರನೆಯ ವಿಕ್ರಮಾದಿತ್ಯನ ಕಾಲದ್ದಾಗಿರುತ್ತದೆ.
4. ನಾನು ತೆಗೆದುಕೊಂಡ ಪಡಿಯಚ್ಚುಗಳಿಂದ, ಬೊಂಬಾಯಿ ಗ್ಯಾಜೆಟಿಯರ್ ಸಂ. 1, ಸಂ. II, ಪುಟ 555, ಅಡಿಟಿಪ್ಪಣಿ 2 ರಲ್ಲಿ ಇದನ್ನು ಉದ್ಧೃತಮಾಡಲಾಗಿದೆ.

ಮಹಾಮಂಡಳೇಶ್ವರರ ವಂಶನಿರೂಪಣೆಯಲ್ಲಿ ಕೆಲವು **ಗಮನಾರ್ಹ ಅಂಶಗಳಿರುತ್ತವೆ.** ಮೊದಲನೆಯ ಅಂಶವೆಂದರೆ ಶಿಲಾಹಾರ ಮಾರಸಿಂಗನ ಮಗನಾದ ಭೋಜನೃಪತಿಗೆ 'ಬಳೆಯ ಪಟ್ಟಣರಟ್ಟಘರಟ್ಟ' ಎಂಬ ಬಿರುದನ್ನು ಈ ಶಾಸನದಲ್ಲಿ ಹೇಳಿರುವುದು. ಇದರಿಂದ ಭೋಜನೃಪನು ಬಳೆಯಪಟ್ಟಣದ ರಟ್ಟರಾಜನಿಗೆ ಬೀಸುವ ಕಲ್ಲಾಗಿದ್ದನೆಂದು ಎಂದರೆ ಆತನನ್ನು ಸೋಲಿಸಿದ್ದನೆಂದು ತಿಳಿದು ಬರುತ್ತದೆ. ಭೋಜನೃಪನು ಕೊಲ್ಲಾಪುರದ ಶಿಲಾಹಾರ ಮನೆತನಕ್ಕೆ ಸೇರಿದ ಮಹಾಮಂಡಳೇಶ್ವರ. ರಟ್ಟರಾಜನು ದಕ್ಷಿಣ ಶಿಲಾಹಾರರ ಮನೆತನಕ್ಕೆ ಸೇರಿದ ಮಹಾಮಂಡಳೇಶ್ವರ. ಇನ್ನೊಂದು ಶಿಲಾಹಾರ ಮನೆತನವು ಉತ್ತರ ಕೊಂಕಣದಲ್ಲಿ ರಾಜ್ಯವಾಳುತ್ತಿದ್ದು ಅದು ಠಾಣೆಯ ಶಿಲಾಹಾರ ಮನೆತನವೆಂದು ಪ್ರಸಿದ್ಧವಿದೆ. ಈ ಮೂರು ಶಿಲಾಹಾರ ಮನೆತನಗಳ ರಾಜ್ಯಗಳ ಸೀಮೆಗಳು ಒಂದಕ್ಕೊಂದು ಹತ್ತಿಕೊಂಡಿದ್ದವು. ಆದುದರಿಂದ ಈ ಮನೆತನಗಳಲ್ಲಿ ಕಾರಣಾಂತರಗಳಿಂದ ಯುದ್ಧಗಳಾಗುವುದು ಸಹಜ. ಇಂತಹದೊಂದು ಯುದ್ಧ ಪ್ರಸಂಗದಲ್ಲಿ ಬಳೆಯಪಟ್ಟಣದ ರಟ್ಟರಾಜನನ್ನು ಕೊಲ್ಲಾಪುರದ ಭೋಜರಾಜನು ಸೋಲಿಸಿದ್ದನೆಂಬುದು ಈ ಶಾಸನದಲ್ಲಿ ಹೇಳಿದ ಬಿರುದಿನಿಂದ ಪ್ರಪ್ರಥಮವಾಗಿ ವಿದಿತವಾಗುತ್ತದೆ. ಮುಂದೆ ವಿವರಿಸಿದಂತೆ, ಬಳೆಯಪಟ್ಟಣವು ದಕ್ಷಿಣ ಶಿಲಾಹಾರ ಅರಸನಾದ ಧಮ್ಮಿಯರನ ಕಾಲದಿಂದ ಎಂದರೆ ಸುಮಾರು ಕ್ರಿ. ಶ. 800 ರಿಂದ ಆ ಮನೆತನದ ರಾಜಧಾನಿ ಪಟ್ಟಣವಾಗಿತ್ತು. ಮಾರಸಿಂಗರಸನ ಕಾಲ ಸುಮಾರು ಕ್ರಿ. ಶ. 1050 ರಿಂದ 1075. ಆತನ ಜ್ಞಾತ ವರ್ಷ[5] ಕ್ರಿ. ಶ. 1058. ಆದುದರಿಂದ ಆತನ ಮಗನಾದ ಭೋಜರಾಜನ ಕಾಲ ಸುಮಾರು ಕ್ರಿ. ಶ. 1075 ರಿಂದ 1100. ಭೋಜರಾಜನ ಜ್ಞಾತವರ್ಷ[6] ಕ್ರಿ. ಶ. 1089. ದಕ್ಷಿಣ ಶಿಲಾಹಾರಲ್ಲಿ ರಟ್ಟರಾಜನೆಂಬ ಹೆಸರು ಆತನ ಖಾರೇಪಾಟಣದ ತಾಮ್ರಪಟದಿಂದ[7] ಪ್ರಸಿದ್ಧವಿದೆ. ಕಾರಣ, ಬಳೆಯಪಟ್ಟಣ ರಟ್ಟಘರಟ್ಟ ಎಂಬ ಬಿರುದಿನಲ್ಲಿಯ ರಟ್ಟ ಪದವು ಆ ಶಿಲಾಹಾರ ಮನೆತನದಲ್ಲಿಯ ಅರಸನೊಬ್ಬನನ್ನು ಸೂಚಿಸುತ್ತದೆ. ಖಾರೇಪಾಟಣ ತಾಮ್ರಪಟದ ತರುವಾಯ ದಕ್ಷಿಣ ಶಿಲಾಹಾರರ ಯಾವದೇ ಶಾಸನವು ಬೆಳಕಿಗೆ ಬಂದಿಲ್ಲ. ಆ ತಾಮ್ರಪಟದ ರಟ್ಟರಾಜನೆ (ಕ್ರಿ. ಶ. 1008) ಆ ಮನೆತನದ ಕೊನೆಯ ಅರಸನೆಂದು ಭಾವಿಸಲಾಗಿತ್ತು. ಆದರೆ, ಪ್ರಸ್ತುತ ಎಕ್ಸಂಬಿಯ ಶಾಸನದಿಂದ ಆ ಮನೆತನವು ಮುಂದೆ ಸಾಗಿದ್ದು, ಸುಮಾರು ಕ್ರಿ. ಶ. 1080ರಲ್ಲಿ ಆ ಮನೆತನದ ರಟ್ಟರಾಜನೆಂಬ ಅರಸನು ಬಳೆಯಪಟ್ಟಣದಲ್ಲಿ ರಾಜ್ಯವಾಳುತ್ತಿದ್ದ ವಿಷಯ ಹೊಸದಾಗಿ ತಿಳಿದು ಬರುತ್ತದೆ. ಈ ರಟ್ಟರಾಜನು ಖಾರೇಪಾಟಣ ತಾಮ್ರಪಟದ ರಟ್ಟರಾಜನ ಮೊಮ್ಮಗ ಇಲ್ಲವೆ ಮರಿಮಗನಾಗಿರಬಹುದು.

---

5. Miraja Plates of Mārasimha. I. R. A. S. Vol. IV, p. 281.
6. A. R. I. E. 1955-56, No. 165; Verified from ink-impressions.
7. Epi-Ind. Vol. III, pp. 297 ff.

ಎರಡನೆಯ ಗಮನಾರ್ಹ ಅಂಶವೆಂದರೆ ಸೌದತ್ತಿಯ ರಟ್ಟರ ವಂಶಾವಳಿಯಲ್ಲಿ ಪೆರ್ಮಾಡಿಯೆಂಬ ಅರಸನ ಉಲ್ಲೇಖ. ಪೆರ್ಮಾಡಿಯ ಮಗನ ಹೆಸರು ಸೇನ ಮತ್ತು ಸೇನನ ಮಗನ ಹೆಸರು ಕಾರ್ತವೀರ್ಯನೆಂದು ಈ ಶಾಸನದಲ್ಲಿ ಹೇಳಲಾಗಿದೆ. ಶಾಸನ-ಕಾಲದಲ್ಲಿ (ಕ್ರಿ. ಶ. 1165) ಈ ಕಾರ್ತವೀರ್ಯ ರಾಜ್ಯವಾಳುತ್ತಿದ್ದನು. ಆದುದರಿಂದ ಈ ಕಾರ್ತವೀರ್ಯನು ಮೂರನೆಯ ಕಾರ್ತವೀರ್ಯ ಹಾಗು ಸೇನನು ಎರಡನೆಯ ಸೇನನು ಆಗುತ್ತಾನೆ. ಡಾ. ಫ್ಲೀಟ ಅವರು ಕೊಟ್ಟಿರುವ[8] ರಟ್ಟರ ವಂಶಾವಳಿಯು ಹೀಗಿದೆ– ಎರಗನೃಪ (ಕ್ರಿ. ಶ. 1040), ಎರಗನ ಪುತ್ರ ಮೊದಲನೆಯ ಸೇನ, ಸೇನನ ಹಿರಿಯ ಮಗ ಎರಡನೆಯ ಕನ್ನಕೈರ, ಕನ್ನಕೈರನ ತಮ್ಮ ಎರಡನೆಯ ಕಾರ್ತವೀರ್ಯ (ಕ್ರಿ. ಶ. 1081), ಕಾರ್ತವೀರ್ಯನ ಮಗ ಎರಡನೆಯ ಸೇನ ಮತ್ತು ಸೇನನ ಮಗ ಮೂರನೆಯ ಕಾರ್ತವೀರ್ಯ. ಈ ಜ್ಞಾತ ವಂಶಾವಳಿಯಲ್ಲಿ ಪೆರ್ಮಾಡಿಯ ಸ್ಥಾನವನ್ನು ನಾವು ವಿಚಾರಿಸಬೇಕಾಗಿದೆ.

ಸೌದತ್ತಿಯ ರಟ್ಟರ ಶಾಸನಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಪೆರ್ಮಾಡಿ-ಯೆಂಬ ಹೆಸರು ಈ ವಂಶಾವಳಿಗೆ ಅಪರಿಚಿತವೇನಲ್ಲವೆಂದು ಕಂಡು ಬರುತ್ತದೆ. ಸೌದತ್ತಿಯ ಬಸ್ತಿಗುಡಿ ಶಾಸನದಲ್ಲಿ[9] (ಕ್ರಿ. ಶ. 1098) ವೀರ ಪೆರ್ಮಾಡಿದೇವನು ಬಸದಿಗೆ ಭೂದಾನವನ್ನು ನೀಡಿದನೆಂದು, ಮತ್ತು ಆ ಬಸದಿಗೆ ವೀರ ಪೆರ್ಮಾಡಿದೇವನ ಜಿನಾಲಯವೆಂದು ಹೆಸರು ಬಂದಿತೆಂದು ಹೇಳಲಾಗಿದೆ. ಈ ವೀರ ಪೆರ್ಮಾಡಿದೇವನು ಚಾಲುಕ್ಯ ಚಕ್ರವರ್ತಿ ಪೆರ್ಮಾಡಿದೇವ ಎಂದರೆ ಆರನೆಯ ವಿಕ್ರಮಾದಿತ್ಯನಾಗಲಾರನು. ಶಾಸನದ ಓಘವನ್ನು ಗಮನಿಸಿದರೆ ಈ ಪೆರ್ಮಾಡಿದೇವನು ಎರಡನೆಯ ಕನ್ನಕೈರನ ತಮ್ಮನಾಗಿರಬಹುದೆಂದು ಊಹಿಸಲು ಅವಕಾಶವಿದೆ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕುಂದರಗಿ ಗ್ರಾಮದ ಶಾಸನದಲ್ಲಿ[10] ಸೌದತ್ತಿ ರಟ್ಟ ವಂಶದ ಪ್ರಶಸ್ತಿಯನ್ನು ಹೇಳಿದ ತರುವಾಯ ಪೆರ್ಮಾಡಿದೇವನ ಹೆಸರು ಬರುತ್ತದೆ. ಶಾಸನವು ಬಹಳ ತ್ರುಟಿತ ವಾಗಿದ್ದು ಅದರ ತಿಥಿ ನಾಶವಾಗಿದೆ. ಆದರೆ, ಅದು ಆರನೆಯ ವಿಕ್ರಮಾದಿತ್ಯನ ಕಾಲದ ಶಾಸನವಾಗಿರುತ್ತದೆ. ಅದೇ ಜಿಲ್ಲೆಯ ಸೌದತ್ತಿ ತಾಲೂಕಿನ ಹೊಸೂರ ಗ್ರಾಮದ ಶಾಸನದಲ್ಲಿ[11] ಎರಗ ಹಾಗು ಎರಡನೆಯ ಸೇನ ಇವರ ನಡುವೆ ಪೆರ್ಮಭೂಪನೆಂಬ ಅರಸನೊಬ್ಬನ ಹೆಸರು ಬರುತ್ತದೆ. ಶಾಸನವು ಸವೆದ ಹಾಗು ತ್ರುಟಿತ ಸ್ಥಿತಿಯಲ್ಲಿರು ವುದರಿಂದ ಈ ಅರಸರ ನಡುವಿನ ಪರಸ್ಪರ ಸಂಬಂಧವು ಸ್ಪಷ್ಟವಾಗಿ ತಿಳಿಯುವಂತೆ ಇಲ್ಲ.

---

8. Bombay Govt. Gazetteer, Vol. I, P. II, p. 551.
9. South Indian Inscriptions, Vol. XX; No. 62, p. 76.
10. Karnatak Inscriptions. Vol. VI; No. 21; pp. 48-49.
11. ಪಡಿಯಚ್ಚುಗಳಿಂದ (ಸ್ವಂತ ಸಂಗ್ರಹ).

ಹೀಗೆ ವಿವರಿಸಿದ ಶಾಸನಗಳ ಆಧಾರ ಮೇಲಿಂದ ಮತ್ತು ಎಕ್ಸಂಬೆಯ ಶಾಸನದಲ್ಲಿಯ ಸ್ಪಷ್ಟ ಉಲ್ಲೇಖದಿಂದ ಎರಡನೆಯ ಕಾರ್ತವೀರ್ಯನ ಅಂಕಿತನಾಮ ಪೆರ್ಮಾಡಿದೇವ ಎಂದು ಇತ್ತೆಂದು ನಾವು ಭಾವಿಸಬಹುದು.

ಈ ನಿರ್ಣಯಕ್ಕೆ ಇನ್ನೊಂದು ಶಾಸನದಿಂದ ಪುಷ್ಟಿ ದೊರೆಯುತ್ತದೆ. ಗೋಕಾಕ ತಾಲೂಕಿನ ಗೋಕಾಕ ಮತ್ತು ಕೊಣ್ಣೂರ ನಡುವಿನ ಘಟಪ್ರಭಾ ಜಲಪಾತದ ಮೇಲ್ಭಾಗ ದಲ್ಲಿರುವ ತಟಾಕೇಶ್ವರ ದೇವಾಲಯದ ಶಾಸನದಲ್ಲಿ[12] ಮೊದಲನೆಯ ಕಾರ್ತವೀರ್ಯನನ್ನು ಕಾರ್ತಿಕೇಯನೆಂದು, ಎರಡನೆಯ ಕಾರ್ತವೀರ್ಯನನ್ನು ಷಣ್ಮುಖನೆಂದು ಕರೆಯಲಾಗಿದೆ. ಕಾರ್ತಿಕೇಯ ಹಾಗು ಷಣ್ಮುಖ ಇವು ಒಂದೇ ದೇವತೆಯಾದ ಸ್ಕಂದನ ಬೇರೆ ಬೇರೆ ಹೆಸರುಗಳಾಗಿದ್ದರೂ ವ್ಯಕ್ತಿಯ ಅಂಕಿತನಾಮುಗಳಲ್ಲಿ ಅವುಗಳನ್ನು ಸಾಮಾನ್ಯವಾಗಿ ಅದಲು ಬದಲು ಮಾಡುವ ರೂಢಿ ಇರುವುದಿಲ್ಲ. ಆದುದರಿಂದ ಎರಡನೆಯ ಕಾರ್ತವೀರ್ಯನ ಅಂಕಿತನಾಮ 'ಪೆಮಾಡಿ' ಎಂದಿರಬಹುದಾದ ಸಾಧ್ಯತೆ ಅಧಿಕ.

ಶಾಸನದ ತಿಥಿ : ಸಾಲು 55-56 ರಲ್ಲಿ 'ಶಕವರ್ಷಂ ಸಾಸಿರದೆಂಭತ್ತೇ 1087 ಆನೆಯ ತಾರಣ ಸಂವತ್ಸರದ ಫಾಲ್ಗುಣ ಸುದ್ಧ ತ್ರಯೋದ 13 ಶಿ ಬ್ರಿಹಸ್ಪತಿವಾರ ದಂದು' ಎಂದು ಶಾಸನದ ತಿಥಿಯನ್ನು ಹೇಳಲಾಗಿದೆ. ಸೂರ್ಯಗ್ರಹಣದ ನಿಮಿತ್ತ ವಾಗಿ ದಾನಮಾಡಲಾಯಿತೆಂದೂ ಹೇಳಲಾಗಿದೆ. ಶಕವರ್ಷ 1087ಕ್ಕೆ ತಾರಣ ಸಂವತ್ಸರ ವರ್ತಮಾನ (Current) ಸಂವತ್ಸರವಾಗಿದ್ದು ಆ ಸಂವತ್ಸರದಲ್ಲಿ ಫಾಲ್ಗುಣ ಶುದ್ಧ ತ್ರಯೋದಶಿ ಸರಿಯಾಗಿ ಗುರುವಾರ ಬರುತ್ತದೆ. ಅದಕ್ಕೆ ಸಮಾನ ಕ್ರಿಶ್ಚಿಯನ್ ತಾರೀಖು 25 ಗುರುವಾರ ಫೆಬ್ರುವರಿ 1165 ಆಗುತ್ತದೆ. ಈ ತಾರಣ ಸಂವತ್ಸರದ ಕಾರ್ತಿಕ ಅಮಾವಾಸ್ಯೆಯ ದಿವಸ ಎಂದರೆ ತಾ. 16 ಸೋಮವಾರ, ನವೆಂಬರ 1164 ನೆಯ ದಿವಸ ಸೂರ್ಯಗ್ರಹಣವಿತ್ತು. ಶಾಸನದಲ್ಲಿ ಹೇಳಿದ ಸೂರ್ಯಗ್ರಹಣ ಇದೇ ಆಗಿರಬಹುದು. ಕಾರಣ, ಶಾಸನದ ತಾರೀಖು 25, ಗುರುವಾರ ಫೇಬ್ರುವರಿ 1165 ಎಂದೂ, ಸೂರ್ಯಗ್ರಹಣದ ತಾರೀಖು 16, ಸೋಮವಾರ ನವೆಂಬರ 1164 ಎಂದೂ ನಿಶ್ಚಯಿಸಬಹುದು.

## ಶಾಸನದಲ್ಲಿ ಉಕ್ತವಾದ ಸ್ಥಳಗಳು :

1. ಬಳಿಯಪಟ್ಟಣ (ಸಾ. 9). ರತ್ನಾಗಿರಿ ಜಿಲ್ಲೆಯ ದಕ್ಷಿಣಭಾಗದ ಕನಕಾವಲಿ ತಾಲೂಕಿನಲ್ಲಿದ್ದ ಖಾರೇಪಾಟಣ ಗ್ರಾಮದ ದಕ್ಷಿಣ ಶಿಲಾಹಾರ ಮನೆತನದ ರಟ್ಟರಾಜನ ತಾಮ್ರಪಟದಲ್ಲಿ[13] (ಕ್ರಿ. ಶ. 1008) ಈ ಪಟ್ಟಣವನ್ನು ಆತನ

12. ಅದೇ; A. R. I. E. 1952-53; Nos. 51-53.
13. ಅಡಿಟಿಪ್ಪಣಿ 7 ನೋಡಿ.

ಪೂರ್ವಜನಾದ ಧಮ್ಮಿಯರನು ಕಟ್ಟಿದನೆಂದು ಹೇಳಲಾಗಿದೆ. ಧಮ್ಮಿಯರನ ಕಾಲ ಒಂಭತ್ತನೆಯ ಶತಮಾನದ ಆದಿಭಾಗ (ಸುಮಾರು ಕ್ರಿ. ಶ. 800 ರಿಂದ 820). ಅದೇ ಪ್ರಕಾರ, ರಟ್ಟರಾಜನ ತಂದೆಯಾದ ಮುಮ್ಮಡಿ ಅವಸರನ ಚಿಕ್ಕೋಡಿ ತಾಮ್ರಪಟದಲ್ಲಿ[14] (ಕ್ರಿ. ಶ. 988) ಧಮ್ಮಿಯರನು ಈ ಪಟ್ಟಣವನ್ನು ಸಮುದ್ರ ತೀರದಲ್ಲಿ ಕಟ್ಟಿಸಿದನೆಂದು ಹಾಗು ಅವಸರನು ತನ್ನ ರಾಜ್ಯವನ್ನು ಈ ಪಟ್ಟಣದಿಂದ ಆಳುತ್ತಿದ್ದನೆಂದು ಹೇಳಲಾಗಿದೆ. ಗದಗ ತಾಲೂಕಿನ ಹೊಟ್ಟೂರ ಗ್ರಾಮದ ಶಾಸನದಿಂದ[15] (ಕ್ರಿ. ಶ. 1038) ಚಕ್ರವರ್ತಿ ಜಗದೇಕಮಲ್ಲ ಜಯಸಿಂಹದೇವನ ದಂಡನಾಯಕ ಚಾವಣರಸನಿಗೆ ಬಳಿಯಪಟ್ಟಣಘರಟ್ಟ ಎಂಬ ಬಿರುದಿದ್ದುದು ತಿಳಿದು ಬರುತ್ತದೆ. ಕ್ರಿ. ಶ. 1038ರಲ್ಲಿ ಬಳಿಯಪಟ್ಟಣದಲ್ಲಿ ರಟ್ಟರಾಜ ಇಲ್ಲವೆ ಆತನ (ಅಜ್ಞಾತ) ಮಗ ರಾಜ್ಯವಾಳುತ್ತಿರಬಹುದು. ಪ್ರಸ್ತುತ ಏಕ್ಸಂಬೆಯ ಶಾಸನದಲ್ಲಿ ಮಾರಸಿಂಗನೃಪನ ಮಗನಾದ ಭೋಜನನ್ನು ಬಳಿಯಪ-ಟ್ಟಣರಟ್ಟಘರಟ್ಟ ಎಂದು ವರ್ಣಿಸಲಾಗಿದೆ. ಮೇಲೆ ಸೂಚಿಸಿದಂತೆ ಈ ಬಿರುದಿನಲ್ಲಿಯ ರಟ್ಟರಾಜನು ಖಾರೇಪಾಟಣ ತಾಮ್ರಪಟದ ರಟ್ಟರಾಜನ ಮೊಮ್ಮಗ ಇಲ್ಲವೆ ಮರಿಮಗನಾಗಿರಬಹುದು. ಬಳಿಯಪಟ್ಟಣದ ಉಲ್ಲೇಖ ಇನ್ನೂ ಕೆಲವು ಶಾಸನಗಳಲ್ಲಿ ಬರುತ್ತದೆ[16].

ಕೊಲ್ಲಾಪುರ ಹಾಗು ಹೊಟ್ಟೂರ ಶಾಸನಗಳನ್ನು ಪ್ರಕಟಿಸಿದ ಡಾ. ಬಾರ್ನೆಟ್ ಅವರು ಬಳಿಯಪಟ್ಟಣವು ಕೇರಳದಲ್ಲಿ ಮಲಬಾರ ಜಿಲ್ಲೆಯ ಚಿರಕ್ಕಲ್ ತಾಲೂಕಿನಲ್ಲಿರುವ ವಳಪಟ್ಟಣಂ ಗ್ರಾಮವಾಗಿರಬಹುದೆಂದು ಸೂಚಿಸಿದ್ದಾರೆ. ಮತ್ತು ಅದು ಟೋಲೇಮಿಯ ಭೂಗೋಲದಲ್ಲಿ ಉಲ್ಲೇಖಿತವಾಗಿರುವ ಬಲೈಪಟ್ನ ಹಾಗು ಪೇರಿಪ್ಲಸದಲ್ಲಿ ಬರುವ ಪಲೈ-ಪಟ್ಮ ಆಗಿರಬಹುದೆಂದು ಉಹಿಸಿದ್ದಾರೆ. ಡಾ. ಬಾರ್ನೆಟ್ ಅವರ ಎರಡನೆಯ ಊಹೆ ಸರಿಯಾಗಿರಬಹುದು. ಆದರೆ, ಅವರ ಮೊದಲನೆಯ ಸೂಚನೆ ಅಷ್ಟೇನು ಸಮಂಜಸ-ವಾಗಿಲ್ಲ. ಟೋಲೇಮಿ ಕೊಟ್ಟ ನಕಾಶೆಯಲ್ಲಿ[17] ಬಲೈಪಟ್ನ ರತ್ನಾಗಿರಿ ಜಿಲ್ಲೆಯ ಕರಾ-ವಳಿಯ ಮೇಲೆ ಇದ್ದಂತೆ ಕಾಣುತ್ತದೆ. ಡಾ. ಅಳತೇಕರ ಅವರು ಬಳಿಯಪಟ್ಟಣವು ದಕ್ಷಿಣ ಕೊಂಕಣದಲ್ಲಿ ಇತ್ತೆಂದು ಸೂಚಿಸಿದ್ದಾರೆ.[18]

14. Epi. - Ind. Vol. XXXVII, p. 59, *l.* 17.
15. Epi. - Ind. Vol. XV p. 78, *l.* 26.
16. Kharepatan Plates of Anantapāla : Indian Antiquary Vol. IX, p. 33; AD. 1094. Śravanabelgola Inscription; E. C. II, No. 132 (56), p. 59; AD. 1123. Kolhapur Inscription, Epi. Ind. Vol. XIX, p. 33. *l.* 23, AD. 1135.
17. Indian Antiquary, Vol. XIII.
18. Indian Culture Vol. II, No. 3, p. 411. Also please vide Bombay Govt. Gazetteer, Vol. I, P. II, pp. 1-2.

ದಕ್ಷಿಣ ಶಿಲಾಹಾರರ ರಾಜಧಾನಿಯಾದ ಹಾಗು ಕನ್ನಡ ಶಾಸನಗಳಲ್ಲಿ ಬರುವ ಬಳೆಯುವಟ್ಟಣವು ಗೋವೆ ಹಾಗು ರತ್ನಾಗಿರಿ ಪಟ್ಟಣಗಳ ನಡುವಿನ ಕರಾವಳಿ ಪ್ರದೇಶದಲ್ಲಿ ಇರಲಿಕ್ಕೆ ಸಾಕು. ಏಕಂದರೆ ದಕ್ಷಿಣ ಶಿಲಾಹಾರರ ರಾಜ್ಯವು ಕೇರಳದ ವರೆಗೆ ಎಂದೂ ಹಬ್ಬಿರಲಿಲ್ಲ. ಆದರೆ, ಈಗ ಗೋವೆ ಹಾಗು ರತ್ನಾಗಿರಿ ಕರಾವಳಿಪ್ರದೇಶದಲ್ಲಿ ಬಳೆಯು ವಟ್ಟಣ ಹೆಸರಿನ ಗ್ರಾಮವು ಇರುವುದಿಲ್ಲ. ಬಹುಶಃ ಅದು ನಷ್ಟವಾಗಿರಬಹುದು ಇಲ್ಲವೆ ಅದರ ಹೆಸರು ಬದಲಾಗಿರಬಹುದು. ಹೆಸರು ಬದಲಾಗಿದ್ದರೆ ಅದು ಈಗಿನ ವಿಜಯ-ದುರ್ಗವಾಗಿರಬಹುದು.

2. ವಳವಾಡ (ಸಾ. 15) : ಕೊಲ್ಲಾಪುರದಿಂದ ಪೂರ್ವಕ್ಕೆ ಆರು ಮೈಲು ಅಂತರ-ದಲ್ಲಿರುವ ಈಗಿನ ವಳವಡೆ ಗ್ರಾಮವು ಶಾಸನದಲ್ಲಿ ಹೇಳಿರುವ ವಳವಾಡವಾಗಿರ ಬಹುದು. ಕೊಲ್ಲಾಪುರದಿಂದ ನೈಋತ್ಯಕ್ಕೆ ಸಮಾರು ಹದಿನಾರು ಮೈಲು ಅಂತರ-ದಲ್ಲಿರುವ ವಳಿವಡೆ (ಈಗಿನ ರಾಧಾನಗರಿ), ಇಲ್ಲವೆ ದಕ್ಷಿಣ ಸಾತಾರಾ ಜಿಲ್ಲೆಯ ತಾಲೂಕಸ್ಥಳವಾಗಿರುವ ವಾಳವಾ, ಶಾಸನದಲ್ಲಿ ಹೇಳಿದ ವಳವಾಡ ಇರಬಹು-ದೆಂದು ಕೆಲವು ವಿದ್ವಾಂಸರು ಊಹಿಸಿದ್ದಾರೆ.[19]

3. ಲತ್ತನೂರ್ಪ್ಪುರ (ಸಾ. 19) : ಉಸ್ಮಾನಾಬಾದ ಜಿಲ್ಲೆಯಲ್ಲಿ ತಾಲೂಕಿನ ಸ್ಥಳ-ವಾಗಿರುವ ಈಗಿನ ಲಾತೂರ. ರಟ್ಟನೂರು (ರಟ್ಟನ ಊರು) > ಲತ್ತನೂರು> ಲತ್ತಲೌರ > ಲಾತೂರ ಹೀಗೆ ಈ ಹೆಸರಿನ ಪರಿವರ್ತನೆಗಳಾಗಿರುವುವು. ಲತ್ತ-ನೂರು ಸೌದತ್ತಿ ರಟ್ಟರ ಮೂಲಸ್ಥಾನವಾಗಿತ್ತು. ರಾಷ್ಟ್ರಕೂಟ ಚಕ್ರವರ್ತಿಗಳೂ ತಮ್ಮನ್ನು ಲತ್ತನೂರ ಪುರವರಾಧೀಶ್ವರೆಂದು ಹೇಳಿಕೊಂಡಿದ್ದಾರೆ. ಶಾಸನಕಾಲದಲ್ಲಿ ಅದೊಂದು ಅಗ್ರಹಾರವಾಗಿತ್ತು.[20]

4. ಕೂಂಡಿನಾಡು (ಸಾ. 59, 62) : ಬೇರೆ ಶಾಸನಗಳಲ್ಲಿ ಈ ನಾಡಿಗೆ ಕೂಂಡ ಮೂರುಸಾಸಿರ, ತ್ರಿಸಹಸ್ರಕೂಂಡಿಮಂಡಳ, ಕುಹುಂಡಿವಿಷಯ ಮುಂತಾದ ಹೆಸರುಗಳು ಬರುತ್ತವೆ. ಅದು ಸಾಂಪ್ರದಾಯಿಕವಾಗಿ ಮೂರು ಸಾವಿರ ಹಳ್ಳಿ-ಗಳನ್ನು ಒಳಗೊಂಡ ಒಂದು ರಾಜಕೀಯ ವಿಭಾಗ. ಉತ್ತರಕ್ಕೆ ಕೃಷ್ಣಾನದಿ ಹಾಗು ದಕ್ಷಿಣಕ್ಕೆ ಮಲಪ್ರಭಾನದಿ ಮತ್ತು ಸೌದತ್ತಿ ಕಂಪಣವನ್ನು ಒಳಮಾಡಿಕೊಂಡ ಈಗಿನ ಬೆಳಗಾವಿ ಜಿಲ್ಲೆಯ ಪ್ರದೇಶ ಸ್ಥೂಲವಾಗಿ ಇದರಲ್ಲಿ ಸಮಾವೇಶವಾಗು-ತ್ತಿತ್ತು.[21]

---

19. Bombay Govt. Gazetteer, Vol. I, P. II, p. 548; Epi. Ind. III p. 209.
20. Epi. - Ind. XIII, p. 41. Sources of the Medieval History of the Deccan, Vol. II; pp. 84-89; Dr. G. H. Khare.
21. For a discussion of some of the boundaries of the Kūndi-nādu by Dr. Fleet, vide pl. I. A. XXIX, pp. 278-80.

5. ಎಕ್ಕಸಂಬುಗೆ (ಸಾ. 41, 56, 62) : ಈಗಿನ ಎಕ್ಸಂಬಾ ಗ್ರಾಮ.

6. ಕೊರವಳ್ಳಿ ಕಂಪಣ (ಸಾಲ. 56) : ಕಂಪಣವೆಂದರೆ ಆಡಳಿತದ ಒಂದು ವಿಭಾಗ; ಈಗಿನ ಸರ್ಕಲ, ತಾಲೂಕ ಇಲ್ಲವೆ ಹೋಬಳಿ ಇದ್ದಂತೆ. ಕೊರವಳ್ಳಿ ಗ್ರಾಮ ಚಿಕ್ಕೋಡಿಯಿಂದ ಪೂರ್ವಕ್ಕೆ ಆರು ಮೈಲು ಅಂತರದಲ್ಲಿರುವ ಜೋಡಕುರಲಿ, ಇಲ್ಲವೆ ಚಿಕ್ಕೋಡಿಯಿಂದ ಪಶ್ಚಿಮಕ್ಕೆ ಸಮಾರು 18 ಮೈಲು ಅಂತರದಲ್ಲಿರುವ ಕುರಲಿ ಗ್ರಾಮವಾಗಿರಬಹುದು. ಕೊರವಳ್ಳಿಗಂಪಣವು 150 ಹಳ್ಳಿಗಳನ್ನೊಳ-ಗೊಂಡ ಒಂದು ದೊಡ್ಡ ವಿಭಾಗವಾಗಿತ್ತೆಂದು ಕೆರೂರು ಗ್ರಾಮದ ಶಾಸನ ದಿಂದ[22] ವಿದಿತವಾಗುತ್ತದೆ. ಈ ಕೆರೂರು ಗ್ರಾಮ, ಚಿಕ್ಕೋಡಿಯಿಂದ ವಾಯವ್ಯಕ್ಕೆ ಸುಮಾರು 12 ಮೈಲು ಅಂತರದಲ್ಲಿರುವ ಭೋಜಗ್ರಾಮ ಹಾಗು ಚಿಕ್ಕೋಡಿಯಿಂದ ಆಗ್ನೇಯಕ್ಕೆ ನಾಲ್ಕು ಮೈಲು ಅಂತರದಲ್ಲಿರುವ ಉಮ್ರಾಣಿ ಗ್ರಾಮ ಇವು ಕೊರವಳ್ಳಿ ಕಂಪಣದಲ್ಲಿದ್ದುವೆಂದು ಆಯಾ ಗ್ರಾಮಗಳ ಶಾಸನಗಳಿಂದ ತಿಳಿದು ಬರುತ್ತದೆ.[23]

7. ಕಿಱುದೊಱೆ (ಸಾ. 57–58) : ಚಿಕ್ಕ ಹೊಳೆ. ಎಕ್ಸಂಬೆಯ ಉತ್ತರದಲ್ಲಿ, ಎರಡು ಮೈಲು ಅಂತರದ ಮೇಲೆ ಪೂರ್ವಾಭಿಮುಖಿಯಾಗಿ ಹರಿಯುವ ದೂಧ ಗಂಗಾ ನದಿ. ಪಕ್ಕದಲ್ಲಿರುವ ಕಲ್ಲೋಳಿ ಗ್ರಾಮದ ಸೀಮೆಯಲ್ಲಿ ಕೃಷ್ಣಾನದಿ ಯನ್ನು ಕೂಡುತ್ತದೆ.

8. ಕಲುಹೊಳೆ (ಸಾ. 61) : ಎಕ್ಸಂಬಾ ಗ್ರಾಮದ ಈಶಾನ್ಯಕ್ಕೆ ಮೂರು ಮೈಲು ಅಂತರದಲ್ಲಿರುವ ಈಗಿನ ಕಲ್ಲೋಳಿಗ್ರಾಮ.

9. ಕೆಱೆವೂರು (ಸಾ. 62) : ಎಕ್ಸಂಬಾ ಗ್ರಾಮದ ಆಗ್ನೇಯಕ್ಕೆ ಐದು ಮೈಲು ಅಂತರದಲ್ಲಿರುವ ಈಗಿನ ಕೆರೂರ ಗ್ರಾಮ. ಕೊರವಳ್ಳಿ ಕಂಪಣದ ವಿಚಾರದಲ್ಲಿ ಈ ಗ್ರಾಮದ ಉಲ್ಲೇಖ ಮೇಲೆ ಬಂದಿರುತ್ತದೆ.

10. ಅಯ್ಯಾವೊಳೆ (ಸಾ. 65) : ವಿಜಾಪೂರ ಜಿಲ್ಲೆಯ ಹುನಗುಂದ ತಾಲೂಕಿನಲ್ಲಿರುವ ಈಗಿನ ಐಹೊಳೆ ಪಟ್ಟಣ.

11. ಲಂಕೆ (ಸಾ. 69) : ಭಾರತದ ದಕ್ಷಿಣಕ್ಕಿರುವ ಶ್ರೀಲಂಕಾದೇಶದ ಪ್ರಮುಖ ಪಟ್ಟಣ.

---

22. A. R. I. E. 1961-62, No. 485.
23. I. A. XIX, p. 244, Bhōja Copper-plates; E. I. XIII, p. 28, Inscriptions from Belgaum.

12. ಹಿಮ (ಸಾ. 69) : ಹಿಮಾಲಯ ಪರ್ವತ.

13. ಗಂಗೆ, ವಾರಣಾಸಿ, ಪ್ರಯಾಗೆ, ಕುರುಕ್ಷೇತ್ರ : ಪವಿತ್ರ ತೀರ್ಥಕ್ಷೇತ್ರಗಳು.

**ಪಾದಪೀಠದ ಮೇಲಿರುವ ಶಾಸನ :**

ಇದರಲ್ಲಿ ಯಾಪನೀಯ ಸಂಘ ಪುನ್ನಾಗವೃಕ್ಷಮೂಲಗಣದ ಮಂಡಳಾಚಾರ್ಯ ಶ್ರೀ ಕುಮಾರಕೀರ್ತಿಪಂಡಿತ ದೇವರ ಶ್ರಾವಕಶಿಷ್ಯ ಪಡವಳ ಕಾಳಿಯಣ್ಣ ಶ್ರೀ ನೇಮಿನಾಥ ಸ್ವಾಮಿಗಳ ಬಸದಿಯನ್ನು ಮಾಡಿಸಿ ಅದನ್ನು ಅವರ ಶಿಷ್ಯ ಶ್ರೀ ವಿಜಯಕೀರ್ತಿ ಪಂಡಿತ ದೇವರಿಗೆ ಅರ್ಪಿಸಿದನೆಂದು ಹೇಳಲಾಗಿದೆ.

**ಶಾಸನ ಪಾಠ :**

1 ಶ್ರೀ ಯಾಪನೀಯ ಸಂಘದ ಪುಂನಾಗವೃಕ್ಷ ಮೂಲಗಣದ ಮಂಡ-

2 ಳಾಚಾರ್ಯರ್ಕ್ಕುಮಾರಕೀರ್ತಿಪಂಡಿತದೇವರ ಗುಡ್ಡ ಪಡವಳ ಕಾಳಿಯಂ-

3 ಣಂ ಶ್ರೀ ನೇಮಿನಾಥ ಸ್ವಾಮಿಗಳ ಬಸದಿಯಂ ಮಾಡಿಸಿಯವರ ಶಿಷ್ಯ-

4 ರು ವಿಜಯಕೀರ್ತ್ತಿಪಂಡಿತದೇವರ್ಗ್ಗೆ ಕೊಟ್ಟ[ನು] [ 11* ] ಮಂಗಳ

5 ಮಹಾಶ್ರೀ ಶ್ರೀ [ 11* ].

**ಶಾಸನ ಪಾಠ [24] :**

[ ವೃತ್ತಗಳು : ಪದ್ಯಕ್ರಮಾಂಕ 1, 2, 37, 38 ಅನುಷ್ಟುಪ್; 3, 4,1 4, 25 ಮಹಾಸ್ರಗ್ಧರೆ: 5, 7, 11, 13, 15, 19, 22, 30, 32, 35. 42, 44 ಮತ್ತೇಭವಿಕ್ರೀಡಿತಂ; 6, 8, 10, 12, 17, 18, 21, 23, 24, 28, 29, 34, 36, 40, 41, 43 ಕಂದ; 9, 16, 20, 26, 27, 31 ಚಂಪಕಮಾಲೆ; 33 ಶಾರ್ದೂಲ ವಿಕ್ರೀಡಿತಂ; 39 ಶಾಲಿನಿ. ]

1. ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ [ 1* ] ಜೀಯಾ-ತ್ರೈಳೋಕ್ಯನಾಥಸ್ಯ ಶಾಸನಂ ಜಿನಶಾಸನಂ ॥ [ 1* ] ಶ್ರೀ ಯಾಪನೀಯ ಪುಂನಾಗವೃಕ್ಷಮೂಲಗಣಶ್ಚಿರಂ [1*] ವರ್ದ್ಧತಾಂ ಜೈನಶಾಸ್ತ್ರಾಬ್ಧಿ ಪಾರ-

24. ಕ್ರಿ. ಶ. 1953 ರಲ್ಲಿ ನಾನು ಅಥಣಿಯಲ್ಲಿ ಜ್ಯುಡಿಸಿಯಲ್ ಮ್ಯಾಜಿಸ್ಟ್ರೇಟನಾಗಿರುವ ಸಮಯದಲ್ಲಿ ಎಕ್ಕಂಬಾ ಗ್ರಾಮಕ್ಕೆ ಹೋಗಿ ತೆಗೆದುಕೊಂಡ ಪಡಿಯಚ್ಚುಗಳಿಂದ ಹಾಗು ಸ್ಥಳದಲ್ಲಿಯ ಪರಿಶೀಲನೆಯಿಂದ ಈ ಶಾಸನಪಾಠವನ್ನು ಸಂಪಾದಿಸಲಾಗಿದೆ.

2. ಗೈ ಮ್ಮುಂನಿಪುಂಗವ್ವೆ : ॥ [ 2* ] ಧರೆಯಂ ಮುಂರಟ್ಟರೊಳ್ಕಂನರಮಹಿವರ-
ಮುಖ್ಯರ್ನ್ನೃಪಪ್ಪಾಳಿಸುತ್ತಿರ್ದ್ದರಡಂ ಶ್ರೀ ತೈಲಭೂಪಪ್ರಮುಖ ಚಳುಕಿ ಭೂ-
ಪಾಳರಾಳ್ದಿಂ ಬಳಿಕ್ಕುದ್ಧರಶೌರ್ಯ್ಯಂ ವೀರಲಕ್ಷ್ಮೀಪ-

3. ತಿ ಕಳಚುರಿವಂಶೋದ್ಭವಂ ವೈರಿದಿಕ್ಕುಂಜರನೇಕಾಧಿಷ್ಠಿತಂ ಮಾಡಿದನತುಳಬಳಂ
ಬಿಜ್ಜಲಕ್ಷೋಣಿಪಾಳಂ ॥ [ 3* ] ಹರಿಯಿಟ್ಟೇಕಾಂಗದಿಂ ಸಾಧಿಸಿ ಸಕಳಮಹೀ-
ಪಾಳರಂ ನಾಲ್ಕು ಮುಂನೀರ್ವರವೇಕಚ್ಛತ್ರ-

4. ದಿಂ ಪಾಳಿಸಿ ವಸುಮತಿಯಂ ಕೂಡೆ ದಿಗ್ಭಿತ್ತಿಯಂ ಭಾಸುರಕೀರ್ತ್ತಿಜ್ಯೋತ್ಸ್ನೆ-
ಯಿಂದಂ ಧವಳಿಸಿ ಭುವನೋದಗ್ರಸಾಮ್ರಾಜ್ಯಲಕ್ಷ್ಮೀಭರಮಂ ಕೈಕೊಂಡು ಪೆಂಪಂ
ತಳೆದನನುಪಮಂ ವೀರವೈರೀಭಸಿಂಹ ॥ [4*] ಜನರಾಗಂ ಮಿಗಿಲಿನ್ನು ಬಿಜ್ಜಲ-
ನೃಪಂ-

5. ನಿಶ್ಚಿಂತದಿಂ ವಿಶ್ವಮೇದಿನಿಯಂ ಪಾಳಿಸುತಿರ್ಪ್ಪಿನಂ ನೆಗಳ್ದನುದ್ಯತ್ಕೀರ್ತ್ತಿ
ಜೀಮೂತವಾಹನವಂಶಕ್ರಮಸಂಭವರ್ಕ್ಕಳಿರಿಳಾಧೀಶಂ ಶಿಳಾಹಾರ ವೀರ-
ನರೇಂದ್ರಂ ವಿಜಯಾರ್ಕ್ಕದೇವಮಹಿಪಂ ಶ್ರೀರೂಪನಾರಾಯಣಂ ॥ [ 5* ].

6. ಆ ನೃಪಕುಳದೊಳ್ಮರರಿಪು ಸೇನಾಮದಕರದಿಪಟಳವಿಘಟನಪಟುಪಂಚಾನನನಶೇ-
ಷಬುಧಜನತಾನಂದನಕಾರಿ ಮಾರಸಿಂಗನೃಪಾಳಂ ॥ [ 6* ] ಪ್ರಜೆಯಂ ಪಾಳಿಸಿ
ಸೈನ್ಯಮಂ ಬಲಿದು ಭಾಂಡಾಗಾರಮಂ ತೀವಿ ಮಂತ್ರಿಜನೋಪೇ-

7. ತನುದಾತ್ತಮಿತ್ರಬಳನುಗ್ರೋದಗ್ರದುರ್ಗ್ಗಾನ್ವಿತಂ ನಿಜದಿಂ ಶಕ್ತಿನಿಯುಕ್ತನಿಂತೊ-
ದವಿರಲ್ಸಪ್ತಾಂಗರಾಜ್ಯಂ ಮಹೀಭುಜತುಂಗಂ ವಿಭುಮಾರಸಿಂಗನೆಸೆದಂ ವೀರಾಂ-
ಗನಾವಲ್ಲಭಂ ॥ [ 7* ] ಜನವಿನುತ ಮಾರಸಿಂಗನ ತನೂಭವಂ

8. ಪ್ರಬಳವೈರಿಕುಳನಳಿನೀರಾಜನುಪೇತಗುಣಸಮಾಜಂ ಘನತೇಜಂ ವಿನುತಸಕಳ-
ರಾಜಂ ಭೋಜಂ ॥ [8*] ಬೆದಜಿದ ಘಟ್ಟು ಬೆಚ್ಚದಣೆ ಮುಗ್ಗದ ಮೊಗ್ಗರ-
ಮೋಡದೊಡ್ಡು ಬಿಚ್ಚದ ಘಟೆ ಕಪ್ಪವಂ ತಿಜಿದ ನಾಡೊಳಗಾ [ಗ*] ದ ಕೋಟೆ
ಬಂ-

9. ದು ಕಾಣದ ರಿಪುಭೂಪರೀ ಜಗದೊಳೆಲ್ಲಿಯುಮಿಲ್ಲೆನೆ ಬಲ್ಪುವೆತ್ತು ನಿಳ್ದುದು
ಭುಜವಿಕ್ರಮಂ ಬಳಿಯುವಟ್ಟಣರಟ್ಟಘರಟ್ಟ ಭೋಜನ ॥ [9*] ಎನೆ ನೆಗಳ್ದ
ಭೋಜಭೂಭುಜನನುಜಾತಂ ಧರ್ಮ್ಮಧರ್ಮ್ಮಜಂ ಪ-

10. ರಬಳಭಂಜನಶಾಳಿ ಶೌಚಗಾಂಗೇಯನಿಡುವರಾದಿತ್ಯ ಗಂಡರಾದಿತ್ಯನೃಪಂ ॥ [10*] ವಸುಧಾ ಚಕ್ರಮನಾತ್ಮ ಬಾಹುಬಳದಿಂ ನಿಃಕಂಟಕಂ ಮಾಡಿ ಪಾಳಿಸಿದಂ ಷೋಡ-ಶಯಾಚಕಬ್ರಜಮನಿಚ್ಛಾ-

11. ದಾನದಿಂದೆಯ್ದೆ ಮಂನಿಸಿದಂ ಸುಸ್ಥಿರಮಪ್ಪಿನಂ ಬೆಳಗಿದಂ ಶ್ರೀರೂಪ ನಾರಾ-ಯಣಂ[25] [11*] ತ್ರಿಜಗತ್ಪವಿತ್ರನೆನೆಲಿಂತು ಜನಸ್ತುತನಾದ ಗಂಡರಾದಿತ್ಯ-ಮಹೀಭುಜನಗ್ರಸೂನು ನೆಗ-

12. ಳ್ದಂ ವಿಜಯಶ್ರೀರಮಣನೆಳೆಗೆ ವಿಜಯಾದಿತ್ಯಂ ॥ [ 12* ] ಎನೆಸುಂ ಮುಂನಿನ ಧರ್ಮ್ಮನಂದನನ ರಾಜ್ಯಕ್ಕಗ್ಗಳಂ ವೇಣುರಾಜನ ರಾಜ್ಯಕ್ಕಧಿಕಂ ಮಿಗಿಲ್ಬಲಿಯ ರಾಜ್ಯಕ್ಕುತ್ತಮಂ ರಾಮಚಂದ್ರನ ರಾಜ್ಯಕ್ಕೆ ವರಂ

13. ಪುರೂರವರ(ನ) ರಾಜ್ಯಕ್ಕೆಂಬಿನಂ ರಾಜನೀತಿನಿಯುಕ್ತಂ ನಿಜರಾಜ್ಯಮಂ ವಿಜಯ ದೇವಂ ಸುಸ್ಥಿರಂ ಮಾಡಿದಂ ॥ [ 13* ] ಕಲಿಕಾಲಧ್ವಾಂತಬಂಧಚ್ಛಿದುರ ತರುಣ-ಮಿತ್ರಂ ಚರಿತ್ರಂ

14. ಜಯಶ್ರೀ ಕುಲಗೇಹಂ ಭೂರಿಬಾಹಾಬಳ ನಿಖಿಳಬುಧಾಗಾರನಿಕ್ಷೇಪವಾತ್ಮೋ-ಜ್ವಳಭಾಂಡಾಗಾರವಾಶಾಯುವತಿನಿಕರಮುಕ್ತಾವಳೀ ಮಂಡನಂ ನಿರ್ಮ್ಮಳ-ಕೀರ್ತ್ತಿರ್ಜ್ಯೋ-

15. ತಿಯೇನಪ್ರತಿಮನೊ ವಿಜಯಾದಿತ್ಯನನ್ವೀತಸತ್ಯಂ ॥ [ 14* ] ಅನ್ತು ಶ್ರೀಮನ್ಮ-ಹಾಮಂಡಳೇಶ್ವರಂ ವಿಜಯಾದಿತ್ಯದೇವರು ವಳವಾಡದ ನೆಲೆವೀಡಿನಲು ಸುಖ-ಸಂಕಥಾ ವಿನೋದ-

16. ದಿಂ ರಾಜ್ಯಂಗೆಯ್ಯುತ್ತಮಿರೆ ॥ ತ್ರಿಜಗತ್ಪಾವನರಟ್ಟವಂಶತಿಳಕಂ ಪೆರ್ಮ್ಮಾಡಿ ಭೂಪಂ ತದಾತ್ಮಜನುದ್ದಾಮಭುಜಾಬಳಂ ವಿಜಯಲಕ್ಷ್ಮೀವಲ್ಲಭಂ ಸೇನಭೂಭು-ಜನಂತಾತನ ಪು-

17. ತ್ರನಪ್ರತಿಮ ಶೌರ್ಯ್ಯಂ ದಾನಸಂತೃಪ್ತ ಸರ್ವ್ವಜನಂ ಕೀರ್ತ್ತಿಲತಾವೃತತ್ರಿಭು ವನಂ ಶ್ರೀಕತ್ತಮೋರ್ವ್ವೀಶ್ವರಂ ॥ [ 15 * ] ಕುಲಗಿರಿಯಂ ಕುನುಂಗಿಸಿದುದುಂ ನತಿಕಲ್ಪಕುಜಾತಮಂ ಪ

---

25. ವೃತ್ತ ಸರಿಯಾಗಿಲ್ಲ. ಮೂರನೆಯ ಪಾದ ಪೂರಾ ಬಿಟ್ಟು ಹೋಗಿದೆ.

18. ಳಂಚಲೆದುದು ಚೌತನಂ ಪಗೆವರಂ ಬೆದಱಿಟ್ಟಿದುಧ (ದ) ಣ್ಮಶೇಪದಿಗ್ವಳಯ-ಮನೆಯ್ದೆ ಸುತ್ತಿದುದು ಕೀರ್ತ್ತಿಯೆನಲ್ವಿಸರ್ವ್ವರ್ತ್ತಿನಿಂತು ಮಂಡಳಿಕತಳಪ್ರಹಾರಿ ವಿಭು

19. ಕತ್ತಮ ಭೂಭುಜನೀ ಧರಿ[26]ತ್ರಿಯೊಳ್ ॥ [ 16 * ] ಸ್ವಸ್ತಿ ಸಮಧಿಗತ-ಪಂಚಮಹಾಶಬ್ದ ಮಹಾಮಂಡಳೇಶ್ವರಂ । ಲತ್ತನೂಪ್ಪುರವರಾಧೀಶ್ವರಂ । ನುದಾರಮಾಹೇ[27] –

20. ಶ್ವರಂ । ತಿವಳಿಪರೆಘೋಷಣಂ । ರಟ್ಟಕುಳಭೂಷಣಂ । ಸತ್ಯಪ್ರಭಾಷಣಂ । ಸಿಂದೂರಲಾಂಛನಂ । ಹಳಕುಳಿಶಲಾಂಛನಂ । ವಿಜಯೈಕಲಾಂಛನಂ । ಸುವರ್ಣ್ಣಗರುಡಧ್ವಜಂ ।

21. ಸಹಜಮಕರಧ್ವಜಂ । ಪ್ರಥಿತಕೀರ್ತ್ತಿಧ್ವಜಂ । ಸಂಗ್ರಾಮಕೌತೂಹಳೀಕೃತಗದಾ-ದಂಡ । ಶರಣಾಯಾತರಕ್ಷಾದಕ್ಷದಕ್ಷಿಣ ಭುಜಾದಂಡ । ಕದನ ಪ್ರಚಂಡ [ 1 * ] ಸಿಂಧುರಾ –

22. ರಾತಿ ಬಂಧುರಕಬಂಧನರ್ತ್ತನಸೂತ್ರಧಾರಿ । ರಿಪುಶಿರಃ ಖಂಡನಕರಾಳಕರವಾಳ-ಧಾರಿ । ಅಪ್ರತಿಮಪ್ರತಾಪಸಂಧಾರಿ । ಸಾಹಿತ್ಯವಿದ್ಯಾವಿರಿಂಚನಂ । ವೀರಕಥಾ-ಕರ್ಣ್ಣನ ಜಾತರೋಮಾಂ –

23. ಚನಂ । ಭುಧಪರಿತೃಪ್ತಕಾಂಚನಂ । ಮಂಡಳಿಕಗಂಪತಳಪ್ರಹಾರಿ । ದುರ್ಮ್ಮ-ದಾರಾತಿನೃಪಸಂಹಾರಿ । ಮಾನಿನೀಮನೋಹಾರಿ । ಸಾಹಸೋತುಂ (ತ್ತುಂ)ಗ । ಧರ್ಮ್ಮಕಥಾಪ್ರಸಂಗ । ಬಪ್ಪನಸಿಂಗನಾ –

24. ಮಾದಿ । ಸಮಸ್ತಪ್ರಸಸ್ತಿಸಹಿತಂ ಶ್ರೀಮನ್ಮಹಾಮಂಡಳೇಶ್ವರಂ ಕಾರ್ತ್ತವೀರ್ಯ್ಯ ದೇವರಸರು ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ॥ ತತ್ಪಾದಪದ್ಮ ಭೃಂಗಂ ಸತ್ಪ–

25. ಥವರ್ತ್ತ (ರ್ತ್ತನ) ವಿಚಾರಸಾರಂ ವಿನುತಾರ್ಹತ್ಪಾವನಧರ್ಮ್ಮಬ್ರತತತ್ಪರನೆಳೆಗೆ-ಸೆಯೆ ಮಾರಗೌಂಡಂ ನೆಗಳ್ದಂ ॥ [ 17 * ] ಆತನ ಸುತಂ ಜಗದ್ವಿಖ್ಯಾತಂ ನಿಜಬಾಹುಬಳವಿನಿರ್ಜ್ಜಿತವೀರಾ –
ಹಾಮಂಡಳೇಶ್ವರಂ ವಿಜಮಾದಿತ್ಯದೇವರುವಳವಾಡದ ನೆಲೆವೀಡಿನಲು ಸುಖ-ಸಂಕಥಾ ವಿನೋದ–

---

26. 'ರಿ' ಅಕ್ಷರವನ್ನು ಸಾಲಿನ ಮೇಲ್ಭಾಗದಲ್ಲಿ ಚಿಕ್ಕದಾಗಿ ಬರೆಯಲಾಗಿದೆ.
27. 'ಉದಾರಮಹೇಶ್ವರಂ' ಎಂದು ಓದಿರಿ.

26. ರಾತಿ ನೆಗಳ್ದಾಚಗೌಂಡಂ ನೀತಿವಿದಂ ಬುಧಗ್ರ್ಗ ಚೇಗ ವೀರರ ದೇವಂ ॥ [18*] ಎನಿಸಿರ್ದ್ದಾಚಣನಗ್ರಸೂನು ಘನತೇಜೋಭಾನು ಲೋಕೈಕರಂಜನನುಗ್ರಾರಿಘನ-ಪ್ರಭಂಜನನತಿಪ್ರಖ್ಯಾತಗೋತ್ರಂ ಜ–

27. ಗಜ್ಜನತಾಸಂಸ್ತವಪಾತ್ರನುದ್ಘಗುಣನೀಡಂ ಹೊಲ್ಲಿಗೌಂಡಂ ಯಶೋವನಿತಾ ಮಂಡನನಿಂತು ಧಾತ್ರಿಗೆಸೆದಂ ಚಂಡದ್ವಿಪತ್ಖಂಡನ [ 19* ] ಗೆಡೆಗೊಳೆ ಬೇಱೆ-ವೇಱೆ ವರದರ್ಶನಬೋಧಚರಿತ್ರ-

28. ಮುದ್ಭವಂಬಡೆದೊಡವುಟ್ಟಿದತ್ತೆನಿಸಿ ಹೊಲ್ಲಿಗೌಂಡನರಂಗೆ [28] ಸಯ್ಪುಸಂಗಡ-ದೊಡವುಟ್ಟೆ ಪುಟ್ಟಿದರಶೇಶಗುಣಾನ್ವಿತರಪ್ಪ ಜಿನ್ನಣಂ ಪಡವಳ ಕಾಳಣಂ ಮಧು-ವಣಾಂಕನೆನಲ್ನೆಗಳ್ದಿರ್ದ್ದ ಮೂ-

29. ವರುಂ ॥ [20*] ಕುಡುವುದೆ ಬಸನಂ ನಂನಿಯೆ ನುಡಿ ಧರ್ಮ್ಮವೆ ಕಾರ್ಯ್ಯ-ವೆಣ್ಮೆ ಸಹಜಂ ತನಗೆಂದಡೆ ವಿಭು ಗಂಡರದೇವನ ಪಡವಳ ಜಿಂನಣನೊಳುಳಿದ ನರರೇಂ ಸ–

30. ರಿಯೇ ॥ [ 21* ] ವಿಜಯಾದಿತ್ಯಮಹಾಮಹೀಭುಜಭುಜಾದಂಡೋಗ್ರಕೌಕ್ಷೇ-ಯಕಂ ವಿಜಯಾರ್ಕ್ಕಾವನಿಪಾಳಕಪ್ರಬಳರಾಜ್ಯಾಂಭೋಧಿಶೀತಪ್ರಭಂ ವಿಜಯ-ಕ್ಷ್ಮಾಪತಿ ಚಾತುರಂಗ-

31. ಬಳಸಂನಾಹಂ ಜಗಕ್ಕೊಪ್ಪುವಂ ವಿಜಯಶ್ರೀಮಣಿದರ್ಪ್ಪಣಂ ಸಕಳವೀರಾಗ್ರೇಸರಂ ಕಾಳಣಂ ॥ [ 22* ] ವಿಮಳಜಿನಸಮಯಕಮಳದ್ಯುಮಣಿಲಸಲ್ಲಜ್ಜಲಾಂಗನಾ-ನಯನಮ-

32. ನೋರಮಣಂ ಪಡವಳಕಾಳಣನಮಿತಪರಾಕ್ರಮನನೂನದಾನವ್ಯಸನಂ ॥ [23*] ಅನುಪಮಭುಜಪ್ರತಾಪಂ ಜಿನಚರಣಾಂಭೋಜಭೃಂಗನಾಶ್ರಿತವಿದ್ವಜ್ಜನತಾವತ್ಸಳ-

33. ನುರ್ವ್ವೀವಿನುತಂ ಪಡವಳ್ಳ ಮಧುವಣಂ ಧರೆಗೆಸೆದಂ ॥ [ 24* ] ಪ್ರಭುಮಂ-ತ್ರೋತ್ಸಾಹಶಕ್ತಿತ್ರಿತಯಮೆ ಮನುಜಾಕಾರಮಂ ತಾಳ್ದವೋಲ್ಬೀಮಭುಜಂ ಶೌರ್ಯ್ಯೋರ್ಜ್ಜಿತಂ ಜಿಂನಣನತುಳಬ-

---

28. ವೃತ್ತದ ಸಲುವಾಗಿ 'ಹೊಲ್ಲಿಗವುಂಡನರಂಗೆ' ಎಂದು ಓದಿರಿ.

34. ಳಂ ತಕ್ಕುಮಿಕ್ಕಾಚಣಂ ವೀತಭಯಂ ವೀರೋತ್ತಮಂ ರಾಮಣನೆನೆನೆಗಳ್ದೀ ಮೂವರುಂ ಕಾಳಣಶ್ರೀವಿಭುಗುದ್ದಾಮತ್ರಿಣೇತ್ರತ್ರಿಣಯನಸದೃಶರ್ಸ್ಸಮ್ಪಿನಿಂ ಮಕ್ಕಳಾದರ್ ॥ [25*].

35. ತೊಡರ್ದ್ದಡೆ ಕಾದಿ ಕೊಲ್ವನೆರೆದಂಗೆ ಧನಂಗುಡುವಂ ಸರಣ್ಗೆವಂದಡೆ ತಲೆಗಾವ-ನೆಂಬ ದಿಟದಾಳ್ತನದಗ್ಗದ ಚೌತನಂ ಪೊಡಪ್ಪುಡುಗದ ಬಲ್ಪು ತಂನೊಳಳವ-ಟ್ಟಿಸೆಯಲ್ ಕಲಿ ದಾನಿ ಬಲ್ಲಿದಂ ಪ-

36. ಡವಳ ಜಿಂನಣಂ ನೆಗಳ್ದನುದ್ಧತದುರ್ದ್ಧರವೈರಿದಾರಣಂ ॥ [26*] ಸರಸತಿ ತಂನ ನಾಲಿಗೆಯನೋಲಗಿಪಳ್ಸುರಧೇನು ತಂನ ಮುಂನೆರೆದುದನೀವ ಕಯ್ವೊಲ-ದೊಳಾಡುವುದಗ್ಗದ ಕಂತು ತಂನ ಕಣ್ಬ-

37. ರಿಯೆನೆ ಕೊಂಬುಗೊಂಡು ನಡೆವಂಗಡೆ ನಲ್ನುಡಿ ಜಾಣನರ್ತ್ಥಿಗೋಸರಿಸದ ಚಾಗಿ ಸೊಂಪಸೊಬಗಂ ಕಲಿ ಜಿಂನನ ತಂಮನಾಚಣಂ ॥ [ 27 * ] ರಾಮಂ ರೂಪ-ವಶೀಕೃತರಾಮಂ ಗುಣರಾಮನಖಿಳ –

38. ಬುಧವಿಬುಧಕುಳಾರಾಮಂ ಸಂಗ್ರಾಮಾಂಗಣರಾಮಂ ಧರೆಗೆಸೆಯೆ ನೆಗಳ್ದನಾಚಣನ-ನುಜಂ ॥ [ 28 * ] ಕ್ಷಿತಿಗಿಂತು ನೆಗಳ್ದ ಸುತರುಂ ಪತಿಬ್ರತಾನ್ವಿತೆ ಲಚ್ಚಲಾಂಗ-ನೆಯುಂ ವಿಸ್ತೃತಗೋ –

39. ತ್ರಮಿತ್ರರುಂ ಬೆರಸತಿಸುಖದಿಂದಿರ್ದ್ದನನುಪಮಂ ಕಾಳಿಯಣಂ ॥ [ 29 * ] ಸುಕೃತಾಳಂಕೃತವೃತ್ತನೊಂದು ದಿವಸಂ ವಿದ್ವದ್ವ್ರತಂ ಜೈ ನ ಧ ರ್ಮ ಕ ಥಾ ಗೋಷ್ಠಿಯೊ –

40. ಳಿರ್ದ್ದ ಪರಸುಖಕ್ಕಂ ಖ್ಯಾತಿಗಂ ಕಾರಣಾತ್ಮಕವೆಂತುಂ ಪರಿಶುದ್ಧಧರ್ಮ್ಮಮೆ ವಲಂ ಬೇಱೆನುವಿಲ್ಲೆಂಬುದಂ ಪ್ರಕಟಂ ಭಾವಿಸಿ ಮಾಡಿಸಲ್ಬಗೆದನರ್ಹದ್ಗೇಹಮಂ ಕಾಳ-

41. ಣಂ ॥ [ 30 * ] ಫಳಿತವನಂಗಳಿಂ ಬೆಳೆದ ಕೆಯ್ವೊಲದಿಂ ಧನಧಾನ್ಯ ಗೋಕು-ಳಾಕಳಿತಬಹುಪ್ರಜಾಢ್ಯವೆನಿಪ್ಪೂರ್ಗ್ಗಳಿನೊಪ್ಪವನಾಂತ ಕೂಂಡಿನಾಡೊಳಗೆಸೆವೆಕ್ಕ-ಸಂಬುಗೆಯೊಳೂರ್ಜ್ಜಿ –

42. ತವಾಗೆ ದೃಢೋಂನತಕ್ರಿಯಾವಿಳಸಿತಮಂ ವಿನಿರ್ಮ್ಮಿಸಿದನಾದಮೆ ನೇಮಿ-ಜಿನೇಂದ್ರಗೇಹಮಂ ॥ [ 31 * ] ಘನಪ್ರಂನಾಗಮಹೀಜಮೂಲಗಣಸಿದ್ಧ-ಯ್ಯಾರ್ಪನೀಯೋದ್ಭವಸಂಘನಿ –

43. ಯುಕ್ತಗುರ್ಗ್ಗುರುಗಳ್ಗಡಂ ತನಗವತ್ರೈವಿದ್ಯವಿದ್ಯಾಧರಮ್ಮುರ್ನ್ನಿಚಂದ್ರೋತ್ತಮಪುತ್ರ-ಸದ್ವಿಜಯಕೀರ್ತ್ತ್ಯಾರ್ಯಚಾರ್ಯ್ಯ ಶಿಷ್ಯಜ್ಜರ್ಗದ್ವಿನುತಸ್ಸರ್ನ್ನಂದ ಕುಮಾರಕೀರ್ತ್ತಿಗಳೆ-ನಲ್ಕೇಂ ಧನ್ಯ –

44. ನೋ ಕಾಳಣಂ ॥ [ 32 * ] ಕೀರ್ತ್ತಿರ್ಯ್ಯಸ್ಯ ಗುಣಾಶ್ರಯೊದ್ವಿಮಲತಾಮಾ-ಲಂಬತೇ ಭಾರತೀ ಪ್ರಾಗಲ್ಭ್ಯಂ ಭಜತೇ ಬಿ[29] ಬಿ ಭ ರ್ತ್ತಿ ಚ ತಪಃ-ಶ್ರೀರಾತ್ಮನೋ ಗೌ –

45. ರವಂ [ 1 * ] ಸೋಯಂ ದುರ್ದ್ಧರವಾದಿವಾರಣಮದಪ್ರೋದ್ಭೇದವಜ್ರಾಂ-ಕುಶೋ ಬಾಭಾತ್ಯತ್ರ ಕುಮಾರಕೀರ್ತ್ತಿಯತಿಪಸ್ಸ್ಯಾದ್ವಾದವಿದ್ಯಾನಿಧಿಃ ॥ [33*] ವಾಕ್ಕಬಳವಿಬುಧವಿ –

46. ನುತಂ ವಾಕ್ಸ್ವಮದೋಜ್ವಳವಿನೀಳರಾಜಿತಕಬರೀ ಶ್ರ (ಸ್ರ) ಕ್ಪ್ರೋದಾಮಂ ವರದಶ ದಿಕ್ಕಕಟಿತಕೀರ್ತ್ತಿ ವಿಜಯಕೀರ್ತ್ತಿ ಮುನೀಂದ್ರಂ ॥ [ 34 * ] ಸ್ವಸ್ತಿ ಸಮಧಿ-ಗತಪಂಚಮಹಾಕಲ್ಯಾಣಾಷ್ಟಮ –

47. ಹಾಪ್ರಾತಿಹಾರ್ಯ್ಯ ಚತುಸ್ತ್ರಿಂಶದತಿಶಯವಿರಾಜಮಾನ ಭಗವದರ್ಹತ್ಪರಮೇಶ್ವರ ಪರಮಭಟ್ಟಾರಕಮುಖಕಮಳ ವಿನಿರ್ಗ್ಗತಸದಸದಾದಿ ಸಪ್ತಭಂಗೀಸಮಾಲಿಂಗಿತರಾ-

48. ದ್ಧಾಂತಾದಿ ಸಮಸ್ತ ಶಾಸ್ತ್ರ ಪಾರಾವಾರಗರಪ್ಪ ಶ್ರೀ ಯಾಪನೀಯ ಸಂಘದ ಪುಂನಾಗ ವೃಕ್ಷಮೂಲಗಣದ ಶ್ರೀಮನ್ಮಹಾಮಂಡಳಾಚಾರ್ಯ್ಯರ್ಕ್ಕುಮಾರಕೀರ್ತ್ತಿ ಪಂಡಿತದೇವರ ಶಿಷ್ಯರ –

49. ಪ್ಪ ಶ್ರೀ ವಿಜಯಕೀರ್ತ್ತಿ ಪಂಡಿತದೇವರ್ಗ್ಗೆ ಶ್ರೀಮನ್ಮಹಾಮಂಡಳೇಶ್ವರಂ ವಿಜಯಾದಿತ್ಯದೇವರಸರ ಮಹಾಪ್ರಧಾನಂ ಪಡವಳ ಕಾಳಿಯಣ್ಣಂ ಶ್ರೀ ನೇಮಿನಾಥಸ್ವಾಮಿಗಳ ಬಸದಿಯುಂ.

50. ಮಾಡಿಸಿಯಲ್ಲಿಯ ದಾನಪೂಜಾದಿಯನವರತಂ ನಡೆವಂತಾಗಿ ಪಾದ ಪ್ರಕ್ಷಾಳನಂ ಮಾಡಿ ಧಾರಾಪೂರ್ವ್ವಕಂ ಕೊಟ್ಟನು ॥ ಅದು ದೇವಾಷ್ಟವಿಧಾರ್ಚ್ಚನಾವಿಳಸಿತಂ ನಿತ್ಯಾಂನದಾನೋಚಿತಾ –

51. ಸ್ಪವಮುಗ್ರಬ್ರತನಿಷ್ಠತಾಪಸಜನಾನೀಕಾಶ್ರಯಂ ಸರ್ಬ್ಬಜೀವದಯಾಳಂಕೃತ-ಧರ್ಮ್ಮಸಿಮ್ಮರ್ಳಮದಂಚಚ್ಚಿತ್ರಪತ್ರಾಂಗಸಂಪದವತ್ಪೂರ್ಜ್ಜಿತವಾಯ್ತಿಳಾತಳದೊಳಸ್ತಾಶೇಷದೋಷೋದಯಂ ॥ [ 35 * ]

---

29. ಈ 'ಬಿ' ಅಕ್ಷರವು ಅಧಿಕವಾಗಿದೆ.

52. ಎನೆ ನೆಗಳ್ದದಱ ಮಹತ್ವಮನನೇಕರಿಂ ಕೇಳ್ದು ನೋಡಲುಂ ಜಿನಪದವಂದನಮಂ ಮಾಡಲುಮುರ್ವ್ವೀವಿನುತಂ ಶ್ರೀಕಾರ್ತ್ತವೀರ್ಯ್ಯಭೂಪಂ ಬಂದಂ ॥ [ 36 * ]
ಅಂತು ಬಂದುತ್ತುಂಗ ಗೋಪುರೋಪಶೋಭಿತಮುಂ ವಿಚಿತ್ರಚಿತ್ರಪತ್ರಶಾ –

53. ಲಭಂಜಿಕಾರಂಜಿತಮುಂ । ಕನನ್ಮಣಿಕಳಶವಿಳಸಿತಮುಮೆನಿಪ ಶ್ರೀನೇಮಿಜಿನಾ-ಲಯಮಂ ನೋಡಿ ಸರ್ವ್ವಜ್ಞಚರಣಾರವಿಂದವಂದನಮಂ ಮಾಡಿ ನಿರ್ಭ್ಭರಭಕ್ತಿ-ಭರಪರಿಜನಿತರೋಮಾಂ –

54. ಚಕಂಚುಕಿತಶರೀರನುಂ ದಯಾಮೂಳಧರ್ಮ್ಮನಿರ್ಮ್ಮಳನುಮಾಗಿ ದೇವತಾ-ಪೂಜೆಗಂ । ತ್ರಿಕಾಲಸಂಧ್ಯಾವಸರಸುರುಚಿರವಾದ್ಯಕ್ಕಂ । ರಿಕ್ಷಿಯರಾಹಾರದಾನಕ್ಕಂ । ಖಂಡಸ್ಫು –

55. ಟಿತಜೀರ್ಣ್ಣೋದ್ಧಾರಕ್ಕಂ । ಸೂರ್ಯ್ಯಗ್ರಹಣನಿಮಿತ್ತಂ ತತ್ತೀರ್ತ್ಥಸಂನಿಧಿಯಲು ಶಕವರ್ಷಂ ಸಾಸಿರದೆಂಭತ್ತೇ ೧೦೮೭ಳೆನೆಯ ತಾರಣ ಸಂವತ್ಸರದ ಫಾಲ್ಗುಣ ಸುದ್ಧ ತ್ರ –

56. ಯೋದ ೧೩ ಶಿ ಬ್ರಿಹಸ್ಪತಿವಾರದಂದು ಕೊರವಳ್ಳಿಗಂಪಣದ ಬಳಿಯ ಬಾಡಂ ಯೆಕ್ಕಸಂಬುಗೆಯಲು ಪ್ರಭುಮಾನ್ಯದಿಂ ಮೂಡಲು । ಕೂಡಲಂಬಿಯ –

57. ರ ಮಾನ್ಯದಿಂ ತೆಂಕಲು । ಕಲುಹೊಳೆಯ ಸೀಮೆಯ ನೀರ್ವ್ವರಿಯಿಂ ಪಡುವಲು ತೆಂಕಮುಖವಾಗಿ ಕೂಂಡಿಯ ಕೋಲಲು ಎರಡು ಸಾಸಿರ ಕಂಬ ಕೆಯ್ಯುಮಂ । ಆ ಪ್ರಭುಮಾನ್ಯದ ಕಿಱು –

58. ದೊಱೆಯ ಮಳವದಿಂ ಮೂಡಲು । ಅಂಬಿಯರ ಮಾನ್ಯದ ಮಳವದಿಂ ಪಡು-ವಲು । ಬಡಗಲು ಜಲವಂ ಮುಟ್ಟೆ ಮಳವಮುಮಂ । ಆ ಬಸದಿಯ ಪರಿ-ಸೂತ್ರದಿಂ ಮೂಡಲು ಮೂಲಿಗರ ಮ–

59. ಗಿಲ ಮಂದಣ ಬಟ್ಟೆಯಿಂ ಬಡಗಲು ಕೂಂಡಿಯ ಕೋಲ ಹಸ್ತದಿಂ ಪದಿನೆಂಟು ಕಯ್ಯಗಲ । ನಾಲ್ವತ್ತೆರಡು ಕಯ್ಯ ನೀಳದ ದಾನಶಾಲೆಯ ನಿವೇಶನಮುಮಂ ದುಗ್ಗೇಶ್ವರದ ದೇವಾಲಯದ

60. ಬಡಗಣ ಬಟ್ಟೆಯ ಸಮೀಪದಲು ಒಂಭತ್ತು ಕೆಯ್ಯಗಲದ ಬಣಜೆಯ ನಿವೇಶ-ನಮುಮಂ । ಹಳ್ಳದಿಂ ಮೂಡಲು ಬಣಬೆಗಟ್ಟಿಂ ಪಡುವಲು ಬ್ರಹ್ಮಯನ ದೇವಾಲಯದ ಬಡಗಣ

61. ಬಟ್ಟೆಯಿಂ ಬಡಗಲು । ಆ ಕೋಲಲು ಇಪ್ಪತ್ತು ಕಂಬ ಕೆಯ್ಯ ಹೂವಿನ ತೋಂಟ-
ಮುಮಂ । ಮತ್ತಂ ಕೂಡಲ ಕಲುಹೊಳೆಯಲು । ಅಲ್ಲಿಯ ಮೂಲಸ್ಥಾನದ
ಗೊರವಗೆಯ್ಯಿಂ ಬ–

62. ಡಗಲು ಕೆಱೆವೂರಿಂಗೆ ಹೋದ ಬಟ್ಟೆಯಿಂ ಮೂಡಲು ಕೊಂಡಿಯ ಕೋಲಲು
ಸಾಸಿರ ಕಂಬ ಕೆಯ್ಯುಮಂ । ಆ ಕೆಯ್ಗೆ ಎಕ್ಕಸಂಬುಗೆಯಲು । ಆ ಬಸದಿಯಿಂ
ಬಡಗಲು ಮೂವತ್ತೆರ–

63. ಡು ಕಯ್ಯಗಲ ನಾಪ್ವತ್ತೆರಡು ಕಯ್ಯ ನೀಳದ ನಿವೇಶನಮುಮಂ ಆ ಮಂಡಳಾ-
ಚಾರ್ಯ್ಯರಪ್ಪ ಶ್ರೀವಿಜಯಕೀರ್ತ್ತಿಪಂಡಿತದೇವರ ಪಾದಪ್ರಕ್ಷಾಳನಂ ಮಾಡಿ
ಧಾರಾಪೂರ್ವಕಂ ಆಚಂದ್ರಾರ್ಕ್ಕತಾರಂ ಬ–

64. ರಂ ಸರ್ವ್ವನಮಶ್ಯವಾಗಿ ಕೊಟ್ಟರು ॥ ಮತ್ತಂ ಸ್ವಸ್ತಿ ಸಮಸ್ತ ಭುವನವಿಖ್ಯಾತ
ಪಂಚಶತವೀರಶಾಸನಲಬ್ಧಾನೇಕ ಗುಣಗಣಾಳಂಕೃತ ಸತ್ಯಶೌಚಾ ಚಾ[ ರಚಾ* ]ರು
ಚಾರಿತ್ರ ನಯವಿ–

65. ನಯ ವಿಜ್ಞಾನ ವೀರಸಮಯಬಣಂಜುಧರ್ಮ್ಮಪ್ರತಿಪಾಳಕರಪ್ಪ ಶ್ರೀಮದಯ್ಯಾ-
ವೊಳೆಯಯ್ನೂರ್ವ್ವ ಶ್ವಾಮಿಗಳುಂ । ಸಾಸಿರದೇಳ್ನೂಱು ಗವಱೆಯುಂ

66. ಮುಮ್ಮುರಿದಂಡಮುಂ ಉಭಯನಾನಾದೇಶಿಯುಂ । ಎಕ್ಕಸಂಬುಗೆಯ ತಳಸಮ-
ಸ್ತಮುಮಿರ್ದ್ದು ಶ್ರೀಮನ್ಮಹಾಪ್ರಧಾನಂ ಹಡವಳ ಕಾಳಿಯಣ್ಣಂ ಮಾ–

67. ಡಿಸಿದ ಬಸದಿಯ ಶ್ರೀನೇಮಿನಾಥಶ್ವಾಮಿಗಳಷ್ಟವಿಧಾರ್ಚ್ಚನೆಗಂ ನಂದಾದೀವಿಗೆಗಂ
ನಡವಂತಾಗಿ ಒಂದು ಗಾಣದೊಕ್ಕಲುದೆಱೆ ಬೆಣ್ಣೆ ಬೀರವಣಮುಂ । ಕೋಣನ
ಹೇ–

68. ಱಂಗಿಂಮನ । ಎತ್ತಿನ ಹೇಱಂಗೊಂಮನ । ಕತ್ತೆಯ ಹೇಱಂಗರವನ ಧಾನ್ಯ-
ಮುಮಂ । ಹೊಂಗಯಿದಡಕೆ ಹೇಱಂಗಯಿವತ್ತೆಲೆ ತಂದು ಮಾಱುವ
ಹಾಡಕ್ಕರ–

69. ವಸೆಣ್ಣೆಯುಮಂ ಕೊಟ್ಟು । ಮತ್ತಂ ಹದಿನೆಯ್ದೆತ್ತಿನಲೇಸ ಹೇಱಿದಪಂ ಪರಿ-
ಹಾರವಾಗಿ ಮೂಡಲುದಯ ಪಡುವಲಸ್ತಮಾನ ತೆಂಕಲು ಲಂಕೆ ಬಡಗಲು
ಹಿಮವಾದಿ–

70. ಯಾಗಿ ಕೊಟ್ಟ ಶಾಸನಮಿಂತೀ ಧರ್ಮ್ಮಮಂ ಸಧರ್ಮ್ಮದಿಂ ಪ್ರತಿಪಾಳಿಸಿದವರ್ಗ್ಗೆ ಗಂಗೆ ವಾರಣಾಸಿ ಪ್ರಯಾಗೆ ಕುರುಕ್ಷೇತ್ರದಲು ವೇದವಿದರಪ್ಪ ಬ್ರಾಹ್ಮಣ-

71. ರ್ಗ್ಗೆ ಸಹಸ್ರ ಕಪಿಲೆಯಂ ದಾನಮಂ ಕೊಟ್ಟ ಫಲ ॥ ಸ್ವದತ್ತಾಂ ಪರದತ್ತಾಂ ವಾ ಯೋ ಹರೇತ ವಸುಂಧರಾಂ [ 1* ] ಷಷ್ಟಿರ್ವ್ವರ್ಷಸಹಸ್ರಾಣಿ ವಿಷ್ಟಾಯಾಂ ಜಾಯತೇ-

72. ಕ್ರಿ (ಕೃ) ಮಿಃ ॥ [37*] ಬಹುಭಿರ್ವ್ವಸುಧಾ ದತ್ತಾ ರಾಜಭಿಸ್ಸಗರಾದಿಭಿಃ [1*] ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ ಫಲಂ ॥ [ 38* ] ಸಾಮಾನ್ಯೋಯಂ ಧ-

73. ರ್ಮ್ಮಸೇತುರ್ನ್ನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ [ 1* ] ಸರ್ವ್ವಾನೇತಾನ್ಭಾವ(ವಿ)ನಃಪಾರ್ತ್ಥಿವೇಂದ್ರಾನ್ ಭೂಯೋಭೂಯೋಯಾಚತೇ ರಾಮಚಂದ್ರಃ ॥ [39*]-

74. ಇನ್ತೀ ಕ್ರಮಮಂ ಪಾಳಿಸಿದಂತಪ್ಪ ಮಹಾನುಭಾವರನುಪಮ ಲಕ್ಷ್ಮೀಕಾಂತರಿವರೆನಿಸಿ ದಿಕ್ಪರಿಯನ್ತ ಯಶಶ್ರೀಯನಾಳ್ಗುಮಾ ಚಂದ್ರಾರ್ಕ್ಕಂ ॥ [40*].

75. ಪರಿಪಾಳಿಸಲೊಲ್ಲದವರ್ಣ್ಣರಕಾಬ್ಧಿಯೊಳದ್ದು್ ಬಿದ್ದು್ ದುಃಖಾವರ್ತ್ತಾನ್ತರದೊಳು ನಮೆಯುತ್ತಿರ್ಕ್ಕು [0*] ನಿರಂತರಂ ಪುತ್ರಪೌತ್ರಮಿತ್ರಸಮೇತಂ ॥ [41*]

76. ನಯದಿಂ ರಕ್ಷಿಸದಿಂತಿದಂ ಕಿಡಿಸಿದುರ್ವ್ವೀಪಾಳಕರ್ವ್ವಾರಣಾಸಿಯೊಳಂ ಗಂಗೆಯೊಳಂ ಪ್ರಯಾಗೆಯೊಳಮತ್ಯುತ್ಕೃಷ್ಟಮಂ ವರ್ಣ್ಣಸಂಚಯಮಂ ಗೋಬ್ರಜಮಂ

77. ದ್ವಿಜಪ್ರತತಿಯಂ ಕೊಂದಿಕ್ಕಿದಾ ಪಾತಕಕ್ಕಯಶಕ್ಕಾಲಯಮಾಗಿ ತೀಬ್ರನರಕಾಗ್ನಿಜ್ವಾಳೆಯೊಳ್ ಮಗ್ಗುಗುಂ ॥ [ 42* ] ಶಾಸನಮಿದಾವುದೆಲ್ಲಿಯ ಶಾಸನಮಾರಿತ್ತರೇಕೆ.

78. ಸಲಿಸುವೆನಾನೀ ಶಾಸನಮನೆಂಬ ಪಾತಕನಾ ಸಕಳಂ ರೌರವಕ್ಕೆ ಗಳಗಳನಿಳಿಗುಂ ॥ [43*] ಅದಱಿಂ ಸತ್ವಥಜೈನಧರ್ಮ್ಮಮನಿದಂ ಕೈಕೊಳ್ಳದಿಂತಾದ್ಯರಿತ್ತುದನಾ-

79. ನಿತ್ತುದಿದಲ್ಲದೆಂದಳಿಪಿ ಧರ್ಮ್ಮೋಚ್ಚಾಟನಂ ಮಾಡಿದಂ ಪುದಿದಿಕ್ಕುಂ ನರಕೋಗ್ರಘೋರತರ ಕುಂಭೀಪಾಕದೊಳ್ ತನೆರಂ ಪದಪಿಂದಂ ಪರಿಪಾಳಿಪಂ ವಿಜಯಂ (ಯಮಂ).

80. ಭದ್ರಂ ಶುಭಂ ಮಂಗಳಂ ॥ ]44*].

# ನಿರ್ಧಾರ

● ವಿಜಯಶ್ರೀ ಸಬರದ

ಬಿಗಿದಸ್ನಾಯುಗಳ
ಸುತ್ತಲೆಲ್ಲಾ ಪಸರಿಸಿ
ತುಂಬಿದ ನೋವಿನ
ಮಧ್ಯದಲ್ಲಿಯೇ
ಈಟಿಯು ಇರಿತ.
ಕೊಂಬೆ–ಕೊಂಬೆಗಳಾಗಿ
ದಿಕ್ಕು–ದಿಕ್ಕಿಗೆ ಹಬ್ಬಿ
ಹಚ್ಚ ಹಸಿರುಟ್ಟು
ಅರಳಬೇಕೆಂದಾಗ
ಇಂಚು–ಇಂಚಿಗೆ
ಮೊಳೆ ಬಡಿದು ಶಿಲುಬೆಗೇರಿಸಿದ
ಏಸುವಿನ ಚಿತ್ರ ಕಣ್ಮುಂದೆ.
ಯಾವುದೋ ಕಾಣಲಾಗದ ಸೆಳವಿನ
ಸುಳಿವಿಗೆ ಸಿಕ್ಕಂತೆ,
ನಗುವ ಹಲ್ಲುಗಳು
ಹೊಳಪು ಕಣ್ಣು ಕುಕ್ಕಿದಾಗ
ಬದುಕು–ಬರಹಗಳ ನಡುವೆ
ಸಾವಯುವ ಸಂಬಂಧದ
ಹಗ್ಗ ಬಿಗಿದು
ಏದುಸಿರು ಬಿಟ್ಟಾದರೂ
ಜೀವಿಸಬೇಕೆಂಬ ಹಟ.

●

# " ಕ್ರೋಚೇನ ಅಭಿವ್ಯಕ್ತಿತತ್ತ್ವ ವಿವೇಚನೆ "

● ಎಂ. ಬಿ. ಕೊಟ್ರಶೆಟ್ಟಿ

ಪಾಶ್ಚಾತ್ಯ ತತ್ವಜ್ಞಾನದ ಒಂದು ಅಂಗವಾಗಿ ಬೆಳೆದು ಬಂದ ಸೌಂದರ್ಯ ಮೀಮಾಂಸೆ (Aesthetics) ಯು ೧೯ನೆಯ ಶತಮಾನದ ಅಂತ್ಯ ಹಾಗೂ ೨೦ನೆಯ ಶತಮಾನದ ಪ್ರಾರಂಭದ ಕೆಲವು ದಶಕಗಳಲ್ಲಿ ತೀವ್ರವಾದ ವೈಚಾರಿಕ ಗೊಂದಲಕ್ಕೀಡಾಯಿತು. ಕಾಂಟ್, ಹೆಗೆಲ್, ಶೋಪೆನ್‌ಹಾರ ಮೊದಲಾದವರ ದಾರ್ಶನಿಕ ಸಿದ್ಧಾಂತಗಳು ಕಾವ್ಯ ಮೀಮಾಂಸೆಯ ಮೇಲೆ ಪ್ರಗಲ್ಭ ಪರಿಣಾಮ ಬೀರಿದ್ದೇ ಇದಕ್ಕೆ ಕಾರಣ. ವಾಸ್ತವತಾವಾದ (Realism), ರಮ್ಯವಾದ (Romanticism), ಅಸ್ತಿತ್ವವಾದ (Existantialism), ಪ್ರಕೃತಿವಾದ (Naturalism) ಮೊದಲಾದ ಸಿದ್ಧಾಂತಗಳ ತಲೆಪಟ್ಟಿಯನ್ನು ಹಚ್ಚಿಕೊಂಡ ವಿಚಾರಗಳು ಪಾಶ್ಚಾತ್ಯ ಚಿಂತಕರ ತಲೆಯಲ್ಲಿ ತುಂಬಿಕೊಂಡಿದ್ದವು. ಈ ಎಲ್ಲ ಸಿದ್ಧಾಂತಗಳ ಧೋರಣೆಯನ್ನು ಕ್ರೋಡೀಕರಿಸಿ ಹೇಳುವುದಾದರೆ ಎರಡು ಪ್ರಮುಖ ವಿಚಾರಗಳು ಪಾಶ್ಚಾತ್ಯ ಕಾವ್ಯ ವಿಮರ್ಶಕರನ್ನು ಆಕರ್ಷಿಸಿದುದು ಸುಸ್ಪಷ್ಟವಾಗುತ್ತದೆ. ಒಂದು, ಕಲೆ ತನ್ನ ಅಸ್ತಿತ್ವವನ್ನು, ಅರ್ಥಪೂರ್ಣತೆಯನ್ನು ಉಳಿಸಿಕೊಳ್ಳಬೇಕಾದರೆ ಅದು ತಾನು ನಿರ್ಮಾಣಗೊಳ್ಳುವ ಪರಿಸರದ ಎಂದರೆ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ವೈಜ್ಞಾನಿಕ, ವಿಚಾರಗಳ ಸಮಷ್ಟಿಯಾದ ಐತಿಹಾಸಿಕ ಸಾಮಾಜಿಕ (Historical-Social) ದ ಚಿಂತನೆಯನ್ನು ಅಭಿವ್ಯಕ್ತಿಗೆ ತರಬೇಕು ಎನ್ನುವುದು 'ಜೀವನಕ್ಕಾಗಿ ಕಲೆ' ಎಂಬ ಧೋರಣೆಯಲ್ಲಿ ಇದೇ ವಿಚಾರವು ಕೇಂದ್ರೀಕೃತವಾಗಿದೆ. ಇದರಲ್ಲಿ ಕಲೆಯ ಸ್ವತಂತ್ರ ಅಸ್ತಿತ್ವವನ್ನೇ ಅಲ್ಲಗಳೆಯಲಾಯಿತು. ಇದಕ್ಕೆ ಪ್ರತಿಯಾಗಿ ಕಲೆ ಹಾಗೂ ಕಲಾವಿದನ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಪ್ರಯತ್ನವೂ ಅಷ್ಟೇ ನಿಖರವಾಗಿ ನಡೆಯಿತು. 'ಕಲೆಗಾಗಿ ಕಲೆ' ಎಂಬ ಹೊಸ ವಿಚಾರದ ಅಲೆಯಲ್ಲಿ ಕಲೆಯ ಸಂಪೂರ್ಣ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಪ್ರಯತ್ನವಿದೆ. ಜೀವನದ ವಿವಿಧ ಕ್ಷೇತ್ರಗಳ ವಿಚಾರಗಳನ್ನು ಪ್ರಚಾರ ಮಾಡುವುದೇ ಕಲೆ ಹಾಗೂ ಸಾಹಿತ್ಯಗಳ ಪರಮೋದ್ದೇಶವೇ ? ನೈತಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ವಿಚಾರಗಳಿಗೆ ಜೋತು ಬೀಳದೇ ಸ್ವತಂತ್ರವಾಗಿ ಮುಂದುವರಿಯುವ ಅದು ಒಂದು ಪ್ರತ್ಯೇಕ ಸತ್ಯಾನ್ವೇಷಣೆಯಮಾರ್ಗ-

ವಾಗಿದೆ ಎಂದು ಇವರು ಪ್ರತಿಪಾದಿಸಿದರು. ಶುದ್ಧಕಲೆ (Pure art), ಪರಿಶುದ್ಧ ಸೌಂದರ್ಯ (Pure Beauty), ನಿಸ್ಸಂಗ ಪರಿಭಾವನೆ (Disinterested Observation), ವೈಯಕ್ತಿಕ ಅಭಿವ್ಯಕ್ತಿ (Self Expression) ಮೊದಲಾದ ನವೀನ ವಿಚಾರಗಳು ಈ ಧೋರಣೆಯಲ್ಲಿ ತೇಲಿ ಬಂದವು.

ಇಟಲಿ ದೇಶದ ಪ್ರಖ್ಯಾತ ದಾರ್ಶನಿಕ, ಸೌಂದರ್ಯಶಾಸ್ತ್ರಜ್ಞ ಕ್ರೋಚೇನ ಅಭಿವ್ಯಕ್ತಿ ತತ್ತ್ವವು (Expressionism) ವು ಹೊಸ ಧೋರಣೆಯ ಕಾವಿನಲ್ಲಿ ಆವಿರ್ಭವಿಸಿತು. ಕಲೆಯ ಪ್ರಶಸ್ತಿ ಬಂದಾಗಲೆಲ್ಲ 'ಪ್ರತಿಭೆ' 'ಅಭಿವ್ಯಕ್ತಿ' 'ಮಾಧ್ಯಮ' ಮೊದಲಾದ ಪಾರಿಭಾಷಿಕ ಪದಗಳನ್ನು ಬಳಸಲಾಗುತ್ತದೆ. ಈ ಪದಗಳಿಗೆ ಇರುವ ಅರ್ಥವ್ಯಾಪ್ತಿ ಅಪಾರ. 'ಅಭಿವ್ಯಕ್ತಿ' ಎಂದರೆ ಸಾಮಾನ್ಯಾರ್ಥದಲ್ಲಿ —ಕಲಾವಿದನು ಕಲಾಮಾಧ್ಯಮವೊಂದರಲ್ಲಿತನ್ನ ಭಾವವನ್ನು ಪ್ರಕಾಶ ಪಡಿಸುವ ರೀತಿ. ಭಾರತೀಯ ಕಾವ್ಯ ಮೀಮಾಂಸೆಯ 'ರೀತಿರಾತ್ಮಾ ಕಾವ್ಯಸ್ಯ' ಎಂಬ ಪ್ರಖ್ಯಾತ ಸೂತ್ರದಲ್ಲಿ ಇದೇ ಅರ್ಥವು ಅಡಗಿದೆ. ಆದರೆ ಕ್ರೋಚೆ ಈ ಪದಕ್ಕೆ ವಿಶೇಷ ಅರ್ಥವನ್ನು ಪರಿಕಲ್ಪಿಸಿ ಸೌಂದರ್ಯ ಮೀಮಾಂಸೆಯಲ್ಲಿ ಅದನ್ನೊಂದು ಸಿದ್ಧಾಂತವೆಂಬಂತೆ ಪ್ರತಿಪಾದಿಸಿದ್ದಾನೆ. ಅವನ ಅಭಿವ್ಯಕ್ತಿತತ್ತ್ವದ ಪರಿಶೀಲನೆ ಈ ಲೇಖನದ ಉದ್ದೇಶವಾಗಿದೆ.

ಮಾನವ ಚೇತನ (Spirit) ವು ಜ್ಞಾನದ ವಿವಿಧ ವಲಯಗಳನ್ನು ಅರಿತುಕೊಳ್ಳುವ ಬಗೆಯನ್ನು ಕ್ರೋಚೆ ಹಂತ ಹಂತವಾಗಿ ಆವಿಷ್ಕರಿಸಿಕೊಳ್ಳುತ್ತಾನೆ. ಕೇವಲ ವಿಷಯ ಸಂಗ್ರಹರೂಪದ ಜ್ಞಾನವು ವ್ಯರ್ಥವಾದದ್ದೆಂದು ಅವನು ತನ್ನ ಬಾಲ್ಯದ ಅಧ್ಯಯನದಿಂದಲೇ ಕಂಡುಕೊಂಡನು. ಅನಂತರ ತಾರುಣ್ಯದಲ್ಲಿ ಅರ್ಥಶಾಸ್ತ್ರದ ಅಧ್ಯಯನವನ್ನು ಕೈಗೆತ್ತಿಕೊಂಡು "ಸಾಮಾಜಿಕ, ಆರ್ಥಿಕ ಪರಿಸರಗಳೇ ಕಲೆಯ ಪ್ರಾದುರ್ಭಾವಕ್ಕೆ ಕಾರಣ"-ವೆಂಬ ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತದ ಪೊಳ್ಳತನವನ್ನು ಅಲ್ಲಗಳೆಯುತ್ತಾನೆ. ಕ್ರಿ. ಶ. ೧೯೦೦ರಲ್ಲಿ ಅವನು ಸಾದರ ಪಡಿಸಿದ Fundamental thesis of Aesthetic as a science of Expression and General Linguistics" ಎಂಬ ಪ್ರಬಂಧದಲ್ಲಿ ಅಭಿವ್ಯಕ್ತಿ ತತ್ತ್ವದ ಮೂಲರೇಖೆಗಳು ಮೂಡಿ ಬಂದವು. ಅನಂತರ ಇವೇ ವಿಚಾರಗಳು ಇನ್ನಷ್ಟು ವಿಸ್ತಾರಗೊಂಡು ಪಾಶ್ಚಾತ್ಯ ಸೌಂದರ್ಯ ಮೀಮಾಂಸೆಯ ಕ್ಷೇತ್ರದಲ್ಲಿ ಹೊಸ ಮನ್ವಂತರವನ್ನು ತೆರೆದ ಅವನ Aesthetic ಎಂಬ ಕೃತಿ ಕ್ರಿ. ಶ. ೧೯೦೨ರಲ್ಲಿ ಪ್ರಕಟವಾಯಿತು. ಇದು ಸೌಂದರ್ಯಶಾಸ್ತ್ರದ ವ್ಯಾಪಕ ವಿಚಾರ ವಿವೇಚನೆಯೊಂದಿಗೆ ಕಲೆ ಹಾಗೂ ಸಾಹಿತ್ಯಗಳ ಉಗಮ, ಸ್ವರೂಪಗಳ ಅಧಿಕಾರಯುತ ಪ್ರತಿಪಾದನೆಯನ್ನು ಒಳಗೊಂಡಿರುವುದರಿಂದ ಕೂಡಲೇ ವಿದ್ವಾಂಸರ ಗಮನ ಸೆಳೆಯಿತು.

**ಜ್ಞಾನ ವಿಶ್ಲೇಷಣೆ :**

ಕ್ರೋಚೇನ ಸಿದ್ಧಾಂತವನ್ನು ವಿವರಿಸಲು ಪೂರ್ವಭಾವಿಯಾಗಿ ಅವನು ನೀಡಿದ ಜ್ಞಾನ ವಿಶ್ಲೇಷಣೆಯನ್ನು ಅರಿಯುವದು ಅತ್ಯವಶ್ಯವಾಗಿದೆ. ಜ್ಞಾನ ಪಿಪಾಸೆ ಮಾನವ ಚೇತನದ ಒಂದು ಅದಮ್ಯ ವ್ಯಾಪಾರವೆನ್ನುವದು ಅವನ ಮೂಲಗ್ರಹಿಕೆ. ಅವನ ದೃಷ್ಟಿಯಲ್ಲಿ ಮಾನವಚೇತನವೇ ಒಂದು ಅತ್ಯಂತಿಕ ಸತ್ಯ. ಚಿತ್‌ಶಕ್ತಿ ಜ್ಞಾನಗ್ರಹಣಕ್ರಿಯೆಯಲ್ಲಿ ಪ್ರೇರಿತವಾದಾಗ ನಾಲ್ಕು ಬಗೆಯ ಜ್ಞಾನದ ವಲಯುಗಳಲ್ಲಿ ಪ್ರತಿಸ್ಪಂದಿಸುತ್ತದೆ. ಅವು ಅನುಕ್ರಮವಾಗಿ ಪ್ರತಿಭಾನ–ಅಭಿವ್ಯಕ್ತಿ (intuition-expression), ಕಲ್ಪಕ ಇಲ್ಲವೆ ವೈಚಾರಿಕ (Conceptual), ಸಾಮಾನ್ಯ ಸಂಕಲ್ಪ (Volition in general) ನೈತಿಕ (Ethical) ಇವುಗಳಲ್ಲಿ ಸಹಜಪ್ರಜ್ಞೆ, ಹಾಗೂ ವೈಚಾರಿಕ ಪ್ರಜ್ಞೆಗಳು ತಾತ್ವಿಕ ಸ್ವರೂಪದವುಗಳಾದರೆ ಇನ್ನುಳಿದ ಆರ್ಥಿಕ ಹಾಗೂ ನೈತಿಕ ಪ್ರಜ್ಞೆಗಳು ಸಂಪೂರ್ಣ ಪ್ರಾಯೋಗಿಕ ಇಲ್ಲವೆ ಕ್ರಿಯಾತ್ಮಕವಾದವುಗಳು. ಪ್ರತಿಭಾನವೆಂಬುದು ಸಹಜ ಜ್ಞಾನ. ಇದು ಕಲಾವಿದನ ವೈಯಕ್ತಿಕ ಕಾಣ್ಕೆಗಳನ್ನು ಅಭಿವ್ಯಕ್ತಿಗೆ ತರುತ್ತದೆ. ಎರಡನೆಯದು, ವೈಚಾರಿಕ ನೆಲೆ. ಇದು ವೈಯಕ್ತಿಕ ಕಾಣ್ಕೆಗಳಲ್ಲಿರುವ ಪರಸ್ಪರ ಸಂಬಂಧವನ್ನು ನಿರ್ಧರಿಸುವ ತರ್ಕ ಹಾಗು ವೈಚಾರಿಕತೆಗಳನ್ನು ಬಳಸಿಕೊಳ್ಳುತ್ತದೆ. ಮೂರನೆಯದು, ವ್ಯಾವಹಾರಿಕವಾಗಿದ್ದು ಆರ್ಥಿಕ ಚಟುವಟಿಕೆಗಳನ್ನು ಪ್ರೇರಿಸುತ್ತದೆ. ನಾಲ್ಕನೆಯದು, ವ್ಯಾವಹಾರಿಕ ಜ್ಞಾನವನ್ನು ಪ್ರಬಲವಾದ ಇಚ್ಛಾಶಕ್ತಿಯೊಂದಿಗೆ ಸಮನ್ವಯಗೊಳಿಸುವ ನೈತಿಕ ಜ್ಞಾನ. ಈ ನಾಲ್ಕೂಬಗೆಯ ಜ್ಞಾನಗಳು ಮೂಲಭೂತವಾಗಿ ಭಿನ್ನಸ್ವರೂಪದವುಗಳಾಗಿದ್ದು ಮಾನವ ಚೇತನದ ಸೌಂದರ್ಯಾತ್ಮಕ, ತಾರ್ಕಿಕ, ಆರ್ಥಿಕ ಹಾಗೂ ನೈತಿಕ ಚಟುವಟಿಕೆಗಳನ್ನು ಪ್ರೇರಿಸುತ್ತವೆ.

**ಪ್ರತಿಭಾನ :**

ಸೌಂದರ್ಯ ಶಾಸ್ತ್ರಜ್ಞ ಕ್ರೋಚೆ ಕಲಾಸೃಷ್ಟಿಯಲ್ಲಿ ಅವಿಷ್ಕಾರಗೊಳ್ಳುವ ಪ್ರತಿಭಾನದ ಮೇಲೆ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿದ್ದಾನೆ. ಕ್ರೋಚೆ ಸಿದ್ಧಾಂತದ ಕೇಂದ್ರಸತ್ಯವೆಂದರೆ ಈ ಪ್ರತಿಭಾನವೇ ಆಗಿದೆ. ಪ್ರತಿಭಾನವೆಂದರೆ ವಿಚಾರವಿಲ್ಲದೆ, ತರ್ಕಿಸದೆ ಮನಸ್ಸು ಒಡನೆಯೆ ಗ್ರಹಿಸುವ ಜ್ಞಾನ. ಇದೊಂದು ರೀತಿಯ ಒಳ ಅರಿವು. ಸಹಜಜ್ಞಾನ ಸ್ವಯಂಪ್ರಕಾಶ, ಅಂತರ್‌ದೃಷ್ಟಿ. ಅಂತರ್ಬೋಧ ಮುಂತಾಗಿ ಭಿನ್ನಹೆಸರುಗಳನ್ನು ಇದಕ್ಕೆ ಪರ್ಯಾಯವಾಗಿ ಬಳಸಬಹುದು. ಅನುಭವ, ದರ್ಶನ, ಕಾಣ್ಕೆಗಳನ್ನು ಪ್ರೇರಿಸುವ ಪ್ರತಿಭಾನ ಕ್ರಿಯೆಯು ಸೃಷ್ಟ್ಯಾತ್ಮಕ ಗುಣಗಳಿಂದ ಕಳಕಳಿಸುವ ಚಿದ್‌ವ್ಯಾಪಾರ. ಇದರ ಮೇಲೆ ತಾರ್ಕಿಕ ಇಲ್ಲವೆ ವೈಚಾರಿಕ ನೆಲೆ ಇದ್ದರೆ ಕೆಳಗೆ ಉಪಪ್ರಜ್ಞೆ (Subconcious) ಹಾಗೂ ಸುಪ್ತಪ್ರಜ್ಞೆ (Unconcious) ಗಳ ಗೊಂದಲ ಹಾಗೂ ಕತ್ತಲೆಯ ನೆಲೆಯಿದೆ. ಪ್ರತಿಭಾನವು ಕ್ರಿಯಾತಕ ಹಾಗೂ ಮೂರ್ತಸ್ವರೂಪದ್ದಾಗಿದ್ದರೆ ಸುಪ್ತಪ್ರಜ್ಞೆಯು

ಕ್ರಿಯಾರಹಿತ ಹಾಗೂ ಅಮೂರ್ತವಾದುದು. ಕಲಾಸೃಷ್ಟಿಗೆ ಬೇಕಾಗುವ ಮೂಲವಸ್ತು-ಗಳ ಸರಕನ್ನು ಪೂರೈಸುವ ಸುಪ್ತಪ್ರಜ್ಞೆಯೆಂಬುದು ವೇದನೆ (sensation), ಸಂವೇದನೆ (feelings), ಪ್ರಭಾವಗಳು (impressions), ಅಮೂರ್ತವನ್ನು (formless matter) ಗಳನ್ನು ಅಡಗಿಸಿಕೊಂಡ ಒಂದು ಮಹಾ ಉಗ್ರಾಣವಾಗಿದೆ. ಸುಪ್ತಪ್ರಜ್ಞೆಯ ಸ್ವರೂಪದ ವಿವರಣೆಯಲ್ಲಿ ಕ್ರೋಚೆ ಪ್ರಖ್ಯಾತ ಮನೋವಿಜ್ಞಾನಿ ಫ್ರೈಡನ ಮನೋ-ವಿಶ್ಲೇಷಣೆಯ ವಿಧಾನವನ್ನು ಅಂಗೀಕರಿಸಿದ್ದಾನೆ ಎನ್ನುವುದು ಸುಸ್ಪಷ್ಟವಾಗಿದೆ. ಸುಪ್ತ ಚೇತನದ ವೇದನೆ, ಸಂಪಾದನೆ, ಪ್ರಭಾವಗಳು, ಅನುಭವಗಳು–ಇವು ಅಮೂರ್ತವಾಗಿದ್ದ ಗೊಂದಲದ ವಾತಾವರಣದಲ್ಲಿಯೂ ಮೂರ್ತಗೊಳ್ಳಲು, ರೂಪಧಾರಣೆ ಮಾಡಲು ಆತುರಗೊಂಡಿರುತ್ತವೆ ಎನ್ನುತ್ತಾನೆ.[1] ಸುಪ್ತಚೇತನದಿಂದ ಬಿಡುಗಡೆ ಪಡೆಯಲು ಇವು ಮೇಲೆ ಸಿಡಿದು ಪ್ರತಿಭಾನದ ವಲಯದಲ್ಲಿ ಹಣಕಿಹಾಕಿದ ತತ್-ಕ್ಷಣವೇ ರೂಪಧಾರಣೆ ಮಾಡುತ್ತವೆ. ಅಮೂರ್ತವು ಪ್ರತಿಭಾನದ ಬೆಳಕಿನಲ್ಲಿ ರೂಪಧಾರಣೆ ಮಾಡುವುದೇ ಅಭಿವ್ಯಕ್ತಿ ಇಲ್ಲವೇ ಸೌಂದರ್ಯನಿರ್ಮಾಣ.

## ಪ್ರತಿಭಾನ-ಅಭಿವ್ಯಕ್ತಿ :

ಕ್ರೋಚೆ ತನ್ನ ಸಿದ್ಧಾಂತವನ್ನು 'ಪ್ರತಿಭಾನ–ಅಭಿವ್ಯಕ್ತಿ' ಎಂದು ಕರೆದಿರುವುದು ತುಂಬ ಅರ್ಥಪೂರ್ಣವಾಗಿದೆ. ಕಲಾನಿರ್ಮಾಣವು ಪ್ರತಿಭಾನ ಮತ್ತು ಅಭಿವ್ಯಕ್ತಿ ಇವೆರಡನ್ನು ಒಳಗೊಂಡ ಒಂದು ಸಂಯುಕ್ತ ಹಾಗೂ ಸಂಕೀರ್ಣ ಕ್ರಿಯೆ. ಪ್ರತಿಭಾನ ವಿಲ್ಲದೆ ಅಭಿವ್ಯಕ್ತಿಯಿಲ್ಲ, ಅಭಿವ್ಯಕ್ತಿಇಲ್ಲದೆ ಪ್ರತಿಭಾನವಿಲ್ಲ ಎಂಬ ಅವನ ಹೇಳಿಕೆ. ಇವೆರಡರಲ್ಲಿರುವ ಘನಿಷ್ಠ. ಸಂಬಂಧವನ್ನು ಸೂಚಿಸುತ್ತದೆ. ಒಂದು ವಸ್ತುವನ್ನು ಅರಿಯುವುದೆಂದರೆ ಆಂತರಿಕವಾಗಿ ಅಭಿವ್ಯಕ್ತಿಗೊಳಿಸುವುದೇ ಆಗಿದೆ. ಪ್ರತಿಭಾನದಲ್ಲಿ ಹೊಳೆದುದನ್ನು ಶಬ್ದ, ಧ್ವನಿ, ರೇಖಾ ವಿನ್ಯಾಸಗಳ ಮಾಧ್ಯಮದಲ್ಲಿ ರೂಹಿಸಿ ಅದರ ಅಸ್ತಿತ್ವವನ್ನು ಸಮರ್ಥಿಸಿ ತೋರದವನು ಕಲಾವಿದನೇ ಅಲ್ಲ. ಮೂಕ ಮಿಲ್ಟನ್‌ನಾಗಲಿ. ಪಟದಮೇಲೆ ಆಕೃತಿಸಿ ತೋರದ ಭೂಮಿತಿ ವಿಶಾರದನಾಗಲಿ ಇರಲುಸಾಧ್ಯವಿಲ್ಲ ಎನ್ನು ತ್ತಾನೆ.[2] ಸುಪ್ತಪ್ರಜ್ಞೆಯ ಗೊಂದಲದಿಂದ ಬಿಡುಗಡೆಗೊಂಡು ಪ್ರತಿಭಾನ–ಅಭಿವ್ಯಕ್ತಿ ಯಲ್ಲಿ ರೂಪಧಾರಣೆಗೊಂಡು ಆವಿರ್ಭವಿಸುವ ಕಲಾವ್ಯಾಪಾರವನ್ನು ಭ್ರಮೆ ಇಲ್ಲವೆ ಯಾಂತ್ರಿಕ ಕ್ರಿಯೆ ಎಂದು ವರ್ಣಿಸುವುದು ಶಾಬ್ದಿಕ ವಿರೋಧಾಭಾಸವೆಂದು ಟೀಕಿಸಿದ್ದು

1. "It is not spiritual activity but inchoate passivity, a mere urge of something to be known, to be achieved, to be born" -quoted from Literary Criticism— A Short History P. 502
2. "There are no mute inglorious Miltons, no Geometricians whocannot draw a figure on the blackboard........"Ibid.

ಸೂಕ್ತವಾಗಿದೆ. ಕಲಾವ್ಯಾಪಾರ ಒಂದು ಮಾಂತ್ರಿಕ ಕ್ರಿಯೆಯಲ್ಲ. ಅದೊಂದು ಸಹಜ ಪ್ರಜ್ಞೆಯ ಉಕ್ಕಂದದ ವ್ಯಾಪಾರ. ಅಪ್ರಯತ್ನಪೂರ್ವಕವಾದ ಸ್ಫೂರ್ತಕ್ಷಣದ ಸೃಷ್ಟ್ಯಾತ್ಮಕ ಗುಣವನ್ನು ಯಾಂತ್ರಿಕ ಕ್ರಿಯೆಯೆಂದು ವರ್ಣಿಸುವುದು ಅಭಾಸವಲ್ಲದೆ ಮತ್ತೇನು ? ಕಲಾಪ್ರಕ್ರಿಯೆ ಕನಸಲ್ಲ: ಕನಸನ್ನು ಕಣಸುಗೊಳಿಸುವ ಅಭಿವ್ಯಕ್ತಿ. ಯಾವುದು ಅಭಿವ್ಯಕ್ತಿಯಲ್ಲಿ ರೂಪಧಾರಣೆ ಮಾಡುವುದಿಲ್ಲವೋ ಅದು ಪ್ರತಿಭಾನವೇ ಅಲ್ಲ. ಮಾನವ ಚೇತನವು ಅಮೂರ್ತವಾದುದಕ್ಕೆ ರೂಪಧಾರಣೆ ಮಾಡಿದಲ್ಲದೆ ಯಾವುದೇ ಒಂದು ವಸ್ತುವನ್ನು ಅರಿಯಲು ಸಾಧ್ಯವಿಲ್ಲ. ಕಲಾವಿದನ ದರ್ಶನ ದೀಪ್ತವಾದಾಗ ಅದರ ಪ್ರದರ್ಶನ ರೂಪದ ರೂಪಧಾರಣ ಕ್ರಿಯೆ ನಡೆದೇ ನಡೆಯುತ್ತದೆ. ಆದ್ದರಿಂದ ಪ್ರತಿಭಾನವೆಂದರೆ ಒಂದು ವಸ್ತುವಿನ ಕ್ಷಣಿಕ ಇಲ್ಲವೇ ಅಪೂರ್ಣನೋಟವಲ್ಲ. ಅದೊಂದು ಪೂರ್ಣ ದೃಷ್ಟಿ. ಪುನರ್ದೃಷ್ಟಿಯಿಂದ ನೋಡುವುದೂ ಪೂರ್ಣಾಭಿವ್ಯಕ್ತಿಯೂ ಹಠಾತ್ತಾಗಿ ನಡೆಯುವ ಒಂದು ಕಲಾಪ್ರಕ್ರಿಯೆ. ಇದನ್ನು ಕ್ರೋಚೆ ವಸ್ತುರೂಪ ಧಾರಣಕ್ರಿಯ (objectification) ಎನ್ನುತ್ತಾನೆ. ಕಲಾಸೃಷ್ಟಿ ರಹಸ್ಯವಡಗಿರುವುದು ಈ ವಸ್ತು ರೂಪಧಾರಣ ಕ್ರಿಯೆಯಲ್ಲಿ. ಇಲ್ಲಿಯವರೆಗೆ ಸುಪ್ತಚೇತನದ ವೈಯಕ್ತಿಕ ಸಂವೇದನೆಯೇ ಕಲಾನಿರ್ಮಾಣದಲ್ಲಿ ರೂಪಧಾರಣೆಮಾಡಿ ವ್ಯಕ್ತ್ಯತೀತವಾಗುತ್ತದೆ. ಈ ಕ್ರಿಯೆಯನ್ನು 'ನಿಸ್ಸಂಗ ಪರಿಭಾವನೆ' ಎಂದು ವರ್ಣಿಸಿದ ಕಾಂಟ್‌ನ ಅಭಿಮತವನ್ನು ಕ್ರೋಚೇನ ವಿಚಾರವು ಹೋಲುತ್ತದೆ. ಇಲ್ಲಿ ಅವಶ್ಯಕವಾಗಿ ಗಮನಿಸಬೇಕಾದ ಒಂದು ಅಂಶವೆಂದರೆ ಈ ಕಲಾಭಿವ್ಯಕ್ತಿ ನಡೆಯುವುದು ಕಲಾವಿಧನ ಚಿತ್ತ ಭಿತ್ತಿಯ ಮೇಲೆ. ಆದ್ದರಿಂದ ಅದು ಸಂಪೂರ್ಣವಾಗಿ ಆಂತರಿಕವಾದುದು ಎನ್ನುವುದು. ಪ್ರತಿಭಾನವೇ ಕಲಾಸೃಷ್ಟಿಯ ಮೊದಲು ಹಾಗೂ ಕೊನೆ.

## ದ್ವಿತೀಯ ಹಂತದ ಬಹಿಃಕರಣಕ್ರಿಯೆ :

ಕಲಾವಿದನು ತನ್ನ ಅಂತಃಕರಣದಲ್ಲಿ ಅಭಿವ್ಯಕ್ತಗೊಂಡುದನ್ನು ಪುನಃ ಶಬ್ದ, ಸಂಗೀತ, ವರ್ಣವಿನ್ಯಾಸ ಮೊದಲಾದ ಬಾಹ್ಯ ಮಾಧ್ಯಮಗಳ ಮೂಲಕ ಬಹಿರಂಗಕ್ಕೆ ತರಲು ಪ್ರಯತ್ನಿಸುತ್ತಾನೆ. ಮಧ್ಯಮಗಳ ಮೂಲಕ ನಡೆಯುವ ಈ ಅಭಿವ್ಯಕ್ತಿ ಎರಡನೆಯ ಹಂತದ್ದು. ಇದನ್ನು ಅವನು ಬಹಿಃಕರಣ ಕ್ರಿಯೆ (externalization) ಎಂದು ಕರೆಯುತ್ತಾನೆ. ಕಲೆಯದೃಷ್ಟಿಯಿಂದ ಇದು ಗೌಣ. ಏಕೆಂದರೆ ಇದು ಉದ್ದೇಶ ಪೂರ್ವಕವಾಗಿ ನಡೆಯುವ ವ್ಯಾವಹಾರಿಕ ಕ್ರಿಯೆ[3] ಇದು ಪ್ರತಿಭಾನವನ್ನು ಅನುಸರಿ

---

3. —a merely practicle or willed activity which may not follow on the internal and involuntary activity of Intuition-Expression. —quoted from Literary Criticism— A Short History P. 502

ಪದೆಯೂ ಇರಬಹುದು. ಆದ್ದರಿಂದ ಬಹಿರಂಗದ ಕಲಾಕೃತಿ– ಅದು ಕಾವ್ಯವೇ ಆಗಿರಲಿ, ಶಿಲ್ಪಿ ಅಥವಾ ರೇಖಾಚಿತ್ರವಾಗಿರಲಿ ಇಲ್ಲವೆ ಸಂಗೀತವಾಗಿರಲಿ–ಸಹೃದಯದಲ್ಲಿ ಕಲಾವಿದನ ಆಂತರಿಕ ಅಭಿವ್ಯಕ್ತಿಯನ್ನು ಪ್ರೇರಿಸಿ ರಸಾನುಭವಕ್ಕೆ ಅನುವುಮಾಡುವ ಬಾಹ್ಯಪ್ರಚೋದಕ ಮಾತ್ರ. ಬಹಿಃಕರಣ ಕ್ರಿಯೆಯಲ್ಲಿ ಕವಿ ಪ್ರಜ್ಞಾಪೂರ್ವಕವಾಗಿ ಕಲಾತಂತ್ರವನ್ನು ಬಳಸುತ್ತಾನೆ. ಆದ್ದರಿಂದ ತಂತ್ರವೆನ್ನುವುದು ಕಲಾನಿರ್ಮಾಣದ ಅತ್ಯವಶ್ಯಕವಾದ ಅಂಗವಲ್ಲವೆಂದು ಸಾರುತ್ತಾನೆ.

## ಸರಳ, ಸಾಮಾನ್ಯ ಪ್ರತಿಭಾನ–ಕಲಾತ್ಮಕ ಪ್ರತಿಭಾನ:

'ಪ್ರತಿಭಾನ-ಅಭಿವ್ಯಕ್ತಿ' ಯೆನ್ನುವುದು ಒಂದು ಕಲಾಸಿದ್ಧಾಂತವೆನ್ನುವುದಕ್ಕಿಂತ ಅದೊಂದು ಜ್ಞಾನಸಿದ್ಧಾಂತವೆಂದು ವರ್ಣಿಸುವುದು ಹೆಚ್ಚು ಸೂಕ್ತವೆಂದು ವಿದ್ವಾಂಸರು ಅಭಿಪ್ರಾಯಪಟ್ಟಿರುವುದು ಸೂಕ್ತವಾಗಿದೆ. ಅಭಿದಾನ–ಅಭಿವ್ಯಕ್ತಿಯ ಯಶಸ್ಸು ಹಾಗೂ ಪೂರ್ಣತೆ ಕ್ರೋಚೆ ಸಿದ್ಧಾಂತದ ಕೇಂದ್ರಸತ್ಯವೆಂದು ಈಗಾಗಲೇ ವಿವರಿಸಲಾಗಿದೆ. ನಿಷ್ಕ್ರಿಯಸಂವೇದನೆ (passive sensation) ಯಲ್ಲಿಯ ಗೊಂದಲವನ್ನು ನಿವಾರಿಸಲು ಪ್ರತಿಭಾನ ಅಭಿವ್ಯಕ್ತಿ ಅದನ್ನು ವಸ್ತುರೂಪಕ್ಕೆ ತರುತ್ತದೆ. ಈ ರೀತಿಯ ವಸ್ತುರೂಪ ಕೊಡುವ ಪ್ರಕ್ರಿಯೆ ಎಂದರೆ ಅಭಿವ್ಯಕ್ತಿ ಯಶಸ್ವಿಯಾದರೆ ಸೌಂದರ್ಯವು ಗೋಚು ಸುತ್ತದೆ. ಅಯಶಸ್ವಿಯಾದರೆ ಅದು ಕೇವಲ ವ್ಯಾವಹಾರಿಕ ಅನುಭವವಾಗಿಯೇ ಉಳಿಯು ತ್ತದೆ. ಸೌಂದರ್ಯನಿರ್ಮಾಣವು ಅಭಿವ್ಯಕ್ತಿಯ ಸಂಪೂರ್ಣತೆ, ಸುಸಂಬದ್ಧತೆ, ಸಮನ್ವ-ಯುವನ್ನೇ ಅವಲಂಭಿಸಿದೆ. 'ಕುರೂಪತೆ'— ಎನ್ನುವುದು ಸಮನ್ವಯದಲ್ಲಿ ತೋರುವ ಬಿರುಕಲ್ಲದೆ ಬೇರೇನೂ ಅಲ್ಲವೆಂದು ಅವನ ಅಭಿಪ್ರಾಯ.

ಪ್ರತಿಭಾನವೆನ್ನುವುದು ಕಲಾವಿದನ ದರ್ಶನ ಇಲ್ಲವೆ ಪ್ರತಿಭಾದೃಷ್ಟಿ ಎನ್ನುವುದನ್ನು ಈಗಾಗಲೇ ನೋಡಲಾಗಿದೆ. ಇದು ವ್ಯವಹಾರಿಕ ದೃಷ್ಟಿಯಿಂದ ತತ್ವತಃ ಭಿನ್ನವಲ್ಲ-ದಿದ್ದರೂ ವಾಸ್ತವಿಕವಾಗಿ ಅವು ಭಿನ್ನವಾಗಿವೆ. ನಮ್ಮ ಅರಿವಿಗೆ ಬರುವ ಜಗತ್ತು ಸೀಮಿತ ಪರಿಧಿಯದು. ಪ್ರತಿಭಾನವು ಹಂತಹಂತವಾಗಿ ವಸ್ತುವನ್ನು ಅರಿತು ಅಭಿವ್ಯಕ್ತಿಗೆ ತರುತ್ತ ಸಾಗುವುದು. ಜೀವನದಲ್ಲಿ ಸಾಮಾನ್ಯವಾಗಿ ನಡೆಯುವುದೇ ಹೀಗೆ. ನಮ್ಮ ವಾಸ್ತವಿಕ ಜೀವನದ ಕ್ರಿಯೆಗಳಿಗೆ ಇದೇ ಆಧಾರ. ವಸ್ತುಗಳ ಸೀಮಿತ ಜ್ಞಾನವನ್ನು ಕೊಡುವ ಕ್ರಿಯೆ-ಯನ್ನು ಕ್ರೋಚೆ ಸರಳ ಪ್ರತಿಭಾನ (Simple Intuition) ಎಂದು ಕರೆಯುತ್ತಾನೆ. ಇದು ಮಾನವಮಾತ್ರರಿಗೆಲ್ಲ ಸಾಮಾನ್ಯಕ್ರಿಯೆ. ಇದರಿಂದ ಮೂಡುವ ಚಿತ್ರಗಳು ಅಪೂರ್ಣ ಹಾಗೂ ಅಸ್ಪಷ್ಟ. ಅದು ವಸ್ತುವಿಗೆ ಅಂಟಿಸಿದ ಲೇಬಲ್ ಅಥವಾ ಪುಸ್ತಕದ ಮೊದಲು ಬರುವ ಪರಿವಿಡಿಯಿದ್ದಂತೆ. ಪ್ರತಿಭಾನವು ಸರಳತೆಯಿಂದ ಕಲಾತ್ಮಕ ಸಂಕೀರ್ಣತೆಯತ್ತ ವಿಕಾಸಗೊಳ್ಳಲು ವಸ್ತುಗಳ ಸೂಕ್ಷ್ಮಸ್ವರೂಪವನ್ನು ಅರಿಯುವ ದಾರ್ಶನಿಕತೆ ಸಾಧ್ಯವಾಗು

ತ್ತದೆ. ಆ ಹಂತದಲ್ಲಿ ವಸ್ತುವಿನ ಲೇಬಲ್, ಪುಸ್ತಕದ ಪರಿವಿಡಿ ಇಷ್ಟೇ ಸಾಕಾಗದು. ಲೇಬಲ್‌ಗೆ ಬದಲಾಗಿ ವಸ್ತುವನ್ನು ಅರಿಯುವ, ಪರಿವಿಡಿಗೆ ಪ್ರತಿಯಾಗಿ ಪುಸ್ತಕವನ್ನೇ ಓದಿ ಆಸ್ವಾದಿಸುವ ಉತ್ಕೃಷ್ಟ ಹಾಗೂ ಶ್ರೀಮಂತ ದರ್ಶನವು ಸ್ಫುರಿಸುವುದು. ಪ್ರತಿಭಾನ ಪ್ರಕ್ರಿಯೆ ನಡೆದಾಗ ಸಾಮಾನ್ಯ ದರ್ಶನವು ಹಿಂದೆಗೆದು ಪೂರ್ಣದರ್ಶನದ ಪೂರ್ಣಾಭಿವ್ಯಕ್ತಿಗೆ ದಾರಿಮಾಡಿಕೊಡುತ್ತದೆ. ಇಂತಹ ಕ್ಷಣದಲ್ಲಿ ಆವಿರ್ಭವಿಸುವ ರೂಪವು ನಿಜವಾಗಿಯೂ ಕಲಾತ್ಮಕವಾಗುತ್ತದೆ.

ಕ್ರೋಚೇನ ಸಿದ್ಧಾಂತದಲ್ಲಿ ಒಂದು ವಸ್ತುವಿಗೆ ಸಾಮಾನ್ಯ ರೂಪ ಹಾಗೂ ವಿಶೇಷ ರೂಪಗಳಿರುತ್ತವೆ ಎಂಬುದನ್ನು ಮೇಲೆ ವಿವರಿಸಲಾಯಿತು. ಇವೆರಡೂ ರೂಪಗಳು ಸುಂದರವಾದವುಗಳೇ. ಆದರೂ ಅವುಗಳಲ್ಲಿ ಮೂಡಿದ ಸೌಂದರ್ಯವು ಮೊತ್ತದಲ್ಲಿ ಭಿನ್ನವಾದದ್ದು. "ನಿಸರ್ಗದ ಒಂದು ಕಲ್ಲಿಗೆ ಅದರದೇ ರೂಪ (form) ಇದೆ. ಅದೇ ಕಲ್ಲಿನ ಮೇಲೆ ಕಲಾತ್ಮಕವಾಗಿ ಕೆತ್ತಿದ ಮೂರ್ತಿಶಿಲ್ಪವು ಅದರ ಸೌಂದರ್ಯವನ್ನು ಇನ್ನಷ್ಟು ಪ್ರಜ್ವಲಿಸುವಂತೆ ಮಾಡುತ್ತದೆ"– ಎಂಬ ಗ್ರೀಕ ಅನುಭಾನಿ ಪ್ಲಾಟಿನಸ್‌ನ ಉಭಯರೂಪ (Double form) ಸಿದ್ಧಾಂತವು ಕ್ರೋಚೇನ ಮೇಲೆ ಪ್ರಭಾವ ಬೀರಿದೆ. ಕಲ್ಲಿನ ಸ್ವಾಭಾವಿಕ ರೂಪ ಹಾಗೂ ಅದರ ಮೇಲೆ ಕಂಡರಿಸಲಾದ ಮೂರ್ತಿಶಿಲ್ಪದ ರೂಪ ಇವು ತಾತ್ವಿಕವಾಗಿ ಭಿನ್ನವಾದವುಗಳಲ್ಲ. ಒಂದು ವಸ್ತುವಿನ ಮೂಲಸೌಂದರ್ಯ ಹಾಗೂ ಕಲೆಯಿಂದ ಆವಿರ್ಭವಿಸುವ ವಿಶೇಷ ಸೌಂದರ್ಯಗಳಲ್ಲಿ ಇರುವುದು ಸಿದ್ಧ ಹಾಗೂ ಸಂಭಾವ್ಯಗಳ ವ್ಯತ್ಯಾಸ ಮಾತ್ರ. ಶ್ರೇಷ್ಠ ಕಲೆಯಲ್ಲಿಯೂ ಸೌಂದರ್ಯದ ತರ–ತಮಗಳನ್ನು ಕಾಣುವುದು ಸಾಧ್ಯವಿದೆ. ಆದ್ದರಿಂದ ಹಲಗೆಯ ಮೇಲೆ ಎಳೆದ ಗೆರೆಗಳ, ಇಲ್ಲವೆ ಸಾಮಾನ್ಯ ಪ್ರೇಮಪತ್ರದಲ್ಲಿ ಮೂಡಿದ ಸೌಂದರ್ಯ ಹಾಗೂ ಮಹೋನ್ನತ ಕಲಾಕೃತಿಯ ಸೌಂದರ್ಯದಲ್ಲಿ ಇರುವುದು ಸತ್ವದ ವ್ಯತ್ಯಾಸವಲ್ಲ; ಮೊತ್ತದ್ದು ಎನ್ನುತ್ತಾನೆ ಕ್ರೋಚೆ.

**ಸಾಹಿತ್ಯದ ಮಾಧ್ಯಮ ರೂಪುಗೊಳ್ಳುವ ಬಗೆ :**

ಸಾಹಿತ್ಯ ರಚನೆಯಲ್ಲಿ ಬಳಕೆಯಾಗುವ ಭಾಷೆ ಸರಳ ಸಾಮಾನ್ಯವಾಗಿರುವಂತೆ ಕ್ಲಿಷ್ಟ ಹಾಗೂ ಸಾಂಕೇತಿಕ ಕೂಡ ಆಗಿರುತ್ತವೆ. ಸಾಮಾನ್ಯಭಾಷೆಯಲ್ಲಿ ಬಳಕೆಗೊಳ್ಳುವ ಸಿದ್ಧರೂಪಗಳನ್ನು, ಪ್ರತಿಮೆ, ಸಂಕೇತಗಳನ್ನು ಅಭಿವ್ಯಕ್ತಿಗೆ ಒಳಪಡಿಸಿಕೊಳ್ಳುವಾಗ ಅವುಗಳನ್ನೂ ಮತ್ತೆ ಕರಗಿಸಿ ನವೀನವಾಗಿ ಎರಕಹೊಯ್ಯುತ್ತಾನೆ ಕವಿ. ಇದನ್ನು ಕ್ರೋಚೆ Demorphisation ಎಂದು ವರ್ಣಿಸುತ್ತಾನೆ. ಕಲಾಮಾಧ್ಯಮವೆನ್ನುವುದು ಕಲಾವಿದನ ಅನುಭವದ ಅನಂತತೆಯ ಅಂಗವಾಗಿದೆ. ಕವಿಯ ಅಭಿವ್ಯಕ್ತಿಯಲ್ಲಿ ಭಾಷೆ ಹೊಸ ಆಯಾಮವನ್ನು ಪಡೆಯುತ್ತದೆ :

He who conceives a tragedy puts into a crucible a great quantity, so to say of impressions, expressions themselves con-

ceived on other occasions, are fused to-gether with the new in a single mass, in the same way as we can cast into a melting furnace formless pieces of bronze and choicest statuettes. Those choicest statuettes must be melted just like pieces of bronze before there can be a statue. The old impressions must be reduced again to the level of impressions in order to be synthesized in a new single expression.

**ಲೋಕಾನುಭವ–ಕಲಾನುಭವ :**

ಕಲಾನುಭವದ ಅತ್ಯಂತ ಸಮರ್ಥ ಹಾಗೂ ಸುಸಂಬದ್ಧ ನಿರೂಪಣೆ ಅಭಿವ್ಯಕ್ತಿತತ್ತ್ವದ ಜೀಜಿತ್ಯಪೂರ್ಣತೆಗೆ ಸಾಕ್ಷಿಯಾಗಿದೆ. ಕಲಾಕೃತಿಗಳು ಸೌಂದರ್ಯಬೋಧೆಯೊಂದಿಗೆ ರಸಾನುಭವವನ್ನು ಉಂಟುಮಾಡುತ್ತವೆ ಎನ್ನುವುದು ಸರ್ವಸಾಮಾನ್ಯವಾಗಿ ಅಂಗೀಕೃತವಾದ ಸತ್ಯವಾಗಿದೆ. ಮಾನವಚೇತನದ ಪ್ರತಿಭಾನ, ಪರಿಕಲ್ಪನೆ, ಆರ್ಥಿಕ ಹಾಗೂ ನೈತಿಕ ಪ್ರಕ್ರಿಯೆಗಳನ್ನು ಪ್ರಚೋದಿಸುವುದು. 'ಸಂವೇದನೆ', ಇದಕ್ಕೆ ಅಂಗೀಕಾರಾರ್ಥಕ ಹಾಗೂ ನಿಷೇಧಾರ್ಥಕ ಮೈಗಳಿದ್ದು ಸುಖ ಹಾಗೂ ದುಃಖದ ಅನುಭವಗಳನ್ನು ಉಂಟುಮಾಡುತ್ತವೆ. ದೈನಂದಿನ ವ್ಯವಹಾರದಲ್ಲಿ ಸುಖ-ದುಃಖದ ಅನುಭವಗಳು ಈ ಸಂವೇದನೆಯಿಂದಲೇ ಸಂಜನಿಸುತ್ತವೆ. ಕಲಾನುಭವವು ಯಶಸ್ವಿಯಾದ ಪ್ರತಿಭಾನ– ಅಭಿವ್ಯಕ್ತಿಯಿಂದ ಆವಿರ್ಭವಿಸುವುದರಿಂದ ಅದು ಕೇವಲ ಆನಂದದಾಯಕವಾದ ಕಲಾಸಂವೇದನೆ. ಅದರಲ್ಲಿ ವೈಯಕ್ತಿಕ ಸಂವೇದನೆಗೆ ವಸ್ತುರೂಪಧಾರಣೆ (objectification) ನಡೆದು ವ್ಯಕ್ತ್ಯತೀತವಾಗುವುದನ್ನು ಈ ಹಿಂದೆಯೇ ವಿವರಿಸಲಾಗಿದೆ. ಆರ್ಥಿಕ ಹಾಗೂ ನೈತಿಕ ಕ್ರಿಯೆಗಳು ಸಂಪೂರ್ಣವಾಗಿ ವ್ಯಾವಹಾರಿಕ ಸ್ವರೂಪದವುಗಳಾದುದರಿಂದ ಅದರ ಪರಿಣಾಮ ಕೂಡ ಸುಖ-ದುಃಖ ರೂಪದ ವ್ಯಾವಹಾರಿಕ ಅನುಭವವಾಗುತ್ತದೆ. ವ್ಯಾವಹಾರಿಕ ಕ್ರಿಯೆಗಳನ್ನು ಪ್ರಚೋದಿಸುವ ಸಂವೇದನೆಯು ಅಶುದ್ಧ ಹಾಗೂ ಜಡ ಸ್ವರೂಪವಾದರೆ ಕಲಾಪ್ರಕ್ರಿಯೆಯನ್ನು ಪ್ರೇರಿಸುವುದು ಶುದ್ಧ ಹಾಗೂ ಚೈತನ್ಯಪೂರ್ಣ. ಈ ಸಂದರ್ಭದಲ್ಲಿ ಕ್ರೋಚೇನ ಕೆಳಗಿನ ಅವತರಣಿಕೆ ಅರ್ಥಪೂರ್ಣವಾಗಿದೆ :

'What are these apparent or manifested feelings, but objectified, intuited expressed ? And it is natural that they do not trouble and afflict as passionately as those of real life, because those were matter, these are form and activity; those true and proper feelings, these intuitions and expressions."

ಇದನ್ನು ಒಂದು ಉದಾಹರಣೆಯಿಂದ ವಿವರಿಸಬಹುದು. ಭಾವಗೀತವನ್ನು ತೆಗೆದುಕೊಂಡರೆ ಅದರಲ್ಲಿ ಹಸಿ ಸಂವೇದನೆಯೇ ಪ್ರಕಟವಾಗುವದಿಲ್ಲ. ಅದೊಂದು ಸಂವೇದನಾತ್ಮಕ ಕೂಗು ಅಥವಾ ನರಳಿಕೆಯಲ್ಲ. ಅದರಲ್ಲಿ ಭಾವನೆ ಸಂವೇದನೆಗಳು

ವಸ್ತುನಿಷ್ಠರೂಪ ತಳೆದು ಅಭಿವ್ಯಕ್ತವಾಗುತ್ತವೆ. ಕಲಾ ನಿರ್ಮಾಣದಲ್ಲಿ ಪ್ರವರ್ತಿಸುವ ಸಂವೇದನೆಯಲ್ಲಿ ಸಮಸ್ತಮಾನವಕೋಟಿಯ ಆಶೋತ್ತರಗಳು ಅಭಿವ್ಯಕ್ತಗೊಳ್ಳುವುದರಿಂದ ಕಲೆಯ ಪ್ರಭಾವವೂ ಸಾರ್ವತ್ರಿಕವಾಗುತ್ತದೆ.

**ವಿಮರ್ಶಕ; ವಿಮರ್ಶೆಗಳ ಸ್ಥಾನಮಾನ :**

ಕಲಾನಿರ್ಮಾಣವೆನ್ನುವುದು ಸಂಪೂರ್ಣವಾಗಿ ಕಲಾವಿದನ ಆಂತರಿಕ ಕ್ರಿಯೆ. ಬಹಿರಂಗದ ಕೃತಿ ಕಲಾಕೃತಿಯೇ ಅಲ್ಲ– ಕ್ರೋಚೇನ ಈ ಹೇಳಿಕೆ ವಿಮರ್ಶಕ ಹಾಗೂ ವಿಮರ್ಶೆಯ ಅಸ್ತಿತ್ವವನ್ನೇ ಅಲ್ಲಗಳೆಯುತ್ತದೆ. "ಕ್ರೋಚೇನ ಕವಿ ಯಾವ ಭಾಷೆಯನ್ನು ಆಡಲಾರ, ಹೆಚ್ಚೆಂದರೆ ಅವನದು ಸ್ವಗತ ಭಾಷಣ" ಎಂದು ಮುಂತಾಗಿ ಅಭಿವ್ಯಕ್ತಿ ಸಿದ್ಧಾಂತಕ್ಕೆ ಸ್ಕಾಟಜೇಮ್ಸ್, ಕಟುವಾದ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾನೆ. ಇದು ಕ್ರೋಚೇನ ಸಿದ್ಧಾಂತವನ್ನು ಚನ್ನಾಗಿ ಅರಿಯದೆ ಮಾಡಿದ ವಿಮರ್ಶೆಯಾಗಿದೆ.

ಕಲಾಸೃಸ್ಟಿ ಕಲಾವಿದನ ಅಂತರ್ದರ್ಶನದ ಪ್ರದೀಪ್ತಾವಸ್ಥೆಯಲ್ಲಿ ನಡೆಯುವ ಅಭಿವ್ಯಕ್ತಿಯೆಂದು ಕ್ರೋಚೆ-ಸಿದ್ಧಾಂತ ಪಡಿಸಿದ್ದರಿಂದ ವಸ್ತುವಿವರಣಾತ್ಮಕ ವಿಮರ್ಶೆ (Didactic Criticism) ಗೆ ಅವನು ವಿರೋಧಿಯಾಗಿದ್ದಾನೆ. ಪ್ರತಿಯೊಂದು ಕಲಾಭಿವ್ಯಕ್ತಿ ಕಲಾವಿದನ ಅನುಭವದ ಅವಿಭಾಜ್ಯ ಅಂಗವಾಗಿದ್ದು ತನಗೆ ಯೊಗ್ಯವಾದ ನಿಯಮಗಳನ್ನು ಗರ್ಭೀಕರಿಸಿಕೊಂಡಿರುತ್ತದೆ. ಈಗಾಗಲೇ ಸಿದ್ಧಪಡಿಸಿದ ವಿರ್ಮಶಕ ತತ್ವಗಳ ಮಾನದಂಡದಿಂದ ಅದನ್ನು ಅಳೆಯುವದು ಯೋಗ್ಯವಲ್ಲ. ವಿಶ್ಲೇಷಣೆ, ವರ್ಗೀಕರಣ, ವ್ಯಾಕರಣ ಹಾಗೂ ಛಂದೋನಿಯಮಗಳು, ವಸ್ತು ಹಾಗೂ ರೂಪದ ಪರಸ್ಪರ ಸಂಬಂಧ ಮುಂತಾದ ವೈಚಾರಿಕ ನೆಲೆಯ ವಿಮೋಚನೆ ಕ್ರೋಚೇನ ಸಿದ್ಧಾಂತಕ್ಕೆ ಸಮ್ಮತವಾದುದೇ ಅಲ್ಲ. ಬಹಿರಂಗದ ಶಬ್ದರೂಪದ ಕಾವ್ಯವೇ ಆಗಲಿ,– ರೇಖಾವಿನ್ಯಾಸದ ಚಿತ್ರವಾಗಲಿ, ಶಿಲ್ಪ ಕೃತಿಯಾಗಲಿ ಕ್ರೋಚೇನ ದೃಷ್ಟಿಯಲ್ಲಿ ಕಲಾವಿದನು ತನ್ನ ಪ್ರತಿಭೆಯ ಪ್ರದೀಪ್ತಾವಸ್ಥೆಯ ನೆನಪಿಗೆ ಸಹಾಯವಾಗಲೆಂದು ಮಾಡಿಟ್ಟುಕೊಂಡ ಸ್ಮೃತಿ-ಸಹಾಯಕಗಳು (Aids to memory) ಮಾತ್ರ. ಬಾಹ್ಯಕೃತಿ ಏನಿದ್ದರೂ ಅವನ ಮಾನಸಕೃತಿಯನ್ನು ಪ್ರೇರಿಸುವ ಬಾಹ್ಯಪ್ರಚೋದಕ(Physical Stimulant). ಬಾಹ್ಯಕೃತಿಯು ಅವನ ಅಂತರ್ದರ್ಶನದ ಸ್ವರೂಪವನ್ನು ಪುನರ್ರಚಿಸಿಕೊಂಡು ಆಸ್ವಾದಿಸಲು ಸಹಾಯಕವಾಗುತ್ತದೆ. ಡಾಂಟೆಯನ್ನು ಬೆಲೆಗಟ್ಟ ಬೇಕಾದರೆ ವಿರ್ಮಶಕನು ಅವನ ಎತ್ತರಕ್ಕೆ ಏರಬೇಕಾಗುತ್ತದೆ ಎಂಬ ಅವನ ಹೇಳಿಕೆ ವಿಮರ್ಶಕನಿಗೆ ಒಡ್ಡಿದ ಸವಾಲಾದರೂ ಅರ್ಥಪೂರ್ಣವಾಗಿದೆ. ವಿರ್ಮಶಕರು ತನ್ನ ಕಲಾಪ್ರಜ್ಞೆ, ಇತಿಹಾಸದ ಪರಿಜ್ಞಾನ ಹಾಗೂ ಪಳಗಿದ ಕಲ್ಪಕತೆಗಳಿಂದ ಕಲಾವಿದನ ಚಿತ್ತಭಿತ್ತಿಯ ಮೇಲೆ ಅಭಿವ್ಯಕ್ತಿಗೊಂಡ ಕೃತಿಯ ಸೌಂದರ್ಯವನ್ನು ಅರಿಯಲು ಸಮರ್ಥನಾಗುತ್ತಾನೆ ಎನ್ನುವಲ್ಲಿ ಅವನು ವಿಮರ್ಶಕರ ಅಸ್ತಿತ್ವವನ್ನು ಸಮರ್ಥನೆ ಮಾಡುವುದು ಸುಸ್ಪಷ್ಟವಾಗಿದೆ.

# ಜನಪದ ಕವಿ ಚರಿತೆ

● ಎಂ. ಎಸ್. ಲಕ್ಷ್ಮೆ

### ೨೧. ಕಂಪ್ಲಿಯ ಕಾಳಗಿ ವೀರಣ್ಣ : (೧೮೭೦-೧೯೧೦)

ಬಳ್ಳಾರಿಜಿಲ್ಲೆ ಬಯಲಾಟಗಳಿಗೆ ತವರೂರು. ಈ ಜಿಲ್ಲೆಯ ಕಂಪ್ಲಿ ಗ್ರಾಮದ ಕಾಳಗಿ ವೀರಣ್ಣ ಬಹಳಷ್ಟು ಬಯಲಾಟದ ಕಥೆಗಳನ್ನು ರಚಿಸಿದ ಜಾನಪದ ಕವಿ. ಈತನು ಸ್ವತಃ ಪಾತ್ರ ಹಾಕುತ್ತಿದ್ದನು. ಈತನೇ ರಚಿಸಿದ 'ಕನಕಾಂಗಿ ಕಲ್ಯಾಣ' ಬಯಲಾಟ ಮೂರು ದಿನ ನಡೆಯುತ್ತಂತೆ. ಈ ಆಟದಲ್ಲಿ ವೀರಣ್ಣನೂ ವೇಷತೊಟ್ಟು ಕುಣಿಯುತ್ತಿದ್ದನೆಂದು ಜನವದಂತಿ. ಕನಕಾಂಗಿ ಕಲ್ಯಾಣವಲ್ಲದೆ ವೀರಣ್ಣನು ಸುಭದ್ರಾ ಕಲ್ಯಾಣ. ಕೀಚಕವಧೆ, ವೀರ ಸಂಗಮನ ಕಥೆ, ಕರಿರಾಮನ ಕಥೆ, ಭಸ್ಮಾಸುರ, ಚಿತ್ರ ಶೇಖರ-ಸೋಮಶೇಖರ ಮೊದಲಾದ ಹತ್ತಿಪ್ಪತ್ತು ಆಟಗಳನ್ನು ಬರೆದಿದ್ದಾನೆ. ಬಳ್ಳಾರಿ, ವಿಜಾಪುರ, ಬೆಳಗಾವಿ, ಧಾರವಾಡ, ಕಲಬುರಗಿ, ರಾಯಚೂರ ಜಿಲ್ಲೆಗಳಲ್ಲೆಲ್ಲಾ ಈತನ ಆಟಗಳನ್ನು ಈಗಲೂ ಆಡುತ್ತಿರುವುದುಂಟು.

ಈತನ 'ಕೀಚಕ ವಧೆ' ಎಂಬ ಕಥೆಯನ್ನು ಕ್ರಿ. ಸು. ೧೯೫೦ರಲ್ಲಿ ಕಿನ್ನಾಳ ಕೊಟ್ರಪ್ಪ. ಸವಲಿ ಪಂಪಣ್ಣ ಮೊದಲಾದವರು ಆಡಿತೋರಿಸಿದ್ದರೆಂದು ಜೋಳದರಾಶಿ ದೊಡ್ಡನಗೌಡರ ಬಳಿ ಇದ್ದ ಹಸ್ತಪ್ರತಿಯೊಂದರಲ್ಲಿ ಉಲ್ಲೇಖವಿದೆ. ಇದರಿಂದಾಗಿ ಈ ಕವಿ ಅದಕ್ಕೂ ಮೊದಲು ೨೦-೩೦ ವರುಷಗಳ ಹಿಂದೆ ಹುಟ್ಟಿರಬೇಕು ಎಂದು ಊಹಿಸಬಹುದಾಗಿದೆ. ೧೯೭೦ರಲ್ಲಿ ಈತನು ವೇಷಹಾಕಿ ಕುಣಿಯುತ್ತಿದ್ದನೆಂದೂ ಜನ ಹೇಳುತ್ತಾರೆ. ೧೯೦೫ರಲ್ಲೂ ಈತನ ಕಥೆಗಳನ್ನು ಆಡಿತೋರಿಸುತ್ತಿದ್ದರೆಂದೂ ಆಧಾರ ಗಳಿವೆ. ಆಗ ಕವಿಯ ಹತ್ತರವೇ ಹೋಗಿ ಕೆಲ ಹಾಡು ತಂದಿದ್ದರೆಂದೂ ಜನರ ದಟ್ಟ ತಿಳುವಳಿಕೆ. ಹೀಗಾಗಿ ಕವಿ ಬಹುಶಃ ೧೮೭೦–೧೯೧೦ರ ಅವಧಿಯಲ್ಲಿ ಬಾಳಿ ಬದುಕಿರ-ಬೇಕೆಂದು ಹೇಳ ಬಹುದು.

ಕಾಳಗಿ ವೀರಣ್ಣನಲ್ಲದೆ ಬಳ್ಳಾರಿ ಜಿಲ್ಲೆಯ ಕುಡುತನಿ ನರಸಿಂಗರಾಯರು, ರಾಮ-ಸಾಗರದ ವೆಂಕಣ್ಣ, ಶಿಡಗಿನ ಮಳೆ ಬಿಳಿಸಿದ್ದಪ್ಪ, ಬಳ್ಳಾರಿಯ ಚೆನ್ನವೀರಯ್ಯ,

ಯೋಳುಬೆಂಚಿಯ ಏನಗಿ ಬಸಣ್ಣ ಹಾಗೂ ಚೆನವೀರಯ್ಯ ಶಾಸ್ತ್ರಿ, ಕಾಶಿ ಭುಜಂಗರಾಯ, ಎಮ್ಮಿಗನೂರ ಸಾಲಿ ವೆಂಕಣ್ಣ, ಹರಪನಹಳ್ಳಿಯ ಭೀಮಪ್ಪ ಮೊದಲಾದವರು ನೂರಾರು ಬಯಲಾಟದ ಕಥೆ ಹಾಗೂ ಹಾಡುಗಳನ್ನು ರಚಿಸಿ ಕೀರ್ತಿಶೇಷರಾಗಿದ್ದಾರೆ.

'ಪೊಡವಿಯೊಳು ಕಂಪಲಿಯ ಪುರದೊಳು ಕಡು ಮೃದೂಕ್ತಿಗಳಿಂದ ರಚಿಸಿದ ನೆಡವಿಡದೆ ಕೇಳ್ ಕಾಳ್ಗಿಯ ನಾಗಪ್ಪನ ಸುಪುತ್ರ' ಎಂಬ ಕನಕಾಂಗಿ ಕಲ್ಯಾಣದ ಬಯ ಲಾಟದ ಕಥೆಯಲ್ಲಿ ಬರುವ ಉಲ್ಲೇಖದಿಂದ ವೀರಣ್ಣನ ತಂದೆ ನಾಗಪ್ಪ ಎಂದೂ ತಿಳಿದು ಬರುತ್ತದೆ. ಕಲಬುರಗಿ ಜಿಲ್ಲೆಯ ಮಡಿಹಾಳ ಗ್ರಾಮದ ಕೃಷ್ಣಾಜಿ ಕುಲಕರ್ಣಿ (೧೮೭೫) ಎಂಬವರೂ 'ಕನಕಾಂಗಿ ಕಲ್ಯಾಣ' ಬಯಲಾಟವೊಂದನ್ನು ರಚಿಸಿದ್ದ ವಿಷಯವೂ ತಿಳಿದು ಬರುತ್ತದೆ.

## ೭೨. ಕುಡುತನಿ ನರಸಿಂಗರಾಯ : (೧೮೫೦–೧೯೨೦)

ಬಳ್ಳಾರಿ ಜಿಲ್ಲೆಯ ನರಸಿಂಗರಾಯ ಬರೆದ ಬಯಲಾಟಗಳೂ ಕೂಡ ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿರುತ್ತವೆ. 'ಕುಡುತನಿ ಭೀಮೇಶ' ಎಂಬುದು ಈತನ ಹಾಡುಗಳಲ್ಲಿ ಬರುವ ಮುದ್ರಿಕೆಯಾಡಿರುತ್ತದೆ. ಸಾರಂಗಧರ, ಕೀಚಕನ ಕಥೆ, ದುಶ್ಯಾಸನನ ಕಥೆ – ಮೊದಲಾದವು ಈತನ ಪ್ರಮುಖ ಬಯಲಾಟಗಳೆಂದು ತಿಳಿದು ಬರುತ್ತದೆ. ದುಶ್ಯಾಸನ ಕಥೆಯಂತೂ ಇವುಗಳಲ್ಲೆಲ್ಲ ಪ್ರಸಿದ್ಧೀ ಪಡೆದ ಆಟ ವಾಗಿರುತ್ತದೆ.

೧೮೯೫ರಲ್ಲಿ ಬಡಿಗಾರು ಮರೆಪ್ಪ ಎಂಬವನು ಈ ನರಸಿಂಗರಾಯನ ಪರಮ ಶಿಷ್ಯನಾಗಿದ್ದನೆಂದು ತಿಳಿದು ಬರುತ್ತದೆ. ಮರೆಪ್ಪ 'ಗೊಂಬೆಯಾಟ' ಆಡಿಸುವಲ್ಲಿ ಆಗಿನ ಕಾಲದಲ್ಲಿ ಕರ್ನಾಟಕದಲ್ಲೆಲ್ಲಾ ಪ್ರಸಿದ್ಧಿ ಪಡೆದಿದ್ದನಂತೆ. ಈ ಮರೆಪ್ಪನಿಗೆ ಗುರುವಾಗಿದ್ದ ನರಸಿಂಗರಾಯ ಬಹುಶಃ ಶಿಷ್ಯನಿಗಿಂತ ದೊಡ್ಡವನಿರಲೇಬೇಕು. ಅಂದರೆ ಶಿಷ್ಯನಿಗಿಂತಲೂ ಕನಿಷ್ಠ ಹತ್ತಿಪ್ಪತ್ತು ವರುಷ ಹಿರಿಯವನಾದರೂ ಆಗಿರಬೇಕು. ಅಂದರೆ ಕವಿ ಬಹುಶಃ ೧೮೫೦–೧೯೨೦ರ ಗಡವಿನಲ್ಲಿ ಜೀವಿಸಿರಬೇಕೆಂದು ತರ್ಕ ಮಾಡಬಹು- ದಾಗಿದೆ. ಉತ್ತರ ಕರ್ನಾಟಕದ ಬಹುತೇಕ ಆಟಗಳಲ್ಲಿ ಹಾಡುವ ಸ್ತುತಿಪದ ಈತನದೇ ಆಗಿದೆ. 'ಕುಡುತನಿಯ ಒಡೆಯ ಭೀಮೇಶ' ಎಂಬ ಮುದ್ರಿಕೆ ಬರುವುದನ್ನು ಗುರುತಿಸ ಬಹುದಾಗಿದೆ.

## ೭೩. ನಿಡಗುಂದಿಯ ಸಂಗನಬಸವಪ್ಪ : (೧೮೬೫–೧೯೪೫)

ನಿಡಗುಂದಿ ವಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಒಂದು ಹಳ್ಳಿ. ಸು. ೧೮೬೫ರಲ್ಲಿ ಸುಸಂಸ್ಕೃತ ಮನೆತನದ ಶಿವಬಸಪ್ಪ ಬಾಗೇವಾಡಿ ಅವರ ಮಗನಾಗಿ

ಸಂಗನಬಸವಪ್ಪ ಜನಿಸಿದ್ದುದು ತಿಳಿದುಬರುತ್ತದೆ. ತಕ್ಕಮಟ್ಟಿಗೆ ಓದುಬರಹ ಬಲ್ಲ ಸಂಗನಬಸವಪ್ಪ ಒಕ್ಕಲುತನ ಮಾಡುತ್ತಿದ್ದನು. ಸರಾಗವಾಗಿ ಹಳ್ಳಿಯ ಹಾಡುಗಳನ್ನು ಹಾಡುತ್ತಿದ್ದನು. ಲಾವಣಿ, ಹೋಳಿಪದ, ಹಾಗೂ ಕೆಲ ಬಯಲಾಟಗಳನ್ನು ಕೂಡ ಸಂಗನಬಸವಪ್ಪ ರಚಿಸಿದ್ದಾನೆಂದು ತಿಳಿದು ಬರುತ್ತದೆ. ಲಿಂಗವಂತನಾದ ಕವಿಗೆ ವೀರಶೈವ ಧರ್ಮದ ತತ್ವಗಳನ್ನು ತಿಳಿಯುವಲ್ಲಿ ವಿಶೇಷವಾದ ಆಸಕ್ತಿ.

'ಶ್ರೀ ಗೌರೀಶವಾಸ ನಿಡಗುಂದಿಪೂರಾ' 'ನಿಡಗುಂದ ಪುರವಾಸಿ ಒಡೆಯ ಶ್ರೀ ಗೌರೀಶ' ಎನ್ನುವ ಮುದ್ರಿಕೆ ಈ ಕವಿಯದು. 'ಶಿರಿಯಾಳನ ಕಥೆ' ಎನ್ನುವ ಬಯಲಾಟ ಮತ್ತು 'ಚಂದ್ರಗುತ್ತಿ ಅರಸನ' ಹಾಗೂ ಒಕ್ಕಲಿಗನ ಪದಗಳು ಅತ್ಯಂತ ಪ್ರಸಿದ್ಧೀ ಪಡೆದಿವೆ. ಕವಿಗೆ ರಾಗದ ಮಾಹಿತಿಯೂ ಸಾಕಷ್ಟು ಇತ್ತು ಎಂದು ತಿಳಿದು ಬರುತ್ತದೆ. ರಾಗದ ಮೇಲೆಯೆ ಪದ ಕಟ್ಟಿದ್ದಾನೆ. 'ಒಕ್ಕಲಗೇರ ಪದ' ದಲ್ಲಿಯ ಕೆಲ ಸಾಲುಗಳನ್ನು ಇಲ್ಲಿ ಓದಬಹುದು.

" ವಕ್ಕಲಗೇರ ಸೋದೆಶನ ಸೋಸಿ ನಾನು ಹೇಳ್ತಿನಿ ।
ಧ್ಯಾಸಮಾಡಿ ಕೇಳಿರಿ । ಹಿರಿಯರಾ ।
ಬಾಳ್‌ಮೋಸಮಾಡಿ ಒಕ್ಕಲತನಾ ಮಾಡವರಾ ॥

ಸಿಕ್ಕರ ಬಾಳ ಫಾಶಿ ಮಾಡ್ತಾರ ಮನ ಪೂರಾ ।
ಇಸವಾಸಿ ಇಸ್ವಾಸಿ ಇವರಿಲ್ಲಾ ।
ತಗಲ ಮಾತು ಬಿಡುದಿಲ್ಲ ।
ಮನಸಿಗಿ ಬಂದ್ಹಾಂಗ ಒಕ್ಕಲತನಾ ಮಾಡುವರಾ ।
ಮುಂದೆ ಕೇಳರಿ ಒಕ್ಕಲಗೇರ ಕಥೆ ವಿಸ್ತಾರ ॥ ೧ ॥

.... .... .... .... .... .... .... .... ....
ದೇಶದೊಳಗ ಭಕ್ತವಚ್ಚಲನ ಗ್ರಾಮ । ಶ್ರೀ ಗೌರೀಶವಾಸಾ ।
ನಿಡಗುಂದಿಪೂರಾ । ಆತನ ದಯಾ ಭಾಳ ನಮ್ಮ ಮ್ಯಾಲ ।
ಮನಪೂರಾ ಕವಿಅಲ್ಲ ಸಂಗನಬಸವ ಹೇಳಿದ ಸಾರಾ ॥

## ೨೪. ಸಿರಗುರ ಕಲ್ಮೇಶ್ವರ ಮಹಾರಾಜ : (೧೮೬೮–೧೯೬೮)

'ಸಿರಗುರ' ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನಲ್ಲಿರುವ ಒಂದು ಸಣ್ಣ ಹಳ್ಳಿ. ಇಲ್ಲಿಯ ವೀರಶೈವ ಮನೆತನದ ಬಳೆಗಾರ ವೃತ್ತಿಯ ಸತ್ಯಪ್ಪ ಮತ್ತು ಸಿದ್ದವ್ವ ಇವರ ಹೊಟ್ಟೆಯಿಂದ ಕಲ್ಮೇಶ್ವರನು ಕ್ರಿ. ಶ. ಸು. ೧೮೬೮ ರಲ್ಲಿ ಹುಟ್ಟಿದನು.

ಕಲ್ಮೇಶ್ವರನನ್ನು ಜನ ಕಲ್ಲಪ್ಪ ಎಂದೇ ಕರೆಯುತ್ತಿದ್ದರು. ಕಲಿತಿದ್ದು ೨-೩ ಈಯತ್ತೆ ಮಾತ್ರ. ಚಿಕ್ಕಂದಿನಿಂದಲೂ ಬಯಲಾಟಗಳಲ್ಲಿ ವೇಷಹಾಕಿ ಕುಣಿಯುತ್ತಿದ್ದನು. ಒಳ್ಳೆಯ ಸಧೃಢ ಹಾಗೂ ಆಕರ್ಷಕ ಶರೀರ ಇವನದಿತ್ತು. ಯಾವಾಗಲೂ ನಾಲ್ಕು ಜನರನ್ನು ಕಟ್ಟಿಕೊಂಡು ಸಂಘಜೀವಿಯಾಗಿ ತಿರುಗಾಡುವ ಸ್ವಭಾವದವನಾಗಿದ್ದನು. ದೊಡ್ಡವನಾದ ಮೇಲೆ ಲಗ್ನವೂ ಆಯಿತು. ಮುಂದೆ ಸರ್ಕಸ ಕಂಪನಿ ಪ್ರಾರಂಭಿಸಿದನು. ತನ್ನ ಇದ್ದು ಬಿದ್ದ ಹಣವನ್ನೆಲ್ಲಾ ಈ ಆಟಕ್ಕೆ ಸುರುವಿ ನಾಡು ಸುತ್ತಾಡುತ್ತಾ ಸರ್ಕಸ ಆಟ ಆಡಿಸುತ್ತಾ ಹೋದನು. ಇದ್ದಕ್ಕಿದ್ದಂತೆ ಒಮ್ಮೆ ದಿವಾಳಿ ತೆಗೆಯುತ್ತಾನೆ. ಹೊಟ್ಟೆ ತುಂಬಿಕೊಳ್ಳುವುದೂ ದುಸ್ತರವಾಗುತ್ತದೆ. ಆತ್ಮಹತ್ಯೆಗೆ ಮನಸ್ಸು ಎಳೆಯುವಾಗ ಸ್ನೇಹಿತರು ಉಜ್ಜಯಿನಿಯ ಸಿದ್ಧೇಶ್ವರ ಗುರುಗಳ ಬಳಿಯಲ್ಲಿ ಕರೆದೊಯ್ಯುತ್ತಾರೆ. ಮನದ ಅಳಲನ್ನು ಗುರುಗಳ ಮುಂದೆ ಕಲ್ಲಪ್ಪ ತೋಡಿಕೊಳ್ಳುತ್ತಾನೆ. ಆಗ ಗುರುಗಳು- 'ನೀನಿನ್ನು ಈ ಸರ್ಕಸ ಕಂಪನಿಯಿಂದ ಮುಕ್ತನಾಗು' ಎಂದು ಆಶೀರ್ವದಿಸುತ್ತಾರೆ. ಇದ್ದು ಬಿದ್ದ ಸರ್ಕಸದ ಸಾಮಾನುಗಳನ್ನೆಲ್ಲಾ ಮಾರಿ ಕೊಡುವವರದನ್ನು ಕೊಟ್ಟು ಸಾಲದಿಂದ ಮುಕ್ತನಾಗುತ್ತಾನೆ. ಗುರುಗಳ ಬಳಿ ಬಂದು ಆಶೀರ್ವದಿಸಿ ಎಂದು ಅಂಗಲಾಚುತ್ತಾನೆ. ಆಗ ಅವರು– 'ನೀನಿನ್ನು ನಿನ್ನ ಹುಟ್ಟಿದೂರಿಗೆ ಹೋಗಿ ಆತ್ಮಜ್ಞಾನ ಮಾಡಿಕೊ' ಎಂದು ಉಪದೇಶಿಸುತ್ತಾರೆ. ಹಾಗೆಯೆ ಮಾಡುವೆ ಎಂದು ಅವರಿಗೆ ಶಿರಬಾಗಿ ಗುರುಗಳ ಆಣತಿಯಂತೆ ತನ್ನ ಹುಟ್ಟಿದೂರಿಗೆ ಬರುತ್ತಾನೆ.

ಸಿರಗುರದಲ್ಲಿ ಕಲ್ಲಪ್ಪನಿಗೆ ನೆಲೆಯಾಗಿ ನಿಲ್ಲಲು ಒಂದು ಮನೆಯೂ ಇದ್ದಿರಲಿಲ್ಲ. ಊರಲ್ಲಿ ಹಾಳು ಬಿದ್ದ ಕಲ್ಮೇಶ್ವರ ದೇವಾಲಯದಲ್ಲಿ ಬಿಡಾರ ಬಿಡುತ್ತಾನೆ. ಈತನ ತಂದೆಯ ಸ್ನೇಹಿತ ಕುಂಬಾರ ಮುದುಕನೊಬ್ಬ ಮಾತ್ರ ಈತನನ್ನು ಗುರುತಿಸಿ 'ಕಲ್ಮೇಶ್ವರ ಗುಡಿಯಲ್ಲಿಯೇ ಇರು, ನಿನಗೆ ದಿನಾಲೂ ಒಂದು ರೊಟ್ಟಿ ಕಳಿಸುತ್ತೇನೆ' ಎಂದು ಹೇಳುತ್ತಾನೆ. ಕಲ್ಲಪ್ಪ ಅಷ್ಟರಿಂದಲೆ ಗಟ್ಟಿ ಜೀವ ಮಾಡಿ ಬದುಕುತ್ತಾನೆ. ಉಗ್ರತರ ವಾದ ತಪಶ್ಚರ್ಯ ಕೈಕೊಳ್ಳುತ್ತಾನೆ. ತಾನು ಈ ಹಿಂದೆ ತುಳಿದ ದಾರಿ ತೀರ ಗೊಂದಲದ್ದು, ತಪ್ಪುದಾರಿ, ನನ್ನನ್ನು ನಾನು ತಿಳಿದುಕೊಳ್ಳಲಿಲ್ಲವಲ್ಲ ಎಂದು ಮರುಗಿ ಪ್ರಶಾಂತಚಿತ್ತನಾಗಿ ಆಧ್ಯಾತ್ಮದ ಸವಿಯುಂಡು ಸಂತೋಷಪಡುತ್ತಾನೆ. ತನ್ನ ಜೊತೆ ಬಂದವರಿಗೂ ಅಷ್ಟಿಷ್ಟು ಉಣಬಡಿಸುತ್ತಾನೆ. ಬಂದವರ ನೆತ್ತಿಯನ್ನೂ ತುಂಬುತ್ತಾನೆ. ಬರುವವರ ಸಂಖ್ಯೆ ಇನ್ನೂ ಹೆಚ್ಚಾಗುತ್ತದೆ. ತಾವು ಇದ್ದಲ್ಲಿಗೆ ಈತನನ್ನು ಬರಮಾಡಿಕೊಳ್ಳುತ್ತಾರೆ. ಸಾವಿರಾರು ಜನ ಆಧ್ಯಾತ್ಮಸಾಗರದಲ್ಲಿ ಈಜಾಡುತ್ತಾರೆ. ಜಡಜೀವಿಗಳಾಗಿ ಮುಳುಗ ದಂತೆ ಗುರುಸ್ಥಾನದಲ್ಲಿ ನಿಂತು ಕಲ್ಲಪ್ಪ ಅವರನ್ನು ಉದ್ಧರಿಸುತ್ತಾನೆ. ಸಿರಗುರದ ಖ್ಯಾತಿ ಹೆಚ್ಚಾಗುತ್ತದೆ. ದೇಶದ ನಾನಾ ಕಡೆಗಳಿಂದ ಜನ ಬಂದು ಮುಗಿಬೀಳುತ್ತದೆ.

ಭಜನೆಯ ಪದಗಳಲ್ಲಿ, ಲಾವಣಿ–ಗೀಗೀ ಹಾಡುಗಳಲ್ಲಿ, ಕರ್ಬಲ್ ನುಡಿಗಳಲ್ಲಿ ಕವಿಯ ಅನುಭವದ ಹೊಳೆಯೆ ಹರಿಯುತ್ತದೆ. ಈ ಹಾಡುಗಳನ್ನು ಬೇಕಾದವರು ಕೇಳಿ,

ಹಾಡಿ ತಮ ತಮಗೆ ನಿಲುಕಿದಷ್ಟನ್ನೂ ತಮ್ಮ ಹೃದಯ ಬಟ್ಟಲದಲ್ಲಿ ತುಂಬಿಕೊಳ್ಳುತ್ತಾರೆ. ಹೀಗಾಗಿ ಸಿರಗುರ ಕಲ್ಲಪ್ಪ ಶಿಷ್ಯಾದಿಗಳಿಗೆಲ್ಲ ಈಶ್ವರ ಸ್ವರೂಪಿಯಾಗಿ ಕಾಣುತ್ತಾನೆ. ಕಲ್ಮೇಶ್ವರ ಗುಡಿಯಲ್ಲಿ ವಾಸ್ತವ್ಯಮಾಡಿದ, ತಪಶ್ಚರ್ಯಗೈದ, ಆತ್ಮಜ್ಞಾನದ ಸಾಧನೆಯಲ್ಲಿ ತೊಡಗಿದ ಕಲ್ಲಪ್ಪ ತಾನೇ ತಾನಾಗುವ ಮಟ್ಟ ಮುಟ್ಟುತ್ತಾನೆ. ಅಂತೆಯೆ ಕಲ್ಲಪ್ಪ ಕಲ್ಮೇಶ್ವರನಾಗುತ್ತಾನೆ.

ಹುಟ್ಟು ಕಲಾಕಾರನಾದ ಕಲ್ಮೇಶ್ವರನಿಗೆ ಹಾಡುವುದಾಗಲಿ, ಹಾಡು ರಚಿಸುವುದಾಗಲಿ– ಸಹಜ ಕಲೆಯಾಗಿತ್ತು. ಅಂತೆಯೆ ೪೦೦೦ ಮೇಲ್ಪಟ್ಟು ಅನುಭವಪದ, ಲಾವಣಿ, ಕರ್ಬಲ್ ಹಾಡು ರಚಿಸಿದ್ದಾನೆಂದು ಆತನ ಶಿಷ್ಯರು ಎದೆತಟ್ಟಿ ಹೇಳುತ್ತಾರೆ. ಕಲ್ಮೇಶ್ವರನ ಶಿಷ್ಯ ಬಳಗವೂ ಕೂಡ ದೇಶದ ಹಲವಾರು ಸ್ಥಳಗಳಲ್ಲಿ ಪಸರಿಸಿದೆ. ವಿಶೇಷವಾಗಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳಲ್ಲಿ ಕಲ್ಮೇಶ್ವರನ ಕೀರ್ತಿ ಹಬ್ಬಿದೆ. ಅಥಣಿ, ಚಿಕ್ಕೋಡಿ, ರಾಯಬಾಗ, ಕುಡಾಳಿ, ಕೋಥಳಿ, ಚಿನಾಡಿ, ನಿಪ್ಪಾಣಿ, ಚಿಂಚಣಿ, ಬೆಳಗಾವಿ ಕೊಲ್ಲಾಪುರ, ಸಾಂಗಲಿ, ಮಿರಜ, ಮಂಗಾವತಿ, ಇಚಲಕರಂಜಿ, ನಾಂದಣಿ, ಸಿರಗುರ, ಹಿರೆಕೋಡಿ, ಅಬ್ದುಲ್ಲಲಾಟ, ಮುಂಬಯಿ ಮೊದಲಾದ ಗ್ರಾಮ– ಪಟ್ಟಣಗಲ್ಲಿ ಕಲ್ಮೇಶ್ವರನ ಭಕ್ತರು ಇದ್ದದ್ದು ತಿಳಿದು ಬರುತ್ತದೆ. ಹಿರೆಕೋಡಿಯ ೯೦ ವರ್ಷ ವಯಸ್ಸಿನ ಜೀವಪ್ಪ ಗುರವ ಅವರ ಬಾಯಿಂದ ಗುರು ಕಲ್ಮೇಶ್ವರನ ಚರಿತ್ರೆ, ಲೀಲೆಗಳನ್ನು ಕೇಳಿದಾಗ ಲಂತೂ ಮೈಜುಮ್ಮೆನ್ನುತ್ತದೆ.

ಸರ್ಕಸಕಂಪನಿ ನಡೆಸಿ ಕೈಸುಟ್ಟುಕೊಂಡಿದ್ದ ಕಲ್ಮೇಶ್ವರನು ಶಿಷ್ಯರ ಇಚ್ಛೆಯ ಮೇರೆಗೆ ಮತ್ತೆ ನಾಟಕ ಕಂಪನಿಯೊಂದನ್ನು ತೆರೆಯುತ್ತಾನೆ. ಊರೂರು. ಜಾತ್ರೆ–ಜಾತ್ರೆ ಅಡ್ಡಾಡಿ ನಾಟಕವಾಡಲು, ಮೋಟಾರ ಒಂದಿದ್ದರೆ ಅನುಕೂಲವೆಂದು, ಅಲ್ಲಲ್ಲಿ ಸಾಲಮಾಡಿ ಕಾರು ಕೊಳ್ಳುತ್ತಾನೆ. ಅದು ಮೈಮೇಲೆ ಬರುತ್ತದೆ. ಹೀಗೆ ಲೋಕವ್ಯವಹಾರದಲ್ಲಿ ಹಾನಿಯನ್ನು ಅನುಭವಿಸಿದ ಕಲ್ಮೇಶ್ವರ ಆಧ್ಯಾತ್ಮದಲ್ಲಿ ಉನ್ನತಸ್ಥಾನ ಗಳಿಸುತ್ತಾನೆ. ಹಲವಾರು ವರುಷ ಆತ್ಮಜ್ಞಾನದ ದಾರಿಯಲ್ಲಿ ಸಾಗಿ, ತನ್ನ ಶಿಷ್ಯರನ್ನೂ ಆ ದಿಕ್ಕಿನಲ್ಲಿ ಕರೆದೊಯ್ದು ನಾಡಿನಲ್ಲಿ ಧರ್ಮದ ಪತಾಕೆ ಹಾರಿಸುವ ಮಹಾಕಾರ್ಯದಲ್ಲಿ ತೊಡಗುತ್ತಾನೆ. ತನ್ನ ನೂರನೇ ವಯಸ್ಸಿನಲ್ಲಿ ಅಂದರೆ ಜೂನ ೧೧, ೧೯೬೮ ರಂದು ಮಹಾರಾಷ್ಟ್ರದ ನಾಂದಣಿಯಲ್ಲಿ ದೇಹತ್ಯಾಗ ಮಾಡಿದ್ದು ತಿಳಿದುಬರುತ್ತದೆ. ಈತನ ಪ್ರಮುಖ ಶಿಷ್ಯರಾದ ಚಿಂಚಣಿಯ ತಾತ್ಯಾಸಾಹೇಬ ಮೊದಲಾದವರು ಮೃತದೇಹವನ್ನು ನಾಂದಣಿಯಿಂದ ಸಿರಗುರಕ್ಕೆ ತರುತ್ತಾರೆ. ಅತ್ಯಂತ ವಿಜೃಂಭಣೆಯಿಂದ ಸಿರಗುರದಲ್ಲಿ ಸಮಾಧಿಕಾರ್ಯ ನೆರವೇರಿಸುತ್ತಾರೆ.

ಕಲ್ಮೇಶ್ವರ ಮಹಾರಾಜರ ತರುವಾಯ ಈ ಪೀಠಕ್ಕೆ ಭಕ್ತರೆಲ್ಲ ಸೇರಿ ಚಿಂಚಣಿಯ ತಾತ್ಯಾಸಾಹೇಬ (ಶ್ರೀ ಅಲಗೌಡ ಮಲಗೌಡ ಪಾಟೀಲ) ಅವರನ್ನು ಅಧಿಪತಿಗಳನ್ನಾಗಿ

ನಿಯಮಿಸುತ್ತಾರೆ. ಇವರು ಕಲ್ಮೇಶ್ವರ ಮಹಾರಾಜರು ನೀಡಿದ ತತ್ತ್ವಬೋಧೆಯನ್ನು ನಾಡಿನಲ್ಲೆಲ್ಲ ಹರಡುತ್ತ ಸಪ್ತಾಹಗಳನ್ನು ನಡೆಸುತ್ತ ಬಂದಿದ್ದಾರೆ. 'ಓಂ ಮೋಕ್ಷಪತಿ ಸದ್ಗುರುದೇವ ಕಲ್ಮೇಶ್ವರ ಮಹಾರಾಜ' ಎಂಬ ಬಿರುದಿನಿಂದ ಹಾಡಿಹೊಗಳುತ್ತಾರೆ.

ಕಲ್ಮೇಶ್ವರನ ಹಾಡುಗಳ ಕೊನೆಗೆ 'ಸಿರಗುರ ಗ್ರಾಮದ ಕವಿ ಕಲ್ಲರಸ, ಕಲ್ಮೇಶ್ವರ' ಎಂಬ ಅಂಕಿತ ಬರುತ್ತದೆ. ತನಗೆ ಆತ್ಮಜ್ಞಾನದ ಉಪದೇಶ ನೀಡಿದ ಉಜ್ಜಯನಿಯ ಸಿದ್ಧೇಶ್ವರನನ್ನೂ ಹಾಡುಗಳಲ್ಲಿ ಸ್ಮರಿಸಿದ್ದಾನೆ.

"ಶರಣಸಿದ್ಧನ ಕರುಣ ಪುತ್ರ ಕಲ್ಲ ಇದ್ದೇನು.  
ಕೈಲಾಸದ ಕಲಮು ಓದಿದೇನು. ಕಲಿಯಿರಿ ಕಂಡ ಸಾರತೇನು"  
"ಭೋಗ ತ್ಯಾಗ ಮಾಡಿ ಯೋಗ ಸದನದಲ್ಲಿ ಹೋಗಿ ಕೂಡರಿನ್ನು....  
ಸಿರಗುರ ಗ್ರಾಮದಲಿ ಕವಿ ಕಲ್ಲರಸ"  
"ಗುರುವಿನ ದರ್ಶನದಿಂದ ದರಿದ್ರತನ ಗೆದ್ದದ್ದು  
ಮನಸಿನಿಂದ ಮಾಡಬೇಕು ಗುರುಧ್ಯಾನ  
ಕೋಟಿಗೊಂದು ಘಟ ನಿನ್ನಂಗ ಆಗೋದು ಥೇಟ."  
"ದೀಪ ಹಚ್ಚಿ ಹುಡುಕಬಾರದೇನೊ  
ಸುಳ್ಳೆ ಕತ್ತಲೆಯೊಳು ಕೈಯಾಡ್ಸಿ ಕಳಕೊಂಡೆ ನೀನು."  
"ಮರವು ಎಂಬ ತಿಪ್ಪೆ ಬೆಳದೀತೆ  
ಅರಿವು ಎಂಬ ಅಗ್ನಿಮಳಿ ತಾನೆ ಸುರಿದೀತೆ"  
ಮಾನ ಹೀನರ ಸಂಗಮಾಡಿ ಕೆಡಬ್ಯಾಡ ಮನವೆ  
ಮಾಯಾ ಭ್ರಾಂತಿಗೆ ಬಿದ್ದು ಧ್ಯಾನ ಮರಿಬ್ಯಾಡ ಮನವೆ

ಇಂಥ ನುಡಿಮುತ್ತುಗಳಲ್ಲಿ ಅವರ ಲೋಕಾನುಭವ, ಲೋಕದ ಡೊಂಕು ತಿದ್ದುವ ಕಳಕಳಿ ಭಾವ ಸ್ಫುಟವಾಗಿ ಎದ್ದು ಕಾಣುತ್ತದೆ.

ಕಲ್ಮೇಶ್ವರನ ನೂರಾರು ಹಾಡುಗಳಿಗೆ ತಾತ್ಯಾಸಾಹೇಬರು ಟೀಕೆ ಬರೆಯುತ್ತಿದ್ದಾರೆ. ಇವರಿಗೆ ತಮ್ಮ ಗುರುಗಳ ಹಾಡು ಹಾಡುವಲ್ಲಿ, ಅರ್ಥೈಸುವಲ್ಲಿ, ಪ್ರಕಟಿಸುವಲ್ಲಿ ಹೆಚ್ಚು ಆಸಕ್ತಿ. ಕಲ್ಮೇಶ್ವರನ ಶಿಷ್ಯರ ಬಾಯಲ್ಲಿ ಬದುಕಿ ಉಳಿದ ಸಾವಿರಾರು ಹಾಡುಗಳನ್ನು ಕಲೆಹಾಕುವ ಕಾರ್ಯದಲ್ಲೂ ಸನ್ನದ್ಧರಾದ ತಾತ್ಯಾಸಾಹೇಬರನ್ನು ಪ್ರತ್ಯಕ್ಷ ಕಂಡು ಗುರುಗಳ ವಿಷಯಕ್ಕೆ ವಿವರವಾದ ಈ ಮಾಹಿತಿ ಪಡೆದುಕೊಳ್ಳಲಾಗಿದೆ.

## ೭೫. ಹಡಗಿಲಗ್ರಾಮದ ಗುಂಡಪ್ಪ (೧೮೭೯-೧೯೩೪)

ಕಲಬುರಗಿ ತಾಲೂಕಿನ ಹಡಗಿಲಗ್ರಾಮದ ಶರಣ್ಣಪ್ಪ ಸಾಹುಕಾರರ ಮಗನೇ ಈ ಗುಂಡಪ್ಪ. ಗುಂಡಪ್ಪ ಕವಿ ಸು. ೧೮೭೯-೧೯೩೪ರ ಅವಧಿಯಲ್ಲಿ ಬಾಳಿದವನು. ವೃತ್ತಿಯಿಂದ ಕುಂಬಾರನಾದರೂ ಬಡ್ಡಿಯ ವ್ಯವಹಾರವೇ ಈತನ ಕಸಬಾದಂತಾಗಿತ್ತು. ಕನ್ನಡ, ಮರಾಠಿ ಎರಡೂ ಭಾಷೆಗಳನ್ನು ಬಲ್ಲ ಕವಿ ಹಾಡುವಲ್ಲೂ ಪಳಗಿದವನಿದ್ದನಂತೆ. ಹೋಳಿಪದ ರಚಿಸುವಲ್ಲಿ ಪಳಗಿದವನಿದ್ದನೆಂದೂ ಜನ ಹೇಳುತ್ತಾರೆ. ಕಂಸಾಸುರವಧ, ಲವ-ಕುಶರ ಕಾಳಗ, ಡಾಂಗಿರಾಜನ ಆಟ- ಮುಂತಾದ ಬಯಲಾಟದ ಕಥೆಗಳನ್ನು ರಚಿಸಿದ ಶ್ರೇಯಸ್ಸು ಇವನಿಗೆ. ಬಯಲಾಟಗಳನ್ನು ಮನೆಯಮುಂದೆ ಆಡಿಸುವ ಹವ್ಯಾಸವೂ ಇವನದಾಗಿತ್ತು.

## ೭೬. ಲಾದಾದ ಶಿವರಾಯ : (೧೮೭೯-೧೯೫೨)

ಲಾದಾ ಬೀದರ ಜಿಲ್ಲೆಯ ಔರಾದ ತಾಲೂಕಿನ ಒಂದು ಹಳ್ಳಿ. ಇಲ್ಲಿಯ ಶಿವರಾಯ ಮುಚಳಂಬಿ ಜನಪದ ಕವಿಯಾಗಿ ಪ್ರಸಿದ್ಧಿ ಪಡೆದಿದ್ದಾನೆ. ಸ್ವರ್ಗವಾಸಿಯಾಗಿ ಇಂದಿಗೆ ಸುಮಾರು ೨೬ ವರುಷಗಳಾಗಿರಬೇಕು. ಆಗ ಇವನಿಗೆ ೮೦ ವರುಷ ಇದ್ದುವಂತೆ. ಇದರಿಂದ ಕವಿ ಸು. ೧೮೭೯-೧೯೫೨ರ ಅವಧಿಯಲ್ಲಿ ಬದುಕಿದವನಾಗಿರಬೇಕೆಂದು ಹೇಳಬಹುದು.

ಶಿವರಾಮ ಕವಿಯು ನೂರಾರು ತತ್ವಪದ, ಮೊಹರಂ ಹಾಡು ಹಾಗೂ ಲಾವಣಿ ಪದಗಳನ್ನೂ ರಚಿಸಿದ್ದನೆಂದು ತಿಳಿದುಬರುತ್ತದೆ. 'ಮಾನಸರಾಜ' ಎಂಬ ಡಪ್ಪಿನಾಟವನ್ನೂ ಕವಿ ರಚಿಸಿದ್ದುದು ತಿಳಿದುಬರುತ್ತದೆ. 'ಸೋಮಲಿಂಗೇಶ' ಎಂಬುದು ಕವಿಯ ಹಾಡುಗಳಲ್ಲಿ ಬರುವ ಅಂಕಿತವಾಗಿದೆ. ಲಾದಾಕ್ಕೆ 'ಲದ್ದಿ' ಎಂದೂ ಕರೆಯುವರು.

ಸಭೆದಲ್ಲಿ ಕುಂತೀರಿ ಸಜ್ಜನರಾ । ಗುರುಹಿರಿಯರಿಗೆ ನಮ್ಮ ನಮಸ್ಕಾರಾ ।  
ನಿಮ್ಮ ದಯಾ ಇರಬೇಕು ನಮ್ಮ ಮ್ಯಾಲ ಪೂರಾ ।  
ನಾವು ಹಾಡ್ತೇವ್ರಿ ಸಣ್ಣ ದೊಡ್ಡವರಾ ।

..........................................

ತೊಡೆಯ ತಡಿ 'ಲದ್ದಿಪುರವಾಸ' ।  
ತೊರೆಯೊಳು 'ಸೋಮಲಿಂಗೇಶ' । ''

## ೨೭. ಕುಕಡೊಳ್ಳಿಯ ಚನಮಲ್ಲಯ್ಯ : (೧೮೮೫–೧೯೫೦)

ಕುಕಡೊಳ್ಳಿ ಬೆಳಗಾವಿ ತಾಲೂಕಿನ ಒಂದು ಚಿಕ್ಕಗ್ರಾಮ. ಈ ಗ್ರಾಮದ ಸಮೀಪವೆ ಇದ್ದ ಗಾಡಿಕೊಪ್ಪ, ಕೊಡಚವಾಡ ಹಾಗೂ ಈ ಕುಕಡೊಳ್ಳಿ ಗ್ರಾಮಗಳ ಐತನದ ಹಕ್ಕು ಹಿರೇಮಠದ ಚನಮಲ್ಲಯ್ಯನದಾಗಿತ್ತು.

ಚನಮಲ್ಲಯ್ಯ ಹುಟ್ಟಿದ್ದು ೧೮೮೫ರಲ್ಲಿ. ತಂದೆ ಚನಬಸಯ್ಯ, ತಾಯಿ ರುದ್ರಮ್ಮ. ೬೫ ವರುಷ ಬದುಕಿದ ಚನಮಲ್ಲಯ್ಯ ಕೋರ್ಟು, ಕಛೇರಿಗಾಗಿ ಹಿರಿಯರ ಆಸ್ತಿಯನ್ನೆಲ್ಲ ಕಳೆದುಕೊಳ್ಳಬೇಕಾಯಿತು. ಹಲವಾರು ನಾಡು ಸುತ್ತಾಡಿ ಹೋದ ಹೋದಲ್ಲೆಲ್ಲಾ ಶಿಷ್ಯ ಸಂಪತ್ತುಗಳಿಸಿಕೊಂಡಿದ್ದ ಶ್ರೀಮಂತನೀತ. ಖಿಡಕಳ್ಳಿ ನಿಂಗಪ್ಪ, ಗರಗ ಮಡಿವಾಳಪ್ಪ ಮತ್ತು ದೇವರಕೊಂಡದ ಅಜ್ಜನ ಪ್ರಭಾವಲಯದಲ್ಲಿದ್ದುಕೊಂಡು ಅಧ್ಯಾತ್ಮವಿದ್ಯೆ ದೊರಕಿಸಿಕೊಂಡವನಿವನು.

ಚನಮಲ್ಲಯ್ಯ ಕಲಿತದ್ದು– ೪ನೇ ಈಯತ್ತೆ. ವಯಸ್ಸಿಗೆ ಬಂದಾಗ ಸೋಮನಟ್ಟಿ ಗ್ರಾಮದ ನಿಂಬೆವ್ವನ ಜೊತೆ ಈತನ ಲಗ್ನವಾಗಿತ್ತು. ನಿಂಬೆವ್ವ ಇಂದಿಗೂ ಜೀವಿಸಿದ್ದಾಳೆ. ಎಂಟು ಜನ ಮಕ್ಕಳಾಗಿದ್ದರೂ ಒಂದೂ ದಕ್ಕಲಿಲ್ಲ, ಮಕ್ಕಳು ಬದುಕಿ ಉಳಿಯಲಿಲ್ಲವೆಂದು ಈ ದಂಪತಿಗಳು ಒಂದುದಿನವೂ ಕೊರಗಿದವರಲ್ಲ. ಶಿಷ್ಯ ಮಕ್ಕಳೇ ತಮ್ಮ ಮಕ್ಕಳೆಂದು ನಾಡಿನ ತುಂಬೆಲ್ಲ ಶಿಷ್ಯರ ಸಂಪತ್ತು ಪಡೆದರು.

ಚನಮಲ್ಲಯ್ಯನಿಗೆ ತಂಬೂರಿ ಬಾರಿಸಲು ಬರುತ್ತಿತ್ತು. ಜಾನಪದ ಲಯ-ಗತ್ತುಗಳನ್ನು ಅರಿತವನಾಗಿದ್ದನು. ಸ್ವತಃ ಹಾಡುಗಾರನೂ ಆಗಿದ್ದನು. ಅದರಂತೆ ಆ ಆ ಧಾಟಿಗಳಲ್ಲಿ ತತ್ವದಪದ, ಲಾವಣಿ, ಮಂಗಳಾರತಿ ಮೊದಲಾದ ನೂರಾರು ಪದಗಳನ್ನು ರಚಿಸಿದ ಕೀರ್ತಿ ಇವನದು. ೧೯೭೮ರಲ್ಲಿ ಡಾ. ಎಂ. ಎಸ್. ಲಠ್ಠೆ ಅವರು ಚನಮಲ್ಲಯ್ಯನ ಜಾನಪದ ಹಾಡುಗಳು ಎಂಬ ಗ್ರಂಥವೊಂದನ್ನು ಸಂಪಾದಿಸಿ ಬೆಳಕಿಗೆ ತಂದಿದ್ದಾರೆ.

ಚನಮಲ್ಲಯ್ಯನ ಮನೆದೇವರು 'ಮಹಾಲಿಂಗೇಶ'. ಮಹಾಲಿಂಗಪುರದ ಈ ಮಹಾಲಿಂಗೇಶ್ವರನ ಸನ್ನಿಧಾನದಲ್ಲಿದ್ದುಕೊಂಡು (ಕೆಲಕಾಲ) 'ಮಾಲಿಂಗ' ಎನ್ನುವ ಅಂಕಿತದಲ್ಲೂ ಕೆಲ ತತ್ವದಪದಗಳನ್ನು ರಚಿಸಿದ್ದಾನೆ. ಕುಕಡೊಳ್ಳಿಯ ಕಲ್ಮೇಶ್ವರನನ್ನು ತನ್ನ ಹಾಡುಗಳಲ್ಲಿ ಸ್ಮರಿಸಿದ್ದಾನೆ. ಕ್ರಿ. ಶ. ಸು. ೧೯೫೦ರಲ್ಲಿ ಕೈಲಾಸವಾಸಿಯಾದ ಚನಮಲ್ಲಯ್ಯನ ಪುಣ್ಯತಿಥಿಯು ಪ್ರತಿ ಯುಗಾದಿಕಾಲದಲ್ಲಿ ಕುಕಡೊಳ್ಳಿಯಲ್ಲಿ ನಡೆಯುತ್ತದೆ.

ಚನಮಲ್ಲಯ್ಯ ರಚಿಸಿದ ಭಜನೆ ಹಾಡುಗಳು ಗುರು-ಶಿಷ್ಯರ ಸಂವಾದರೂಪದಲ್ಲಿವೆ. ಕರುಣಾಸಾಗರನೂ, ಮಾರಮರ್ದನನೂ, ಪರಮ ದಯಾಳುವೂ ಆದ ದೇವನನ್ನು ಕರುಣಿಸು ಎಂದು ಪ್ರಾರ್ಥಿಸುತ್ತಾನೆ. ಅದಕ್ಕೆ ಭಕ್ತನಿಗೆ 'ಓಂ ಶಿವ ಶಿವನೆನ್ನು',

ಅಡಿಗಡಿಗೆ 'ಗುರು ಮಂತ್ರವ ನುಡಿ', 'ಪಾದ ಪ್ರಸಾದ ತಿಳಿದರೆ ಆತನೇ ದೇವ' ಅದನ್ನೆಲ್ಲ ಗುರುಮುಖದಿಂದ ತಿಳಿಯಬೇಕೆಂದು ಬೋಧಿಸಿದ್ದಾನೆ. ಭಕ್ತ ಕೇಳಿದ 'ನಾನು ಯಾರು-ಮಾನ್ಯೆಯವರೆಲ್ಲಾ ಖೂನವ ತಿಳಿಸರೊ' ಮತ್ತು 'ಮಾಯದ ತನುವಿನ ಮಲಕ ಹ್ಯಾಂಗ ತಿಳಿಯಬೇಕೊ' ಎಂದು ಕೇಳಿದ ಪ್ರಶ್ನೆಗಳಿಗೆ ತಾನೇ ಉತ್ತರಿಸಿ ಶಿಷ್ಯರನ್ನು ಗುರು ಚನಮಲ್ಲಯ್ಯ ಎಚ್ಚರಿಸಿದ್ದಾನೆ. 'ಸತ್ತಂಗಿರಬೇಕೊ। ನಿತ್ಯ ತತ್ವ ತಿಳಿಯಬೇಕೊ'। 'ಶರಣರ ಕೂಡಬೇಕೊ। ತಾನು ಶರಣನಾಗಬೇಕೊ'। 'ಶರಣಂದ ವಗ ಮರಣವಿಲ್ಲ ತಿಳಕೊ', ನಿನ್ನ ನೀ ಮರಿಬ್ಯಾಡೊ। ಮರತಿರಕೇಡೊ। ಅರವಿನಾಲ ಯದೊಳಾಡೊ'। 'ಮೂಕನಾಗಬೇಕೊ। ಜಗದೊಳು ಜೋಕ್ಯಾಗಿರಬೇಕೊ'। 'ನಾಳಿಗನ್ನೋದ್ಯಾಕೊ। ವ್ಯಾಳೆ ಖಾಲಿಗಳಿಯುವುದ್ಯಾಕೊ'। 'ದೇಹದ ಕೊನಿಯೊಳು ಮನವಿಡಬೇಕೊ। ಆತ್ಮಲಿಂಗನೊಳೈಕ್ಯಾಗಬೇಕೊ।' ಎಂದು ಆತ್ಮತತ್ವದ ಅಧ್ಯಾತ್ಮ ವಿದ್ಯೆಯನ್ನು ಅನುಭವದ ಪದಗಳ ಮುಖಾಂತರ ಸಾಮಾನ್ಯರ ಮನಸೂರೆಂತಾಗುವಂತೆ ಸುಶ್ರಾವ್ಯವಾಗಿ ಹಾಡಿದ್ದಾರೆ.

ಚನಮಲ್ಲಯ್ಯ ಲಾವಣಿ ಮತ್ತು ಮಂಗಳಾರತಿ ಪದಗಳನ್ನೂ ರಚಿಸಿದ್ದಾನೆ. 'ಕುಕಡೊಳ್ಳಿ ಊರ। ಮೆಟ್ಟಿನೊಳು ಹುಟ್ಯಾವೊ ಪದಸಾರಾ। ಚಕಮಕಿ ಕಟದ್ಹಾಂಗ ಕೇಳೊ ಚನಮಲ್ಲಯ್ಯನ ಅಕ್ಷರ। ಸಿಕ್ಕಗಿಕ್ಕರ ಫಜೀತಿ ಅನಿವಾರ।' ಇವನ ಹಾಡುಗಳೆಂದರೆ ನಿಜಕ್ಕೂ ಚಕಮಕಿಯನ್ನು ಕಟೆದ ಹಾಗೆ. ಅಲ್ಲಿ ಜ್ಯೋತಿ ಹತ್ತದೇ ಇರಲಾರದು.

'ಭಜನಿಯ ಮಾಡಿರೊ ನಿಜವಿಡಿದು। ನಿಮ್ಮ ಗಜಬಿಜಿಗುಣಗಳ ಹಾರ್ದೊಡೆದು।
ಸಜನರೊಳಾಡಿರೊ ಜ್ಞಾನಪಡೆದು। ನಿಜ ಗುರುವಿನ ಚರಣವ ಪಿಡಿದು।
.... .... .... .... .... .... .... .... .... ....
ಚಪ್ಪಳಿ ಹೊಡಿರಯ್ಯ ಚಾಲ್ಹಿಡಿದು। ಚಿಕ್ಕ ಚನಮಲ್ಲಯ್ಯನಂತವ ತಿಳಿದು॥'.

## ೨೮. ಧಮ್ಮಣಸೂರದ ಸಿದ್ಧಪ್ರಭು ಮಹಾರಾಜ: (೧೮೮೭-೧೯೭೭)

'ಧಮ್ಮಣಸೂರ' ಬೀದರ ಜಿಲ್ಲೆಯ ಹುಮ್ನಾಬಾದ ತಾಲೂಕಿನ ಒಂದು ಹಳ್ಳಿ. ಇಲ್ಲಿ ಸಿದ್ಧಪ್ರಭು ಮಹಾರಾಜರು ಮಹಾನ್ ಸಿದ್ಧಿಪುರುಷರಾಗಿ ಆಗಿಹೋಗಿದ್ದಾರೆ. ಸು. ೧೮೮೭ರಲ್ಲಿ ಹುಟ್ಟಿದ ಇವರು ೯೦ ವರುಷ ಬದುಕಿದ್ದರು. ಒಂದು-ಒಂದುವರೆ ವರುಷಗಳ ಹಿಂದೆಯೆ ಲಿಂಗೈಕ್ಯರಾದರು (೧೯೭೭).

ಶ್ರೀಸಾಮಾನ್ಯರಂತೆ ಪ್ರಾಪಂಚಿಕರಾಗಿ ಜನಿಸಿದ 'ಸಿದ್ಧಪ್ರಭು' ಗಳಿಗೆ ಹೆಂಡರು-ಮಕ್ಕಳೂ ಇದ್ದಾರೆ. ಭಾಲ್ಕಿಯ ಅಂಗಡಿಯೊಂದರಲ್ಲಿ ಹಲವಾರು ವರುಷ ಗುಮಾಸ್ತರಾಗಿ ಕಾಯಕಕೈಕೊಂಡಿದ್ದ ಸಿದ್ಧಪ್ರಭುಗಳಿಗೆ ನಾವದಗಿಯ ರೇಪಪ್ಪಯ್ಯನವರ ಅನುಗ್ರಹವಾಗಿತ್ತೆಂದೂ ಹೇಳುತ್ತಾರೆ.

ಸಿದ್ಧಪ್ರಭುಗಳು ಅನುಭಾವಿ ಕವಿಗಳು. ಅಶುಕವಿಯಾಗಿ ಮೆರೆದ ಮಹಿಮಾವಂತರು. ನಾಡಿನ ಹಲವಾರು ವೃತ್ತಿಗಾಯಕರು ಇವರ ಶಿಷ್ಯರು. ಅವರಿಗೆ ಬೇಕಾದ ಹಾಡುಗಳನ್ನು ಬರೆದುಕೊಡುವ ಪ್ರತಿಭೆ ಇವರಲ್ಲಿ ಇತ್ತು. ಗೋಂಧಳಿ ಸಮಾಜದವರಂತೂ ಇವರ ಶಿಷ್ಯರೇ. ಸಾವಿರಾರು ಗೊಂದಲಿಗರ ಹಾಡು ರಚಿಸಿದ್ದಾರೆಂದೂ ಕೇಳಿದ್ದೇನೆ. ಭಾಲ್ಕಿ ಸಮೀಪವಿರುವ ಭಾತಂಬ್ರಾ ಗ್ರಾಮಕ್ಕೆ ನಾನೊಮ್ಮೆ ಹೋದಾಗ ಅಲ್ಲಿಯ ನಿವಾಸಿ 'ವಿಠ್ಠಲ' ಎನ್ನುವವನು ಸಿದ್ಧಪ್ರಭು ಮಹಾರಾಜರ ಹಲವಾರು ಹಾಡುಗಳನ್ನು ಕೇಳಿ ಸಂತೋಷ ಪಟ್ಟಿದ್ದೇನೆ.

ಸಿದ್ಧಪ್ರಭುಗಳಿಗೆ ಅದೊಂದು ದೈವಬಲ ಎನ್ನಬೇಕು. ಯಾವುದೇ ವಿಷಯ ಕುರಿತು ಹಾಡುಗಳನ್ನು ನಿಂತಕಾಲ ಮೇಲೆಯೆ ರಚಿಸಿಕೊಡುತ್ತಿದ್ದರಂತೆ. ವೀರಶೈವ ಧರ್ಮದ ತತ್ವಗಳನ್ನು ಅಭ್ಯಸಿಸಿದ, ಅನುಷ್ಠಾನಕ್ಕೆ ತಂದ ಪ್ರಯುಕ್ತವಾಗಿ ವಿಶ್ವಧರ್ಮದವರಿಗೂ ಒಗ್ಗುವ ಉಪದೇಶವನ್ನು ಇವರು ನೀಡುತ್ತಿದ್ದರೆಂದು ಹೇಳುತ್ತಾರೆ. ತಮ್ಮ ಹಾಡುಗಳಲ್ಲಿ ರೇವಪ್ಪ ಮುತ್ಯಾನನ್ನು ಸ್ಮರಿಸಿ 'ಸಿದ್ಧ' ಎನ್ನುವ ಹೆಸರನ್ನು ಅಂಕಿತವನ್ನಾಗಿ ಬಳಸಿಕೊಂಡಿದ್ದಾರೆ. ವೇದಾಂತವನ್ನು ಕರಗತ ಮಾಡಿಕೊಂಡ ಮಹಾರಾಜರಿವರು.

'ನಿಮ್ಮ ಫೋಟೊ, ಎದರಿಗಿ ಇಟಗೊಂಡ। ಜಪಮಾಡಿಕೊಂಡ ।ಪಲ್ಲ।  
ನನ್ನ ದೇಹ ದುನಿಯಾ ದೇಹದೊಳಗ। ತಿರಗುಸ್ತನಕ ಫಳಫಳಿಯು ।  
.... .... .... .... .... .... .... .... .... ....  
ಗದ್ದಿಗಿಹೋತ್ರಿ ಬೆಳೆದುಂಡಪುಂಡ। ಸಿದ್ಧಾಯಿತ್ರ ಸಿದ್ಧನ ಝೇಂಡಾ।'

## ೭೯. ಮುತ್ತೂರಿನ ಹನುಮಂತಪ್ಪ : (೧೮೯೩–೧೯೨೩)

ಬಳ್ಳಾರಿ ಜಿಲ್ಲೆಯ ಮುತ್ತೂರ ಗ್ರಾಮದ ಅಂಬಿಗರ ಹನುಮಂತಪ್ಪನು ಮುತ್ತೂರಪ್ಪ ಮತ್ತು ಸಾವಿತ್ರಮ್ಮ ಅವರಿಗೆ ಮಗನಾಗಿ ೧೮೯೩ರಲ್ಲಿ ಹುಟ್ಟಿದನು. ಮೂವತ್ತು ವರುಷ ಬಾಳಿದ ಕವಿ ಪ್ಲೇಗು ಬೇನೆಯಿಂದಾಗಿ ೧೯೨೩ರಲ್ಲಿ ಪತ್ನಿ ಸಮೇತ ಶಿವಾಧೀನನಾದನೆಂದು ತಿಳಿದುಬರುತ್ತದೆ. ಪ್ಲೇಗು ಬೇನೆ ಊರಲ್ಲಿ ಹಬ್ಬಿದಾಗ ಎಲ್ಲ ಜನರೂ ಊರು ಬಿಡುತ್ತಿದ್ದರೂ ಹುಟ್ಟಿದೂರನ್ನು ಬಿಟ್ಟು ಹೋಗದ ಈ ಹನುಮಂತಪ್ಪ ಕಾಳಿಯಮ್ಮನ ದೇವಸ್ಥಾನದ ಸಮೀಪವೇ ದೇಹಬಿಟ್ಟನಂತೆ.

ಹನುಮಂತಪ್ಪ ಕಲಿತದ್ದು ೫ನೆಯ ಈಯತ್ತೆ. ಉದ್ಯೋಗ ಒಕ್ಕಲುತನ. ಕೆಲಕಾಲ ಖಾಸಗಿ ಶಾಲೆಯೊಂದರಲ್ಲಿ ಆಗ ಶಿಕ್ಷಕನಾಗಿಯೂ ಸೇವೆ ಸಲ್ಲಿಸಿದ್ದನಂತೆ. ಈತನಿಗೆ ದೊಡ್ಡಾಟಗಳಲ್ಲಿ ಪಾತ್ರಹಾಕುವ ಹವ್ಯಾಸವಿತ್ತು. 'ಚಂದ್ರಹಾಸ' ಬೈಲಾಟದಲ್ಲಿ ದುಷ್ಟಬುದ್ಧಿಯ ಪಾತ್ರವನ್ನೂ, ಶ್ವೇತರಾಜನ ಬೈಲಾಟದಲ್ಲಿ ಶ್ವೇತರಾಜನ ಪಾತ್ರವನ್ನು ತೊಟ್ಟು

ಪ್ರೇಕ್ಷಕರ ಮನಮೆಚ್ಚುವಂತೆ ನಟಿಸುತಿದ್ದನಂತೆ. ಸ್ವತಃ ಹಲವಾರು ಬಯಲಾಟ ಹಾಗೂ ರಿವಾಯ್ತ ಪದಗಳನ್ನು ರಚಿಸಿದ್ದನೆಂದು ತಿಳಿದುಬರುತ್ತದೆ. ಶ್ವೇತರಾಜ ಮತ್ತು ಚಂದ್ರಹಾಸ ಬಯಲಾಟಗಳನ್ನು ಈತನೇ ರಚಿಸಿದ್ದಾನೆ. ಹಾಡುಗಳಲ್ಲಿ ಬರುವ ಮುದ್ರಿಕೆ 'ಮುತ್ಪುರೇಶ' (ಸಿಂಧುಪುರೀಶ) ಎಂದಿದೆ. ಮುತ್ಕೂರಿನ (ಪುರದ) ಈಶನೇ 'ಮುತ್ಪುರೇಶ' ನಾಗಿದ್ದಾನೆ. ಈತನಿಗೆ ಊರ ಜನರ ಪ್ರೋತ್ಸಾಹವೂ ದೊರೆತಿತ್ತೆಂದು ಹೇಳುತ್ತಾರೆ. ಬುದ್ಧಿವಂತಿಕೆಗೆ ಹೆಸರಾದ ಕವಿ ಇನ್ನೂ ಬದುಕಿದ್ದರೆ ಎಷ್ಟೋ ಕೃತಿಗಳನ್ನು ಬರೆಯಬಹುದಾಗಿತ್ತು.

### ೪೦. ಬೇನೂರಿನ ಭಗವಾನಸಿಂಗ : (೧೮೯೬–೧೯೬೬)

ಕಲಬುರಗಿ ಜಿಲ್ಲೆಯ ಬೇನೂರ ಗ್ರಾಮದ ಭಗವಾನಸಿಂಗನು ರಜಪೂತರವನು. ಈತನು ತೀರಿಕೊಂಡು ಇಂದಿಗೆ ಹತ್ತು ಹನ್ನೊಂದು ವರುಷಗಳಾಗಿವೆ. ಆಗ ಇವನು ಎಪ್ಪತ್ತು ವರುಷದವನಿದ್ದನೆಂದು ಜನರ ತಿಳುವಳಿಕೆ.

ಭಗವಾನಸಿಂಗನಿಗೆ ತಕ್ಕಮಟ್ಟಿಗೆ ಓದು ಬರಹ ಬರುತ್ತಿತ್ತು. ಡಪ್ಪಿನಾಟಗಳನ್ನು ಬರೆಯುವಲ್ಲಿ ಎತ್ತಿದ ಕೈ ಇವನದು. ಮದನಮಂಜರಿ, ದೈವಪರೀಕ್ಷಾ, ನನ್ನ ಭೂಮಿ–ಮೊದಲಾದ ಡಪ್ಪಿನಾಟಗಳನ್ನು ಬರೆದಿದ್ದಾನೆ. ನೂರಾರು ಅನುಭವ ಪದಗಳನ್ನೂ ರಚಿಸಿದ್ದಾನೆ. ಭಾನುಮತಿ ವಿದ್ಯೆಯನ್ನು ಬಲ್ಲವನಾಗಿದ್ದನೆಂದು ಜನ ಹೇಳುತ್ತಾರೆ.

### ೪೧. ತೆಲ್ಲೂರಿನ ಚಂದ್ರಶಾ : (೧೯೦೧–೧೯೬೦)

ಕಲಬುರಗಿ ಜಿಲ್ಲೆಯ ಅಪಝಲಪುರ ತಾಲೂಕಿನಲ್ಲಿಯ ತೆಲ್ಲೂರ ಗ್ರಾಮದಲ್ಲಿ ಚಂದ್ರಶಾ ಬುಕ್ಕೊಂಡ ಎಂಬ ಜಾನಪದ ಕವಿ ಆಗಿಹೋಗಿದ್ದಾನೆ. ಈತನು ಡಪ್ಪಿನಾಟ, ಮೋಹರಮ್‌ಹಾಡು ಹಾಗೂ ಲಾವಣಿ ಪದಗಳನ್ನು ಸೃಷ್ಟಿಮಾಡಿದ್ದಾನೆ.

ಚಂದ್ರಶಾ ಸು. ೧೯೦೧ರಲ್ಲಿ ಜನಿಸಿ ೧೯೬೦ರಲ್ಲಿ ತೀರಿಕೊಂಡನೆಂದು ತಿಳಿದುಬರುತ್ತದೆ. ಕನ್ನಡ ಹಾಗೂ ಮರಾಠಿ ಈ ಎರಡೂ ಭಾಷೆಗಳನ್ನು ಬಲ್ಲ ಕವಿಗೆ ಬಯಲಾಟಗಳೆಂದರೆ ಪಂಚಪ್ರಾಣವಂತೆ. ಮುಮ್ಮೇಳದಲ್ಲಿ ನಿಂತು ಪದ ಹೇಳುತ್ತಿದ್ದವನಿವನು. ಅಷ್ಟೇ ಸುಮಧುರವಾದ ಕಂಚಿನ ಕಂಠ ಇವನದಾಗಿತ್ತೆಂದು ಜನ ಹೇಳುತ್ತಾರೆ. ಮೋಹರಮ್ ಕುಣಿತವನ್ನೂ ಈತನು ಬಲ್ಲವನಾಗಿದ್ದನು.

ಸಂಪೂರ್ಣ ರಾಮಾಯಣ, ವೀರಅಭಿಮನ್ಯು, ಸೀತಾಪಹರಣ ಮೊದಲಾದ ಡಪ್ಪಿನಾಟಗಳನ್ನು ಈತನು ಬರೆದಿದ್ದಾನೆ.

'ಭಳಿರೆ ಹನಮಂತ । ರಾಮರ ಧೂತ । ರಾಮರ ಧೂತ । ಪ್ರಖ್ಯಾತ ॥ ಪ ॥
ಸೇತುಬಂಧನಮಾಡಿ । ಸೀತಾನ್ನ ತಂದೊ ನೋಡಿ । ರಾವಣಾಂತಕ ಮಹಾಶೂರ ।
ಬಹುಧೀರ ॥ ೧ ॥
ನಮಿಸುವೆ ವಾಯುಪುತ್ರ । ಬಂದಿಳಿಯೊ ನನ್ನ ಹತ್ರ । ರಾಮಾಯಣಕ್ಕೆ-
ನೀನಾದ್ಯೊ ಸೂತ್ರ । ಆಹಾ ಸೂತ್ರಾ ॥ ೨ ॥

## ೪೨. ಜೋಳದರಾಶಿ ದೊಡ್ಡನಗೌಡರು : (೧೯೧೦-)

ಬಳ್ಳಾರಿ ಜಿಲ್ಲೆಯ ಜೋಳದರಾಶಿ ದೊಡ್ಡನಗೌಡರು ಮೂಲತಃ ಕೆಂಗಲ್ ಗ್ರಾಮದವರು. ಅಲ್ಲಿಯ ಪಂಪನಗೌಡ ಮತ್ತು ರುದ್ರಮ್ಮ ಅವರಿಗೆ ಸು. ೧೯೧೦ರಲ್ಲಿ ದೊಡ್ಡನಗೌಡರು ಮಗುವಾಗಿ ಹುಟ್ಟಿದರು. ತಾಯಿಯ ತಂದೆಯ ಆಸ್ತಿಗೆಂದು ಮುಂದೆ ಜೋಳದರಾಶಿ ಗ್ರಾಮದಲ್ಲಿ ಬಂದು ವಾಸಮಾಡಹತ್ತಿದರು.

ಗೌಡರು ಹೆಸರೇ ಹೇಳುವಂತೆ ಹಣದಿಂದಲೂ, ಗುಣದಿಂದಲೂ ದೊಡ್ಡಗೌಡರೇ. ಇವರು ಕಲಿತದ್ದು ಅಯ್ಯನವರ ಶಾಲೆಯಲ್ಲಿ. ಅದೂ ನಾಲ್ಕನೇ ಈಯತ್ತೆವರೆಗೆ ಮಾತ್ರ. ಅಲ್ಲಿಯ ಪಾಠ್ಯಕ್ರಮ ಗೌಡರನ್ನು ' ಗಮಕ ಕಲಾನಿಧಿ ' ಯನ್ನಾಗಿ ತಯಾರಿಸಿತು. ಸರಾಗವಾಗಿ, ಭಾವಕ್ಕೆ ತಕ್ಕ ಅರ್ಥವತ್ತಾದ ಪದ-ಪದ್ಯಗಳನ್ನು ಗೌಡರು ಹಾಡಲು ಕಲಿತದ್ದರಿಂದಲೇ ನಾಟ್ಯರಂಗ ಅವರನ್ನು ಕೈಮಾಡಿ ಕರೆಯಿತು. ನಾಟ್ಯಕಲಾ ಸೇವೆಯನ್ನು ಇಪ್ಪತ್ತು ವರುಷಕ್ಕೂ ಮಿಕ್ಕಿ ಸಲ್ಲಿಸಿ ಅಪಾರ ಅನುಭವ ಪಡೆದುಕೊಂಡರು. ಹಳ್ಳಿಯಲ್ಲಿಯೇ ಹುಟ್ಟಿ, ಹಳ್ಳಿಯಲ್ಲಿಯೇ ಬೆಳೆದ ಗೌಡರಿಗೆ ಹಳ್ಳಿಯಲ್ಲಿ ಇನ್ನೂ ಹೇಳಿಕೊಳ್ಳುವ ಸುಧಾರಣೆಯೇ ಇಲ್ಲ ಎಂದು ತಳಮಳಿಸಿದ್ದಾರೆ. ' ನೀವೇನಂತೀರಿ ? ' ಎನ್ನುವ ಪುಸ್ತಿಕೆಯೊಂದನ್ನು ಇತ್ತೀಚೆಗೆ ಪ್ರಕಟಿಸಿ ಹಳ್ಳಿಗಳತ್ತ ಕಣ್ತೆರೆದು ಅಲ್ಲಿ ಕಲೆ, ಹೃದಯ ಶ್ರೀಮಂತಿಕೆಗೆ ಬೆಲೆ ಕೊಡಿರಿ ಎಂದೂ ಕೇಳಿದ್ದಾರೆ.

ದೊಡ್ಡನಗೌಡರು ರಾಷ್ಟ್ರಪ್ರೇಮಿಗಳು. ಕನ್ನಡ ದೇವಿಯ ಸೇವೆಯನ್ನೂ ಮಾಡಿದ್ದಾರೆ, ಮಾಡುತ್ತಲಿದ್ದಾರೆ. ಖಡಾಖಂಡಿತವಾಗಿ ಪರರಾಜ್ಯದವರ ಆಕ್ರಮಣ ವನ್ನು ವಿರೋಧಿಸಿದ್ದಾರೆ. ಲಾವಣಿ ಹಾಡಿದ್ದಾರೆ, ಸ್ವತಃ ಕಟ್ಟಿ ಹಾಡಿದ್ದಾರೆ. ತತ್ವಪದ ರಚಿಸಿದ್ದಾರೆ. ಶಿಷ್ಟಸಾಹಿತ್ಯಕ್ಕೆ ಸೇರುವ ನಾಟಕ, ಭಾವಗೀತೆ, ವಚನ, ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ರಸವರ್ಷ, ನಮ್ಮ ಹಂಪೆ, ಬಸವಣ್ಣ, ರಾಘವ, ಶೂನ್ಯಸಂಪಾದನೆ, ರಾಮೇಶ ವಚನಗಳು ಅಲ್ಲದೆ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದ ನೂರಾರು ಭಜನೆ, ಪದ, ಲಾವಣಿ, ಮಂಗಳಾರತಿಗಳನ್ನೂ ಹಾಡಿ ಪ್ರಕಟಿಸಿದ್ದಾರೆ.

ಗೌಡರ ಮನೆ ದೊಡ್ಡದು, ಮನವೂ ದೊಡ್ಡದು. ಧರ್ಮಗುರುಗಳಿಗೆ, ಸಾಹಿತ್ಯ ಗುರುಗಳಿಗೆ, ಕಲಾರಸಿಕರಿಗೆ, ಸ್ನೇಹಿತರಿಗೆ— ಗೌಡರ ಮನೆಯೆಂದರೆ— ಆದೊಂದು

ಪ್ರಸಾದ ನಿಲಯವೇ. ಜೊತೆಗೆ ಅಲ್ಲಿ ವರುಷದಲ್ಲಿ ತಿಂಗಳೆರಡು ತಿಂಗಳಾದರೂ ಜ್ಞಾನ-ದಾಸೋಹ ನಡೆಯುತ್ತದೆ. ಪ್ರಸಿದ್ಧ ವಾಗ್ಮಿಗಳೂ, ಗಮಕ ಕಲಾನಿಧಿಗಳೂ, ಪ್ರವಚನ-ಕಾರರೂ ಆದ ಗೌಡರು ಸಾವಿರಾರು ಸಭೆ ಸಮ್ಮೇಲನಗಳಲ್ಲಿ ಭಾಗವಹಿಸಿದ್ದಾರೆ. ಗೋಕಾಕನಲ್ಲಿ ರೈತಪರಿಷತ್ತು ಸೇರಿದಾಗ (೧೯೪೭) ಜನಪದ ಸಮ್ಮೇಲನದ ಅಧ್ಯಕ್ಷತೆ ವಹಿಸಿದ್ದರು. ಇತ್ತೀಚೆಗೆ ೧೯೭೮ರಲ್ಲಿ ಕಲಬುರಗಿಯಲ್ಲಿ ನೆರವೇರಿದ ಅಖಿಲ ಕರ್ನಾಟಕ ೫ನೇ ಜಾನಪದ ಸಮ್ಮೇಲನದ ಅಧ್ಯಕ್ಷರಾದದ್ದು ಅವರ ಜಾನಪದದ ಬೆಡಗನ್ನು ಸಾರಿ-ಹೇಳುತ್ತದೆ. ೬೮ ವಯಸ್ಸಿನ ಗೌಡರು ಜಾನಪದ ಸಂಶೋಧಕರಿಗೆ ದೊಡ್ಡ ಆಸ್ತಿಯಾಗಿದ್ದಾರೆ.

**ಲಾವಣಿ :** (೧೯೪೩ನಲ್ಲಿ ರಚಿಸಿದ್ದು)

ಏನು ಹೇಳಲಿ ಬಳ್ಳಾರಿಯ ಘನ । ಕನ್ನಡ ಮಾತೆಯಪ್ರೇಮವನು ।
ಕಲಿತನವೀರರ ಕಾರ್ಯವನು । ಕನ್ನಡ ಕೆಚ್ಚೆದೆ ಧೈರ್ಯವನು ।
ಕನ್ನಡಿಯಂದದಿ ಬೆಳಬೆಳಗುವ ಬಲು । ಕನ್ನಡ ತರುಣರ ತೇಜವನು ।
.... .... .... .... .... .... .... .... .... ....
ಆಂಧ್ರರ ಕೋಳಿಯು ಕೂಗನು ಕೇಳುತ । ಕಣ್ದೆರೆದಿಹ ಕರುನಾಡಿಗರೇ
ಕಣ್ಮುಚ್ಚದಿರೊಡನಾಡಿಗರೆ । ಎಚ್ಚರದಿಂದಿರಿ ಬಾಂಧವರೇ
ಕನ್ನಡ ನಾಡಿನ ಕಲ್ಯಾಣಕೆ ನೀವ್ । ಕಂಕಣ ಕಟ್ಟಿರಿ ಮಾನಿತರೇ ।

ಇವರ ಭಕ್ತಿಗೀತೆಗಳಲ್ಲಿ 'ಶಿವ ನಿನ್ನ ಪಾದವ ನಂಬಿದೆ' ಎನ್ನುವ ಹಾಡು ಬಹು ಜನಪ್ರಿಯ-ವಾದ ಹಾಡಾಗಿದೆ. (Record ಕೂಡ ಆಗಿರುತ್ತದೆ.)

ಶಿವ ನಿನ್ನ ಪಾದವ ನಂಬಿದೆ— ಎನ್ನ
ಕಾಯುವ ಭಾರವು ನಿನ್ನದು ಯೆಂದೇ ॥ ಪ ॥

ನಾನೆಂಬ ಮಮಕಾರದಿಂದೆ— ನಾನಾ
ಜನ್ಮಗಳೆಲ್ಲವ ತಿರುಗಿ ನಾಬಂದೆ
ಎನಗಿನ್ನು ದಾರಿಯು ತೋರದು ಮುಂದೆ
ದೀನ ರಕ್ಷಕ ನೀ ಬಾರಯ್ಯ ತಂದೆ ॥ ೧ ॥

ಭಕುತರ ಬಂಟ ನೀನಂತೇ— ಮುನ್ನ
ಬಾಣನ ಬಾಗಿಲ ಕಾಯ್ದವನಂತೆ
ಫಾಲಲೋಚನ ನಿನ್ನ ಭಜಿಸಿದ ಉಪಮನ್ಯು
ಬಾಲಭಾವಕೆ ಮೆಚ್ಚಿ ಕ್ಷೀರವಾರಿಧಿಯಿತ್ತೆ ॥ ೨ ॥

ತನುಮನಧನ ನಿನ್ನದಯ್ಯ
ನಿನ್ನ ಶರಣರ ಸೇವೆಯುನ್ನದು ನೋಡಯ್ಯ
ಘನಮುಕ್ತಿ ಪದವಿಯ ನಾನೊಲ್ಲೆನಯ್ಯ
ಅನುದಿನ ತವನಾಮ ನೆನೆಯುವೆನಯ್ಯ ॥ ೩ ॥

ಶಿರದೊಳು ಗಂಗೆಯ ಧರಿಸಿ–ವರ
ಗಿರಿಜಾತೆಯನು ವಾಮಾಂಕದೊಳಿರಿಸಿ
ಮೆರೆಯುವ ಪರಮೇಶ ಮರಣವಿನಾಶ
ಸಿರಿಜೋಳದ ರಾಶಿವಾಸ ರಾಮೇಶ ॥ ೪ ॥

## ೮೩. ತಿಗಡೊಳ್ಳಿಯ ಬಿಷ್ಟಪ್ಪ : (೧೯೧೫—)

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿಯ ತಿಗಡೊಳ್ಳಿ ಗ್ರಾಮವು ಜನಪದ ಕಲಾಕಾರರ ಜನ್ಮಭೂಮಿಯಾಗಿದೆ. ಪದ ಹೇಳುವ, ಹಾಡು ರಚಿಸುವ, ಬಯಲಾಟ ಆಡುವ, ಕಥೆ ರಚಿಸುವ ಕಲಾಕಾರರಿಗೇನೂ ಕೊರತೆಯಿಲ್ಲ. ಕುಸ್ತಿಯ ಪಟುಗಳೂ ಇಲ್ಲಿ ಇದ್ದಾರೆ. ದೇಶಭಕ್ತರೂ ಸ್ವಾತಂತ್ರ್ಯ ಹೋರಾಟಗಾರರೂ ಇಲ್ಲಿ ಜನಿಸಿದ್ದಾರೆ.

ಬಿಷ್ಟಪ್ಪ ದಿ. ೯–೪–೧೯೧೫ರಂದು ತಿಗಡೊಳ್ಳಿಯಲ್ಲಿ ಹುಟ್ಟಿದರು. ತಂದೆ ಮಂಡೇದ ಕುಬೇರಪ್ಪ, ಜೈನ ಧರ್ಮದವರು. ತಿಗಡೊಳ್ಳಿಯಲ್ಲಿ ೫ನೇ ಇಯತ್ತೆ ವರೆಗೆ ಅಭ್ಯಾಸಮಾಡಿ ೬ ನೆಯ ಇಯತ್ತೆಗೆ ಸಮೀಪದ ಕಿತ್ತೂರಿಗೆ ಹೋದರು. ಆಗ ಸ್ವಾತಂತ್ರ್ಯ ಸಂಗ್ರಾಮದ ಕಹಳೆ ಎಲ್ಲೆಡೆಗೂ ಹರಡಿತ್ತು. ಆ ದಾಳಿಯಲ್ಲಿ ಬಿಷ್ಟಪ್ಪ ಅವರೂ ಸೇರಿಕೊಂಡರು. ಗಾಂಧೀಜಿಯವರ ಅಸಹಕಾರ ಚಳುವಳಿಯಲ್ಲಿ ಸಕ್ರಿಯ ಭಾಗವಹಿಸಿದ ಬಿಷ್ಟಪ್ಪ ಅವರು ವೀರಗೀತೆಗಳನ್ನು (ಲಾವಣಿ) ಸ್ವತಃ ಕಟ್ಟಿ ಜನಪದ ಧಾಟಿಯಲ್ಲಿ ಹಾಡಿದರು. ಇದರಿಂದಾಗಿ ಕಾರಾಗೃಹವಾಸವನ್ನು ಅನುಭವಿಸಿದರು. ಶಿಕ್ಷಣ ಅಷ್ಟಕ್ಕೇ ನಿಂತು ಬಿಟ್ಟಿತು.

ಕಾರಾಗೃಹದಲ್ಲಿದ್ದಾಗ ತಂದೆ-ತಾಯಿ, ಚಿಕ್ಕಪ್ಪ ಮೊದಲಾದವರು ತೀರಿಕೊಂಡರೂ ಅವರ ಅಂತ್ಯಯಾತ್ರೆಗೂ ಕೂಡ ಬಿಷ್ಟಪ್ಪ ಅವರಿಗೆ ಹೋಗುವದಾಗಲಿಲ್ಲ. ಸೆರೆಮನೆ ಯಿಂದ ಬಂದ ಮೇಲೆ ಮನೆತನದ ಭಾರವನ್ನೂ ನೋಡಿಕೊಳ್ಳುವ ಜವಾಬ್ದಾರಿಯಿಂದಾಗಿ ಮುಂದೆ ಕಲಿಯುವುದೂ ಆಗಲಿಲ್ಲ. ಊರಲ್ಲಿ ಆಗ ಪ್ರಸಿದ್ಧಿ ಪಡೆದ ಶ್ರೀಕೃಷ್ಣ ಪಾರಿಜಾತ ಆಟದಲ್ಲಿ ಸೇರಿದರು. ಜನರ ಮೆಚ್ಚುಗೆ ಪ್ರೋತ್ಸಾಹದಿಂದಾಗಿ ಹಾಡುವ ಕಲೆಯಲ್ಲಿ ಪಳಗಿದರು. ಸ್ವತಃ ಹಲವಾರು ಹಾಡು ರಚಿಸಿದರು. ತಮ್ಮ ಚಿಕ್ಕಪ್ಪನಿಂದ ಜನಪದ

ಹಾಡುಗಾರಿಕೆಯ ಗತ್ತನ್ನು ಕಲಿತುಕೊಂಡಿದ್ದ ಬಿಷ್ಟಪ್ಪನವರಿಗೆ ಜಾನಪದ ಕವಿಯಾಗುವ ಭಾಗ್ಯ ಲಭಿಸಿತು. ಹಲವಾರು ಶರಣ-ಶರಣೆಯರ, ತೀರ್ಥಂಕರರ, ರಾಷ್ಟ್ರದ ಮುಖಂಡರ, ಸಂಪ್ರದಾಯ ಕುರಿತಾದ ನೂರಾರು ಹಾಡುಗಳನ್ನು ರಚಿಸಿ ಕೀರ್ತಿಶೇಷರಾಗಿದ್ದಾರೆ. ೧೯೫೩ರಿಂದ ಧಾರವಾಡ ಆಕಾಶವಾಣಿ ಕೇಂದ್ರದ ಕಲಾಕಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕವಿ ತಮ್ಮ ಹಾಡುಗಳಲ್ಲಿ ಶಾಂತಿನಾಥನನ್ನು ಸ್ಮರಿಸಿದ್ದಾರೆ. ಬಿಷ್ಟಣ್ಣ ಎನ್ನುವ ಹೆಸರನ್ನೂ ಸೇರಿಸಿದ್ದಾರೆ. 'ವರಪುರದ ತಿಗಡೊಳ್ಳಿ ಗುರುಶಾಂತಿನಾಥನ ದಯದಿಂದ ಭಕ್ತಿಯಿಂದ ಬಿಷ್ಟಣ್ಣ ಮಾಡ್ಯಾನ'. 'ಲೋಲಾಡುವ ಬಿಷ್ಟಣ್ಣ ಲೀಲೆಯಿಂದ ಹೇಳ್ಯಾನ-ಅಲಸ್ಯಮಾಡದೆ ಅನ್ನರೀ ಮಂತ್ರ । ಕೋಲ ಆಡುತ ತಿಗಡೊಳ್ಳಿ ಶಾಂತಿನಾಥನ ದಯ ದಿಂದ ಪದ ಮಾಡತಾನ ಕೂತ ಸ್ವತಂತ್ರ'.

ಬಿಷ್ಟಪ್ಪ ಕವಿ ಹಾಡುಗಾರರಾಗಿ, ನಟರಾಗಿ, ಶಿಕ್ಷಕರಾಗಿ, ಸ್ವಾತಂತ್ರ್ಯಯೋಧರಾಗಿ-ಧರ್ಮವಂತರಾಗಿ ಬಾಳುತ್ತಿರುವುದು ಜಾನಪದ ಲೋಕಕ್ಕೊಂದು ಭಾಗ್ಯ.

## ೮೪. ತಾಳಕೇರಿ ಬಸವರಾಜ: (೧೯೩೦—)

ರಾಯಚೂರ ಜಿಲ್ಲೆಯ ಯಲಬುರ್ಗಿ ತಾಲೂಕಿನ ತಾಳಕೇರಿ ಗ್ರಾಮದ ಶ್ರೀ ಬಸವರಾಜರು ಕರ್ನಾಟಕದ ಜನತೆಗೆಲ್ಲ ಚಿರಪರಿಚಿತರು. ಹುಟ್ಟಿದ್ದು ರಾಯಚೂರು ಜಿಲ್ಲೆಯಲ್ಲಾದರೂ ಕಲಾಕಾರರಾಗಿ ಕಂಗೊಳಿಸಿದ್ದು ಗದುಗಿನ ಪುಣ್ಯಾಶ್ರಮದಲ್ಲಿ.

ತಾಳಕೇರಿಯ ಹೂಗಾರ ಮನೆತನದ ಬಾಳಪ್ಪ ಮತ್ತು ಸಾವಿತ್ರೆಮ್ಮ ಅವರಿಗೆ ಮಗನಾಗಿ ಜನಿಸಿದ ಬಸವರಾಜ ಹುಟ್ಟಿದ್ದು ದಿ. ೧೫–೮–೧೯೩೦ರಲ್ಲಿ. ಕುಲದ ಉದ್ಯೋಗ ಹೂಗಾರಿಕೆಯಾದರೂ ಒಕ್ಕಲುತನ ಮಾಡುತ್ತಿದ್ದರು. ಇವರ ಮನೆತನ ಅದೊಂದು ಕಲಾನಿಕೇತನ. ಬಸವರಾಜರ ತಂದೆ ಬಾಳಪ್ಪ ಸ್ವತಃ ಖಣಿ, ಮೃದಂಗ, ತಬಲಾ ಬಾರಿಸುವಲ್ಲಿ ನಿಪುಣರಿದ್ದರು. ಸಂಗ್ಯಾಬಾಳ್ಯಾ ಮೊದಲಾದ ಡಪ್ಪಿನಾಟಕಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದರು. ವಂಶಪಾರಂಪರ್ಯವಾಗಿ ಬಂದ ಈ ಕಲೆ ಬಸವ-ರಾಜರಲ್ಲಿ ಇನ್ನೂ ಬೆಳೆಯಿತು. ಅದಕ್ಕೆ ಕಾರಣ–ಅವರ ಗುರುಗಳು.

ಬಡತನದ ಪರಿಸ್ಥಿತಿಯಿಂದಾಗಿ ಬಸವರಾಜರಿಗೆ ಓದಿಸುವ ಶಕ್ತಿ ಬರಲಿಲ್ಲ–ತಂದೆ ಬಾಳಪ್ಪನಿಗೆ. ಗಾಂವಠಿ ಶಾಲೆಯಲ್ಲಿ ಅದೂ ಒಂದು ಹೊತ್ತು ಆಕಳ ಕಾಯುತ್ತ. ಗುರು ಸೇವೆ ಮಾಡುತ್ತ–ಅಂತೂ ಓದು ಬರಹ ಬರುವಷ್ಟರ ಮಟ್ಟಿಗೆ ಅಂದರೆ ೨ನೇಯ ಈಯತ್ತೆವರೆಗೆ ಓದಿದರು ಬಸವರಾಜ. ಆಗ ಆ ಭಾಗದಲ್ಲಿ ಸಂತರೆಂದು ಪ್ರಸಿದ್ಧೀ

ಪಡೆದ ಗಿರಿಯಪ್ಪ ಮಾಸ್ತರರ ಆಶ್ರಮದಲ್ಲಿದ್ದುಕೊಂಡು ಬಸವರಾಜರು ಸಂಗೀತ ಅಭ್ಯಾಸ ಮಾಡಿದರು. ಇನ್ನೂ ಹೆಚ್ಚಿನ ಅಭ್ಯಾಸಕ್ಕೆಂದು ಗದುಗಿನ ಪಂಚಾಕ್ಷರೀ ಗವಾಯಿಗಳ ಪುಣ್ಯಾಶ್ರಮ ಸೇರಿದರು. ನಾಟ್ಯಸಂಘದಲ್ಲಿ ನಟರಾಗಿ ಸೇವೆಸಲ್ಲಿಸಿದರು. ಪಂ. (ಡಾ) ಪುಟ್ಟರಾಜ ಗವಯಿಗಳ ಸಾನಿಧ್ಯದಲ್ಲಿದ್ದುಕೊಂಡು ಸಂಗೀತ ಕಲಿತರು. ಇದರಿಂದಾಗಿ ಬಸವರಾಜರು ಶ್ರೇಷ್ಠ ಕಲಾಕಾರರಾಗಿ ಬೆಳೆದರು. ನಾಟ್ಯಕಲಾಚತುರ, ನಾಟ್ಯಕಲಾ-ಚಂದ್ರ ಮೊದಲಾದ ಬಿರುದುಗಳನ್ನೂ ಹೊತ್ತ ಬಸವರಾಜರಿಗೆ ಜಾನಪದ ಧಾಟಿಯಲ್ಲಿ ಹಾಡುವುದೆಂದರೆ ಹಿರಿ ಹಿರಿ ಹಿಗ್ಗು. ನೃತ್ಯಕಲೆಯನ್ನೂ ಬಲ್ಲವರು. ಮೂರ್ತಿ ಚಿಕ್ಕದಾದರೂ ಬಸವರಾಜರ ಕೀರ್ತಿ ಕರ್ನಾಟಕವಷ್ಟೇ ಅಲ್ಲ – ಭಾರತವನ್ನೆಲ್ಲಾ ವ್ಯಾಪಿಸುವಂತಾಯ್ತು.

ಚಿಕ್ಕಂದಿನಿಂದಲೂ ಹಾಡುವ ಗೀಳು ಇಟ್ಟುಕೊಂಡಿದ್ದ ಹುಟ್ಟ ಕಲಾಕಾರ ಬಸವ ರಾಜರು ಸಾವಿರಾರು ಹಾಡುಗಳನ್ನು ರಚಿಸಿದ್ದಾರೆ. ಹತ್ತಿಪ್ಪತ್ತು ಜನಪದ ಪುಸ್ತಿಕೆಗಳೂ ಪ್ರಕಟಗೊಂಡಿವೆ. ಹತ್ತಾರು ನಾಟಕಗಳನ್ನೂ ಬರೆದಿದ್ದಾರೆ. ಸುಪ್ರಭಾತ, ನಾಮಾವಳಿ, ತತ್ವಪದಗಳನ್ನೂ ಹೆಣೆದಿದ್ದಾರೆ. ೧೯೬೪ರಿಂದ ಭಾರತಸರ್ಕಾರದ ಪ್ರಚಾರ ಶಾಖೆಯ ಜನಪದ ಸಂಗೀತಗಾರರಾಗಿ ಸೇವೆಸಲ್ಲಿಸುತ್ತಿದ್ದಾರೆ. ಕಾಶ್ಮೀರ, ನೇಪಾಳ, ಆಸ್ಸಾಂ, ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ದಿಲ್ಲಿ ಮೋದಲಾದ ಕಡೆ ಕನ್ನಡ ಜನಪದ ಸಂಗೀತದ ಸುಧೆಯನುಣಬಡಿಸಿದ ಶ್ರೇಯಸ್ಸು ಬಸವರಾಜರಿಗೆ. ಕನ್ನಡ, ತಮಿಳು, ತೆಲಗು, ಹಿಂದಿ, ಮರಾಠಿ, ಉರ್ದು, ಇಂಗ್ಲೀಷ ಭಾಷೆ ಬಲ್ಲ ತಾಳಕೇರಿಯವರ ಜನ ಪ್ರಿಯತೆ ಅನುಕರಣೆಯುವೂ, ಆದರ್ಶವೂ ಆಗಿದೆ.

ಬಸವರಾಜರು ಹೆಣ್ಣುಮಕ್ಕಳ ಕುರಿತು ಬರೆದ ಹಾಡುಗಳಲ್ಲಿ ತಾಯಿಯ ಹಾಡಂತೂ ಜನ್ನನ್ನು ಮಂತ್ರಮುಗ್ಧನನ್ನಾಗಿ ಮಾಡಿದೆ. ಕಲಬುರ್ಗಿ ಶರಣಬಸವೇಶ್ವರರ ಕುರಿತು ಬರೆದ 'ಎಂಥ ಶಕ್ತಿಯಪ್ಪಾ ಶರಣ ಬಸವಣ್ಣಾ' ಎಂಬ ಹಾಡೂ ಅಷ್ಟೇ ಪ್ರಸಿದ್ಧೀ ಪಡೆ-ದಿರುತ್ತದೆ. ಇವರ ಹಾಡುಗಳಲ್ಲಿ 'ಕಂದ ಮುದ್ದು ಬಸವ' ಎಂಬ ಅಂಕಿತವಿದೆ. ಬಡತನದಲ್ಲಿಯೇ ಹುಟ್ಟಿ, ಬಡತನದಲ್ಲಿಯೇ ಬೆಳೆದು ಬಂದ ಕವಿ ಬಸವರಾಜರು ಶ್ರೀಮಂತ ಕಲಾಕಾರ ಎನ್ನುವುದನ್ನು ನಾಡು ಮರೆಯುವಂತಿಲ್ಲ.

# ಕನ್ನಡ ಭಕ್ತಿ ಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ

● ಸಣ್ಣನಂಜೇಗೌಡ

ಮಧ್ಯಕಾಲೀನ ಯುಗದಲ್ಲಿ ಕಾಣಿಸಿಕೊಂಡ ಭಕ್ತಿ ಆಂದೋಳನವು ಕರ್ನಾಟಕದ ಸಾಂಸ್ಕೃತಿಕ, ಸಾಮಾಜಿಕ ಮತ್ತು ರಾಜಕೀಯ ರಂಗಗಳಲ್ಲಿ ಗಮನಾರ್ಹ ಬದಲಾವಣೆಗಳನ್ನು ಉಂಟು ಮಾಡಿತು. ಭಕ್ತಿ ಆಂದೋಳನವು ಸಾಹಿತ್ಯವನ್ನು ಪ್ರಮುಖ ಮಾಧ್ಯಮವನ್ನಾಗಿಸಿಕೊಂಡು ಆ ಮೂಲಕ ತನ್ನ ಮೌಲ್ಯ ಹಾಗೂ ಉದ್ದೇಶಗಳನ್ನು ಪರಿಚಯಿಸಿತು. ಇಂಥ ಪ್ರಯತ್ನದಲ್ಲಿ ಸಂಸ್ಕೃತ ಪುರಾಣೇತಿಹಾಸಗಳು ಬೆನ್ನೆಲುಬಾಗಿ ಪರಿಣಮಿಸಿದವು. ಶಿವಪಾರಮ್ಯವನ್ನು ಸಾರಿದ ಶೈವ ಪಂಥವಾಗಲೀ, ವಿಷ್ಣುಪಾರಮ್ಯವನ್ನು ಸಾರಿದ ವೈಷ್ಣವ ಪಂಥವಾಗಲೀ— ಅವು ಯಾವುದೇ ಕ್ರಾಂತಿಕಾರಕ ಬದಲಾವಣೆಗಳೊಡನೆ ಪ್ರಾರಂಭವಾಗಿದ್ದರೂ ಮೂಲತಃ ಸಂಸ್ಕೃತದ ವೈದಿಕ, ಶೈವ ಅಥವಾ ವೈಷ್ಣವ ಸಾಹಿತ್ಯಗಳನ್ನು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಅವಲಂಬಿಸಿಯೇ ಬೆಳೆದಂಥವುಗಳು.

ವೇದ, ಉಪನಿಷತ್ತು, ಆಗಮ, ಪುರಾಣ–ಇವು ಎಲ್ಲ ವೈದಿಕ ಮತಗಳಿಗೂ, ಧರ್ಮಗಳಿಗೂ ತಳಹದಿ. ಸ್ಮೃತಿಗಳಲ್ಲಿ 'ವೇದೋ ಧರ್ಮ ಮೂಲಂ', 'ವೇದೋಖಿಲಂ ಧರ್ಮ ಮೂಲಂ' ಎಂದು ಹೇಳಿದೆ. ಮತ್ತೊಂದು ಕಡೆ.

"ಪರ್ಯೈಃ ಶೈವ್ವಾದಿಭಿರ್ದಿವ್ಯೈರಾಗಮೈಃ ಪಾಶಮೋಕ್ಷೈಃ
ವಿಶಿಷ್ಟ ಭೋಗ ವಿಭವ ಶಿವತ್ವ ಫಲದಾಯಿಭಿಃ — ಎಂದು

ಆಗಮಗಳ ಪ್ರಾಶಸ್ತ್ಯವನ್ನು ಹೇಳಿದೆ. ಸೂತಪೌರಾಣಿಕನು

"ವಕ್ಷ್ಯಾಮಿ ಪರಮಂ ಪುಣ್ಯಂ ಪುರಾಣಂ ವೇದ ಸಂಮಿತಂ
ಶಿವಜ್ಞಾನಾರ್ಣವಂ ಸಾಕ್ಷಾದ್ಭುಕ್ತಿ ಮುಕ್ತಿ ಫಲಪ್ರದಂ" — ಎಂದು

ಪುರಾಣಗಳ ಮಹತ್ವವನ್ನು ಸಾರಿದ್ದಾನೆ. ಆಚಾರ್ಯರುಗಳು ಸಹ ವೇದಾದಿಗಳನ್ನು ಆಶ್ರಯಿಸಿಯೇ ತಮ್ಮ ತಮ್ಮ ಸಿದ್ಧಾಂತಗಳನ್ನು ಸ್ಥಾಪಿಸಿದ್ದಾರೆ.[1] ಇಂಥ ಸಂಸ್ಕೃತ ಸಾಹಿತ್ಯ ಪರಂಪರೆಯಿಂದ ಇತರ ಭಾರತೀಯ ಭಕ್ತಿ ಸಾಹಿತ್ಯಗಳಂತೆ ಕನ್ನಡ ಭಕ್ತಿ ಸಾಹಿತ್ಯವೂ ಪ್ರಭಾವಿತವಾಗಿದೆ. ಕಾವ್ಯ, ವಚನ, ಕೀರ್ತನೆ–ಇವೆಲ್ಲ ಸಾಹಿತ್ಯ ಪ್ರಕಾರಗಳು ಒಂದಲ್ಲಾ ಒಂದು ರೀತಿಯಲ್ಲಿ ಸಂಸ್ಕೃತ ಮೂಲ ಗ್ರಂಥಗಳನ್ನು ಆಧರಿಸಿದವುಗಳೇ ಆಗಿವೆ.

ಭಕ್ತಿ ಕವಿಗಳು ಜನಸಾಮಾನ್ಯರ ಭಾಷೆಯಲ್ಲಿ ಸಾಹಿತ್ಯ ಸೃಷ್ಟಿಸಿದರೂ ಸಂಸ್ಕೃತ ಭಾಷೆಯನ್ನಾಗಲೀ, ಅದರ ಸತ್ವವನ್ನಾಗಲೀ ಅವರು ಎಂದೂ ವಿರೋಧಿಸಿದವರಲ್ಲ. ಆದರೆ "ಕಲ್ಲಿಯ ಹಾಕಿ ನೆಲ್ಲ ತುಳಿದು ಗುಬ್ಬಿಯು ಸಿಕ್ಕಿಸುವ ಕಳ್ಳನಂತೆ ವಾಗದ್ವೈತವ ಕಲಿತು ಸಂಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು........" ಸಾಮಾನ್ಯರನ್ನು ಮೋಸ ಮಾಡುತ್ತಿದ್ದವರನ್ನು, ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಕಂದಾಚಾರಗಳನ್ನು ವಿರೋಧಿಸಿದ್ದಾರೆ; ಸಂಸ್ಕೃತವನ್ನು ಸ್ವಂತ ಆಸ್ತಿಯೆಂದು ಪರಿಗಣಿಸಿ, ಅದನ್ನು ಸಂಪ್ರದಾಯದ ಚೌಕಟ್ಟಿನಲ್ಲಿ ಇಡಲು ಯತ್ನಿಸಿದವರನ್ನು ಪ್ರತಿಭಟಿಸಿದ್ದಾರೆ. ವಾಸ್ತವ ಸಂಗತಿಯೆಂದರೆ "ಸಂಸ್ಕೃತದ ಬಳಕೆಯ ಬಗ್ಗೆ ವಚನಕಾರರಿಗೆ ಮಡಿಯೆಂಬುದಿಲ್ಲ.... ಅವರಲ್ಲಿ ಹಲವರಿಗೆ ಸಂಸ್ಕೃತ ಪಾಂಡಿತ್ಯವಿದ್ದಿತು. ಆದರೆ, ಸಂಸ್ಕೃತದ ಮಿತಿಮೀರಿದ ಬಳಕೆ ಅವರಲ್ಲಿ ಕಡಿಮೆ. ಅನೇಕ ಸಂಸ್ಕೃತ ಪದಗಳನ್ನು ಹೊಸ ಅರ್ಥದಲ್ಲಿ ಬಳಿಸಿ ಅವುಗಳಿಗೆ ಹೊಸ ಅರ್ಥ ಬರುವಂತೆ ಮಾಡಿದ್ದಾರೆ" ಎಂಬ ವಿಮರ್ಶಕರ ಮಾತು ಸತ್ಯ ದೂರವಾದುದಲ್ಲ.[2]

ಹರಿದಾಸರೂ ಕನ್ನಡ ಮತ್ತು ಸಂಸ್ಕೃತ –ಇವೆರಡು ಭಾಷೆಗಳಲ್ಲೂ ವಿಪುಲವಾಗಿ ಸಾಹಿತ್ಯ ಕೃಷಿ ನಡೆಸಿದ್ದಾರೆ. ಇವರು ಸಂಸ್ಕೃತದಲ್ಲಿ ಅನೇಕ ಉದ್ದಾಮ ಕೃತಿಗಳನ್ನು ರಚಿಸಿದರಲ್ಲದೆ, ಸಂಸ್ಕೃತ ಸಾಹಿತ್ಯದಲ್ಲಿನ ತಿರುಳನ್ನು ಕನ್ನಡದಲ್ಲಿ ಕೀರ್ತನೆಗಳ ಮೂಲಕ ಪರಿಚಯಿಸಿದ್ದಾರೆ. ಆರ್. ಎಸ್. ಪಂಚಮುಖಿಯವರು ಶ್ರೀ ವ್ಯಾಸತೀರ್ಥರನ್ನು ಕುರಿತಂತೆ[3] "........used a double-edged weapon of defence as well as offence, in Sanskrit and Kannada and appealed to the head and heart of the scholar as well as the layman" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

---

1. ನೋಡಿ : ಎಂ. ಆರ್. ಶ್ರೀನಿವಾಸಮೂರ್ತಿ : ವಚನಧರ್ಮಸಾರ. ಪು. ೧೧ (ವ.ಸಾ.)
2. ಎಂ. ಚಿದಾನಂದಮೂರ್ತಿ : ವಚನಸಾಹಿತ್ಯ. ಪು. ೧೭೨.
3. ಆರ್. ಎಸ್. ಪಂಚಮುಖಿ : ಕರ್ನಾಟಕದ ಹರಿದಾಸ ಸಾಹಿತ್ಯ. ಪು. XXV (ಕ.ಹ.ಸಾ.)

ಶ್ರೀ ವಾದಿರಾಜಸ್ವಾಮಿಯವರು :

..................................

ಪರಮಧ್ವಶಾಸ್ತ್ರವೇ ಸಕಲ ಶಾಸ್ತ್ರಧಿಕೆಂದು
ಶಿರವರಿದು ಮುಂದಿರಿಸಲೋ
ಪರಮತ ಜಾಲಗಳ ವೇದ ವಿರುದ್ಧವೆಂದು
ಶರಧಿಯನು ನೆರೆ ದಾಟಲೋ ಪ್ರಾಣಿ
ಭಾಗವತಶಾಸ್ತ್ರವೇ ಬಹು ಭಾಗ್ಯವೆಂತೆಂದು
ಪರ್ವತಾಗ್ರದಿ ಧುಮುಕಲೋ....[4]

-ಎಂದು ಹೇಳುವದರ ಮೂಲಕ ಮಧ್ವರ ದ್ವೈತ ಸಿದ್ಧಾಂತವನ್ನಲ್ಲದೆ ವೇದೋಪನಿಷತ್ತು ಮತ್ತು ಭಾಗವತಗಳ ಪ್ರಾಮುಖ್ಯತೆಯನ್ನು ಎತ್ತಿ ಹಿಡಿದಿದ್ದಾರೆ. ವೇದಾಂತ ಪ್ರಮೇಯಗಳನ್ನು ಸರಳ ಕನ್ನಡದಲ್ಲಿ ತಿಳಿಸುವ ಪ್ರಯತ್ನ ಶ್ರೀ ಜಗನ್ನಾಥದಾಸರ ಹರಿಕಥಾಮೃತಸಾರದಲ್ಲಿದೆ. ಈ ಕೃತಿಯ ರಚನೆಗೆ ಮೊದಲು ಅವರು ಸಾಕಷ್ಟು ಸಂಸ್ಕೃತ ಗ್ರಂಥಗಳ ಅಧ್ಯಯನ ನಡೆಸಿರುವುದು ಕಂಡುಬರುತ್ತದೆ. ಹರಿಕಥಾಮೃತದಂತಹ ಕೃತಿ ರಚನೆ "ಸಾಮಾನ್ಯ ಒಂದೆರಡು ಶಾಸ್ತ್ರಗಳನ್ನು ಓದಿದ ಪಂಡಿತರಿಗೆ ಸಾಧ್ಯವಿಲ್ಲ. ಇದಲ್ಲದೆ ಅಷ್ಟಾದಶ ಪುರಾಣಗಳು, ವಿಷ್ಣು-ರಹಸ್ಯಾದಿ ಉಪಪುರಾಣಗಳು, ತಂತ್ರಾಗಮ ಗ್ರಂಥಗಳು, ಸ್ಮೃತಿಗಳು, ವೇದ ಉಪನಿಷತ್ತುಗಳು ಇವೆಲ್ಲವುಗಳನ್ನು ಚೆನ್ನಾಗಿ ಅರಿತಿರಬೇಕು"....[5] ಎಂಬ ಅಭಿಪ್ರಾಯವಿದೆ.

ಕನ್ನಡ ಭಕ್ತಿ ಸಾಹಿತ್ಯದ ಮೇಲೆ ಸಂಸ್ಕೃತ ಸಾಹಿತ್ಯದ ಪ್ರಭಾವ ಪ್ರಮುಖವಾಗಿ ಎರಡು ರೀತಿಯಲ್ಲಿ ಆಗಿರುವದನ್ನು ಗುರುತಿಸಬಹುದು :

1) ಸಂಸ್ಕೃತದ ರಾಮಾಯಣ, ಭಾರತ, ಪುರಾಣಗಳು ಮತ್ತು ಭಾಗವತಗಳನ್ನು ಆಧರಿಸಿ ರಚಿತವಾದ ಕಾವ್ಯಗಳು ಮತ್ತು ಸಂಸ್ಕೃತಶಾಸ್ತ್ರ ಗ್ರಂಥಗಳ ಕನ್ನಡ ಅನುವಾದಗಳಲ್ಲಿ ಪ್ರಮುಖವಾಗಿ ದೇಶಿ ಛಂದಸ್ಸುಗಳಲ್ಲಿ–

2) ವಚನಗಳು ಮತ್ತು ಕೀರ್ತನೆಗಳಲ್ಲಿ ಹೇಳಬೇಕಿರುವ ವಿಷಯಕ್ಕೆ ಆಧಾರವಾಗಿ ಉಪನಿಷದಾದಿಗಳಿಂದ ಆಧಾರಗಳನ್ನು ಉದ್ಧರಿಸುವಲ್ಲಿ ಅಥವಾ ಅವುಗಳ ಸಾರವನ್ನು ವಚನ ಮತ್ತು ಕೀರ್ತನೆಗಳ ಮೂಲಕ ಹೇಳುವಲ್ಲಿ.

---

4. ಅದೇ. ಪು. ೨೯೭.

5. ಅದೇ, ಪು. ೨೭೬.

ಮೊದಲನೆಯ ರೀತಿಯ ಪ್ರಭಾವವನ್ನು ಭಕ್ತಿಯನ್ನೇ ಕೇಂದ್ರ ವಸ್ತುವನ್ನಾಗಿಟ್ಟು ಕೊಂಡು ಕನ್ನಡದಲ್ಲಿ ರಚಿತವಾದ ರಾಮಾಯಣ, ಭಾರತ, ಭಾಗವತ ಮತ್ತು ಕೆಲವು ಸಂಸ್ಕೃತ ಪೌರಾಣಿಕ ಕಥೆಗಳನ್ನು ಆಧರಿಸಿದ ಕಾವ್ಯಗಳಲ್ಲಿ ಗುರುತಿಸಬಹುದು. ರಾಮಾ-ಯಣ, ಮಹಾಭಾರತಗಳನ್ನು ಪಂಪಾದಿಗಳು ಮೊಟ್ಟಮೊದಲು ಕನ್ನಡೀಕರಿಸುವ ಪ್ರಯತ್ನಮಾಡಿದ್ದರೂ, ಅವರ ಉದ್ದೇಶ, ವ್ಯಾಪ್ತಿ ಭಕ್ತಿಕವಿಗಳಿಗಿಂತ ಭಿನ್ನವಾಗಿತ್ತು. ಅಲ್ಲದೆ ಜೈನಧರ್ಮಕ್ಕನುಗುಣವಾಗಿ –ಮೂಲಗಳನ್ನು ಅನುಸರಿಸಿದರೂ– ಕೆಲವೊಂದು ಬದಲಾವಣೆಗಳನ್ನು ಮಾಡಿಕೊಂಡರು. (ಉದಾ : ಪಂಪ ರಾಮಾಯಣ). ಹೀಗಾಗಿ ಜೈನಧರ್ಮ ಎಲ್ಲ ರಂಗಗಳಲ್ಲೂ ತನ್ನ ಪ್ರತಿಷ್ಠೆಯನ್ನು ಸ್ಥಾಪಿಸಲು ಯತ್ನಿಸಿದಾಗ ಸ್ವಾಭಾವಿಕವಾಗಿ ಹಿಂದೂಧರ್ಮ ಮತ್ತೆ ತನ್ನ ವಿಶಾಲ ತಳಹದಿಯನ್ನು ಗುರುತಿಸಿಕೊಂಡು ಹೋರಾಟ ನಡೆಸಬೇಕಾಯಿತು. ಈ ಸಂದರ್ಭದಲ್ಲಿ ಕಾಣಿಸಿಕೊಂಡ ಭಕ್ತಿಪಂಥಗಳು ಕನ್ನಡ ಕವಿಗಳನ್ನು ಹುರಿದುಂಬಿಸಿ ಕಾವ್ಯರಚನೆಗೆ ತೊಡಗಿಸಿದವು. ದೇಶಿ ಛಂದಸ್ಸು ಗಳನ್ನು ಬಳಸಿ ಸಂಸ್ಕೃತ ಕಾವ್ಯಗಳನ್ನು ಆಧರಿಸಿದ ಕಾವ್ಯಗಳು– ಹೆಚ್ಚಾಗಿ ರಾಮಾಯಣ, ಮಹಾಭಾರತಗಳನ್ನು ಆಧರಿಸಿದ ಕಾವ್ಯಗಳು - ಜನಸಾಮಾನ್ಯ ಭಾಷೆಯಲ್ಲಿ ಕಾಣಿಸಿ ಕೊಂಡವು.* ಹರಿದಾಸ ಪಂಥದಿಂದಾಗಿ ವಿಷ್ಣುಭಕ್ತಿ ಪ್ರಚಾರ ಹೊಂದುತ್ತಿದ್ದ ಸಮಯ-ದಲ್ಲಿ ಕುಮಾರವ್ಯಾಸ ಸಮರ್ಥ ರೀತಿಯಲ್ಲಿ, ಸುಲಭ ಶೈಲಿಯಲ್ಲಿ ಭಾರತವನ್ನು ರಚಿಸಿ ಜನಸಾಮಾನ್ಯರ ಮನಸ್ಸನ್ನು ಸೂರೆಗೊಂಡ. "ತಿಳಿಯ ಹೇಳುವೆ ಕೃಷ್ಣ ಕಥೆಯನು"– (1–25) ಎಂದು ಹೇಳಿರುವನಲ್ಲದೆ ಈತ ತನ್ನ ಕಾವ್ಯವನ್ನು 'ಕುಮಾರವ್ಯಾಸ ಭಾರತ' ಎಂದು ಕರೆದಿದ್ದಾನೆ. ''ವ್ಯಾಸ ಭಾರತವನ್ನು ಓದಿ ಹಲವು ಸಲ ಪಾರಾಯಣಮಾಡಿ ಅದನ್ನು ಆತ್ಮಸಾತ್ ಮಾಡಿಕೊಂಡು ಅವರ ಚಿತ್ರಗಳನ್ನು, ಭಾವರಸಗಳನ್ನು ಕಣ್ಣಮುಂದೆ ಬೇಡಿದಾಗ ತಂದುಕೊಳ್ಳುವಷ್ಟು ಕುಮಾರವ್ಯಾಸನು ಭಾರತ ತನ್ಮಯನಾಗಿಗಬೇಕು''[6] ಅಲ್ಲದೆ ''ಆತನು ಮೂಲವನ್ನು ಕನ್ನಡದಲ್ಲಿ ಸಂಗ್ರಹಿಸಿ ಹೊರಟು ಹೆಜ್ಜೆಹೆಜ್ಜೆಗೂ ಅದನ್ನು ಅನುಸರಿಸುತ್ತಿರುವುದಲ್ಲದೆ, ಅನೇಕ ಕಡೆ ಮೂಲದ ಶ್ಲೋಕಗಳನ್ನು ಭಾಷಾಂತರ ಕೂಡ

---

* ರಾಮಾಯಣ - ಮಹಾಭಾರತ - ಇವುಗಳ ಜನಪ್ರಿಯತೆ ಬಗ್ಗೆ ವಿಂಟರನಿಜ್ ಅವರು ಈ ರೀತಿ ಹೇಳಿದ್ದಾರೆ: " High and low, prince and peasant, nobleman, merchant and artisan, princesses and shepherdesses— are all quite familiar with the characters and stories of the great epic ". ಈ ರೀತಿಯ ಜನಪ್ರಿಯತೆಗೆ ಮಧ್ಯಕಾಲೀನ ಯುಗದಲ್ಲಿ ಕಾಣಿಸಿಕೊಂಡ ಭಕ್ತಿಪಂಥಗಳೇ ಕಾರಣ. ಜನಸಾಮಾನ್ಯರ ಭಾಷೆ, ಸರಳಛಂದಸ್ಸು ಮತ್ತು ಭಕ್ತಿಯನ್ನೇ ಕೇಂದ್ರವನ್ನಾಗಿರಿಸಿಕೊಂಡು ರಾಮಾಯಣ ಮತ್ತು ಮಹಾಭಾರತಗಳು ದೇಶದಾದ್ಯಂತ ಪ್ರಾದೇಶಿಕ ಭಾಷೆಗಳಲ್ಲಿ ಕಾಣಿಸಿಕೊಂಡವಲ್ಲದೆ, ಹೆಚ್ಚು ಜನಪ್ರಿಯತೆಯನ್ನೂ ಗಳಿಸಿದವು.

6. ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯ ಚರಿತ್ರೆ. ಪು. ೨೪೭ (ಕ. ಸಾ. ಚ.)

ಮಾಡಿದ್ದಾನೆ. ಅದರ ಸಾರವನ್ನು ಭಟ್ಟಿಯಿಳಿಸಿ ಹೇಳಿರುವುದೂ ಉಂಟು. ಈ ಬಗೆಯಾದ ಅನುಸರಣೆ ಯುದ್ಧ ಪಂಚಕಕ್ಕಿಂತಲೂ ಆದಿ ಪಂಚಕದಲ್ಲಿ ಹೆಚ್ಚು."[7] ಕುಮಾರವ್ಯಾಸನು ಅಂದು ಪ್ರಚಲಿತವಿದ್ದ ಭಾರತದ ಆವೃತ್ತಿಗಳನ್ನು ಅವಲಂಬಿಸಿದ್ದರೂ "ಮಹಾಭಾರತದ ಪ್ರತಿವರ್ಷದ ಪ್ರಮುಖ ಭಾಗಗಳನ್ನು ಕುಮಾರವ್ಯಾಸ ಭಾರತವು ಕನ್ನಡಿಸಿದೆ."[8]

ಕುಮಾರವ್ಯಾಸ ಯುಗದಲ್ಲಿಯೇ ಮತ್ತೊಬ್ಬ ಕವಿ ಲಕ್ಷ್ಮೀಶನು ಜೈಮಿನಿ ಭಾರತವನ್ನು ರಚಿಸಿದ. ಮೂಲಭಾರತದ ಅಶ್ವಮೇಧ ಪರ್ವದಲ್ಲಿ ಅಡಕವಾಗಿರುವ ಕಥೆಯಷ್ಟನ್ನೇ ಈತನು ಜೈಮಿನಿಭಾರತದಲ್ಲಿ ವರ್ಣಿಸಿದ್ದಾನೆ. ಉತ್ಕಟ ವಿಷ್ಣು ಭಕ್ತಿ ಇವನ ಕಾವ್ಯಕ್ಕೆ ಮೆರಗು ತಂದಿದೆ. ("ಪುಣ್ಯಮುದು ಕೃಷ್ಣಚರಿತಾಮೃತಂ") (34-46) ಈ ಕಾವ್ಯವು ಸಂಗ್ರಹ ರೂಪವಾದ ಅನುವಾದವಲ್ಲದೆ- ಕೆಲವೊಂದು ಬದಲಾವಣೆಗಳನ್ನು "ಕಥಾನಕ ಪ್ರಮುಖ ಭಾಗದಲ್ಲಿ ಮತ್ತು ಭಕ್ತ ಚರಿತ್ರಾವಳಿಯ ಜೋಡಣೆಯಲ್ಲಿ ಸಂಸ್ಕೃತ ಗ್ರಂಥವನ್ನು ಹಿಂಬಾಲಿಸಿರುತ್ತದೆ."[9] ವಿಜಯನಗರ ಕಾಲದಲ್ಲಿದ್ದ ಚಾಟು ವಿಠಲನಾಥನು ಶುಕಮುನಿ ರಚಿತ ಸಂಸ್ಕೃತ ಭಾಗವತವನ್ನು ಮತ್ತು ಮಹಾಭಾರತದ ಆದಿಪರ್ವದೊಳಗಿನ ಆಸ್ತೀಕ ಪೌಲೋಮ ಪರ್ವಗಳನ್ನು ಕನ್ನಡದಲ್ಲಿ ಬರೆದಿದ್ದಾನೆ. ಭಾಗವತ ಪರಂಪರೆಯಲ್ಲಿ ಬಂದ ಮತ್ತೊಬ್ಬ ಕವಿ ನಾಗರಸನು (ಸು. 1650) ಸಂಸ್ಕೃತ ಭಗವದ್ಗೀತೆಯನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ. ಈತನು ಭಗವದ್ಗೀತೆಯ ಒಂದೊಂದು ಶ್ಲೋಕಕ್ಕೂ ಒಂದೊಂದು ಷಟ್ಪದಿ (ಭಾಮಿನಿ) ಯನ್ನು ಬರೆದಿದ್ದಾನೆ.

ಭಾರತವನ್ನು ಕನ್ನಡದಲ್ಲಿ ತಂದುಕೊಟ್ಟು ಕುಮಾರವ್ಯಾಸನೆಂದು ಪ್ರಸಿದ್ಧಿಪಡೆದ ನಾರಣಪ್ಪನಂತೆ ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದ 'ತೊರವೆ ರಾಮಾಯಣ' ಎಂಬ ಕೃತಿಯನ್ನು ತಂದು ಕೊಡುವುದರ ಮೂಲಕ ತೊರವೆ ನರಹರಿಯು ಕುಮಾರ ವಾಲ್ಮೀಕಿ ಎಂದು ಪ್ರಸಿದ್ಧವಾಗಿದ್ದಾನೆ. "ಈತ ವಾಲ್ಮೀಕಿಯ ರಾಮಾಯಣವನ್ನೇ ಸಂಗ್ರಹಿಸಿದ್ದರೂ ಈತನ ರಾಮನು ಸಾಕ್ಷಾತ್ ವಿಷ್ಣುವಿನ ಅವತಾರ. ಕವಿಯ ಭಕ್ತಿಭಾವ ಕಾವ್ಯದುದ್ದಕ್ಕೂ ಪ್ರಕಟವಾಗಿದೆ."[10]

ದಾಸಕೂಟದವರಲ್ಲಿ ಪ್ರಮುಖರಲ್ಲೊಬ್ಬರಾದ ಕನಕದಾಸರು ನರಸಿಂಹಸ್ತವ, ಮೋಹನತರಂಗಿಣಿ, ರಾಮಧ್ಯಾನ ಚರಿತ್ರೆ, ನಳಚರಿತ್ರೆ ಮತ್ತು ಹರಿಭಕ್ತಿಸಾರ ಕಾವ್ಯ-

---

7. ತ. ಸು. ಶಾಮರಾಯ ಮತ್ತು ಮೇ. ರಾಜೇಶ್ವರಯ್ಯ : ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ ಪು. ೩೯೯ (ಜ. ಕ. ಸಾ. ಚ.)
8. ಕನ್ನಡ ಸಾಹಿತ್ಯ ಚರಿತ್ರೆ ಪು. ೨೪೭.
9. ಕ. ಸಾ. ಚ. ಪು. ೨೭೦.
10. ಎಂ. ಎಸ್. ಸುಂಕಾಪುರ (ಸಂ) : ಭಾರತೀಯ ಸಾಹಿತ್ಯ ಸಮೀಕ್ಷೆ. ಪು. ೧೭೫.

ಗಳನ್ನು ರಚಿಸಿದ್ದಾರೆ. ಇವೆಲ್ಲವುಗಳಲ್ಲೂ ಭಾಗವತ ದೃಷ್ಟಿ ವ್ಯಕ್ತವಾಗಿದೆ. ಸಂಸ್ಕೃತ ಮಹಾಭಾರತದ ವನಪರ್ವದಲ್ಲಿ ಇಪ್ಪತ್ತೆಂಟು ಅಧ್ಯಾಯಗಳಲ್ಲಿ ವಿಸ್ತಾರವಾಗಿ ಹೇಳಿರುವ ನಳೋಪಾಖ್ಯಾನವೇ ಕನ್ನಡ ನಳಚರಿತ್ರೆಗೆ ಮೂಲ, ಅಲ್ಲದೆ ಹರಿವಂಶ, ವಿಷ್ಣುಪುರಾಣ ಮತ್ತು ಭಾಗವತಾದಿಗಳಿಂದಲೂ ಕಥಾವಸ್ತುವನ್ನು ತೆಗೆದುಕೊಂಡಿರುವುದು ಕಂಡುಬರುತ್ತದೆ. ಮಹಾಭಾರತದ ವನಪರ್ವದೊಳಗಿರುವ ನಳೋಪಾಖ್ಯಾನದ ಕೆಲವು ಮೂಲಭಾಗಗಳು ಕನ್ನಡ ನಳಚರಿತ್ರೆಯಲ್ಲಿ ಹಾಗೆಯೇ ಅನುವಾದಿಸಿರುವಂತೆ ಕಂಡುಬರುತ್ತದೆ. ಉದಾ : ಮೂಲ ನಳೋಪಾಖ್ಯಾನದಲ್ಲಿ ದಮಯಂತಿಯನ್ನು ಉದ್ದೇಶಿಸಿ ಹಂಸಗಳು ನುಡಿಯುವುದು :

"ತ್ವಂಚಾಪಿ ರತ್ನಂ ನಾರೀಣಾಂ ನರೇಷು ಚ ನಲೋವರಃ
ವಿಶಿಷ್ಟಾಯ ವಿಶಿಷ್ಟೇನ ಸಂಗಮೋ ಗುಣವಾನ್ಭವೇತ್"

ಕನಕದಾಸರ ಕಾವ್ಯದಲ್ಲಿ ಇದರ ಅನುವಾದದಂತೆ ಇರುವುದು : ನಳನನ್ನು ಉದ್ದೇಶಿಸಿ :

''ನಿನ್ನ ರೂಪಿನ ಚೆಲುವ ನಳನೃಪ
ನುನ್ನತದ ಸೌಂದರಿಯ ಜಗದೊಳ
ಗಿನ್ನು ನಾ ಸರಿಕಾಣೆ ನಿಮಗೀರ್ವರಿಗು ಸಮನಹುದು !

ಕರ್ಕೋಟಕನು ನಳನಿಗೆ ಮಾಡಿದ ಉಪದೇಶ : (ಮೂಲದಲ್ಲಿ)

''ಗಚ್ಛರಾಜನ್ನಿತಃ ಸೂತೋ ಬಾಹುಕೋಹಮಿತಿ ಬ್ರುವನ್
ಸಮೀಪಮೃತಪರ್ಣಸ್ಯ ಸಹಿ ವೇದಾಕ್ಷ ನೈಪುಣ್ಯಮ್
ಅಯೋಧ್ಯಾಂ ನಗರೀಂ ರಮ್ಯೊಮಧ್ಯವೈ ನಿಷಧೇಶ್ವರ
ಸತೇಕ್ಷ ಹೃದಯಂ ದಾತಾ ರಾಜಾಶ್ವ ಹೃದಯೇನ ವೈ !

ಕನ್ನಡ ನಳಚರಿತ್ರೆಯಲ್ಲಿ

''ಜನಪ ಕೇಳ್ಯೈ ಧರೆಗೆ ಋತುಪ
ರ್ಣನು ಮಹಾರಾಜೇಂದ್ರ ಗುಣನಿಧಿ
ಯಿನ ಕುಲಾಂಬುಧಿ ಚಂದ್ರನಾತನ ಪುರವಯೋಧ್ಯೆಯದು
ನಿನಗೆ ಬಹುದಕ್ಷರ ಹೃದಯ ವಾ
ತನಲಿ ನೀನವಗಶ್ವ ಹೃದಯವ
ನನುಗೊಳಿಸು ಸಾಕಿನ್ನು ಚಿಂತಿಸಬೇಡ ಹೋಗೆಂದ''[11]

11. ನೋಡಿ : ಕಟ್ಟಿ ಶೇಷಾಚಾರ್ಯರು : ಕವಿ ಕನಕದಾಸರು. ಪು. ೯೯.

ಇತ್ಯಾದಿ ಪದ್ಯಗಳು ಸಂಸ್ಕೃತ ಮೂಲದಿಂದ ಅನುವಾದವಾಗಿವೆ. ಇದಲ್ಲದೆ ಶ್ರೀಹರ್ಷ ಕವಿಯ ಸಂಸ್ಕೃತ ಮಹಾಕಾವ್ಯ ನೈಷಧಚರಿತ್ರೆಯನ್ನು ಕನಕದಾಸರು ಅವಲೋಕಿಸಿರುವುದು ತಿಳಿಯುತ್ತದೆ. ಇವರ ಹರಿಭಕ್ತಿಸಾರವು ಭರ್ತೃಹರಿಯ ನೀತಿ ವೈರಾಗ್ಯ ಶತಕಗಳ ಮಾದರಿಯಲ್ಲಿ ರಚಿತವಾಗಿದೆ. ದಾಸ ಪರಂಪರೆಯ ವಾದಿರಾಜ ತೀರ್ಥರು ಸಂಸ್ಕೃತದಲ್ಲಿ ಮುಕ್ತ ಮಲ್ಲಿಕಾ, ರುಕ್ಮಿಣೀಶವಿಜಯ, ವಾದರತ್ನ ಮತ್ತು ತತ್ವಪ್ರಕಾಶಿಕಾ ಎಂಬ ಗ್ರಂಥಗಳನ್ನೂ, ಕನ್ನಡದಲ್ಲಿ ಮಹಾಭಾರತ ತಾತ್ಪರ್ಯ ನಿರ್ಣಯ, ವೈಕುಂಠ ವರ್ಣನೆ, ಭ್ರಮರಗೀತೆ, ಸ್ವಪ್ನಗದ್ಯ ಇತ್ಯಾದಿ ಗ್ರಂಥಗಳನ್ನೂ ಬರೆದಿದ್ದಾರೆ.

ವೇದಾಂತ ತತ್ವಗಳನ್ನು ಜನಸಾಮಾನ್ಯರಿಗೆ ಪರಿಚಯಿಸುವ ದೃಷ್ಟಿಯಿಂದ ಶಂಕರ, ರಾಮಾನುಜ ಮತ್ತು ಮಧ್ವರ ಸಿದ್ಧಾಂತಗಳನ್ನು ಕನ್ನಡೀಕರಿಸುವ ಪ್ರಯತ್ನ ಭಕ್ತಿ ಪಂಥಗಳ ಕಾಲದಲ್ಲಿ ನಡೆಯಿತು. ಮಹಲಿಂಗರಂಗ ಕವಿಯು "ಅಖಿಲ ವೇದಾಂತಾರ್ಥವನು ನಾ ಯುಕುತಿಯಲಿ ಸಂಗ್ರಹಿಸಿ ಹೇಳುವೆ ಸಕಲರಿಗೆ ತಿಳಿಯುವಂತೆ ಸುಲಭೋಪಾಯದಿಂದೊಲಿದು" (1–9) ಎಂದು ತನ್ನ ಅನುಭವಾಮೃತದಲ್ಲಿ ಹೇಳಿಕೊಂಡಿದ್ದಾನೆ. ಇದರಲ್ಲಿ ಅದ್ವೈತ ಸಿದ್ಧಾಂತಕ್ಕೆ ಸಂಬಂಧಿಸಿದ ವಿಷಯಗಳಾದ "ಅಧಿಕಾರ ಲಕ್ಷಣ, ವೈರಾಗ್ಯ, ತ್ವಂ ಪದ. ತತ್ ಪದ, ಅಸಿಪದ, ಸಪ್ತಭೂಮಿಕೆ, ಪರಮಾತ್ಮ, ಮಾಯಾವಾದ. ಜೀವತ್ರಯ, ಜೀವನ್ಮುಕ್ತಿ, ನಿರ್ಗುಣಾರಾಧನೆ— ಈ ವಿಷಯಗಳಲ್ಲಿ ಒಂದೊಂದಕ್ಕೆ ಒಂದು ಅಧಿಕಾರವಾಗಿ ವಿವರಣೆ ಬಂದಿದೆ. ಸಂಸ್ಕೃತವರಿಯದ ಕನ್ನಡಿಗನಿಗೆ ಅದ್ವೈತ ಮತದ ಪ್ರಮುಖ ತತ್ತ್ವಗಳನ್ನು ತಿಳಿದುಕೊಳ್ಳಲು ಇದರಷ್ಟು ತಿಳಿಯಾದ, ದೃಷ್ಟಾಂತ ಸಂಪತ್ತಿಯಿಂದ ಸೊಗಸಾದ ಗ್ರಂಥವು ಇನ್ನೊಂದಿಲ್ಲ."[12] ಅನುಭವಾಮೃತವನ್ನು ಆಧರಿಸಿ ಹದಿನೆಂಟನೆಯ ಶತಮಾನದ ಮಧ್ಯಭಾಗದಲ್ಲಿದ್ದ ಚಿದಾನಂದಾವಧೂತನು 'ಜ್ಞಾನಸಿಂಧು' ಎಂಬ ಉದ್ಗ್ರಂಥವನ್ನು ಭಾಮಿನಿ ಷಟ್ಪದಿಯಲ್ಲಿ ಬರೆದನು. ಮೈಸೂರು ಒಡೆಯರ ಕಾಲದಲ್ಲಿ ಶ್ರೀವೈಷ್ಣವ ಸಂಬಂಧ ಭಕ್ತಿ ಪ್ರಧಾನ ಸಾಹಿತ್ಯಸೃಷ್ಟಿ ವಿಪುಲವಾಗಿ ನಡೆಯಿತು. ಹನ್ನೆರಡನೆಯ ಶತಮಾನದಲ್ಲಿಯೇ ರಾಮಾನುಜ ಪಂಥವು ಕಾಣಿಸಿಕೊಂಡರೂ ಅದನ್ನು ಕುರಿತು ಕನ್ನಡ ಗ್ರಂಥಗಳು ಹುಟ್ಟಿಕೊಂಡಿದ್ದು ಒಡೆಯರ ಕಾಲದಲ್ಲಿಯೇ. ಚಿಕ್ಕದೇವರಾಜನು ಸ್ವತಃ ಚಿಕ್ಕದೇವರಾಜ ಬಿನ್ನಪ, ಗೀತಗೋಪಾಲ, ಭಾಗವತ, ಶೇಷಧರ್ಮ, ಭಾರತ— ಇವುಗಳನ್ನು ಬರೆದನೆಂದು ಪ್ರತೀತಿ ಇದೆ. ಚಿಕ್ಕದೇವರಾಜ ಬಿನ್ನಪದಲ್ಲಿ ಶ್ರೀವೈಷ್ಣವ ಮತದ ತತ್ವಗಳನ್ನು ವಿವರಿಸಿದೆ. "ಕನ್ನಡದಲ್ಲಿ ರಾಮಾನುಜ ಮತದ ಮುಖ್ಯ ಪ್ರಮೇಯಗಳನ್ನು ತಿಳಿದುಕೊಳ್ಳಲು ಸ್ಪಷ್ಟವೂ ಸಂಕ್ಷಿಪ್ತವೂ ಆದ ಕೃತಿ ಇದೊಂದೇ."[13] ಚಿಕ್ಕದೇವರಾಯನ ಆಸ್ಥಾನ ಪಂಡಿತ ಹಾಗೂ ಮಂತ್ರಿಯಾಗಿದ್ದ

---

12. ಕ. ಸಾ. ಚ. ಪು. ೩೦೨.

13. ಅದೇ. ಪು. ೩೦೩.

ಚಿಕ್ಕುಪಾಧ್ಯಾಯ ಸುಮಾರು ನೂರವತ್ತಕ್ಕೂ ಹೆಚ್ಚು ಗ್ರಂಥಗಳನ್ನು ಬರೆದನೆಂದು ತಿಳಿಯುತ್ತದೆ. "ಸಾಮಾನ್ಯವಾಗಿ ತನ್ನ ಕೃತಿಗಳಲ್ಲಿ ಅವನು ಶ್ರೀವೈಷ್ಣವ ಮತದ ತತ್ವ, ಸಂಪ್ರದಾಯ, ಚರಿತೆ ಎಲ್ಲವನ್ನೂ ನಿರೂಪಿಸಿ ರಾಮಾನುಜ ಮತಕೋಶವೊಂದನ್ನು ರಚಿಸಿದಂತೆ ಮಾಡಿದ್ದಾನೆ."[14] ಇವನ ದಿವ್ಯಸೂರಿಚರಿತೆಯಲ್ಲಿ ಹನ್ನೆರಡು ಆಳ್ವರುಗಳ ಚರಿತ್ರೆ— ರಾಮಾನುಜಾಚಾರ್ಯರ ಚರಿತ್ರೆಯೂ ಸೇರಿದಂತೆ- ಬಂದಿದೆ. ಸಾತ್ವಿಕ ಬ್ರಹ್ಮವಿದ್ಯಾವಿಲಾಸದಲ್ಲಿ ಈತನು ವಿಶಿಷ್ಟಾದ್ವೈತಮತವನ್ನು ಪ್ರತಿಪಾದಿಸಿದ್ದಾನೆ.

ವೀರಶೈವ ಪಂಥದ ಪ್ರಭಾವದಿಂದಾಗಿ ಕಾಣಿಸಿಕೊಂಡ ಕಾವ್ಯಗಳು ಸಾಮಾನ್ಯವಾಗಿ ಶೈವಪುರಾಣಗಳಿಂದ ಹೆಚ್ಚು ಪ್ರಭಾವಿತವಾಗಿವೆ. ಶೈವಪುರಾಣಗಳಲ್ಲಿ ಬರುವ ಕಥೆಗಳ ಆಧಾರದ ಮೇಲೆ ಹೊಸದಾಗಿ ಕಥೆಗಳನ್ನು ರಚಿಸಿಕೊಂಡಿರುವುದು ಅಥವಾ ಅದೇ ಕಥೆಗಳನ್ನೇ ಯಥಾವತ್ತಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಹರಿಹರನ ಗಿರಿಜಾಕಲ್ಯಾಣವೂ ಶೈವಪುರಾಣ ಕಾವ್ಯಗಳಲ್ಲಿ ಬರುವ ಶಿವಪಾರ್ವತಿಯರ ವಿವಾಹ ವರ್ಣನೆಯಾಗಿದೆ. ಕಾಳಿದಾಸನ 'ಕುಮಾರಸಂಭವ'ದಿಂದಲೂ ಹರಿಹರನ ಗಿರಿಜಾಕಲ್ಯಾಣ ಪ್ರಭಾವಿತವಾಗಿದೆ. ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ವೇದಪುರಾಣ ಕಾವ್ಯಗಳಲ್ಲಿ ಸುಪ್ರಸಿದ್ಧವಾಗಿರುವ ಹರಿಶ್ಚಂದ್ರ ಕಥೆಯ ಆಧಾರದ ಮೇಲೆ ರಚಿತವಾದದ್ದು. ರಾಘವಾಂಕನು ಹರಿಶ್ಚಂದ್ರ ಕಥಾ ಬೀಜವನ್ನು ಸಂಸ್ಕೃತ ಕಾವ್ಯಗಳಿಂದ ಎತ್ತಿ ತಂದು ಕನ್ನಡದಲ್ಲಿ ಕಾವ್ಯ ವೃಕ್ಷವನ್ನಾಗಿಸಿದ್ದಾನೆ. ("ಈ ಕಥಾಬೀಜವೀ ಬೀಜಮಂ ಬಿತ್ತಿ ಬೆಳಸಿದಪೆನೀ ಕಾವ್ಯ ವೃಕ್ಷವಂ" 1–18). ಅನಂತರ ಬಂದ ವೀರಶೈವ ಕವಿಗಳನೇಕರು ಶೈವಪುರಾಣಗಳು ಹಾಗೂ ಸಂಸ್ಕೃತ ಕಾವ್ಯಗಳಿಂದ ಕಥೆಗಳನ್ನು ಆಧರಿಸಿ ಕಾವ್ಯಗಳನ್ನು ರಚಿಸಿದರು. ಗುಬ್ಬಿಯ ಮಲ್ಲಣನು ತನ್ನ ಗಣಭಾಷ್ಯರತ್ನಮಾಲೆಯಲ್ಲಿ 101 ಸ್ಥಲಗಳಲ್ಲಿ ವೀರಶೈವರ ಆಚರಣೆಗಳನ್ನು ಸಂಗ್ರಹಿಸಿ ಅದಕ್ಕೆ "ವೇದಾಗಮ ಪುರಾಣೇತಿಹಾಸಾದಿ ಗ್ರಂಥಗಳಿಂದ ಪ್ರಮಾಣಗಳನ್ನು ಪುರಾತನದ ಕನ್ನಡ ವಚನಗಳನ್ನು ಉದಾಹರಿಸಿ ವಿವರಿಸಿದ್ದಾನೆ."[15] ವೀರಶೈವಶಾಸ್ತ್ರ ಸಂಬಂಧ ವಿಷಯಗಳನ್ನು ವೇದಾಗಮೋಪನಿಷತ್ತುಗಳೊಡನೆ ಸಮನ್ವಿತಗೊಳಿಸುವ ಪ್ರಯತ್ನ ಮಗ್ಗೆಯ ಮಾಯಿದೇವನ ಸಂಸ್ಕೃತ ಗ್ರಂಥ 'ಶಿವಾನುಭವ ಸೂತ್ರ'ದಲ್ಲಿದೆ. ಕನ್ನಡದ ಹೆಸರಾಂತ ಜ್ಞಾನಿ ಹಾಗೂ ಭಕ್ತಿಕವಿ 'ನಿಜಗುಣಶಿವಯೋಗಿ ಸಂಸ್ಕೃತದಲ್ಲಿ ಅಗಾಧ ಪಾಂಡಿತ್ಯವನ್ನು ಪಡೆದಿದ್ದವನು' "ವೇದೋಪನಿಷತ್ತುಗಳಿಗೆ ಸಂಮತವೆಂದು ಅವನಿಗೆ ತೋರಿದ ಅದ್ವೈತವನ್ನೂ, ಆಗಮ ಸಂಮತವಾದ ಷಟ್ ಸ್ಥಲ ಸಿದ್ಧಾಂತವನ್ನೂ ಸಮನ್ವಯಗೊಳಿಸಿದ ವೀರಶೈವ ಯತಿ ಮತ್ತು ಜ್ಞಾನಿ."[16] 'ಸಕಲ ವೇದ ವೇದಾಂತಾ-

14. ಅದೇ. ಪು. ೩೦೮.
15. ಅದೇ. ಪು. ೩೧೬
16. ಅದೇ. ಪು. ೩೨೩—೨೪.

ಗಮ ಸ್ಮೃತಿ ಪುರಾಣೇತಿಹಾಸ ಸೂತ್ರಾದಿ ಶಾಸ್ತ್ರ ಸಂಮತದಿಂ ಪುರಾತನ ಗೀತಾನುಗಣ್ಯ-ವೆನಿಸಿ' ತಾನು 'ಕೈವಲ್ಯ ಪದ್ಧತಿ'ಯನ್ನು ಬರೆದುದಾಗಿ ಹೇಳಿದ್ದಾನೆ. 'ಪರಮಾರ್ಥ ಗೀತೆ'ಯ ಕೊನೆಗೆ ಈತನು 'ಇತಿಹಾಸ ಪುರಾಣಸ್ಮೃತಿ ಶ್ರುತಿಯರ್ಥವನಿಂತು ಕನ್ನಡಿಸಿದಂ ನಿಜಗುಣಯತಿ ಶಂಭುಲಿಂಗಗೊಲವಿಂ'– ಎಂದಿರುವುದು ಸಂಸ್ಕೃತ ಸಾಹಿತ್ಯದಿಂದ ಹೆಚ್ಚು ಪ್ರಭಾವಿತನಾಗಿರುವುದನ್ನು ಸಮರ್ಥಿಸುತ್ತದೆ. ಲಕ್ಕಣ್ಣನ 'ಶಿವತತ್ವ ಚಿಂತಾಮಣಿ' ಗುರುಲಿಂಗ ವಿಭುವಿನ 'ಭಿಕ್ಷಾಟನ ಚರಿತೆ' ಶಿವಪುರಾಣದಲ್ಲಿ ಉದ್ಧೃತವಾದ ಕಥೆಗಳ ಆಧಾರ-ದಿಂದ ರಚಿತವಾದವು. ಚಂಪೂಶೈಲಿಯನ್ನು ಬಳಸಿ ಬರೆದ ವೀರಶೈವ ಕವಿಗಳಲ್ಲಿ ಪ್ರಮುಖನಾದ ಷಡಕ್ಷರದೇವನು ಕನ್ನಡ–ಸಂಸ್ಕೃತ ಎರಡರಲ್ಲೂ ಕಾವ್ಯಗಳನ್ನು ರಚಿಸಿ-ದನು. ಈತನ 'ಶಬರ ಶಂಕರ ವಿಳಾಸ'ವು ಶಿವಲೀಲೆಯನ್ನು ವರ್ಣಿಸುವ ಚಿಕ್ಕ ಕಾವ್ಯ-ವಾಗಿದ್ದು, ಭಾರವೀಕೃತ ಕಿರಾತಾರ್ಜುನೀಯ ಮತ್ತು ಅರ್ಜುನನು ಶಿವನಿಂದ ಪಾಶು-ಪತಾಸ್ತ್ರ ಪಡೆಯುವ ಮಹಾಭಾರತದಲ್ಲಿನ ಕಥಾ ಸನ್ನಿವೇಶದಿಂದ ಪ್ರಭಾವಿತವಾಗಿದೆ. "ಸಂಸ್ಕೃತ ಮಾರ್ಗದ ಬಿಗುವಿಗೂ ಕನ್ನಡ ದೇಸಿಯ ಸರಳತೆಗೂ ಅವೆರಡರ ಲಲಿತವಾದ ಮಿಶ್ರಣಕ್ಕೂ ಒಳ್ಳೆಯ ಉದಾಹರಣೆಗಳನ್ನು ಈತನ ಕೃತಿಗಳಿಂದ ಕೊಡಬಹುದು."[17]

ಮೊದಲನೇ ರೀತಿಯ ಪ್ರಭಾವ, ಭಕ್ತಿಕಾವ್ಯಗಳ ಮೇಲಿನದಾದರೆ ಎರಡನೇ ರೀತಿಯದು ವಚನ, ಕೀರ್ತನೆ ಮತ್ತು ಭಜನೆ ಗೀತೆಗಳ ಮೇಲೆ. "ಆಗಿನ ಕಾಲದ ಧಾರ್ಮಿಕ ದುಸ್ಥಿತಿಯನ್ನು ಪ್ರತಿಬಿಂಬಿಸುವುದರಲ್ಲಿಯೂ ಸಂಸ್ಕೃತದಲ್ಲಿ ಹೆಪ್ಪುಗಟ್ಟಿ ಕುಳಿತಿದ್ದ ಆಧ್ಯಾತ್ಮಿಕ ತತ್ವಗಳನ್ನು ಜನರ ಮಾತಿನಲ್ಲಿ ಅಳವಡಿಸಿಕೊಂಡು ಮನೆಮನೆಯ ಬಾಗಿಲಿಗೂ ಕೊಂಡೊಯ್ದು ಹಂಚುವ ಸತ್ಕಾರ್ಯದಲ್ಲಿಯೂ ಎರಡೂ ವಾಙ್ಮಯಗಳಿಗೂ (ವಚನ ಹಾಗೂ ಕೀರ್ತನ ಸಾಹಿತ್ಯಗಳು) ಪ್ರಶಸ್ತಿ ಸಲ್ಲಬೇಕಾಗಿದೆ."[18] ವಚನಕಾರರು, ಕೀರ್ತನ-ಕಾರರು ಜನಸಾಮಾನ್ಯರಿಗಾಗಿಯೇ ರಚನೆಗಳನ್ನು ಮಾಡಿದ್ದರೂ ಅವುಗಳಲ್ಲಿ ಮಹತ್ತರ ವಿಷಯಗಳನ್ನು ತಿಳಿಯುವಂತೆ ಹೇಳುವ ಪ್ರಯತ್ನವನ್ನೂ ಮಾಡಿದ್ದಾರೆ. ವಚನಗಳಲ್ಲಿ, ಕೀರ್ತನೆಗಳಲ್ಲಿ ಕಂಡುಬರುವ ಭಾವನೆಗಳು ಕೆಲವೊಮ್ಮೆ ಸಂಸ್ಕೃತ ಮೂಲ ಶ್ಲೋಕಗಳ ಅನುವಾದವೆಂಬಂತೆ ಕಂಡುಬರುತ್ತವೆಯಲ್ಲದೆ, ತಾವು ಹೇಳುವ ವಿಷಯಕ್ಕೆ ಆಧಾರವಾಗಿ ನೇರವಾಗಿ ಸಂಸ್ಕೃತ ಶ್ಲೋಕಗಳನ್ನು– ಹೆಚ್ಚಾಗಿ ವಚನಗಳಲ್ಲಿ– ಉದ್ಧರಿಸಿರುವುದು* ಕಂಡುಬರುತ್ತದೆ. ಆದ್ದರಿಂದ ವಚನಕಾರರು ಮತ್ತು ಕೀರ್ತನಕಾರರು– ಇವರಲ್ಲಿ ಅನೇಕ-

---

17. ಶಿ. ಶಿ. ಬಸವನಾಳ : ಶಬರ ಶಂಕರವಿಳಾಸ, ಪ್ರಸ್ತಾವನೆ. ಪು. ೩೧.

18. ಜ. ಕ. ಸಾ. ಚ. ಪು. ೪೦೨.

* "ವಚನಗಳಲ್ಲಿಯೂ ಕೆಲವು ಕಡೆ, ಮೂಲ ಕರ್ತೃವೇ ಬರೆದುದೋ ಪ್ರಕ್ಷಿಪ್ತವಾದುದೋ, ಅಂತೂ ವೇದೋಪನಿಷತ್ತು ಪುರಾಣಾಗಮಗಳಿಂದ ಯಥೇಚ್ಛವಾಗಿ ವಾಕ್ಯಗಳನ್ನು ಉದ್ಧರಿಸಿದ್ದಾರೆ" (ವ. ಸಾ. : ಪು. ೧೧)

ರಿಗೆ ಸಂಸ್ಕೃತದಲ್ಲಿ ಪಾಂಡಿತ್ಯವಿತ್ತೆಂದು ತಿಳಿಯುತ್ತದೆ. ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ಕನಕದಾಸ, ಪುರಂದರದಾಸ– ಮುಂತಾದವರು ಸಂಸ್ಕೃತವನ್ನು ಆಳವಾಗಿ ಅಭ್ಯಾಸ ಮಾಡಿದವರಾಗಿದ್ದರು. ಇವರು ವೈದಿಕ ಧರ್ಮದಲ್ಲಿದ್ದ ಕಂದಾಚಾರಗಳನ್ನು ಖಂಡಿಸಿದರೇ ವಿನಾ, ವೇದಾಂತದ ತಿರುಳನ್ನಲ್ಲ. "ಉಪನಿಷತ್ತಿನ ಮಹೋನ್ನತ ವಿಚಾರಗಳನ್ನು ಬಸವಣ್ಣನವರು ತಮ್ಮ ವಚನಗಳಲ್ಲಿ ಧಾರಾಳವಾಗಿ ಬಳಸಿಕೊಂಡರು."[19] 'ದೇವನೊಬ್ಬ ನಾಮ ಹಲವು' ಎಂಬ ಬಸವಣ್ಣನವರ ಮಾತು "ಏಕಂ ಸತ್ ವಿಪ್ರಾ ಬಹುದಾ ವದಂತಿ" ಎಂಬ ಉಪನಿಷತ್ ವಾಕ್ಯವೇ ಆಗಿದೆ. "ಬಯಲೊಳಗೆ ಬಯಲು ನಿರ್ಬಯಲು," "ಅದು ಮೂಲ ಬ್ರಹ್ಮ ತಿಳಿಯಬೇಕೋ ತಮ್ಮ"— ಎಂಬ ರೇವಣ್ಣಸಿದ್ಧರ ನುಡಿಗಳು 'ಸರ್ವಂ ಖಲು ಇದಂ ಬ್ರಹ್ಮನ್,' 'ಅಹಂ ಬ್ರಹ್ಮಾಸ್ಮಿ,' 'ತತ್ವಂ ಅಸಿ' ಎಂಬ ಉಪನಿಷತ್ ವಾಕ್ಯಗಳ ಸಾರವನ್ನು ಹೊಂದಿದವುಗಳೇ ಆಗಿವೆ. 'ಬಯಲೊಳಗೆ ಬಯಲು ನಿರ್ಬಯಲು' ಎಂಬುದು ಉಪನಿಷತ್ತುಗಳಲ್ಲಿರುವಂತೆ ಆತ್ಮಬ್ರಹ್ಮರ ಐಕ್ಯತೆಯನ್ನು ಹೇಳುವಂಥದು. ಆದರೆ ಇಲ್ಲಿ ಬ್ರಹ್ಮನು ಸಗುಣನಾಗಿದ್ದಾನೆ. ರಾನಡೆ ಅವರು ಹೇಳುವಂತೆ 'ಬಯಲು' ಎಂಬುದು, "not merely spacelessness or void. It is not simply even the losing of one's individuality in the Nirguna or Absolute. It must be a positive entity, God, in whom we have to resolve ourselves."[20] ಬ್ರಹ್ಮನ ಅನಂತತೆಯನ್ನು ಕುರಿತ ಹೇಳಿಕೆಗಳು ಉಪನಿಷತ್ತಿನಲ್ಲಿ ಅನೇಕ. ಈ ಅನಂತತೆಯನ್ನು ವ್ಯಕ್ತಪಡಿಸುವ ಅನೇಕ ವಚನಗಳು ಶರಣಸಾಹಿತ್ಯದಲ್ಲಿವೆ.

ಉದಾ : ಬಸವಣ್ಣನವರ ವಚನಗಳು :

ಎತ್ತೆತ್ತ ನೋಡಿದರತ್ತತ್ತ ನೀನೇ ದೇವ
ಸಕಲ ವಿಸ್ತಾರದ ರೂಹು ನೀನೇ ದೇವ
ವಿಶ್ವತೋ ಚಕ್ಷು ನೀನೇ ದೇವ
ವಿಶ್ವತೋ ಮುಖ ನೀನೇ ದೇವ
ವಿಶ್ವತೋ ಬಾಹು ನೀನೇ ದೇವ"
ವಿಶ್ವತೋ ಪಾದ ನೀನೇ ದೇವ"[21]

---

19. ತಿ. ನ. ಕೃಷ್ಣರಾಯ : ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ. ಪು. ೭೬.

20. R. D. Ranade : Pathway to God in Kannada Literature, p. 18.

21. ಎಲ್. ಬಸವರಾಜು, (ಸಂ.) : ಬಸವ ವಚನಾಮೃತ. ಪು. ೩ (ಬ. ವ.).

ಮತ್ತೊಂದು ವಚನ :

" ಜಗದಗಲ, ಮುಗಿಲಗಲ, ಮಿಗೆಯಗಲ ನಿಮ್ಮಗಲ
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ
ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀ ಮಕುಟ
..............................................
ಅಗಮ್ಯ – ಅಗೋಚರ – ಅಪ್ರತಿಮ ಲಿಂಗವೇ
ಕೂಡಲ ಸಂಗಮದೇವಯ್ಯ
ಎನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಯ್ಯ. "[22]

ಸಿದ್ಧಲಿಂಗೇಶ್ವರನ ವಚನ :

" ಎಲ್ಲೆಲ್ಲಿ ನೋಡಿದಡಲ್ಲಲ್ಲಿ ನೀನೇ ದೇವಾ
ಪಿಂಡಾಂಡಗಳೊಳಗೆಲ್ಲ ನೀನೇ ದೇವಾ
ಮಹದಾಕಾಶರೂಪ, ನಿರುಪಾಧಿಕ ಪರಂಜ್ಯೋತಿ ನೀನೇ ದೇವಾ
ಉಪಮಾತೀತ ವಾಙ್ಮನಕ್ಕಗೋಚರ ನೀನೇ ದೇವಾ
ಸ್ವಾನುಭೂತಿ ಸ್ವರೂಪ ಶರಣಜನ ಮನೋವಲ್ಲಭ ನೀನೇ ದೇವಾ
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ "[23] —ಈ ವಚನಗಳು ಪರಮಾತ್ಮನ ಸರ್ವವ್ಯಾಪಕತ್ವವನ್ನು ಹೇಳುವ ಈಶೋಪನಿಷತ್ತಿನ ವಾಕ್ಯ.

" ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ " ಎಂಬುದರ ಭಾವನೆಯನ್ನೇ ಒಳಗೊಂಡಿವೆ.

" ಲಿಂಗವ ಪೂಜಿಸಿ ಫಲವೇನಯ್ಯ
ಸಮರತಿ ಸಮಸುಖಿನರಿಯದನ್ನಕ್ಕ
ಕೂಡಲ ಸಂಗಮದೇವರ ಪೂಜಿಸಿ
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ " —ಎಂಬ ವಚನ ಮುಂಡಕ ಉಪನಿಷತ್ತಿನ

---

22. ಅದೇ, ಪು. ೪.

23. ವ. ಸಾ. : ಪು. ೨೪.

" ಯಥಾನದ್ಯಃ ಸ್ಯಂದಮಾನಾಃ ಸಮುದ್ರೇ
ಅಸ್ತಮ್ ಗಚ್ಛಂತಿ ನಾಮರೂಪೇ ವಿಹಾಯ
ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ
ಪರಾತ್ಪರಮ್‌ಪುರುಷಮುಪೈತಿ ದಿವ್ಯಮ್ " —ಎಂಬ ಶ್ಲೋಕವನ್ನು ಹೋಲುತ್ತದೆ.

" ಹಿರಿದಕ್ಕೆ ಹಿರಿದು ಕಿರಿದಕ್ಕೆ ಕಿರಿದು
ವಾಙ್ಮನಕ್ಕಗೋಚರ ಕೂಡಲಸಂಗಮದೇವ" ಎಂಬ ವಚನ 'ಅಣೋರಣೀಯಾನ್ ಮಹತೋಮಹೀಯಾನ್ ಎಂಬ ಕಠೋಪನಿಷತ್ ವಾಕ್ಯದ ಭಾವನೆಯನ್ನೇ ಒಳಗೊಂಡಿದೆ.[24]

"ಉದಕದೊಳಗೆ ಬೈಚಿಟ್ಟ ಬೈಕೆಯು ಕಿಚ್ಚಂತೆ ಇದ್ದಿತ್ತು
ಸಸಿಯೊಳಗಣ ರಸದ ರುಚಿಯಂತೆ ಇದ್ದಿತ್ತು
ನನೆಯೊಳಗಣ ಪರಿಮಳದಂತೆ ಇದ್ದಿತ್ತು
ಕೂಡಲಸಂಗಮ ದೇವರ ನಿಲವು ಕನ್ನೆಯ ಸ್ನೇಹದಂತೆ ಇದ್ದಿತ್ತು"[25]
ಎಂಬ ಬಸವಣ್ಣನವರ ವಚನ ಮತ್ತು

"ಮರದೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ
ಶರೀರದೊಳಗಾತ್ಮನ ಕಾಣದಂತಿರಿಸಿದೆ
ನೀ ಬೆರಸುವ ಭೇದಕ್ಕೆ ಬೆರಗಾದನೈ ರಾಮನಾಥಾ"[26]
ಎಂಬ ದೇವರದಾಸಿಮಯ್ಯನ ವಚನ– ಇವು

ತಿಲೇಷು ತೈಲಂ ದಧಿನೀವ ಸರ್ಪಿರಾಪಃ ಸ್ರೋತಃ ಸ್ವರಣೇಷು ಚಾಗ್ನಿಃ
ಏವ ಮಾತ್ಮಾಽತ್ಮನಿ ಗೃಹ್ಯತೇಽ ಸೌ ಸತ್ಯೇನೈನಂ ತಪಸಾಯೋಽನುಪಶ್ಯತಿ
ಸರ್ವವ್ಯಾಪಿನ ಮಾತ್ಮಾನಂ ಕ್ಷೀರೇ ಸರ್ಪಿರಿವಾರ್ಪಿತಮ್ !
ಆತ್ಮವಿದ್ಯಾ ತಪೋಮೂಲಂ ತದ್ಬ್ರಹ್ಮೋಪನಿಷತ್ ಪರಮ್"[27] ಎಂಬ ಶ್ವೇತಾಶ್ವತರೋಪನಿಷತ್ತಿನ ಅನುವಾದವೇ ಆಗಿದೆ.

---

24. ಅ. ನ. ಕೃಷ್ಣರಾಯ : ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ. ಪು. ೭೬.
25. ಬ. ವ. : ಪು. ೧.
26. ವಚನಶಾಸ್ತ್ರಸಾರ : ಭಾಗ ೧ ಪು. ೨೨.
27. ಶ್ವೇತಾಶ್ವತರೋಪನಿಷತ್ತು : I - 15.

ಚೆನ್ನಬಸವಣ್ಣನವರ ಅನೇಕ ವಚನಗಳು ಆತ್ಮಜ್ಞಾನದ ಕುರಿತವುಗಳಾಗಿದ್ದು, ಅವು ಉಪನಿಷತ್ ಶ್ಲೋಕಗಳ ಆಧಾರದ ಮೇಲೆ ರೂಪುಗೊಂಡಿವೆ. ಆತ್ಮಜಾನಕ್ಕೆ ಭಕ್ತಿ, ನಿರ್ಮಲ ಅಂತರಂಗ ಅಗತ್ಯವಿದ್ದಂತೆ ನಿರ್ಮಲ ಜ್ಞಾನಕ್ಕೂ ಪರಿಶುದ್ಧ ಅಂತಃಕರಣ ಮತ್ತು ಚಾರಿತ್ರ ಅವಶ್ಯಕ. ದುಶ್ಚರಿತರಿಗೆ, ಚಪಲಚಿತ್ತರಿಗೆ, ವಿರಕ್ತಿಯಿಲ್ಲದವರಿಗೆ ಆತ್ಮಜ್ಞಾನ ಸಾಧ್ಯವಿಲ್ಲ– ಎಂಬುದನ್ನು ಕಠೋಪನಿಷತ್ತು ಈ ರೀತಿ ಹೇಳುತ್ತದೆ :

"ನಾವಿರಿತೋ ದುಶ್ಚರಿತಾನ್ನಾಶಾನ್ತೋ ನಾ ಸಮಾಹಿತಃ
ನಾ ಶಾನ್ತಮಾನಸೋವಾಪಿ ಪ್ರಜ್ಞಾನೇನೈನಮಾಪ್ನುಯಾತ್"[28]

ಇದೇ ಭಾವನೆ ಚೆನ್ನಬಸವಣ್ಣ ಮತ್ತು ಅಂಬಿಗರ ಚೌಡಯ್ಯ– ಇವರ ವಚನಗಳಲ್ಲಿ ಈ ರೀತಿ ವ್ಯಕ್ತವಾಗಿದೆ :

"ಬ್ರಹ್ಮದ ಮಾತನಾಡಿ ಕನ್ನೆಯರ ಕಾಲದೆಸೆಯಲ್ಲಿ
ಕುಳಿತಲ್ಲಿ ಬ್ರಹ್ಮದ ಮಾತು ಅಲ್ಲಿ ನಿಂದಿತ್ತೆಂದ ಅಂಬಿಗರ ಚೌಡಯ್ಯ."
"ಲಿಂಗ ಗಂಭೀರನಾದ ಶರಣ ಲಿಂಗವಿಕಾರವನರಿಯನಯ್ಯ
ಜಂಗಮ ಸನ್ಮತನಾದ ಶರಣ ಇಂದ್ರಿಯ ವಿಕಾರವನರಿಯನಯ್ಯ
ಲಿಂಗ ಗಂಭೀರನಾಗಿ ಮನ್ಮನದಲ್ಲಿ ಲೀನವಾಗಿತ್ತು. ಜಂಗಮ ಸನ್ಮತನಾಗಿ
ಅವಧಾನವನರಿಯನಯ್ಯ ಕೂಡಲ ಚೆನ್ನಸಂಗಯ್ಯನಲ್ಲಿ ಐಕ್ಯವಾದ–
ಮಹಾಶರಣ"

ವಚನಕಾರರು ತಾವು ಹೇಳುವುದಕ್ಕೆ ಆಧಾರವಾಗಿ ಸಂಸ್ಕೃತ ಶ್ಲೋಕಗಳನ್ನು ಕೆಲವು ವಚನಗಳಲ್ಲಿ ಉದ್ಧರಿಸಿದ್ದಾರೆ.

ಉದಾ :

ಬಸವಣ್ಣನವರ ವಚನಗಳು :

"ತನ್ನಾಶ್ರಯದ ರತಿ ಸುಖವನು
ತಾನುಂಬ ಊಟವನು ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ
ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವನು
ತಾ ಮಾಡಬೇಕಲ್ಲದೆ
ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ

---

28. (ಉಲ್ಲೇಖ) ವ. ಸಾ. ಪು. ೩.

ಸಾಕ್ಷಿ :

**ಸ್ತ್ರೀಸಂಗಂ ಪರಹಸ್ತಂ ಚ ಪರವಕ್ತ್ರಂ ಚ ಭೋಜನಂ**
**ಪರಹಸ್ತಾ ಚ ಪೂಜಾ ಯಾ ತ್ರಿವಿಧಂ ನರಕಂ ವ್ರಜೇತ್**

ಎಂಬುದಾಗಿ

ಇದನರಿಯದೆ ಬರಿ ಉಪಚಾರಕೆ ಮಾಡುವರೆಲ್ಲರು
ನಿಮ್ಮನೆತ್ತ ಬಲ್ಲರು, ಕೂಡಲಸಂಗಮದೇವ''[29]
''ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ
ಜಲ– ಬಿಂದುವಿನ ವ್ಯವಹಾರ ಒಂದೇ,
ಆಶೆಯಾಮಿಷ ಹರುಷ ರೋಷ ವಿಷಯಾದಿಗಳೆಲ್ಲ ಒಂದೇ
ಏನನೋದಿ, ಏನ ಕೇಳಿ, ಏನು ಫಲ
ಕುಲಜನೆಂಬುದಕ್ಕೆ ಆವುದು ದೃಷ್ಟ

ಗ್ರಂಥ :

**ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ**
**ಆತ್ಮ ಜೀವಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ**[30]

ಇದೇ ರೀತಿ ಚಂದಿಮರಸು, ಆದಯ್ಯ ಮುಂತಾದವರ ವಚನಗಳಲ್ಲಿ ಸಂಸ್ಕೃತ ಶ್ಲೋಕಗಳನ್ನು ಉದ್ಧರಿಸಿರುವುದು ಕಂಡುಬರುತ್ತದೆ. ಚಂದಿಮರಸನು ತನ್ನ ವಚನಗಳ ಮಧ್ಯೆ ಸಂಸ್ಕೃತ ಶ್ಲೋಕಗಳನ್ನು ಯಥೋಚಿತವಾಗಿ ಬಳಸಿದ್ದಾನೆ. ಉದಾ : ''ಸಮುದ್ರ ದಿಂದಾದ ತೆರೆಗಳು ಸಮುದ್ರದೊಳಗೆ ಆಡುತ್ತ ಆ ಸಮುದ್ರದೊಳಗೆ ಇಹವು. ತೆರೆಗಳು ಬೇರೊಂದುದಕವೇ. ನಿಮ್ಮಿಂದಲಾದ ಜಗವು ನಿಮ್ಮಲ್ಲಿಯೇ ಇದ್ದು ನಿಮ್ಮಲ್ಲಿಯೇ ಆಡುವುದು. ಬೇರೆಬೇರೆ ಕುಲ ಉಂಟೆ ಈ ಜಗಕೆ. ಅದೆಂತೆಂದರೆ ''ಬ್ರಹ್ಮ ಬೀಜಂ ಜಗತ್ಸರ್ವಂ! ಬ್ರಹ್ಮಣ್ಯೈವ ಲಯಂ ಯಾತಿ ಜಾತಿ ಭೇದ ಕುತೋಭವೇತ್''– ಇಂತೆಂಬು-

29. ಬ. ವ. : ಪು. ೬೪.
30. ಅದೇ, ಪು. ೭೬.

ದಾಗಿ ಕುಲವೂ ಇಲ್ಲ; ಫಲವೂ ಇಲ್ಲ ...[31] ಆದಯ್ಯನು ತಾನು ಹೇಳುವ ವಿಚಾರಗಳಿಗೆ ವೇದಾಗಮೋಪನಿಷತ್ತುಗಳಿಂದ ಆಧಾರಗಳನ್ನು ಕೊಟ್ಟಿದ್ದಾನೆ. ಉದಾ :

"ಎಲುವಿನ ನಿಲವು, ಅಮೇಧ್ಯದಾಗರ, ಉಚ್ಛಿಷ್ಟದೊರತೆ,
ಮಿದುಳಿನ ಸದನ, ಕೀವುನೆಣದೋವರಿ, ಜಂತಿನ ಜನ್ಮಭೂಮಿ,
ಕ್ರಿಮಿಯ ಗೂಡು, ಶುಕ್ಲದ ಜೀರಗೊಳವೆ, ರುಧಿರದ ತಾಣ
ಅಡಗಿನಂತರಂಗ,
ತೊಗಲ ಬಹಿರಂಗ, ರೋಮರಾಜಿಯ ಜಾಳಾಂಧ್ರ ನರದ ನೆಣಜಂತ್ರ,
ಆದಿ ವ್ಯಾಧಿಯ ವಾಸ, ಇಂತಿದರೊಳಗೆ ನಿನ್ನ ಕುಲಗೋತ್ರಂಗಳಾವುದು
ಹೇಳಾ ಎಲೆ ಮರುಳೆ ! ಇದಕ್ಕೆ ಶ್ರುತಿ–
ಅಂತ್ಯಜಾತಿರ್ದ್ವಿಜಾತಿರ್ವಾ ಏಕಯೋನಿ ಸಮುದ್ಭವಂ !
ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ
ಅಂತ್ಯಜಾತಿ ದ್ವಿಜಾತೀತಿ ವರ್ಣಾನಾಂ ಕಿಂ ಪ್ರಯೋಜನಂ
ಇದನರಿತು ಪಡುಭ್ರಮೆಗಳಲ್ಲಿ ಭ್ರಮಿತರನೇನೆಂಬೆನಯ್ಯಾ
ಸೌರಾಷ್ಟ್ರ ಸೋಮೇಶ್ವರ."[31]

ಹೀಗೆ ವಚನಕಾರರಲ್ಲಿ ಅನೇಕರು ಸಂಸ್ಕೃತದಲ್ಲಿದ್ದ ಜ್ಞಾನಭಂಡಾರವನ್ನು ಬಳಸಿ-ಕೊಂಡಿದ್ದರೆ, ಅದರ ಸಾರವನ್ನು ಸಾಮಾನ್ಯ ಜನರಿಗೂ ತಿಳಿಯುವಂತೆ ಹೇಳಿದ್ದಾರೆ.

ಹರಿದಾಸನ ಕೀರ್ತನೆಗಳು ವೇದೋಪನಿಷತ್ತು, ಭಾಗವತ ಮತ್ತು ಭಗವದ್ಗೀತೆ-ಗಳಿಂದ ಹೆಚ್ಚು ಪ್ರಭಾವ ಹೊಂದಿವೆ. ಭಾಗವತದಲ್ಲಿ ಚಿತ್ರಿಸಿರುವ ಮಧುರಭಕ್ತಿ ಭಾವನೆ ಯಂತೂ ಕೀರ್ತನೆಗಳಲ್ಲಿ ಯಥೇಚ್ಛವಾಗಿ ಕಾಣಿಸಿಕೊಂಡಿದೆ. ಶ್ರೀಪಾದರಾಯರು, "ಭಕ್ತಿ ವೈರಾಗ್ಯಗಳನ್ನು ಪ್ರತಿಪಾದಿಸುವಲ್ಲಿ ಅದರಲ್ಲಿಯೂ ಭಾಗವತದ ದಶಮ ಸ್ಕಂಧ-ದಲ್ಲಿ ಬರುವ ಶ್ರೀಕೃಷ್ಣನ ಬಾಲಲೀಲೆಯನ್ನು ನಿರೂಪಿಸುವಲ್ಲಿ, ಆತನ ಆಧ್ಯಾತ್ಮನುರಾಗ ಮಹಿಮಾನ್ವಿತವಾಗಿ ಕಾಣುತ್ತದೆ."[32] ಜಯದೇವನ 'ಗೀತಗೋವಿಂದ' ದ ಮಾದರಿ-ಯಲ್ಲಿ ಕನಕದಾಸರು, ಪುರಂದರದಾಸರು ಮುಂತಾದವರು ಕೀರ್ತನೆಗಳನ್ನು ರಚಿಸಿದ್ದಾರೆ. "ರಂಗಯ್ಯ ಮುಟ್ಟದಿರು ಮುತ್ತೆಲ್ಲ ಸಡಿಲ್ಯಾವೋ" ಎಂಬ ಕನಕದಾಸರ ಕೀರ್ತನೆ, "ಬಗೆಬಗೆಯ ಆಟಗಳೆಲ್ಲ ಕಲಿತಯ್ಯ ಜಗವ ಮೋಹಿಪನೆ," "ಆಡಿದನು ರಂಗ ಅದ್ಭುತ-ದಿಂದಲಿ ಕಾಳಿಂಗಣ ಫಣೆಯಲಿ," "ಹೋಗದಿರೆಲೋ ರಂಗ ಬಾಗಿಲಿಂದಾಚೆಗೆ"

---

31. ಫ. ಗು. ಹಳಕಟ್ಟಿ (ಸಂ.) : ಶಿವಶರಣರ ಸಂಕೀರ್ಣ ವಚನಗಳು. ಭಾಗ ೧. ಪು. ೨೮.
31. ಉತ್ತಂಗಿ ಚನ್ನಪ್ಪ (ಸಂ.) ಆದಯ್ಯನ ವಚನಗಳು. ಪು. ೮೮.
32. ಜ. ಕ. ಸಾ. ಚ. : ಪು. ೪೧೧ — ೧೨.

ಇತ್ಯಾದಿ, ಪುರಂದರದಾಸರ ಕೀರ್ತನೆಗಳು ಭಾಗವತದಿಂದ ಪ್ರಭಾವಿತವಾದವುಗಳು. ಭಾಗವತ ಪುರಾಣದ ಹಲವಾರು ಸನ್ನಿವೇಶಗಳೂ, ವ್ಯಕ್ತಿಗಳೂ ಈ ಕೀರ್ತನಗಳಲ್ಲಿ ತಲೆ-ದೋರಿವೆ. ಪುರಂದರದಾಸರ ಮತ್ತು ಉಳಿದ ದಾಸರ ಕೀರ್ತನೆಗಳನ್ನು ಒಟ್ಟುಗೂಡಿಸಿದರೆ ಕೀರ್ತನ ರೂಪದಲ್ಲಿಯ ಭಾರತ, ಭಾಗವತವನ್ನು ಕಾಣಬಹುದು.''[33]

''ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ

ನೀ ದೇಹದೊಳಗೊ ನಿನ್ನೊಳು ದೇಹವೊ'' ಎಂಬ ಕೀರ್ತನೆಯಲ್ಲಿ ಅದ್ವೈತಭಾವನೆ ವ್ಯಕ್ತವಾಗಿರುವುದಲ್ಲದೆ ಬ್ರಹ್ಮನ ಅನಂತತೆಯನ್ನು ಕುರಿತ ಉಪನಿಷತ್ ವಾಕ್ಯಗಳ ಪ್ರಭಾವವನ್ನು ತೋರುತ್ತದೆ. ''ಕಣ್ಣಿಲ್ಲದಾತನು ಕಂಡು ಪಿಡಿದ ಮೃಗ, ಕೈಯಿಲ್ಲದಾತ ನೆಟ್ಟ ಮಣ್ಣಲಿ ಹೊರಳುವ ಕಾಲಿಲ್ಲದಾತನು ಗಣ್ಯವಿಲ್ಲದೆ ಹಿಡಿದ'' ಎಂಬ ಕನಕದಾಸರ ಪದ್ಯ ಮುಕ್ತ ಜೀವಿಯ ಸ್ಥಿತಿಯನ್ನೂ, ಜೀವನದ ಸ್ವರೂಪವನ್ನು, ಪರಮಾತ್ಮನ ಲಕ್ಷಣವನ್ನೂ ಜೀವನಿಗೆ ಉಪದೇಶವನ್ನೂ ಮಾಡುವ ಪದ್ಯವಾಗಿದ್ದು, ಅದು ಶ್ವೇತಾಶ್ವತರ ಉಪನಿಷತ್ತಿನ "ಅಪಾಣಿ ಪಾದೋಜವನೋ ಗೃಹೀತ" ಎಂಬ ಶ್ಲೋಕವನ್ನು ಹೋಲುತ್ತದೆ[34]

ಕನ್ನಡ ಭಕ್ತಿ ಸಾಹಿತ್ಯ ಸಂಸ್ಕೃತ ಸಾಹಿತ್ಯದಿಂದ ಸಮೃದ್ಧವಾಗಿದೆ. ''ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯವೇ ಪ್ರೇರಕ, ಪೋಷಕ, ಗುರು''– ಎಂಬ ಬಿ. ಎಂ. ಶ್ರೀ ಅವರ ಮಾತು ಇಲ್ಲಿ ಗಮನಾರ್ಹ.[35] ಆದರೆ ಸಂಸ್ಕೃತದ ಪ್ರಭಾವವಿದ್ದರೂ ಕನ್ನಡ ತನ್ನತನವನ್ನು ಕಳೆದುಕೊಂಡಿಲ್ಲ: ಬದಲಾಗಿ ತನ್ನ ಮೂಲ ಸತ್ವವನ್ನು ನಿಚ್ಚಳವಾಗಿ ಕಾಯ್ದಿಟ್ಟುಕೊಂಡಿದೆ. ರಂ. ಶ್ರೀ ಮುಗಳಿಯವರು ಹೇಳುವಂತೆ ಕನ್ನಡದ ಮೇಲೆ ಸಂಸ್ಕೃತದ ಪ್ರಭಾವಗಳು ಎಷ್ಟು ಪರಿಯಿಂದ ಆವರಿಸಿದ್ದರೂ ಈ ಮೂಲಸತ್ವವನ್ನು ಅವು ನಷ್ಟಗೊಳಿಸಿಲ್ಲ. ಕನ್ನಡದ ಬೇರಿಗೆ ಸಂಸ್ಕೃತದ ನೀರು ಬಿದ್ದು ಒಂದು ವಿಶಿಷ್ಟ-ವಾದ ಸಂಸ್ಕೃತಿಯ ಮರವು ಬೆಳೆಯಿತು.''[36]

ಅಲ್ಲದೆ ''ವೈದಿಕ ಪರಂಪರೆಯು ಶೈವ, ವೈಷ್ಣವ ಭಕ್ತಿಮಾರ್ಗಗಳು, ಆಮೇಲೆ ತಲೆ ದೋರಿದ ಶಂಕರ, ರಾಮಾನುಜ, ಮಧ್ವಮತತ್ರಯಗಳು ಇವೆಲ್ಲಕ್ಕೆ ಕನ್ನಡ ಸಾಹಿತ್ಯ ವಾಣಿಯಾಗಿದೆ.''[37] ಸಂಸ್ಕೃತದಲ್ಲಿನ ಎಷ್ಟೋ ಗಹನ ವಿಷಯಗಳನ್ನು ಕನ್ನಡದಲ್ಲಿ ಅಧಿಕಾರಯುತವಾಗಿ ಹೇಳಬಹುದು ಎಂಬುದನ್ನು ಕನ್ನಡ ಭಕ್ತಿ ಕವಿಗಳು ತೋರಿಸಿ ಕೊಟ್ಟಿದ್ದಾರೆ. ಇದರಿಂದಾಗಿ ಅವರು ಕನ್ನಡ ಭಾಷೆಯ ಸರ್ವತೋಮುಖ ಬೆಳವಣಿಗೆಗೂ ಕಾರಣರಾಗಿದ್ದಾರೆ.

---

33. ಕ. ಸಾ. ಚ. : ಪು. ೨೮೫.
34. ಮಹಾತ್ಮ ಕನಕದಾಸ ಪ್ರಶಸ್ತಿ. ಪು. ೫೬.
35. ಬಿ. ಎಂ. ಶ್ರೀಕಂಠಯ್ಯ : ಕನ್ನಡ ಕೈಪಿಡಿ. ಸಂ. ೨. ಪು. ೬೭೨.
36. ಮತ್ತು (37) ಕ. ಸಾ. ಚ. ಪು. ೩೮೫.

## ' ಗಾಂಧೀ ಚಿತ್ರ '

● ಶಿವಾನಂದ ಮೂಲಿಮನಿ

ದಂಡೆಯಿಂದ ದೂರ ಸರಿದು
ಹಿಂಡು ಮಂಜನೆಲ್ಲ ಹೊದೆದು
ಕಂಡು–ಕಾಣದಂತೆ ಇರುವ
ಹಡಗ— ನಿನ್ನ ಚಿತ್ರ !

ಚಂಡ– ಪ್ರಚಂಡ ಕಾಂತಿಯಿಂದ
ಕುಂಡ– ಕೂಪಗಳನು ಬೆಳಗಿ
ಇಂದು ನಂದಿ ಹೋಗುತಿರುವ
ಕೆಂಡ– ನಿನ್ನ ಪಾತ್ರ,
ಏನಿದೀ ವಿಚಿತ್ರ !

●

# ಭೈರಪ್ಪನವರ ಕಾದಂಬರಿಗಳಲ್ಲಿ ಪ್ರೇಮದ ಪರಿಕಲ್ಪನೆ

● ಜಿ. ಎಂ. ಹೆಗಡೆ

" Love is the most terrible and also the most generous of the passions; it is the only one that includes in its dreams the happiness of some one else. "– J. A. Karr.

ಮಾನವನ ಬಾಳಿಗೆ ಸ್ವರ್ಗಸದೃಶವಾದ ಆನಂದವನ್ನು ನೀಡುವ ಪ್ರೇಮ ಅವರ್ಣನೀಯವಾದುದು. ಹೃದಯ ಹೃದಯಗಳ ಮಿಲನ ಪ್ರೇಮವಾದರೆ ದೇಹದೇಹಗಳ ಮಿಲನ ಕಾಮವೆಂದು ಹೇಳಲಾಗುತ್ತಿದ್ದರೂ ಅವೆರಡರ ಮಿಲನದಿಂದುಂಟಾದ ಅನುಭವವೇ ಹೆಚ್ಚು ಪರಿತೃಪ್ತವಾದುದೆಂದು ವಿಚಾರವಂತರ ಅಭಿಮತವಾಗಿದೆ.[1] ಕೌಟುಂಬಿಕ ಜೀವನಕ್ಕೆ ಸುಖವನ್ನುಂಟುಮಾಡುವ, ಸೋತ ಬಾಳಿಗೆ ಭರವಸೆಯನ್ನು ಕೊಡುವ, ವಿಶ್ವಾಸದ ಮೂರ್ತರೂಪವಾದ ಪ್ರೇಮ ಅಳಲಿನ ಮಾಲೆಯನ್ನು ದೂರಮಾಡಿ, ಎರಡು ಒಲಿದ ಜೀವಿಗಳ ಮಧುರ ಸಂಬಂಧವನ್ನು ಉನ್ಮೀಲನಗೊಳಿಸುವ, ಆತ್ಮೀಯತೆಯ ಅನಂತರೂಪ ! ವೈಚಾರಿಕತೆಯ ತಳಹದಿಯಲ್ಲಿ ಪ್ರೇಮದ ಸ್ವರೂಪದರ್ಶನವನ್ನು ಎಸ್. ಎಲ್. ಭೈರಪ್ಪನವರು ತಮ್ಮ ಕಾದಂಬರಿಗಳಲ್ಲಿ ವಾಸ್ತವಿಕ ಹಿನ್ನೆಲೆಯನ್ನಿಟ್ಟು ಪ್ರಸ್ತುತಪಡಿಸಿದ ರೀತಿ ಅತ್ಯಂತ ಗಮನಾರ್ಹವಾಗಿದೆ. ಆಧುನಿಕ ಕನ್ನಡ ಕಾದಂಬರಿ ಪ್ರಪಂಚದಲ್ಲಿ ಭೈರಪ್ಪನವರದು ಒಂದು ವಿಶಿಷ್ಟವಾದ ಸ್ಥಾನ. ಅವರ ಪ್ರಖರವಾದ ವಿಚಾರಶೀಲತೆ, ಜೀವನಾನುಭವದ ಪರಿಪಾಕ ಇವುಗಳಿಂದ ಮೂಡಿಬಂದ ಅವರ ಕಾದಂಬರಿಗಳು ಬದುಕಿನ ನಿಜ ಮೌಲ್ಯಗಳ ಜಿಜ್ಞಾಸೆಗೆ ತೊಡಗಿ ಯಶಸ್ವಿಯಾಗಿವೆ. ಭೈರಪ್ಪನವರ ಪ್ರೇಮ ಸಂಬಂಧಿತವಾದ ಧೋರಣೆಗಳನ್ನು, ಕಾದಂಬರಿಯ ಜೀವಿಗಳ ಪ್ರೇಮಸಮಸ್ಯೆಗಳನ್ನು ಗಮನದಲ್ಲಿರಿಸಿ ಬಹು ಸ್ಥೂಲವಾಗಿ ಇಲ್ಲಿ ಪ್ರಸ್ತುತಪಡಿಸಲಾಗುತ್ತದೆ.

---

1. Bertrand Russel : " Marriage and Morals " — " Sex intercourse divorced from love is incapable of bringing profound satisfaction to instincts ".

ಭೈರಪ್ಪನವರ "ಧರ್ಮಶ್ರೀ" ಕಾದಂಬರಿ ಮತಾಂತರಗಳಿಂದುಂಟಾಗುವ ಸಾಂಸ್ಕೃತಿಕ ಸಂಘರ್ಷಗಳನ್ನು ಪ್ರಕಟಿಸುವ ಪ್ರಬಲವಾದ ಉದ್ದೇಶವನ್ನಿಟ್ಟುಕೊಂಡಿದ್ದರೂ ಪ್ರೇಮದ ಬಳ್ಳಿ ಅಲ್ಲಿಯ ನಾಯಕ ವ್ಯಕ್ತಿಗಳ ಸುತ್ತ ಹಬ್ಬಿನಿಂತಿದೆ. ಪ್ರೇಮ– ಸಂಸ್ಕೃತಿ ಇದರ ಒಂದು ಮುಖವನ್ನು 'ಧರ್ಮಶ್ರೀ'ಯಲ್ಲಿ ನಾವು ಮನಗಾಣಬಹುದು. 'ಧರ್ಮಶ್ರೀ'ಯ ನಾಯಕ ಸತ್ಯ ಹಿಂದೂ ಧರ್ಮದ ಅಭಿಮಾನಿಯಾಗಿ, ಬುದ್ಧಿವಂತ ವಿದ್ಯಾರ್ಥಿಯಾಗಿ. ಬಡತನದಿಂದ ಬಳಲುತ್ತಿದ್ದರೂ ಆತ ತನ್ನ ಸಹಪಾಠಿಯಾದ ಕ್ರೈಸ್ತಕನ್ನೆ ರಾಚಮ್ಮಳ ಮುಗ್ಧಮಮತೆ, ವಾತ್ಸಲ್ಯ, ಮಾನವೀಯ ಗುಣಗಳಿಗೆ ಮಾರು ಹೋಗುತ್ತಾನೆ. ಹಾಗೆಯೇ ಆತನ ಪ್ರತಿಭಾನ್ವಿತ ವ್ಯಕ್ತಿತ್ವದಿಂದಾಗಿ ತನಗೆ ಮನಸೋತ ರಾಚಮ್ಮನ ಗಂಡನ ತಂಗಿ ಲಿಲ್ಲಿಯೊಡನೆ ಸ್ನೇಹದಿಂದ ಇದ್ದು ಅವಳು ತನ್ನ ಕಾಯಿಲೆಯಲ್ಲಿ ಮಾಡಿದ ಆರೈಕೆ ಹಾಗೂ ಬೌದ್ಧಿಕ ವಿಚಾರಗಳಲ್ಲಿ ಭಾಗವಹಿಸುವಿಕೆಯಿಂದಾಗಿ ಅವಳನ್ನು ಪ್ರೀತಿಸುವ ನಿರ್ಧಾರಕ್ಕೆ ತಲುಪುತ್ತಾನೆ. ಮೊದಮೊದಲು ಆತನ ಹಿಂದೂ ಧರ್ಮಾಭಿಮಾನ ಸಿಡಿದೆದ್ದರೂ ತರುವಾಯ ಬೌದ್ಧಿಕ ಸಂಭಾಷಣೆಯ ಫಲವಾಗಿ ಪರಸ್ಪರ ವಿಶ್ವಾಸ ಬೆಳೆದು ಹೃದಯದೊಲವಿನೆಡೆಗೆ ಮುಂದುವರಿಯುತ್ತದೆ. ಪ್ರೇಮ ಎಷ್ಟು ಸ್ನಿಗ್ಧವೂ ಕೋಮಲವೂ ಆಗಿರುವದೋ ಅಷ್ಟೇ ವ್ಯಕ್ತಿ–ವ್ಯಕ್ತಿಗಳ ಸಂಬಂಧದ ಸೇತುವೆಯಾಗುತ್ತದೆ. ಸತ್ಯ ಮತ್ತು ಲಿಲ್ಲಿ ಹಿಂದೂ–ಕ್ರೈಸ್ತ ಧರ್ಮಗಳ ಕಟ್ಟಾಭಿಮಾನಿಗಳಾಗಿದ್ದರೂ ಸಾಮಾಜಿಕ ಸಂಬಂಧದಿಂದ, ವ್ಯವಸ್ಥೆಯಿಂದ, ಗುಣಗಳಿಂದ ಭಿನ್ನರಾಗಿದ್ದರೂ, ಪ್ರೇಮ ಅವರನ್ನು ಕೂಡಿಸಿದೆ. ಪ್ರೇಮದ ವಲಯದಲ್ಲಿ ಸಿಕ್ಕ ಈ ಎರಡು ಜೀವಿಗಳನ್ನು ಅಗಲಿಸುವದು ಅಸಾಧ್ಯವಾಗುತ್ತದೆ. ತಮ್ಮ ಸುತ್ತಲಿನ ಪರಿಸರದ ವಿರುದ್ಧವಾಗಿಯಾದರೂ ಪ್ರೇಮಕ್ಕಾಗಿ ಬದುಕಲು ಅವರು ಬಯಸುತ್ತಾರೆ. ಹೀಗೆ ಅವಿಭಾಜ್ಯವಾದ ಒಕ್ಕಟ್ಟನ್ನು ತಂದುಕೊಡುವ ಪ್ರೇಮಕ್ಕಾಗಿ ಪರಸ್ಪರ ಹಂಬಲಿಸುವ, ದುಃಖಿಸುವ ಅವರುಗಳು ಜೀವನದ ಸಂಗಾತಿಗಳಾಗುವ ನಿರ್ಧಾರವನ್ನು ಕೈಕೊಳ್ಳುತ್ತಾರೆ. ಹಿಂದೂ ಧರ್ಮ, ಸಂಸ್ಕೃತಿಯ ಪ್ರತಿಪಾದಕ ಸತ್ಯ ಕ್ರೈಸ್ತನಾಗಿ ಲಿಲ್ಲಿಯೊಡನೆ ಮದುವೆಯಾಗಿ ಕ್ರೈಸ್ತ ವಿದ್ಯಾಸಂಸ್ಥೆಯ ಅಧಿಕಾರಿಯಾಗುತ್ತಾನೆ. ಪ್ರೇಮದ ಕಟ್ಟಿನಲ್ಲಿ ಬಿದ್ದ ಅವನ ಮನಸ್ಸು ಸಾಂಸ್ಕೃತಿಕ ಸಂಘರ್ಷಗಳನ್ನು ಎದುರಿಸುವ ಸಂದರ್ಭ ಬರುತ್ತದೆ.

ಪಾಶ್ಚಾತ್ಯ ನಾಗರಿಕತೆಯ ವಾತಾವರಣದಲ್ಲಿ ಬೆಳೆದ ಲಿಲ್ಲಿಯ ಮನಸ್ಸಿನಲ್ಲಿ ಸತ್ಯನ ಬುದ್ಧಿವಂತಿಕೆ, ವೈಚಾರಿಕ ನಿಲವು, ಭಾರತೀಯ ಸಂಸ್ಕೃತಿಯ ಒಲವು ಇವಗಳ ಪ್ರಭಾವ ಬೀಳುತ್ತದೆ. ಅವಳು ಸತ್ಯನನ್ನು ಪ್ರೀತಿಸುತ್ತಿದ್ದರೂ ಸಮಾಜದ ಕಟ್ಟುಪಾಡು, ತನ್ನ ಮನಸ್ಸಿನ ದಿಟ್ಟತನದ ಕೊರತೆ, ಇವುಗಳಿಂದ ಅದನ್ನು ಅಭಿವ್ಯಕ್ತಿಸಲಾರದೆ ಸುಮ್ಮನಿರುತ್ತಾಳೆ. ಸತ್ಯ ಕಾಯಿಲೆಯಲ್ಲಿದ್ದಾಗ ಅವನನ್ನು ತನ್ನ ಜೀವವೆಂದೇ ನೋಡಿಕೊಳ್ಳುತ್ತಾಳೆ. ಸತ್ಯನ ಮನಸ್ಸನ್ನು ಗೆಲ್ಲಲು ಭಾರತೀಯ ನಾರಿಯ ಸಾಮಾಜಿಕ ಗುಣಗಳನ್ನು ಪಡೆಯಲು ಬಯಸುತ್ತಾಳೆ. ಅವಳ ಕುರಿತು ಸತ್ಯ ಹೇಳುವ ಮಾತುಗಳಿವು : "ಪ್ರತಿಯೊಂದನ್ನೂ

ಬಿಡಿಸಿ ಹೇಳುವದು ಹೆಂಗಸಿಗೆ ಸಾಧ್ಯವಿಲ್ಲ. ಬರಿಯ ಸ್ನೇಹಕ್ಕಾಗಿ ಯಾವ ಹೆಂಗಸೂ ಅಷ್ಟೊಂದು ಮನಸ್ಸಿಟ್ಟು ಮತ್ತೊಬ್ಬರ, ಆದರಲ್ಲೂ ತನಗೆ ಸಂಬಂಧವಿಲ್ಲದ ಗಂಡಸಿನ ಸೇವೆ ಮಾಡುವದಿಲ್ಲ"– ಹೀಗೆಂದಾಗ ಅವರಿಬ್ಬರ ಹೃದಯ ಅರಳುತ್ತದೆ. ಒಡನೆಯೇ ಮದುವೆಯಾಗುವ ನಿರ್ಧಾರವನ್ನು ಅವರು ತಾಳುತ್ತಾರೆ. ತಮ್ಮ ಧರ್ಮ ಇದಕ್ಕೆ ಭಂಗ ತರಬಹುದೆಂಬ ಶಂಕೆ ಬರುತ್ತದೆ. ಸ್ತ್ರೀಯರು ಸಾಮಾನ್ಯವಾಗಿ ತಮ್ಮ ಮನಸ್ಸಿನಲ್ಲಿಯ ಪ್ರೇಮದ ಎಲ್ಲ ಭಾವನೆಗಳು, ಉನ್ಮತ್ತಸ್ಥಿತಿ, (Passions) ಆಸೆ–ಕನಸು, ಇವುಗಳನ್ನು ಮಾತಿನಲ್ಲಿ ಪ್ರಕಟಪಡಿಸುವದು ವಿರಳ. ಆದರೆ ಪುರುಷ ತನ್ನ ಮನದ ತುಡಿತಗಳನ್ನು ಬಚ್ಚಿಡದೆ ಬಿಚ್ಚಿ ಹೇಳುತ್ತಾನೆ. ಪ್ರೇಮದ ಅಭಿವ್ಯಕ್ತಿಯ ಅಂತರ ಇಲ್ಲಿ ಸ್ಪಷ್ಟವಾಗಿದೆ. ಒಟ್ಟಿನಲ್ಲಿ ಸತ್ಯ ಹಾಗೂ ಲಿಲ್ಲಿಯ ನಡುವಿನ ಪ್ರೇಮವನ್ನು ಪ್ರಕೃತಿಸಹಜವಾದ ರೀತಿಯಲ್ಲಿ ಭೈರಪ್ಪನವರು ಚಿತ್ರಿಸಿದ್ದಾರೆ.

ಪ್ರೇಮ ಒಂದು ಅದಮ್ಯವಾದ ಶಕ್ತಿ. ಅದು ಜಾತಿ–ಮತ, ದೇಶ–ಕಾಲಗಳ ಕಟ್ಟುಪಾಡನ್ನು ಮೀರಿ ಪ್ರಕಟವಾಗಬಲ್ಲದು. ಎರಡು ಒಲಿದ ಜೀವಿಗಳಲ್ಲಿ ಪ್ರೇಮ ನಡೆಯುತ್ತದಾದರೂ, ವ್ಯಕ್ತಿ ಸಮಾಜದ ಒಂದು ಅಭಿನ್ನವಾದ ಅಂಗವಾದುದರಿಂದ ತನ್ನ ಸುತ್ತಲಿನ ಸಮಾಜದೊಂದಿಗೆ ಕೂಡಿ ಬದುಕಲೇ ಬೇಕು. ಸತ್ಯ ಹೇಳುವ ಹಾಗೆ, "ಪ್ರೇಮ ವಿವಾಹವು ವ್ಯಕ್ತಿಯ ಸುಖಕ್ಕಾಗಿಯೇ ಇರುವದಾದರೂ, ಸಮಷ್ಟಿಯಲ್ಲಿ ಎಲ್ಲರೂ ನೋಡಿ ಸಂತೋಷಪಟ್ಟಾಗಲೇ ವ್ಯಕ್ತಿಗೆ ಸುಖವು ಪೂರ್ಣವಾಗಿ ದೊರೆಯುವದು. ನನ್ನ ವಿವಾಹವನ್ನು ನೋಡಿ ನನ್ನ ಬಳಗವು ನನ್ನೊಡನೆ ಆನಂದ ಪಟ್ಟೀತೆ?"[2] ಎಂಬ ವೈಚಾರಿಕ ಧೋರಣೆಯಲ್ಲಿ ಪ್ರೇಮ ಸಾಮಾಜಿಕ ಮೌಲ್ಯವಾಗಿದ್ದು ಪರಂಪರಾಗತವಾದ ಭಾರತೀಯ ನಿಲವನ್ನು ಬಿಟ್ಟರೆ ಈಗಿನ ವ್ಯವಸ್ಥೆಗೆ ಬೇರೆ ಪರಂಪರೆಯ ತಳಹದಿ ದೊರೆಯಲಾರದು ಎಂಬ ಭೈರಪ್ಪನವರ ನಿಲವು ಸ್ಪಷ್ಟವಾಗಿದೆ. ಆದುದರಿಂದಲೇ ಸತ್ಯ ಹಾಗೂ ಲಿಲ್ಲಿ ಪರಂಪರಾಗತ ಸ್ವರೂಪದ ಪ್ರೇಮವನ್ನೇ ಬಯಸಿ ಹಿಂದೂ ಧರ್ಮಕ್ಕೆ ಮರಳಿ, ಬದುಕಿನ ಸಂಗಾತಿಗಳಾಗುತ್ತಾರೆ.

ಪ್ರೇಮಕ್ಕೂ ಬೌದ್ಧಿಕ ಸಾಹಚರ್ಯಕ್ಕೂ ಇರುವ ಸಂಬಂಧದ ಪ್ರಶ್ನೆ ಆಧುನಿಕ ವಿಚಾರವಂತರ ಮುಂದೆ ಇರುವ ದೊಡ್ಡ ಸಮಸ್ಯೆಯಾಗಿದೆ. ಭೈರಪ್ಪನವರು ಇದನ್ನು ಸಮಗ್ರವಾಗಿ ಒಂದು ಕಾದಂಬರಿಯ ಹಂತದಲ್ಲಿ ನಿರೂಪಣೆಗೆ ಎತ್ತಿಕೊಂಡ ಪರಿಣಾಮವಾಗಿ ಮೂಡಿ ಬಂದ ಕೃತಿ "ದೂರ ಸರಿದರು". ಇದು ಕನ್ನಡ ಕಾದಂಬರಿಗಳಲ್ಲಿ ನೂತನವಾದುದು. ಪ್ರೇಮದ ಕುರಿತಾದ ಭೈರಪ್ಪನವರ ಒಲವು–ನಿಲವುಗಳು ಈ

---

2. "ಧರ್ಮಶ್ರೀ" — ಪುಟ ೨೫೧.

ಕಾದಂಬರಿಯಲ್ಲಿ ಸುವ್ಯಕ್ತವಾಗಿವೆ. ಇಲ್ಲಿ ಅವರು ತಮ್ಮ ವೈಚಾರಿಕ ನಿಷ್ಠೆಯನ್ನು ಕಲಾತ್ಮಕವಾಗಿ ವಿಶಿಷ್ಟ ಪಾತ್ರಗಳಲ್ಲಿ ಪ್ರಕಟವಾಗಿಸಿರುವದನ್ನು ಕಾಣಬಹುದು. ಇದರಲ್ಲಿ ವಿದ್ಯಾರ್ಥಿ ಜೀವನದಲ್ಲಿರುವ ವ್ಯಕ್ತಿಗಳ ಪ್ರೇಮದ ಆದರ್ಶ, ಕನಸುಗಳು, ತುಡಿತಗಳು, ಹಾಗೂ ಅವು ಟಿಸಿಲೊಡೆದು ಬೆಳೆಯುವ ಚಿತ್ರ ಮತ್ತು ಸ್ವತಃ ಈ ಬದುಕಿನ ಪ್ರವಾಹದಲ್ಲಿ ಬಿದ್ದು ಬಿಡುವ ವಾಸ್ತವಿಕ ಸಂಗತಿಗಳನ್ನು ಕಾದಂಬರಿಕಾರರು ತುಂಬಾ ಸಂಯಮದಿಂದ ನಿರ್ವಹಿಸಿದ್ದಾರೆನ್ನಬಹುದು. ವಿಜಯ್-ವಾಸನ್, ಆನಂದ-ವಿನತೆ, ವಸಂತ-ರಮೆಯರ ಪ್ರೇಮದ ಮುಖವೊಂದೆಡೆಗಿದ್ದರೆ, ಅದಕ್ಕೆ ನೀರೆರೆಯುವ ವರದಮ್ಮ, ವಿನತೆಯ ತಾಯಿ, ಜಗದಂಬಾ ಮುಂತಾದವರ ಪ್ರೇರಣೆ ಮುಖ್ಯವಾದದ್ದು. ಒಂದು ದೃಷ್ಟಿಯಿಂದ ಆನಂದ-ವಿನತೆಯರ ಬಾಳಿನ ಮೂಲಕವೇ ಪ್ರೇಮ-ಬೌದ್ಧಿಕ ಸಾಹಚರ್ಯಗಳ ಪ್ರತಿಪಾದನೆಯನ್ನು ಕಾದಂಬರಿಕಾರರು ಎತ್ತಿಕೊಂಡುದರಿಂದ ಅದಕ್ಕೆ ಒಂದು ವಿಶೇಷತೆ ಪ್ರಾಪ್ತವಾಗಿದೆ.

ದಾಂಪತ್ಯ ಪ್ರೇಮದಲ್ಲಿ ಸ್ತ್ರೀ ಪುರುಷರಲ್ಲಿಯ ವಿಚಾರಸಾಮ್ಯ ಅತ್ಯಗತ್ಯ– ಎಂಬ ನಿಲವನ್ನು ' ದೂರ ಸರಿದರು ' ಕಾದಂಬರಿಯ ವಸಂತ, ಉಮೆಯೊಂದಿಗೆ ಸಂಭಾಷಿಸುತ್ತ ಪ್ರತಿಪಾದಿಸುತ್ತಾನೆ. ಸ್ತ್ರೀ-ಪುರುಷರ ಪ್ರೇಮಕ್ಕೆ ಇರುವ ಬೆಲೆಯನ್ನು ಅವನು ಹೀಗೆ ವ್ಯಕ್ತಪಡಿಸುತ್ತಾನೆ : " ಸ್ತ್ರೀ ಪುರುಷರ ಪ್ರೇಮ ಯಾವುದಕ್ಕಾಗಿ ? ದಾಂಪತ್ಯಕ್ಕಾಗಿ ತಾನೆ ? ಪರಸ್ಪರ ಬುದ್ಧಿ ಶಕ್ತಿಗಳ ಸಮಾವೇಶವಾಗದೆ, ವಿಚಾರಗಳ ಏಕೀಕರಣವಾಗದೆ ಇದ್ದರೆ ಅದೆಂತಹ ದಾಂಪತ್ಯ ? ನಮ್ಮಲ್ಲಿ ನೂರಕ್ಕೆ ತೊಂಬತ್ತೊಂಬತ್ತನ್ನೂ ಮೀರಿ ಇರುವ ದಾಂಪತ್ಯಗಳಲ್ಲಿ ಪರಸ್ಪರ ವಿಚಾರದ ಸಂಬಂಧವೇ ಇರುವದಿಲ್ಲ. ಆದರೂ ಬಂಧನ ವಿರುತ್ತದೆ. ನಾನು ಈಗ ಹೇಳಿದ ಅರ್ಥದಲ್ಲಿ ಹೃದಯ ಬಂಧನದ ಭ್ರಮೆ ಬೇಡ; ವಿಚಾರದ ಸಾಹಚರ್ಯವಿದ್ದರೆ ಸಾಕು. ಅದೊಂದನ್ನೇ ನಿಜವಾದ ದಾಂಪತ್ಯವೆನ್ನಬೇಕು". ಅಷ್ಟರಲ್ಲಿ ಅವನನ್ನು ತಡೆದು ಉಮೆ ಒಂದು ಪ್ರಶ್ನೆ ಹಾಕಿದಳು : " ವಿಚಾರದ ಸಾಹಚರ್ಯವೇ ಬೇಕಾದಲ್ಲಿ ಗಂಡು–ಹೆಣ್ಣುಗಳ ನಡುವೆ ದಾಂಪತ್ಯವಾದರೂ ಏಕೆ ? ಮಿತ್ರತ್ವವೇ ಸಾಕಲ್ಲ ? " ಎಂದಾಗ, ವಸಂತ ಕೊಡುವ ಉತ್ತರವಿದು—"ಅದಕ್ಕಾಗಿಯೇ ಪ್ಲೇಟೋ ಹೇಳಿದ್ದು, ಆದರ್ಶ ರಾಜ್ಯಕ್ಕೆ ಹೊಸಪ್ರಜೆಗಳ ಅವಶ್ಯಕತೆ ಇದ್ದಾಗ ಮಾತ್ರ ಸ್ತ್ರೀ-ಪುರುಷರು ದಂಪತಿಗಳಂತೆ ಇರಬೇಕು. ಉಳಿದ ಕಾಲದಲ್ಲಿ ಅವರೆಲ್ಲರೂ ಸಮಾನ ಮಟ್ಟದ, ಬೌದ್ಧಿಕ ಸಹಚಾರಿಗಳು ಎಂದು. ತುಂಬು ಎತ್ತರದ ದೃಷ್ಟಿಯಿಂದ ನೋಡಿದರೆ ದಾಂಪತ್ಯವೆಂಬುದು ಅವಿಚಾರಿತ ಕಲ್ಪನೆ "[3] ಇಂತಹ ಅಭಿಮತಗಳು ವೈಚಾರಿಕ ಶ್ರದ್ಧೆಯಿಂದ ಮೂಡಿಬಂದಿದ್ದರೂ ವಾಸ್ತವಿಕ ಮಹತ್ವವನ್ನು ಪಡೆಯುವದು ಕಷ್ಟ

3. " ದೂರಸರಿದರು " — (ನಾಲ್ಕನೇ ಆವೃತ್ತಿ 1975). ಪುಟ ೨೩-೨೪.

ವಾಗುತ್ತದೆ. ಭೈರಪ್ಪನವರು ತಮ್ಮ ಕಾದಂಬರಿಯ ಪಾತ್ರಗಳಲ್ಲಿ ಒಂದು ಸಿದ್ಧಾಂತ ಇಲ್ಲವೆ ವಿಚಾರವಾದವನ್ನು ಮೂಡಿಸಿ ಅದನ್ನೇ ಕೊನೆಯುವರೆಗೂ ಸಮರ್ಥಿಸುವಂತೆ ತೋರುತ್ತದೆ. ಇದರಿಂದ ಅವರ ಕಾದಂಬರಿಗಳಲ್ಲಿಯ ಪಾತ್ರವಿಧಾನ ಚರ್ಚಾರ್ಹ ವಾಗುತ್ತದೆ. ಇಲ್ಲಿಯ ವಸಂತ, ಪ್ರೇಮವೆಂಬುದು ವಿಚಾರಸಮ್ಮಿಳನದಿಂದ ಹುಟ್ಟುವ ಒಂದು ಭಾವನೆ ಎಂಬ ಸಿದ್ಧಾಂತಕ್ಕೆ ಕಟ್ಟುಬಿದ್ದು ತನ್ನ ಸ್ನೇಹಿತ ರಂಗೇಗೌಡ (ರಾಜ್ಯ ಶಾಸ್ತ್ರದ ವಿದ್ಯಾರ್ಥಿ) ತಂದೆ-ತಾಯಿಗಳ ಆಸೆಗೆ ಕಟ್ಟುಬಿದ್ದು ವಿದ್ಯಾರ್ಥಿಯಾಗಿದ್ದಾಗಲೇ ಹಳ್ಳಿಯ ಹದಿನಾಲ್ಕು ವರ್ಷದ ಹುಡುಗಿಯನ್ನು ಮದುವೆಯಾಗಿ ದಾಂಪತ್ಯ ಪ್ರೇಮದ ಸೊಗಸನ್ನು ಕಾಣದೆ ಇರುವ ಸ್ಥಿತಿಯನ್ನು ನೋಡುತ್ತಾನೆ. ವಿಚಾರವಂತಳೂ ಸಹ-ಪಾಠಿಯೂ ಆದ ಉಮೆಯೇ ತನ್ನ ಬಾಳ ಸಂಗಾತಿಯಾಗಬಲ್ಲಳೆಂದು ಆತ ನಿರ್ಧರಿ-ಸುತ್ತಾನೆ. ಅವನು ಕಾದಂಬರಿಯ ಉಳಿದ ಜೀವಿಗಳಿಗಿಂತ ಹೆಚ್ಚಾಗಿ ಬೌದ್ಧಿಕವಾಗಿ ಬಾಳಿನಲ್ಲಿ ಮಹತ್ವದ್ದನ್ನು ಸಾಧಿಸಿ ಯಶ ಕಂಡನೆಂಬಂತೆ ಭೈರಪ್ಪನವರು ಚಿತ್ರಿಸಿದ್ದಾರೆ.

ಪ್ರೇಮ ವ್ಯಕ್ತಿಯ ಬಾಳಿನಲ್ಲಿ ಉದ್ವೇಗ ಪೂರ್ವಕವಾಗಿ ಬಂದಾಗ ಅದು ವಿಕೃತವಾಗಿ ಪರಿಣಮಿಸಬಲ್ಲುದು ಎಂಬುದನ್ನು ಭೈರಪ್ಪನವರು ಇದೇ ಕಾದಂಬರಿಯ ವಿಜಯ್-ವಾಸನ್‌ರ ಮೂಲಕ ಚಿತ್ರಿಸಿದ್ದಾರೆ. ಸಿರಿವಂತನಾದ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿ ವಾಸನ್ ಸಂಶೋಧನಸಹಾಯಕಿಯಾದ, ವಿನತೆಯ ಸಹೋದರಿ ವಿಜಯ್‌ಳನ್ನು ನೋಡಿ ಅವಳ ರೂಪ, ಸೌಂದರ್ಯಕ್ಕೆ ಮೆಚ್ಚಿ ತಾನು ಅವಳನ್ನು ಪ್ರೀತಿಸುತ್ತೇನೆ ಎಂದಾಗ ವಿಜಯ್, ಪರಿಚಯವಿಲ್ಲದ ಅವನಿಗೆ "ನೀವು ಮರ್ಯಾದೆ ಬಿಟ್ಟಿದ್ದೀರೆಂದು ತೋರುತ್ತದೆ" ಎನ್ನುವಳು.

"ಪ್ರೇಮಿಗೆ ಮಾನ, ಮರ್ಯಾದೆ, ಭಯ, ದೂಷಣೆ, ಜನನಿಂದೆ, ಯಾವುದರ ಹೆದರಿಕೆಯೂ ಇಲ್ಲ"[4] ವಾಸನ್ನನ ಉತ್ತರವಿದು. ಇದರ ಪರಿಣಾಮ ರೂಪವತಿಯಾದ ವಿಜಯ್‌ಳಿಗೆ ಭಯ, ನಿರೀಕ್ಷೆ, ಬಯಕೆ, ದಮನ ಮತ್ತು ವಿಸ್ಮಯಗಳು ಸಮ್ಮಿಶ್ರವಾಗಿ ಒಟ್ಟಿಗೆ ಪ್ರವಹಿಸಿ ಅವನನ್ನು ದಿಙ್ಮೂಢಳನ್ನಾಗಿಸುವ ಅನುಭವ. ಪರಿಣಾಮ ವಿಜಯ್-ವಾಸನ್‌ರ ರಜಿಸ್ಟರ್ ಮದುವೆ. ಇದನ್ನು ತಿಳಿದ ವಾಸನ್ನನ ತಂದೆ-ತಾಯಿ ಕಿಡಿ ಕಾರುತ್ತಾರೆ. ತಮ್ಮ ಮನೆತನದ ಗೌರವಕ್ಕೆ ಅನುಗುಣವಾಗಿ ಧನ-ಆಭರಣಗಳು ದೊರೆ-ತಾಗಲೇ ತಾವು ವಿವಾಹವನ್ನು ಒಪ್ಪಿ ನಡೆಸುವದಾಗಿ ಹೇಳುತ್ತಾರೆ. ವಿಜಯ್‌ಳ ತಾಯಿ ತನ್ನ ಮಗಳ ಬದುಕು ಹಾಳಾಗಬಾರದೆಂದು ತಮ್ಮ ಸಂಪತ್ತನ್ನೆಲ್ಲ ನೀಡುವ ಸ್ಥಿತಿ ಬರು-ತ್ತದೆ. ಧನಪಿಶಾಚಿಗಳಾದ ವಾಸನ್ನನ ಮನೆಯವರೊಂದಿಗೆ ವಿಜಯ್‌ಳಿಗೆ ಬದುಕಲು

---

4. "ದೂರಸರಿದರು" — (ನಾಲ್ಕನೇ ಆವೃತ್ತಿ 1975). ಪುಟ ೩೯.

ಕಷ್ಟವಾಗುತ್ತದೆ. ವಾಸನ್ ಜೊತೆ ಪರಿಪೂರ್ಣ ದಾಂಪತ್ಯ ಪ್ರೇಮವನ್ನು ಪಡೆಯಲಾರದೆ ವಿಜಯ್ ನಿರಾಶಳಾಗುತ್ತಾಳೆ. ಸಂಯಮವಿಲ್ಲದ ಪ್ರೇಮದಿಂದಾಗಿ ವಿಜಯ್–ವಾಸನ್ ಜೀವನದುದ್ದಕ್ಕೂ ಅಶಾಂತಿಯನ್ನು ಪಡೆಯಬೇಕಾಗುತ್ತದೆ. ಸಾಮಾನ್ಯವಾಗಿ ವ್ಯಕ್ತಿಯ ಬಾಳಿನಲ್ಲಿ ಪ್ರೇಮ ಸುಖ ತರುವದಾದರೂ ಧನವೇ ಅದಕ್ಕಿಂತ ಶ್ರೇಷ್ಠವೆಂದು ಭಾವಿಸುವ ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಉಂಟಾಗುವ ದುಷ್ಪರಿಣಾಮಗಳು ಪ್ರೇಮಕ್ಕಿರುವ ಮೌಲ್ಯವನ್ನು ಕಡಿಮೆ ಮಾಡುತ್ತವೆ.[5] ಎಂಬ ಅಂಶವನ್ನು ಭೈರಪ್ಪನವರು ಪ್ರಕಟಿಸಿದ್ದಾರೆ.

'ದೂರಸರಿದರು' ಕಾದಂಬರಿಯ ಆನಂದ ಮತ್ತು ವಿನತೆ ಶುದ್ಧಪ್ರೇಮ ಹಾಗೂ ಬೌದ್ಧಿಕಸಾಹಚರ್ಯಕ್ಕಾಗಿ ಹಂಬಲಿಸಿದವರು. ವಿದ್ಯಾರ್ಥಿಜೀವನದಲ್ಲೇ ಆನಂದ–ವಿನತೆ ಪರಸ್ಪರ ಆಕರ್ಷಿತರಾಗುತ್ತಾರೆ. ಅವರಿಬ್ಬರೂ ಸಾಹಿತ್ಯದ ತತ್ವಶಾಸ್ತ್ರದ ಅಭ್ಯಾಸಿಗಳಾಗಿ, ವಿಚಾರವಂತರಾಗಿ, ಒಲವಿನ ಜೀವಿಗಳಾಗುವರು. ವಿದ್ಯಾರ್ಥಿಗಳಾದ ಅವರು ಬದುಕಿನ ಹಂತ–ಹಂತಗಳಲ್ಲಿ ಪ್ರೇಮದ ಕನಸಿನ ರಾಜ್ಯವನ್ನು ಕಟ್ಟಿಕೊಳ್ಳುತ್ತಾರೆ. ಅವರ ಆಲೋಚನೆಗಳನ್ನು, ಭಾವನೆಗಳನ್ನು, ಒಲವಿನ ಬದುಕನ್ನೂ ಕಾದಂಬರಿಕಾರರು ಕೃತಿಯುದ್ದಕ್ಕೂ ಚಿತ್ರಿಸುತ್ತಾರೆ. ವಿಜಯ್‌ಳ ಪ್ರೇಮ ವಿವಾಹ ಅವಳ ತಾಯಿಗೆ ಬೇಸರವನ್ನುಂಟು-ಮಾಡಿರುವ ಪರಿಣಾಮವಾಗಿ ವಿನತೆ ಆನಂದನೊಡನೆ ಪ್ರೇಮ, ಒಲವು ತೋರಿಸಬಾರದೆಂಬ ತಾಯಿಯ ಕಟ್ಟುಕಟ್ಟಳೆಯನ್ನು ಮೀರಿ ನಿಲ್ಲುವದು ವಿನತೆಗೆ ಕಷ್ಟವಾಗುತ್ತದೆ. ಆನಂದ–ವಿನತೆಯರು ಒಂದು ನಾಣ್ಯದ ಎರಡು ಮುಖದಂತಿದ್ದವರು ಪರಿಸರದ ಮೂಲಕ ದೂರವಾಗುತ್ತಾರೆ. ಆದರೆ ಅವರ ಹೃದಯದಲ್ಲಿರುವ ಪ್ರೇಮ ದೂರ ಸರಿಯುವದಿಲ್ಲ. ಆನಂದ ಧಾರವಾಡದಲ್ಲಿ ಅಧ್ಯಾಪಕನಾಗಿ ತನ್ನ ಬೌದ್ಧಿಕ ಮಟ್ಟಕ್ಕೆ ಸರಿಯಲ್ಲದವಳನ್ನು ಮದುವೆಯಾಗುತ್ತಾನೆ. ವಿನತೆ ಆನಂದನಿಗಾಗಿ ತನ್ನ ಹೃದಯದೊಲವನ್ನು ಮೀಸಲಾಗಿ-ಟ್ಟವಳು. ಅವನ ಪ್ರೇಮಕ್ಕಾಗಿ ಹಂಬಲಿಸಿ ಕೊನೆಯುಸಿರೆಳೆದ ವಿನತೆಯ ಬಾಳಿನಲ್ಲಿ ತ್ಯಾಗಮಯವಾದ ಪ್ರೇಮವನ್ನು ಭೈರಪ್ಪನವರು ಬಹುಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ.

---

5. ನೋಡಿ. Zac Poonen : Sex, Love and Marriage—
– " The wealth, or social connections of the other person's family should also never influence one's decision when considering a marriage proposal. It is a shame and disgrace if one who calls himself a believer is influenced by such factors. Many a marriage arrangement has failed because the parents of the girl could not meet the exorbitant demand for dowry made by the parents of the boy. How many girls in our land have been emotionally disturbed and brought to frustration because of this ".

ಮಾನವ ಚಾರಿತ್ರ್ಯದಲ್ಲಿ ಎಷ್ಟೋ ಪ್ರಳಯಗಳಾಗಿವೆ. ಸ್ತ್ರೀಯ ಪ್ರೇಮ ಪುರುಷಭಾಗ್ಯ ಕಾದು ಕಾದು ಮಾಗಿವೆ'' ಎಂದು ಅಂಬಿಕಾತನಯದತ್ತರು ಹೇಳಿದಂತೆ "ದೂರ ಸರಿದರು" ಕಾದಂಬರಿಯ ಜೀವಿಗಳು ಶುದ್ಧ ಪ್ರೇಮಕ್ಕಾಗಿ ಹಂಬಲಿಸಿ ಸ್ವತಃ ಈ ಬಾಳಿನ ಪ್ರವಾಹದಲ್ಲಿ ಬಿದ್ದು ಬಿಡುವ ಚಿತ್ರ ಗಮನಾರ್ಹವಾದ ರೀತಿಯಲ್ಲಿ ಚಿತ್ರಿತವಾಗಿದೆ.

ಭೈರಪ್ಪನವರ 'ಗೃಹಣ' ಕಾದಂಬರಿ ಪ್ರೇಮ, ಮೋಹ ಮತ್ತು ಧರ್ಮದ ಪರಿಕಲ್ಪನೆಯನ್ನು ಪ್ರಕಟಿಸುತ್ತದೆ. ವಾಸ್ತವವಾಗಿ ಮೋಹ ಮತ್ತು ಧರ್ಮ ಇವು ಒಂದಕ್ಕೊಂದು ವಿರುದ್ಧವಾದವುಗಳು. ಇಂದ್ರಿಯ ಸುಖಕ್ಕಾಗಿ ಹಂಬಲಿಸಿ ಕಾಮ–ಪ್ರೇಮದ ಸುಳಿಯಲ್ಲಿ ಸಿಕ್ಕವರು ಧರ್ಮದ ಧ್ಯೇಯವನ್ನು ಸಾಧಿಸಲಾರರು ಎಂಬುದನ್ನು ಪ್ರಾಚೀನ ಸಾಹಿತ್ಯ ಶಾಸ್ತ್ರಗ್ರಂಥಗಳು ಬೋಧಿಸುತ್ತವೆ. ಸಮಾಜದಲ್ಲಿಯ ಧಾರ್ಮಿಕವ್ಯಕ್ತಿ ತನ್ನ ಮನಃಸ್ಥೈರ್ಯವನ್ನು ಕಾಪಾಡಿಕೊಂಡು ತನ್ನ ಧರ್ಮಬಂಧುಗಳಿಗೆ ಆಧ್ಯಾತ್ಮಸಂದೇಶವನ್ನು ನೀಡುವ ಕಡೆಗೆ ಸದಾ ಚಿಂತಿಸಬೇಕು. ಆದರೆ 'ಗೃಹಣ' ಕಾದಂಬರಿಯಲ್ಲಿಯ ಪ್ರೇಮ–ಧರ್ಮಗಳ ವಾಸ್ತವಿಕ ದೃಷ್ಟಿ ಇಂದಿನ ಸಾಮಾಜಿಕ ಸನ್ನಿವೇಶದಲ್ಲಿ ಕೆಲವು ಮಹತ್ವದ ಅಂಶಗಳನ್ನು ನೀಡುತ್ತದೆ. ಹಿಮಗಿರಿಯ ಮಠದ ಸ್ವಾಮಿಗಳು ಇಂದ್ರಿಯಸುಖಕ್ಕಾಗಿ ಆಸೆಪಟ್ಟು, ಆಸ್ಪತ್ರೆಯ ಲೇಡಿ ಡಾಕ್ಟರ್ ಸರೋಜಮ್ಮನವರೊಡನೆ ಗುಪ್ತವಾಗಿ ದೈಹಿಕ ಸಂಬಂಧ ಬೆಳೆಸುವ ನಿರ್ಧಾರಕ್ಕೆ ತಲುಪಿ ಯಶಸ್ವಿಯಾಗುತ್ತಾರೆ. ಅವರ ಪ್ರೇಮದ ಕಥೆ ಊರಿನಲ್ಲೆಲ್ಲ ಹಬ್ಬಿ ಅಶಾಂತಿಯ ಅಲ್ಲೋಲ ಕಲ್ಲೋಲವನ್ನುಂಟು ಮಾಡುತ್ತದೆ. ಅದೇ ಊರಿನ ಆಜನ್ಮ ಬ್ರಹ್ಮಚಾರಿಯಾದ ಕಾಲೇಜಿನ ಪ್ರಾಚಾರ್ಯರು ತಮ್ಮ ಕಾಲೇಜಿನಲ್ಲಿ ಕೆಲಸಮಾಡುತ್ತಿರುವ ಲಲಿತಮ್ಮನ ಮೋಹದ ಬಲೆಯಲ್ಲಿ ಬಿದ್ದು ಮಧ್ಯವಯಸ್ಸಿನಲ್ಲಿರುವ ಅವರ ಪ್ರೇಮವಿವಾಹದ ಸುದ್ದಿ ಊರಿನ ಜನತೆಗೆ ದಿಗ್‌ಭ್ರಮೆ ಹುಟ್ಟಿಸುತ್ತದೆ. ಇವರೆಲ್ಲರೂ ತಮ್ಮ ಬದುಕಿನಲ್ಲಿಯ ಪ್ರೇಮವನ್ನು ಕುರಿತು ಆತ್ಮ ವಿಶ್ಲೇಷಣೆಗೆ ತೊಡಗುತ್ತಾರೆ. ಲಲಿತಮ್ಮ, ಬ್ರಹ್ಮಚರ್ಯ ಮುಗಿದ ಮೇಲೆ ಗೃಹಸ್ಥರಾಗುವಂತೆ ತಡವಾಗಿ ತನ್ನನ್ನು ಪ್ರಾಚಾರ್ಯರು ಪ್ರೀತಿಸಿದ್ದು ನ್ಯಾಯವೆಂದು ಒಪ್ಪುವಳಾದರೂ ಸನ್ಯಾಸಿ ಗೃಹಸ್ಥನಾಗುವದು ಸಾಧ್ಯವಿಲ್ಲವಾದುದರಿಂದ ಸ್ವಾಮಿಗಳೂ ಮೋಹವಶರಾಗಿರುವರೆಂದು ಹೇಳುತ್ತಾಳೆ. ಪ್ರಿನ್ಸಿಪಾಲರು ಸ್ವಾಮಿಗಳೊಡನೆ ಸಂವಾದಿಸುವ ಮಾತುಗಳಿವು: "ನಾನು ವೇದಾಂತ ಹೆಚ್ಚು ಓದಿಲ್ಲ. ಆದರೆ ಬ್ರಹ್ಮಚರ್ಯದಿಂದ ತಪಸ್ಸು ಸಿದ್ಧಿಸುತ್ತೆ. ಅದನ್ನು ಬಿಟ್ಟರೆ ಮನುಷ್ಯನ ಮಹಿಮೆ ಎಲ್ಲಿ ನಷ್ಟವಾಗುತ್ತೆ ಅಂತ ಓದಿದೀನಿ. ಉದಾಹರಣೆಗೆ ಪರಮಹಂಸರು, ಅರವಿಂದರು, ಗಾಂಧಿಯವರು, ವಿವೇಕಾನಂದರು ... ಎಂದು ಅವರು ಮಾತನ್ನು ಪೂರೈಸುವ ಮೊದಲೇ ಸ್ವಾಮಿಗಳು ಹೇಳಿದರು : "ನಿಮ್ಮ ಪ್ರಶ್ನೆ ಅರ್ಥವಾಯಿತು. ಈ ಮಾತನ್ನು ಈ ಮಹನೀಯರು ಎಲ್ಲಿ ಯಾವ ಸಂದರ್ಭದಲ್ಲಿ ಯಾವ ಅರ್ಥದಲ್ಲಿ ಹೇಳಿದ್ದಾರೆ ಎನ್ನುವ ವಿವರ ನಮಗೆ ಈಗ ಬೇಡ. ಬ್ರಹ್ಮಚರ್ಯ ಅಂದರೆ ಏನು ಅನ್ನುವದನ್ನು ವಿಚಾರ ಮಾಡಬೇಕು. ಆದರೆ ಅದಕ್ಕಿಂತ ಮುಖ್ಯ ಅಂಶವನ್ನು

ನೀವು ಯೋಚನೆಮಾಡಿ. ಹದಿನಾರನೆ ವಯಸ್ಸಿಗೇ ಮದುವೆಯಾಗಿ ಆಮೇಲೆ ಬಹಳ ವರ್ಷ ಸಂಸಾರವನ್ನುಂಡು ಸಾಕಷ್ಟು ಮಕ್ಕಳಾದ ಮೇಲಲ್ಲವೆ ಗಾಂಧಿಯವರು ಘೋಷಣೆ ಮಾಡಿದ್ದು ? ಅರವಿಂದರು ಮದುವೆಯಾಗಲಿಲ್ಲ, ಆದರೆ ಒಬ್ಬ ಹೆಂಗಸು ತಮ್ಮ ನಿಗಾ ನೋಡಿಕೊಂಡು ತಾನೂ ಸಾಧನೆಮಾಡಿ ತಮ್ಮ ಸಾಧನೆಗೆ ಸಹಾಯಕಳಾಗಿರಬೇಕು ಅನ್ನುವ ಬಯಕೆ ಅಗತ್ಯಗಳನ್ನು ಯಾವ ಗಂಡಸು ತಾನೇ ಇಲ್ಲ ಅನ್ನಕೆ ಸಾಧ್ಯ ?

ಆ ಸಾಧನೆ ಆಧ್ಯಾತ್ಮಿಕವಾಗಿರಬಹುದು, ಲೌಕಿಕವಾಗಿರಬಹುದು....ಇವೆಲ್ಲ ಆಯಾ ಸಾಧಕನ ವೈಯಕ್ತಿಕ ರೀತಿ ವಿಧಾನಗಳು[6] ಸ್ವಾಮಿಗಳು ತಮ್ಮ ಹಾಗೂ ಡಾ. ಸರೋಜಮ್ಮಳ ಪ್ರೇಮವನ್ನು ಹೀಗೆ ಸಮರ್ಥಿಸಿಕೊಂಡರೆ ವೈದ್ಯೆಯಾದ ಸರೋಜಮ್ಮ ತಮ್ಮ ಮತ್ತು ಸ್ವಾಮಿಗಳ ಶರೀರ ಸಂಬಂಧ ನಡೆದು ಹೋದ ಕಾಲದಲ್ಲಿ ದೈಹಿಕ ಸುಖವನ್ನು ಅನುಭವಿಸಿ ಸ್ವಾಮಿಗಳ ಬಗೆಗೆ ಹೀಗೆ ಯೋಚಿಸುತ್ತಾಳೆ: "ಸ್ವಾಮಿಗಳು ಮೋಹ ವಶರಾಗಿ-ದ್ದುದೇ, ಕಾಮಗ್ರಸ್ತರಾಗಿದುದ್ದೇ ನಿಜ ಎಂದು ಅವಳ ಮನಸ್ಸು ಹೇಳಿತು. ತನಗೆ ಒದಗಿರುವ ಈ ಸ್ಥಿತಿಗೆ ಅವರ ಅವಸರದ ಕಾಮೋಚ್ಛೆಯೇ ಕಾರಣವೆಂಬ ಬಗೆಗೆ ಯಾವ ಸಂದೇಹವೂ ಹುಟ್ಟಲಿಲ್ಲ. ಸ್ವಾಮಿ ಮಾನಸಿಕವಾಗಿ ಲಂಪಟನೇ ಆಗಿದ್ದರು. ವಾಸ್ತವನಾಗಿ ಅವರ ವ್ಯಕ್ತಿತ್ವವೇ ಹಾಗೆ ಎನ್ನಲಾಗುವದಿಲ್ಲ. ಆದರೆ ತನ್ನ ವಿಷಯದಲ್ಲಿ ಮೋಹ ತುಂಬಿತ್ತು, ಮೋಹವಿದ್ದಲ್ಲಿ ಲಂಪಟತೆ ಇರುತ್ತದೆ. ಪ್ರೇಮವಿದ್ದಲ್ಲಿ ಇರಲಾರದು.'' ಸಾಮಾನ್ಯವಾಗಿ ಧರ್ಮ, ಪ್ರೇಮ–ಕಾಮಗಳ ವೈರಿಯಲ್ಲ. ಆದರೆ ಅದು ಮಾನಸಿಕ ಹಾಗೂ ಸಾಮಾಜಿಕ ಸ್ವಾಸ್ಥ್ಯವನ್ನು ಕದಡ ಕೂಡದು, ಎಂಬ ಅಂಶ ಇಲ್ಲಿ ಗಮನಾರ್ಹ.[7]

ಪ್ರೇಮ ಮತ್ತು ವಂಶಪ್ರಜ್ಞೆಯನ್ನು ಭೈರಪ್ಪನವರು ತಮ್ಮ ಪ್ರಸಿದ್ಧ ಕಾದಂಬರಿ " ವಂಶವೃಕ್ಷದಲ್ಲಿ " ನಿರೂಪಿಸಿದ್ದಾರೆ. ವಂಶವೃಕ್ಷದ "ಶ್ರೋತ್ರಿಯರು ಸನಾತನ ಧರ್ಮವನ್ನು ಜೀವಿಸುತ್ತಿದ್ದರು. ಅವರ ಪರಿಪೂರ್ಣ ವಿಶ್ವಾಸದ ಪ್ರಕಾರ ಮನುಷ್ಯ ಮದುವೆ-ಯಾಗುವದು ಗೃಹಸ್ಥ ಧರ್ಮಕ್ಕಾಗಿ; ಗೃಹಸ್ಥನಾಗುವದು ಈ ಲೋಕದಲ್ಲಿರುವ ತನ್ನ ಕರ್ತವ್ಯಗಳನ್ನು ಪೂರೈಸುವದಕ್ಕಾಗಿ. ಸಂತಾನವಿಲ್ಲದೆ ಸಾಯುವ ಮನುಷ್ಯ ವಂಶವೃಕ್ಷದ ಕೊನೆಯ ಮಗನಾಗಿ ತನ್ನಿಂದ ಮುಂದೆ ಬರೀ ಶೂನ್ಯವನ್ನು ಬಿಟ್ಟು ಸಾಯಬೇಕು. ಪಿತೃ-

6. " ಗೃಹಣ " — (ಮೊದಲ ಮುದ್ರಣ 1972) ಪುಟ ೧೨೯ - ೧೩೦.

7. ನೋಡಿ. Plato— " Religion came into being and survives only as it fills a deep mental need for an ideal, unchanging focus for human love. Religion is thus an attempt to get control over the sensory world ".

ಗಳಿಂದ ಪಡೆದ ಈ ಜೀವವು ಪಿತೃಋಣ ತೀರಿಸುವದು ತನ್ನ ಸಂತಾನದ ಮೂಲಕವೇ "[8]. ವಂಶದ ಬಗೆಗೆ ಅಭಿಮಾನಿಯಾದ ಶ್ರೀನಿವಾಸ ಶ್ರೋತ್ರಿಯವರ ಈ ನಿಲವು ಪ್ರೇಮಕ್ಕೂ ವಂಶಪ್ರಜ್ಞೆಗೂ ಇರುವ ಧೋರಣೆಯ ಪ್ರತೀಕವಾದುದು.

ಭೈರಪ್ಪನವರು ಪ್ರಮುಖವಾಗಿ ಪ್ರತಿಪಾದಿಸುವ ಪ್ರೇಮ ಮತ್ತು ಬೌದ್ಧಿಕ ಸಾಹ-ಚರ್ಯ ವಂಶವೃಕ್ಷದಲ್ಲೂ ಮುಂದುವರಿಯುತ್ತದೆ. ಇತಿಹಾಸದ ಪ್ರಾಧ್ಯಾಪಕ ಡಾ, ಸದಾಶಿವರಾಯರು ತಮ್ಮ ಸಂಶೋಧನೆಯ ಸಂಪುಟಗಳನ್ನು ಸಿದ್ಧಪಡಿಸುವ ಯೋಜನೆಯನ್ನು ಕೈಕೊಂಡಾಗಲೇ ತಮ್ಮ ಸಂಶೋಧನ ವಿಧ್ಯಾರ್ಥಿನಿ ರತ್ನಾಳನ್ನು ವಿವಾಹವಾಗುತ್ತಾರೆ. ಅವರ ಮೊದಲ ಪತ್ನಿ ನಾಗಲಕ್ಷ್ಮಿ ಓರ್ವ ಆದರ್ಶ ಗೃಹಿಣಿಯಾಗಿದ್ದರೂ ಡಾ. ರಾಯರಿಗೆ ಅವಳು ಬೌದ್ಧಿಕವಾಗಿ ಸಹಕಾರವನ್ನು ನೀಡಲು ಅಸಮರ್ಥಳಾದುದರಿಂದಲೇ ಅವರು ಈ ನಿರ್ಧಾರ ಕೈಕೊಂಡಿದ್ದರು. ಪ್ರೇಮ ಬೌದ್ಧಿಕ ಸಾಹಚರ್ಯದಿಂದಲೇ ಪರಿಪೂರ್ಣವಾಗುತ್ತದೆ ಎಂಬ ನಿಲವು ಭೈರಪ್ಪನವರದಾಗಿರುವಂತಿದೆ. ಈ ಹಿನ್ನೆಲೆಯಲ್ಲಿ ಜಾತಿ-ಮತಗಳು ದೂರವಾಗುತ್ತವೆ ಎಂಬ ಅಂಶವೂ ಸ್ಪಷ್ಟವಾಗಿದೆ. ತಮ್ಮ ವಿವಾಹದ. ಬಗೆಗೆ ಡಾ. ರಾಯರು ವಿವರಿಸಿ ಹೇಳುತ್ತಾರೆ " ಎಂತಹ ಹೆಂಗಸಿನ ಜೊತೆ ಅಥವಾ ಗಂಡಸಿನ ಜೊತೆ ಮದುವೆಯಾದರೂ ವಿವಾಹೋತ್ತರ ನಾಲ್ಕು ದಿನ ಆಕರ್ಷಣೆ ಇರುತ್ತದೆ. ಅದರಲ್ಲೂ ನನ್ನಂಥವರು ಇಡೀ ಜೀವನ ಪರ್ಯಂತ ಏಕಾಂಗಿಯಾಗಿಯೇ ಉಳಿಯ ಬೇಕು "[9]

ವಿವಾಹ ಮತ್ತು ಪ್ರೇಮದ ವಿಚಾರವಾಗಿ ಭಾರತೀಯಮಟ್ಟದಲ್ಲಿ ಸಾಮಾಜಿಕ ಕಳಕಳಿಯನ್ನು ಭೈರಪ್ಪನವರು ವ್ಯಕ್ತಪಡಿಸಿರುವದು ಪರಿಶೀಲನಾರ್ಹವಾದದ್ದು. "ಭಾರತದ ಸಮಾಜ ಈಗ ಸಂಧಿಕಾಲದಲ್ಲಿದೆ. ತಂದೆ-ತಾಯಿಗಳಿಂದ ನಿಷ್ಕರ್ಷಿತವಾದ ವಿವಾಹವು ಹಿಂದಿನಕಾಲದಲ್ಲಿ ಉಪಯುಕ್ತವಾಗಿಯೇ ಇತ್ತು. ಕುಲ-ಕಸಬು ನಿಶ್ಚಿತವಾಗಿದ್ದ ಸಮಾಜ ದಲ್ಲಿ ಅದೇ ಸಮಾಜದ ಯಾವ ಸಂಸಾರದ ಕನ್ಯೆಯಾದರೂ ಗಂಡನ ಕಸುಬಿಗೆ ಸಹಾಯಕ-ಳಾಗಬಲ್ಲವಳಾಗಿದ್ದಳು. ಜನರ ಕಸಬು ಕುಲದಿಂದ ನಿರ್ಣಯವಾಗುವ ಕಾಲ ಮುಗಿದು ಹೋಯಿತು. ವ್ಯಕ್ತಿಯ ಅಭಿರುಚಿಯಂತೆ ವೃತ್ತಿಯು ನಿರ್ಣಯವಾಗುತ್ತಿದೆ. ಆದರೆ ಅವನ ಇಚ್ಛೆಗನುಗುಣವಾಗಿ ವಿವಾಹವಾಗುವ ಅವಕಾಶ ಇನ್ನೂ ಬರಲಿಲ್ಲ. ಈ ಸಂಧಿ-ಕಾಲದಲ್ಲಿ ವಿಷಮ ವಿವಾಹವಾಗುವದು ಅನಿವಾರ್ಯ. ಅಲ್ಲದೆ ವಿವಾಹದ ವಿಷಯದಲ್ಲಿ ಸ್ವತಂತ್ರ ಆಲೋಚನೆಮಾಡಿ ಮದುವೆಯಾಗುವ ವ್ಯವಸ್ಥೆ ನಮ್ಮಲ್ಲಿ ಇನ್ನೂ ಬಂದಿಲ್ಲ.[10]

---

8. ವಂಶವೃಕ್ಷ — (III ನೇ ಆವೃತ್ತಿ 1970) ಪುಟ ೫೫.
9. ವಂಶವೃಕ್ಷ — ಪುಟ ೧೦೨.
10. ವಂಶವೃಕ್ಷ — ಪುಟ ೧೦೪.

ಡಾ. ರಾಯರು ಮುಂದುವರಿದು ಹೇಳುತ್ತಾರೆ: "ಆದರೂ ಗಂಡಸಿಗಾಗಲಿ ಹೆಂಗಸಿಗಾಗಲಿ ಸಂಸಾರ ಜೀವನವೆಂಬುದು ಬೇಕೇಬೇಕು. ಅದನ್ನು ಬಿಟ್ಟು ಜೀವಿಸುವದು ನೀರಸ-ವಾಗುತ್ತೆ."[11] ಮದುವೆ ಎರಡು ಒಲಿದ ಹೃದಯಗಳನ್ನು ಒಂದಾಗಿಸಿ ಬದುಕಿಗೆ ಪೂರ್ಣತೆಯನ್ನು ತಂದುಕೊಡುತ್ತದೆ. ವಿವಾಹದ ಮೂಲಕ ಪ್ರಾಪ್ತವಾಗುವ ಪ್ರೇಮವೇ ಹೆಚ್ಚು ಪರಿತೃಪ್ತವೂ ನಿಖರವೂ ಆಗಿರುವದೆಂಬುದನ್ನು ಭೈರಪ್ಪನವರು ಪ್ರತಿಪಾದಿಸು-ತ್ತಾರೆ. ವ್ಯಕ್ತಿಯ ವಂಶದ ಬೆಳಕು ತನ್ನ ಹೊಟ್ಟೆಯ ಮಗನಿಂದ ಮುಂದುವರಿಯದಿದ್ದರೂ ಬೌದ್ಧಿಕ ಸಾಧನೆಯ ಪ್ರತೀಕವಾದ ಅವನ ಗ್ರಂಥದಿಂದ ಸಾಧ್ಯವಾಗುತ್ತದೆಂದು ಡಾ. ರಾಯರು ಹೇಳುವರಾದರೂ ಪ್ರೇಮ ವಂಶೋದ್ಧಾರ ಅಥವಾ ವಂಶವೃಕ್ಷದ ಬೆಳವಣಿಗೆ ಯಲ್ಲಿಯೇ ಯಶಸ್ಸು ಪಡೆಯುತ್ತದೆನ್ನುವ ಅಂಶವನ್ನು ಭೈರಪ್ಪನವರು ಪ್ರಬಲವಾಗಿ ವ್ಯಕ್ತಪಡಿಸಿದ್ದಾರೆ.

ಪ್ರೇಮ ಚಿರಂತನವಾದುದು. ಅದಕ್ಕೆ ಧರ್ಮ ಆಚಾರ–ನಂಬಿಕೆಗಳ ಕಟ್ಟಿಲ್ಲ. ಸೃಷ್ಟಿಯ ಒಂದು ಮೂಲಭೂತವಾದ ಶಕ್ತಿಯೇ ಪ್ರೇಮ. "ಚಿರನೂತನಳೂ ಚಿರಚೇತನಳೂ ಆದ ಪ್ರಕೃತಿಗೆ ಕೃತಕ ಧರ್ಮದ ಕಟ್ಟನ್ನು ಹಾಕುವದು ಅಧರ್ಮ"[12] ಪ್ರಕೃತಿಯ ವಸ್ತುಗಳಲ್ಲಿ ವೈಧವ್ಯ ಕಾಣದಿರುವಾಗ ಸೃಷ್ಟಿಯ ಜೀವಿಯಾದ ಮಾನವರಲ್ಲಿ ಅದು ಭಿನ್ನವಾಗಿರುವದು ಅಚ್ಚರಿಯ ಸಂಗತಿ. ಆದ್ದರಿಂದಲೇ ವಿಧವಾ ವಿವಾಹದಂತಹ ಹೊಸ ಧೋರಣೆಯನ್ನು ನಿರ್ಮಿಸಿ ಪ್ರೇಮಕ್ಕೆ ಪ್ರಕೃತಿಯ ಮೂಲ ಸ್ವರೂಪವನ್ನು ಕಲ್ಪಿ-ಸುವ ಪ್ರಯತ್ನವನ್ನು ಭೈರಪ್ಪನವರು ವಂಶವೃಕ್ಷದಲ್ಲಿ ಮಾಡಿದ್ದಾರೆ.[13] ಹೀಗಿದ್ದರೂ ಕಾತ್ಯಾಯಿನಿಯಿಂದ ರಾಜನಿಗೆ ಅಪೇಕ್ಷಿತ (ದಾಂಪತ್ಯ) ಪ್ರೇಮ ಪ್ರಾಪ್ತವಾಯಿತೆ ? ಎಂಬ ಪ್ರಶ್ನೆ ಸ್ವಾಭಾವಿಕವಾಗಿ ಉದ್ಭವಿಸುತ್ತದೆ.

---

11. ವಂಶವೃಕ್ಷ — ಪುಟ ೧೦೯.
12. ವಂಶವೃಕ್ಷ — ಪುಟ ೧೨೯.
13. ಆಂಗ್ಲಕವಿ ಶೆಲ್ಲಿ ತನ್ನ 'Love's philosophy' ಎಂಬ ಕವಿತೆಯಲ್ಲಿ ಪ್ರೇಮ ನಿಸರ್ಗ ಜನ್ಯವಾದುದು ಎಂದು ಹೇಳುವ ಪ್ರೇಮ ಮೀಮಾಂಸೆ ಇಲ್ಲಿ ಸ್ಮರಣಾರ್ಹವಾಗುತ್ತದೆ. ಈ ಕವನದ ಕೆಳಗಿನ ಪಂಕ್ತಿಗಳನ್ನು ನೋಡಿ–

"The fountains mingle with the river.
And the rivers with the ocean,
The winds of heaven mix for ever
With a sweet emotion;
Nothing in the world is single;
All things by a law devine
In one spirit meet and mingle.
Why not I with thine".

ಪ್ರೇಮ ಮತ್ತು ಜಾತಿಯನ್ನು ಕುರಿತಾದ ಚಿಂತನೆ ಭೈರಪ್ಪನವರ "ದಾಟು" ಕಾದಂಬರಿಯಲ್ಲಿ ಪ್ರಮುಖವಾಗಿದೆ. ಭಾರತೀಯ ಸಮಾಜದ ಜ್ವಲಂತ ಸಮಸ್ಯೆಗಳ-ಲ್ಲೊಂದು ಜಾತಿ ವ್ಯವಸ್ಥೆ. ಈ ಕಾದಂಬರಿಯ ಸತ್ಯಭಾಮಾ ತನಗಿಂತ ಕೆಳವರ್ಗದ ಶ್ರೀನಿವಾಸನನ್ನು ಪ್ರೀತಿಸುತ್ತಾಳೆ. ಮೇಲುಗಿರಿ ಗೌಡರ ಮಗ ಶ್ರೀನಿವಾಸ ಅರ್ಚಕ ವೆಂಕಟರಮಣಯ್ಯನವರ ಮಗಳು ಸತ್ಯಭಾಮಾಳನ್ನು ಮದುವೆಯಾಗುವದು ಎರಡೂ ಮನೆತನಗಳಲ್ಲೂ ಅತೃಪ್ತಿಯ ಜ್ವಾಲೆಯನ್ನು ಏಳಿಸುತ್ತದೆ. ಇದನ್ನು ವೆಂಕಟರಮಣಯ್ಯ ನವರು ತಮ್ಮ ಬ್ರಾಹ್ಮಣ ಜಾತಿಗೇ ಅವಮಾನವೆಂದು ಭಾವಿಸಿದರೆ ಮೇಲುಗಿರಿ ಗೌಡರು ವರ್ಣಧರ್ಮದ ವಿರುದ್ಧ ನಡೆಯಲಾರೆನೆಂದು ಮಂಡ್ಯದ ಶ್ರೀಮಂತ ಮನೆತನದ ಕನ್ಯೆ-ಯನ್ನು ತಂದು ಶ್ರೀನಿವಾಸನ ಮದುವೆ ನೆರವೇರಿಸುತ್ತಾರೆ. ಇಂದರಿಂದ ಆಶಾಭಂಗಕ್ಕೆ ಗುರಿಯಾದ ಸತ್ಯಭಾಮಾ ತನ್ನ ಅಧ್ಯಾಪಕ ಹುದ್ದೆಯನ್ನು ಕಳೆದುಕೊಂಡು ತಿರುಮಲಾ-ಪುರಕ್ಕೆ ಬರುತ್ತಾಳೆ. ಅವಳು, ತಂದೆ ವೆಂಕಟರಮಣಯ್ಯ ಹರಿಜನ ಮಹಿಳೆ ಮಾತಂಗಿ ಯೊಡನೆ ಇಟ್ಟುಕೊಂಡಿದ್ದ ಅನೈತಿಕ ದೈಹಿಕ ಸಂಬಂಧ ಊರಿನಲ್ಲಿ ಹಬ್ಬಿ ಅಶಾಂತಿ-ಯನ್ನುಂಟುಮಾಡಬಹುದೆಂದು ಕೆರೆಗೆ ಹಾರಿ ಪ್ರಾಣ ಕಳೆದುಕೊಂಡುದನ್ನು ಕಾಣುತ್ತಾಳೆ. ಒಂದುಕಡೆ ಬ್ರಾಹ್ಮಣ ಯುವತಿಯನ್ನು ಕೆಳವರ್ಗದ ಯುವಕ ಮದುವೆಯಾಗಲು ಸಿದ್ಧ ನಿರದ ಸ್ಥಿತಿ, ಇನ್ನೊಂದೆಡೆ ಮೇಲ್ವರ್ಗದವರು ಕೆಳಜಾತಿಯವರೊಡನೆ ಅನೈತಿಕ ಸಂಬಂಧ ಬೆಳೆಸುವ ಸನ್ನಿವೇಶವನ್ನು ಭೈರಪ್ಪನವರು ಬಹು ವಾಸ್ತವಿಕವಾಗಿ ಕಾದಂಬರಿಯಲ್ಲಿ ಪ್ರಕ-ಟಿಸಿದ್ದಾರೆ. ಇಲ್ಲಿಯೂ ನಾವು ಕಾಣುವದು ಪ್ರೇಮವನ್ನು ಭೈರಪ್ಪನವರು ವಸ್ತುನಿಷ್ಠವಾಗಿ ವಿಶ್ಲೇಷಿಸುವ ವಿಧಾನವನ್ನು.

ಹೀಗೆ ಭೈರಪ್ಪನವರು ಪ್ರೇಮದ ಪರಿಕಲ್ಪನೆಯನ್ನು ತಮ್ಮ ಎಲ್ಲ ಕಾದಂಬರಿಗಳಲ್ಲಿ ಬಹು ಸಮರ್ಥವಾಗಿ ಪ್ರತಿಪಾದಿಸಿದ್ದಾರೆನ್ನಬಹುದು. ಅವರ ಚಿಂತನ ಶೀಲತೆ, ವೈಚಾ-ರಿಕ ನಿಷ್ಠೆ, ಪ್ರೇಮದ ಅನಂತ-ಮುಖಿಗಳ ಜಿಜ್ಞಾಸೆಯಲ್ಲಿ ನಿರತವಾಗಿರುವದನ್ನು ಅವರ ಕಾದಂಬರಿಗಳು ಸ್ಪಷ್ಟಪಡಿಸುತ್ತವೆ. ಪ್ರೇಮ ಮತ್ತು ಸಂಸ್ಕೃತಿ, ( ಧರ್ಮಶ್ರೀ ) ಪ್ರೇಮ ಮತ್ತು ಬೌದ್ಧಿಕ ಸಾಹಚರ್ಯ ( ದೂರ ಸರಿದರು ) ಪ್ರೇಮ, ಮೋಹ ಮತ್ತು ಧರ್ಮ (ಗ್ರಹಣ) ಪ್ರೇಮ ಮತ್ತು ವಂಶ ಪ್ರಜ್ಞೆ (ವಂಶವೃಕ್ಷ) ಪ್ರೇಮ ಮತ್ತು ಜಾತಿ (ದಾಟು) ಮೊದಲಾದ ಪ್ರೇಮದ ಹಲವು ಮುಖಗಳನ್ನು ಪ್ರಕಟಿಸಿದ್ದರೂ ಬೌದ್ಧಿಕಸಾಹಚರ್ಯ-ದಿಂದಲೇ ಪ್ರೇಮ ಪರಿಪೂರ್ಣವಾಗುತ್ತದೆ, ಅದೇ ಶುದ್ಧ ಪ್ರೇಮ ಎಂಬ ಆಶಯವನ್ನು ಪ್ರತಿಪಾದಿಸಿರುವದು ಗಮನಾರ್ಹ.

# ಜಾನಪದ ಸಾಹಿತ್ಯ ಸಂಪಾದನೆ

---

● ಎಂ. ಎಂ. ಕಲಬುರ್ಗಿ

'ಜನಪದ' ಎಂಬ ಶಬ್ದಕ್ಕೆ ಹಳ್ಳಿಗಾಡು, ಪ್ರಾಂತೆ ಎಂದು ವಾಚ್ಯಾರ್ಥ. ಅನೇಕ ಸಲ ಹಳ್ಳಿಗಾಡಿನ ಜನತೆ, ಪ್ರಾಂತದ ಜನಾಂಗ ಎಂಬ ಲಕ್ಷ್ಯಾರ್ಥಪಡೆದೂ ಇದು ಪ್ರಾಚೀನ ಸಾಹಿತ್ಯದಲ್ಲಿ ಬಳಕೆಯಾಗಿದೆ. ಈ 'ಜನಪದ'ದ ತದ್ಧಿತವಿಶೇಷಣರೂಪ "ಜಾನಪದ".

ಹೀಗೆ ಪ್ರಾಚೀನಕಾಲದಿಂದಲೂ ಪ್ರದೇಶವಾಚಿ, ಪ್ರಜಾವಾಚಿ ಅರ್ಥಗಳನ್ನು ಪ್ರತಿನಿಧಿಸುತ್ತ ಬಂದಿದ್ದ ಈ ಪದ, 1930ರಲ್ಲಿ 'ಗರತಿಯ ಹಾಡು' ಪ್ರಕಟವಾದಂದಿನಿಂದ ಸಾಮಾನ್ಯರ ಸಾಹಿತ್ಯಕ್ಕೆ ವಿಶೇಷಣಪದವೆಂಬಂತೆ ಬಳಕೆಯಾಗತೊಡಗಿತು. ಈ ಸಾಮಾನ್ಯರ (ಗೀತ)ಸಾಹಿತ್ಯವನ್ನು ಕನ್ನಡಿಗರು ಮೊದಮೊದಲು 'ಹಳ್ಳಿಯ ಹಾಡು' ಎಂದು, ಆಮೇಲೆ ನಾಡಪದ, ಜನತಾಗೀತೆ, ಲೋಕಗೀತೆ ಎಂದು ಕರೆದರೂ ಭಾರತದ ಬೇರೆಬೇರೆ ಪ್ರಾಂತದಲ್ಲಿ ಇನ್ನೂ ಗ್ರಾಮಸಾಹಿತ್ಯ, ಪಲ್ಲಿಗೀತ್, ಲೋಕಗೀತೆ, ಲೋಕ ಸಾಹಿತ್ಯ, ಜನಸಾಹಿತ್ಯ ಎಂದು ಕರೆಯುತ್ತಲಿದ್ದರೂ ಕರ್ನಾಟಕದಲ್ಲಿ ಮಾತ್ರ ಯಾರೋ ಒಬ್ಬರು ಪ್ರಯೋಗಿಸಿದ 'ಜನಪದಸಾಹಿತ್ಯ' ಎಂಬುದು ತಟ್ಟನೇ ಪ್ರಚಾರಪಡೆದು ಚಲಾವಣೆಯಲ್ಲಿ ಬಂದುಬಿಟ್ಟಿದೆ. ಬಹುಶಃ ಇದು ಧಾರವಾಡದ ಗೆಳೆಯರ ಗುಂಪಿನ ಸೃಷ್ಟಿಯೆಂದೂ ಜಯಕರ್ನಾಟಕ ಪತ್ರಿಕೆಯ ಮುಖಾಂತರ ಪ್ರಚಾರಪಡೆದುದೆಂದೂ ತೋರುತ್ತದೆ. ಒಟ್ಟಿನಲ್ಲಿ 'ಜನಪದಸಾಹಿತ್ಯ'ದಂತೆ 'ಜನಪದಸಾಹಿತ್ಯ' ಎಂಬ ಪದವೂ ಅನಾಮಧೇಯ ಸೃಷ್ಟಿಯಾಗಿರುವುದು ಒಂದು ಕುತೂಹಲಕಾರಿ ಯೋಗಾಯೋಗವಾಗಿದೆ. ಅಂದಿನಿಂದ 'ಜನಪದಸಾಹಿತ್ಯ' ಎಂಬ ಸಮಸ್ತಪದ 'ಜಾನಪದ ಸಾಹಿತ್ಯ' ಎಂಬ ವಿಗ್ರಹ ಪದಗಳು ನಮ್ಮಲ್ಲಿ ಬಳಕೆಯಾಗುತ್ತ ಬಂದವು.

'Folklore' ಪರಿಕಲ್ಪನೆಯ ಇಂದಿನ ಸಂದರ್ಭದಲ್ಲಿ ಈ ಪದ ಇನ್ನೂ ವಿಶಿಷ್ಟ ಅರ್ಥಪಡೆದು ಬಳಕೆಯಾಗುತ್ತಲಿದೆ. Folk ಎಂದರೆ ಸಾಮಾನ್ಯರ ಸಮೂಹ. ಈ

ಸಾಮಾನ್ಯರ ಜೀವನದಲ್ಲಿ ಕಾಣುವ "ಸಾಂಪ್ರದಾಯಿಕ ಅಂಶಗಳ ಮೊತ್ತ" ಕ್ಕೆ ವಿಲಿಯಂ ಥಾಮ್ಸ 1846ರಲ್ಲಿ Folklore ಎಂಬ ಪದವನ್ನು ಬಳಸಿದನು.[1]

ಈ Folklore ಎಂಬುದು ಸಾಮಾನ್ಯರ ಜೀವನದ ಸರ್ವಸ್ತರಗಳನ್ನು ಆವರಿಸಿ-ಕೊಂಡು ಕಾಲದಿಂದ ಕಾಲಕ್ಕೆ ಕೈಚಾಚುತ್ತಲೇ ಹೋಗುತ್ತದೆ. ಇದನ್ನು ಅನುಮೋದಿ-ಸುವ "Folklore is a Lively fossil which refuses to die" ಎಂಬ "Folklore is an echo of the past at the same time it is also the vigorous voice of the present" ಎಂಬ ಮಾತುಗಳನ್ನು ಇಲ್ಲಿ ಲಕ್ಷಿಸಬೇಕು. ಅಂದರೆ Folklore ಎಂಬುದು ಸಾಯುವುದೇ ಇಲ್ಲ, ಅದಕ್ಕೆ ಸಾವೆಂಬುದೇ ಇಲ್ಲ. ಬಹಳೆಂದರ ರೂಪಾಂತರ ಹೊಂದುತ್ತದೆ; ಇಲ್ಲವೆ ಜನ್ಮಾಂತರ ಹೊಂದುತ್ತದೆ.

Folkloreಕ್ಕೆ ಸಂವಾದಿಪದವನ್ನು ಹುಡುಕಿಕೊಳ್ಳುವದು ಭಾರತೀಯ ವಿದ್ವಾಂಸರಿಗೆ ಬಹುಮಟ್ಟಿಗೆ ಕಾಡಿದೆ; ಕಾಡುತ್ತಲಿದೆ. ಬೇರೆಬೇರೆ ಪ್ರಾಂತದವರು ಬೇರೆಬೇರೆ ಪದಗಳನ್ನು ಶೋಧಿಸಲು ನಿರತರಾದ ಸಮಯದಲ್ಲಿ ಡಾ. ಹಾ. ಮಾ. ನಾಯಕ ಅವರು ತಮ್ಮದೇ ಆದ ವಿವರಣೆ ಕೊಟ್ಟು Folk = ಜನಪದ, Folklore = ಜಾನಪದ ಎಂಬ ಸಂವಾದಿಗಳನ್ನು ನಮ್ಮ ಮುಂದಿಟ್ಟರಲ್ಲದೆ, ಜನಪದಸಾಹಿತ್ಯ, ಜನಪದನೃತ್ಯ ಎಂಬಂತೆ 'ಜನಪದ' ಎಂಬುದನ್ನು ಒಂದು ಶಾಖೆಗಾಗಿ, 'ಜಾನಪದ' ಎಂಬುದನ್ನು ಸಾಮಾನ್ಯರ ಇಂಥ ಸರ್ವಶಾಖೆಗಳ ಸಮೂಹಕ್ಕಾಗಿ ಬಳಸಬೇಕೆಂದು 1966ರಲ್ಲಿ ಸೂಚಿಸಿದರು. ಇದನ್ನು ಒಪ್ಪುವಲ್ಲಿ ಒಂದೆರಡು ತೊಂದರೆಗಳುಂಟು : (1) Loreನ್ನು ಸೂಚಿಸುವ ಅಂಶ 'ಜಾನಪದ' ಶಬ್ದದಲ್ಲಿಲ್ಲ. (2) ಜನಪದ ನಾಮವಾದರೆ ಜಾನಪದ ಅದರಿಂದ ನಿಷ್ಪನ್ನವಾದ ತದ್ಧಿತವಿಶೇಷಣ. ಇಂಥ ಸಂದರ್ಭದಲ್ಲಿ ವಿಶೇಷ್ಯಕ್ಕಿಂತ ವಿಶೇಷಣದ ವ್ಯಾಪ್ತಿ ಸಣ್ಣದು. ಆದುದರಿಂದ ಜನಪದ ಒಂದು ಶಾಖೆಯನ್ನು ಸೂಚಿಸಿದರೆ ಜಾನಪದ ಇಂಥ ಹಲವು ಶಾಖೆಗಳ ಸಮೂಹವನ್ನು ಸೂಚಿಸುತ್ತದೆಯೆಂಬ ಡಾ. ಹಾ. ಮಾ. ನಾಯಕ ಅವರ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ ಜಾನಪದವೇ ಒಂದು ಶಾಖೆಯನ್ನು ಸೂಚಿಸಿದರೆ ಜನಪದವೇ ಇಂಥ ಹಲವು ಶಾಖೆಗಳ ಸಮೂಹವನ್ನು ಸೂಚಿಸುತ್ತನೆಯೆಂದು ಹೇಳಬೇಕಾಗುತ್ತದೆ. ಹೀಗಾಗಿ ಜನಪದ. ಜಾನಪದಗಳಿಗೆ ಅವರು ಆರೋಪಿಸಿದ ಅರ್ಥವನ್ನು ನಿಷ್ಪತ್ತಿದೃಷ್ಟಿಯಿಂದ ಒಪ್ಪುವುದು ಕಷ್ಟವಾಗುತ್ತದೆ. (3) ಡಾ. ಹಾಮಾನಾ ಅವರ ಅಭಿಪ್ರಾಯದಲ್ಲಿ 'ಜನಪದಸಾಹಿತ್ಯ' ರೂಪ ಸರಿ; 'ಜಾನಪದಸಾಹಿತ್ಯ' ರೂಪ ತಪ್ಪು. ಆದರೆ

---

1. ಜನಜೀವನದ ಮೊತ್ತಕ್ಕೂ Folklore ಎಂದು. ಇದನ್ನು ಅಭ್ಯಸಿಸುವ ಶಾಸ್ತ್ರಕ್ಕೂ Folklore ಎಂದು ಬಳಸುತ್ತಲಿದ್ದಾರೆ. ಆದರೆ ಒಂದನ್ನು Folklore ಎಂದು, ಇನ್ನೊಂದನ್ನು Science of Folklore ಎಂದು ಕಟ್ಟುನಿಟ್ಟಾಗಿ ಕರೆಯುವುದು ಯೋಗ್ಯ.

ಸಂಸ್ಕೃತ ಭಾಷಾಮರ್ಯಾದೆಯಲ್ಲಿ 'ಜನಪದಸಾಹಿತ್ಯ' ಎಂಬುದು ಸಮಾಸಪದ. ಜಾನಪದ ಸಾಹಿತ್ಯವೆಂಬುದು ಅಸಮಾಸಪದವಾಗಿರುವುದರಿಂದ ಎರಡೂ ರೂಪಗಳು ಸರಿ-ಯೆನಿಸುತ್ತವೆ. ಆದುದರಿಂದ Folk, Folkloreಗಳಿಗೆ ಸಂವಾದಿಗಳನ್ನು ನಿರ್ಧರಿಸುವ ಪ್ರಶ್ನೆಯನ್ನು ಇನ್ನೊಮ್ಮೆ ಇಲ್ಲಿ ಕೈಗೆತ್ತಿಕೊಳ್ಳಲಾಗಿದೆ:

'ಜನ' ಎಂಬ ಶಬ್ದ ವ್ಯಾಕರಣದ ದೃಷ್ಟಿಯಿಂದ ಜಾತಿವಾಚಿಯೆನಿಸಿ (ಸಾಮಾನ್ಯರ) ಸಮೂಹವನ್ನೂ ಸೂಚಿಸುವುದರಿಂದ Folkಕ್ಕೆ ಸಂವಾದಿಯಾಗಿ 'ಜನ' ಶಬ್ದವನ್ನು ಬಳಸಬಹುದು. ಈ ಶಬ್ದದಿಂದ ನಿಷ್ಪನ್ನವಾದ 'ಜನಪದ' ಎಂಬುದನ್ನು ಕುರಿತ "An important geographical term used by Pāṇini is **'Janapada'**, which was both a state and **Cultural unit**, its Culture containing more than its geography. Its Cultural integrity was reflected and preserved in the manners, customs and above all the dialect of its people."[2] ಎಂಬ ವಿವರಣೆಯನ್ನು ನೋಡಿದರೆ 'ಜನಪದ' ಎಂಬುದು ಜನತೆಯ ಸಂಪ್ರದಾಯ, ಸಂಸ್ಕೃತಿ ಇತ್ಯಾದಿಗಳನ್ನೂ ಧ್ವನಿಸುವದರಿಂದ 'Folklore' ಮತ್ತು 'ಜನಪದ'ಗಳು ಸಂವಾದಿ ಶಬ್ದಗಳೆಂದು ಭಾವಿಸುವುದು ಸೂಕ್ತವೆನಿಸುತ್ತದೆ.

ಮೇಲೆ ವಿವೇಚಿಸಿದ ಮೇರೆಗೆ 'ಜಾನಪದ' ಎಂಬುದು ಒಂದು ಶಾಖೆಯನ್ನು ಸೂಚಿಸುವುದರಿಂದ Folk Literature, Folk dress ಇತ್ಯಾದಿ ಶಾಖೆಗಳಿಗೆ 'ಜಾನಪದ ಸಾಹಿತ್ಯ', 'ಜಾನಪದ ವೇಷ' ಇತ್ಯಾದಿ ಪದಗಳನ್ನು ಬಳಸಬಹುದು.

ಹಾಮಾನಾ ಹೇಳುವ 'ಜಾನಪದ'ದಲ್ಲಿಯಂತೆ loreನ್ನು ಸೂಚಿಸುವ ಪ್ರತ್ಯೇಕ ಪದ ನಾವು ಹೇಳುವ 'ಜನಪದ'ದಲ್ಲಿಯೂ ಇಲ್ಲ. ಆದರೆ ಪಾಣಿನಿಯ ಪ್ರಕಾರ 'ಜನಪದ' ಶಬ್ದದಲ್ಲಯೇ loreದ ಅರ್ಥ ತುಂಬಿದೆ. ಇದಲ್ಲದೆ ಜನಪದಕ್ಕಿಂತ ಜಾನಪದ ಸಣ್ಣ ವ್ಯಾಪ್ತಿಯನ್ನು ಸೂಚಿಸುವುದೆಂಬ ಸಂಗತಿಯನ್ನೂ ಇಲ್ಲಿ ಮರೆಯಬಾರದು. ಆದುದರಿಂದ ಇನ್ನು ಮೇಲೆ ಜನಪದ ವಿದ್ವಾಂಸರು Folk = (ಸಾಮಾನ್ಯ) ಜನ, Folklore = ಜನಪದ, Folk literature = ಜಾನಪದ ಸಾಹಿತ್ಯ ಎಂದು ಬಳಸುವುದೇ ಶಾಸ್ತ್ರಶುದ್ಧವೆಂದು ಸೂಚಿಸುತ್ತ ಪ್ರಸ್ತುತಲೇಖನದುದ್ದಕ್ಕೂ ಈ ರೀತಿಯನ್ನೇ ಅನುಸರಿಸ ಬಯಸುತ್ತೇನೆ.

ಹೀಗಿರುವಾಗ Folklore ಎಂಬುದು ಸಾಮಾನ್ಯರ ಮೌಖಿಕ ಸಂಪ್ರದಾಯ (oral tradition)ಕ್ಕೆ ಮಾತ್ರ ತನ್ನ ಒಲವನ್ನು ತೋರಿಸುವುದರಿಂದ, ಇದಕ್ಕೆ ಬದಲು ಸಾಮಾನ್ಯರ ಮೌಖಿಕದೊಂದಿಗೆ ಇತರ ಸಂಪ್ರದಾಯಗಳನ್ನು ಒಳಗೊಳ್ಳುವ Folk life

---

2. V. S. Agarawala : India as Known to Pānini (1953) p. 48 ಮತ್ತು ಡಾ. ಹಾಮಾನಾ ಜಾನಪದ ಸ್ವರೂಪ (1971) ಪು. ೧೭ ಅ.ಟಿ.

ಎಂಬ ವಿಶಾಲಾರ್ಥದ ಇನ್ನೊಂದು ಪದವನ್ನು ಜಾನಪದವಿಜ್ಞಾನಿಗಳು ಇತ್ತೀಚೆ ಬಳಸುತ್ತಲಿರುವರು. ಆದರೆ ಸಾಂಪ್ರದಾಯಿಕ ಅಂಶಗಳು ಕೇವಲ ಸಾಮಾನ್ಯ (Folk)ರ ಬದುಕಿನಲ್ಲಷ್ಟೇ ಅಲ್ಲ; ಅನಾಗರಿಕ (ಆದಿವಾಸಿ), ಅರೆನಾಗರಿಕ (ಗ್ರಾಮವಾಸಿ), ನಾಗರಿಕ (ನಗರವಾಸಿ) – ಹೀಗೆ ಯಾವುದೇ ಅಂತಸ್ತಿನ ಜನರ ಜೀವನವ್ಯಾಪಾರಗಳಲ್ಲಿಯೂ ತೋರಿಬರುತ್ತದೆ. ಕಾರಣ ಕೇವಲ Folkರ ಜೀವನವನ್ನು ಮಾತ್ರ ಪ್ರತಿನಿಧಿಸುವ Folk life ಎಂಬ ಪದವೂ ಅಸಮರ್ಪಕವೆನಿಸುತ್ತದೆ. ಈ ಅಭ್ಯಾಸ ಯಾವುದೇ ಅಂತಸ್ತಿನ ಜನರ ಜೀವನವ್ಯಾಪಾರದಲ್ಲಿ ಉಳಿದು ಬಂದು ಸಾಂಪ್ರದಾಯಿಕ ಎಳೆಗಳನ್ನು ಗುರುತಿಸುವುದಾದುದರಿಂದ ಅಂಥ ಜೀವನವ್ಯಾಪಾರವನ್ನು ಸೂಚಿಸುವ ತ್ರಿವಿಕ್ರಮಪದವೊಂದು Folklore, Folk life ಗಳಿಗೆ ಬದಲು ಇಂಗ್ಲೀಷದಲ್ಲಿ ಅಂತೆಯೇ ಕನ್ನಡದಲ್ಲಿ ಅಸ್ತಿತ್ವಕ್ಕೆ ಬರಬೇಕಾಗಿದೆ.[3]

**ಜಾನಪದ ಸಾಹಿತ್ಯ :**

ಜನಪದ (Folklore)ವನ್ನು ರಿಚರ್ಡ್ ಎಂ. ಡಾರ್ಸನ್; ಆರ್. ಎಸ್. ಬಾಗ್ಸ್; ಡಾ. ಹಾ. ಮಾ. ನಾಯಕ ಮೊದಲಾದವರು ಹಲವು ರೀತಿಗಳಲ್ಲಿ ವರ್ಗೀಕರಿಸುತ್ತಾರೆ. ಇವುಗಳಿಗಿಂತ

1. ಕಾಯಿಕ ಬಗೆ < ಪ್ರಯೋಜಕ ಕಲೆ– ಕೈಗಾರಿಕೆ, ಕರಕುಶಲ, ಅಡಿಗೆ, ವೈದ್ಯ ಇತ್ಯಾದಿ.<br>ಲಲಿತಕಲೆ– ಚಿತ್ರ, ಶಿಲ್ಪ, ನೃತ್ಯ ಇತ್ಯಾದಿ.
2. ವಾಚಿಕ ಬಗೆ < ಭಾಷಿಕ ಬಗೆ.<br>ಸಾಹಿತ್ಯಿಕ ಬಗೆ.
3. ಮಾನಸಿಕ ಬಗೆ—ಜನನ, ಮರಣ, ವಿವಾಹ, ಆರಾಧನೆ, ಮಾಟ, ಮಂತ್ರ, ಭವಿಷ್ಯ ಇತ್ಯಾದಿಗಳಿಗೆ ಸಂಬಂಧಪಟ್ಟ ನಂಬಿಕೆಗಳು.

ಹೀಗೆ ವರ್ಗೀಕರಿಸುವುದು ಸೂಕ್ತವೆನಿಸುತ್ತದೆ. ಇವುಗಳಲ್ಲಿ ಜಾನಪದ ವಾಙ್ಮಯವೆಂಬುದು oral folklore ಆಗಿದೆ. ಇದರ ಶಾಖೆಯಾದ 'ಜಾನಪದ ಸಾಹಿತ್ಯ'ವನ್ನು oral art of folklore ಎಂದು ಸರಳವಾಗಿ ಸೂತ್ರಗೊಳಿಸಬಹುದು. ಈ ಸೂತ್ರದ ಹಿನ್ನೆಲೆಯಲ್ಲಿ "ಜಾನಪದ ಸಾಹಿತ್ಯ"ದ ಲಕ್ಷಣವನ್ನು ಹೀಗೆ ವಿವರಿಸಬಹುದು :

---

3. ಅನಾಗರಿಕ, ಅರೆನಾಗರಿಕ, ನಾಗರಿಕರಲ್ಲಿ ಕಾಣುವ ಸಾಂಪ್ರದಾಯಿಕ ಜೀವನವ್ಯಾಪಾರಕ್ಕೆ 'Tradition' ಎಂದೂ ಇದನ್ನು ಕುರಿತ ವೈಜ್ಞಾನಿಕ ವಿವೇಚನೆಗೆ 'Science of tradition' ಅಥವಾ 'Traditionology' ಎಂದೂ ಕರೆಯಬಹುದು. ಕನ್ನಡದಲ್ಲಿ ಇವುಗಳಿಗೆ ಸಂಪ್ರದಾಯ, ಸಂಪ್ರದಾಯವಿಜ್ಞಾನ ಇಲ್ಲವೆ ರೂಢಿ, ರೂಢಿವಿಜ್ಞಾನ ಎಂದು ಕರೆಯಬಹುದು.

1. ಮಾನವ ಜನಾಂಗ ಯಾವ ಕಾಲಕ್ಕೂ ಪ್ರಾಕೃತಿಕ ಸ್ತರ ಮತ್ತು ನಾಗರಿಕ ಸ್ತರಗಳಲ್ಲಿ ಬದುಕು ನಡೆಸುತ್ತದೆ. ಇವುಗಳಲ್ಲಿ ಒಂದು ನಿಸರ್ಗನಿಯಂತ್ರಿತ, ಇನ್ನೊಂದು ನಗರ ನಿಯಂತ್ರಿತ. ನಗರನಿಯಂತ್ರಿತ ಜನಾಂಗಕ್ಕಿಂತ ನಿಸರ್ಗನಿಯಂತ್ರಿತ ಜನಾಂಗದಲ್ಲಿ "ಮಾನವನ ಪ್ರಾಕೃತಿಕ ಪ್ರವೃತ್ತಿ"ಗಳು ದಟ್ಟವಾಗಿ ನೆಲೆನಿಂತಿರುತ್ತವೆ.

2. ಸಾಮಾನ್ಯವಾಗಿ ಗುಂಪುಗೂಡಿ ಬಾಳುವುದು ಪ್ರಾಣಿಗಳ ಮೂಲಪ್ರವೃತ್ತಿ. ಮನುಷ್ಯ ಪ್ರಾಣಿಗಳಲ್ಲಿ ಅದರಲ್ಲಿಯೂ ಹಳ್ಳಿಗರಲ್ಲಿ ಈ ಪ್ರವೃತ್ತಿ ಇನ್ನೂ ಹಸಿಹಸಿ-ಯಾಗಿರುವುದರಿಂದ ಅವರು ಭೌತಿಕವಾಗಿ, ಮಾನಸಿಕವಾಗಿ ಪರಸ್ಪರವನ್ನು ಅವಲಂಬಿಸಿ ಬದುಕುತ್ತಾರೆ. ಹೀಗಾಗಿ ಅವರ ಅನುಭವಕ್ಕೆ 'ಸಾಮುದಾಯಿಕತೆ' ಸಂಪ್ರಾಪ್ತ-ವಾಗಿರುತ್ತದೆ.

3. ಏನು ಹೇಳಬೇಕೆಂಬುದೇ ಮುಖ್ಯವಾಗಿ, ಹೇಗೆ ಹೇಳಬೇಕೆಂಬುದು ಅಮುಖ್ಯ ವಾಗಿರುವ ಕಾರಣ ಜಾನಪದ ಕೃತಿಯು ಅಂತರಂಗದ ಬೆಳವಣಿಗೆಯಲ್ಲಾಗಲೀ, ಬಹಿರಂಗದ ಬಂಧದಲ್ಲಾಗಲೀ ಸ್ವಲ್ಪ ಸಡಿಲುತನ, ತೋರಿಬರುವುದರಿಂದ "ಸಂವಹನತೆ ಪ್ರಧಾನ, ಕಲಾತ್ಮಕತೆ ಗೌಣ" ವಾಗಿರುವ ಸಾಹಿತ್ಯವಿದು.

4. ಶಿಷ್ಟಪದಸಾಹಿತ್ಯದಂತೆ ಶಾಸ್ತ್ರದಮಾರ್ಗದರ್ಶನದಲ್ಲಿ ಹುಟ್ಟದೆ "ನೆಲಸಿದ ಕಾವ್ಯಂ ಕಾವ್ಯಕ್ಕೆ ಲಕ್ಷಣಂ" ಎಂಬಂತೆ ಇದು ಈ ಮೊದಲು ಸೃಷ್ಟಿಯಾಗಿರುವ ಜಾನಪದ ರಚನೆಗಳನ್ನು ಅನುಸರಿಸಿ, ಅಲ್ಲಲ್ಲಿ ಸ್ವೀಕರಿಸಿ ತನ್ನ ಪ್ರಥಮ ಆಕಾರ ಪಡೆಯುತ್ತದೆ. ಆದುದರಿಂದ ಇದು 'ಅನುಸೃಷ್ಟಿ' ವರ್ಗಕ್ಕೆ ಸೇರುವ ಸಾಹಿತ್ಯವಾಗಿದೆ. ಹೀಗೆ ಹುಟ್ಟುವ ಈ ಸಾಹಿತ್ಯದ ಯಾವದೇ ರಚನೆಯ ಪಾಲನ–ಪರಿಷ್ಕರಣದ ಹಕ್ಕನ್ನು ಕವಿ ಸಮಾಜಕ್ಕೆ ಒಪ್ಪಿಸಿ ಬಿಡುತ್ತಾನೆ[4]. ಹೀಗಾಗಿ ಅದು ಎತ್ತಿಕೊಂಡವರ ಮಗುವಾಗಿ ಅವರಿಂದ ಕಾಲ, ದೇಶ ಪರಿಸರಗಳಿಗೆ ತಕ್ಕಂತೆ ಹೊಸ ಹೊಸ ರೂಪಗಳನ್ನು ಹೊಂದುತ್ತ ಬರುತ್ತದೆ. ಈ ಅರ್ಥದಲ್ಲಿ ಮೂಲತಃ 'ಅನುಸೃಷ್ಟಿ' ಯಾಗಿದ್ದರೂ ಮುಂದೆ

---

4.ಅ. ಶಿಷ್ಟಪದ ಕವಿಗಳು ತಮ್ಮ ರಚನೆಯ ಪಾಲನಹಕ್ಕನ್ನು ಬಿಟ್ಟುಕೊಟ್ಟಿರುತ್ತಾರೆ. ಪರಿಷ್ಕರಣ ಹಕ್ಕನ್ನು ಬಿಟ್ಟುಕೊಟ್ಟಿರುವುದಿಲ್ಲ. ಅನಿವಾರ್ಯವೆನಿಸಿದಲ್ಲಿ ಮಾಡಿದ ಪರಿಷ್ಕರಣಕ್ಕೆ ನಾವು ಚೌಕ ಕಂಸನ್ನು ಬಳಸುವದು ಈ ಕಾರಣಕ್ಕಾಗಿಯೇ.

ಬ. ಜಾನಪದ ಕವಿ ತನ್ನ ಹೆಸರನ್ನು ಕೃತಿಗೆ ನಮೂದಿಸಿರುವುದು, ನಮೂದಿಸದಿರುವುದು ಅಮುಖ್ಯ. ಪರಿಷ್ಕರಣದ ಹಕ್ಕು ಬಿಟ್ಟುಕೊಟ್ಟಿರುವುದೇ ಮುಖ್ಯ. ಹೆಸರು ನಮೂದಿಸದಿರುವುದು ಜಾನಪದ ಸಾಹಿತ್ಯದ ಲಕ್ಷಣವೆಂದರೆ ಕವಿನಾಮನಿರ್ದೇಶವಿಲ್ಲದ ಪ್ರಭುಲಿಂಗಲೀಲೆ ಮೊದ-ಲಾದುವು ಜಾನಪದ ಸಾಹಿತ್ಯಕ್ಕೆ ಸಂಬಂಧಪಟ್ಟ ಕೃತಿಗಳೆನ್ನಬೇಕಾದೀತು.

‘ ಪುನಃಸೃಷ್ಟಿ ’ ಯಾಗುತ್ತ ಸಾಗಿಬರುವ ಇದು ಕಟ್ಟಿ ಮುಗಿಸಿದ ಸಾಹಿತ್ಯವಲ್ಲ; ಕಟ್ಟುತ್ತಲಿರುವ ಸಾಹಿತ್ಯವೆಂದೇ ಹೇಳಬೇಕು. ಹೀಗಾಗಿ ‘ ಅನುಸೃಷ್ಟಿ ’ ಯಾಗಿ ಹುಟ್ಟಿ ‘ಪುನಃ ಸೃಷ್ಟಿ’ಯಾಗಿ ಬೆಳೆಯುವುದು ಇದರ ಇನ್ನೊಂದು ಲಕ್ಷಣವಾಗಿದೆ.

5. ಶಿಷ್ಟಸಾಹಿತ್ಯದಂತೆ ಲಿಪಿಶರೀರಿಯಾಗಿ ಹುಟ್ಟಿ ಲಿಪಿಶರೀರಿಯಾಗಿ ವ್ಯವಹರಿಸದೆ ಸಾಮಾನ್ಯವಾಗಿ “ ಧ್ವನಿಶರೀರಿ ” ಯಾಗಿ ಹುಟ್ಟಿ ಧ್ವನಿಶರೀರಿಯಾಗಿ ಪ್ರವಹಿಸುತ್ತದೆ.

ಮೇಲೆ ಹೇಳಿದ “ಜಾನಪದ ಸಾಹಿತ್ಯದ ಪಂಚಲಕ್ಷಣ” ಗಳಲ್ಲಿ ಅದರ ಅಂತರಂಗ ಬಹಿರಂಗಗಳ, ಹುಟ್ಟುಬದುಕು ಬೆಳವಣಿಗೆಗಳ ಸಮಗ್ರತೆಯನ್ನು ಕಾಣಬಹುದಾಗಿದೆ.

ಕಳೆದ ಒಂದುನೂರು ವರ್ಷಗಳಿಂದ ಈ ಜಾನಪದ ಸಾಹಿತ್ಯದ ಸಂಪಾದನಕಾರ್ಯ ಕರ್ನಾಟಕದಲ್ಲಿ ಘಟ್ಟಗಳನ್ನು ಕಲ್ಪಿಸಿಕೊಂಡು ಹೀಗೆ ಬೆಳೆದು ಬಂದಿದೆ :

1. ಹಲಸಂಗಿ ಗೆಳೆಯರ ಪೂರ್ವ ಘಟ್ಟ — 1930ಕ್ಕೆ ಮೊದಲು
2. ಹಲಸಂಗಿ ಗೆಳೆಯರ ಘಟ್ಟ — 1930-1950
3. ಗದ್ದಗಿಮಠ ಮತ್ತು ಕರಾಕೃ ಘಟ್ಟ — 1950-1966
4. ಆಧುನಿಕ ಘಟ್ಟ — 1966 ರಿಂದ ಮುಂದೆ.

ಇವುಗಳಲ್ಲಿ ಮೊದಲಿನ ಮೂರು, ಸಾಮಾನ್ಯವಾಗಿ Folk song ಸಂಪಾದನೆಯ ಘಟ್ಟವಾದರೆ ಕೊನೆಯದು Folk literature ಸಂಪಾದನೆಯ ಘಟ್ಟವೆನಿಸಿ ಗಾದೆ, ಒಗಟು, ಒಡಪು, ಶಿಶುಪ್ರಾಸ. ನಂಬಿಕೆ, ಕಥೆ, ನಾಟಕ ಮೊದಲಾದ ಪ್ರಕಾರಗಳನ್ನು ಬಿಚ್ಚಿಕೊಂಡುದು, ಜಾನಪದ ಸಾಹಿತ್ಯಸಂಪಾದನೆಯ ದೃಷ್ಟಿಯಿಂದ ಒಂದು ಸಾಧನೆಯೆಂದೇ ಹೇಳಬಹುದು. ಹೀಗೆ ಜಾನಪದ ಸಾಹಿತ್ಯಸಂಪಾದನೆ ಹೊಸ ಪ್ರಕಾರಗಳನ್ನು ತನ್ನ ತೆಕ್ಕೆಯಲ್ಲಿ ಅಳವಡಿಸಿಕೊಂಡು ಬೆಳೆಯುತ್ತಲಿದ್ದರೂ ‘ ಸಂಪಾದನಕ್ರಮ ’ ದಲ್ಲಿ ಅಂಥ ಹೊಸತನವಾಗಲೀ ಪ್ರಗತಿಯಾಗಲೀ ಈ ವರೆಗೂ ಕಂಡುಬರಲಿಲ್ಲವೆಂದೇ ಹೇಳಬೇಕು. ಬಹಳವೆಂದರೆ ಪುಟ ಬಾಹುಳ್ಯದ ವೈಜ್ಞಾನಿಕ ಬಣ್ಣದ ಮುನ್ನುಡಿಗಳು, ಕ್ಷೇತ್ರಕಾರ್ಯದ ಪರಿದಾಟ–ಪರಿಶ್ರಮಗಳು ಮಾತ್ರ ಗೋಚರಿಸುತ್ತವೆ. ಅದಕ್ಕಾಗಿಯೇ ಸಂಪಾದನೆಯ ದೃಷ್ಟಿಯಿಂದ ‘ಜನಪದವಿದ್ಯಾವ್ಯಾಸಂಗಿ’ ಗಳ ಮತ್ತು ‘ ಜನಪದಹವ್ಯಾಸಿ ’ ಗಳ ಸಂಕಲನಗಳಲ್ಲಿ ಅಂಥ ವಿಶೇಷ ಅಂತರ ತೋರಿಬರುತ್ತಿಲ್ಲವೆಂಬ ಪ್ರತಿಕ್ರಿಯೆಗಳು ಆಗಾಗ ಕಿವಿಗೆ ಬೀಳುತ್ತಲಿವೆ. ಇಷ್ಟೇ ಏಕೆ ಜನಪದಕ್ಷೇತ್ರಕ್ಕೆ ಸಂಬಂಧಪಟ್ಟ ಗ್ರಂಥಗಳು. ಲೇಖನಗಳು ಪ್ರತಿವರ್ಷ ನೂರಾರು ಪ್ರಕಟವಾಗುತ್ತಲಿದ್ದರೂ ‘ ಜಾನಪದ ಸಾಹಿತ್ಯಸಂಪಾದನೆ ’ ಯ ಬಗ್ಗೆ ಒಂದು ಸ್ವತಂತ್ರ ಗ್ರಂಥವಾಗಲೀ ಒಂದು ಸ್ವತಂತ್ರ ಲೇಖನವಾಗಲೀ ಪ್ರಕಟ

ವಾಗದಿರುವುದು, ಸಂಪಾದಿತ ಕೃತಿಗಳ ಮುನ್ನುಡಿಯಲ್ಲಾದರೂ ಈ ಸಾಹಿತ್ಯಸಂಪಾದನೆಯ ಬಗ್ಗೆ ನಿರ್ದಿಷ್ಟ ನೀತಿ ನಿಯಮಗಳನ್ನು ಸೂಚಿಸದಿರುವುದು ತುಂಬ ಆಶ್ಚರ್ಯದ ಸಂಗತಿಯಾಗಿದೆ. 'ಮಲೆಯ ಮಾದೇಶ್ವರ', 'ಮದ್ದುಂಟೆ ಜನನ ಮರಣಕ್ಕೆ', 'ದಕ್ಷಿಣ ಕನ್ನಡ ಜನಪದ ಸಾಹಿತ್ಯ' ಗ್ರಂಥಗಳ ಮುನ್ನುಡಿಯಲ್ಲಿ ಕೆಲಮಟ್ಟಿನ ಚರ್ಚೆ ಬಂದಿದ್ದರೂ ಮೂವರಲ್ಲಿಯೂ ಒಮ್ಮತವಿಲ್ಲ. ಇಷ್ಟು ಹಿನ್ನೆಲೆಯಲ್ಲಿ 'ಜಾನಪದ ಸಾಹಿತ್ಯಸಂಪಾದನೆ' ಯ ಬಗ್ಗೆ ವಿವೇಚಿಸಬಹುದು.

## I

ಜಾನಪದ ಸಾಹಿತ್ಯ ಯಾವುದೇ ಒಂದು ಜನಾಂಗದ ಆಸ್ತಿಯಲ್ಲದಿದ್ದರೂ ಅದು ಪ್ರದೇಶಭೇದನಿಷ್ಠವಾಗಿಯೂ ತೋರುತ್ತದೆ. ನದಿಬೆಟ್ಟಗಳೂ ಜಾತಿಜಾಲಗಳೂ ಧಾರ್ಮಿಕಕೇಂದ್ರಗಳೂ ಕಾರಣವಾಗಿ ಭಾಷೆಯಂತೆ ಈ ಸಾಹಿತ್ಯವೂ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿರುವುದಲ್ಲದೆ ಒಂದು ಪ್ರದೇಶದಲ್ಲಿಯೇ ಮತ್ತೆ ಸೀಮಾರೇಖೆಗಳನ್ನು ರೂಪಿಸಿಕೊಳ್ಳುತ್ತದೆ. ಕರ್ನಾಟಕಕ್ಕೆ ಬಂದರೆ ಭೌಗೋಲಿಕವಾಗಿ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಮತ್ತು ಕರಾವಳಿ ಕರ್ನಾಟಕ ಎಂದು ಮೂರು ಪ್ರಧಾನ ಜಾನಪದ ಪ್ರಾಂತಭೇದಗಳಿವೆ. ಇವುಗಳಲ್ಲಿಯೇ ಉಪಪ್ರಾಂತಭೇದಗಳನ್ನು ಕಲ್ಪಿಸಬಹುದಾಗಿದೆ.

ಈ ಪ್ರಧಾನ ಮತ್ತು ಉಪಪ್ರಧಾನ ಪ್ರಾಂತಭೇದಗಳ ಸೀಮಾರೇಖೆಗಳು ಪರಸ್ಪರ ಭೇದಿಸದೆ ಇಲ್ಲವೆ ಭೇದಿಸಿಕೊಂಡು ಹೋಗಬಹುದು. ಉದಾ : ದಕ್ಷಿಣ ಕರ್ನಾಟಕದ ಮಂಟೇದವರ ಕಂಸಾಳೆಯವರ ಜುಂಜಪ್ಪನವರ ತೆಲುಗುಬಣಜಿಗರ ಭಾಗವಂತಿಕೆಯವರ ಹಾಡುಗಳ, ಉತ್ತರಕರ್ನಾಟಕ ಜೋಕುಮಾರನ ಹಾಡು ಗುಳ್ಳವ್ವನ ಹಾಡು ಕಂಬಿಹಾಡುಗಳ, ಕರಾವಳಿ ಕರ್ನಾಟಕದ ತಾರಲೆಹಾಡು ಪುಗಡಿಹಾಡು ಗಮ್ಮಟೆಪದ ದೋಣಿ ಸಾಗಿಸುವಾಗಿನ ಅಂಬಿಗರ ಹಾಡುಗಳ ಸೀಮಾರೇಖೆಗಳು ಪರಸ್ಪರ ಭೇದಿಸುವುದಿಲ್ಲ. ಆದರೆ ಕಿಂದರಜೋಗಿಗಳ ಗೊರವರ ಚೌಡಕಿಯವರ ಗೊಂದಲಿಗರ ಹಾಡುಗಳ ಸೀಮಾರೇಖೆಗಳು ಪರಸ್ಪರ ಭೇದಿಸಿಕೊಂಡು ಹೋಗುತ್ತವೆ. ಹೀಗೆ ಭೇದಿಸಿಕೊಂಡು ಹೋದರೂ ಅವುಗಳಿಗೆ ಪ್ರಾಂತಭೇದದ ಮುದ್ರೆ ಇದ್ದೇ ಇರುತ್ತದೆಯೆಂಬುದನ್ನು ಮರೆಯಬಾರದು.

ಸಮಾಜವನ್ನು ಗಮನಿಸಿ ಭಾಷೆಯನ್ನು ಪ್ರಾಕೃತತರ ಭಾಷೆ, ಪ್ರತಿಷ್ಠಿತರ ಭಾಷೆ (ಕನ್ನಡದ ಮಟ್ಟಿಗೆ ಹೇಳುವುದಾದರೆ ಅಬ್ರಾಹ್ಮಣರ ಭಾಷೆ ಮತ್ತು ಬ್ರಾಹ್ಮಣರ ಭಾಷೆ) ಯೆಂದು ವರ್ಗೀಕರಿಸುವಂತೆ ಈ ಮೌಖಿಕಸಾಹಿತ್ಯದಲ್ಲಿಯೂ ಜಾನಪದಸಾಹಿತ್ಯ ಮತ್ತು ಜಾಣಪದಸಾಹಿತ್ಯವೆಂಬ ಸ್ತರಗಳನ್ನು ಗುರುತಿಸಬಹುದು.[5] ಇವುಗಳಲ್ಲಿಯೇ ಮತ್ತೆ ಆಂತರಿಕ ಸ್ತರಗಳಿದ್ದು ಅವು

5. ಜಾಣಪದ ಸಾಹಿತ್ಯ. ಕರ್ನಾಟಕ ಭಾರತಿ 10—1.



ಹೀಗೆ ಅಡಕಿಲು ರೂಪದಲ್ಲಿರುತ್ತವೆ. ಕೆಳವರ್ಗದಿಂದ ಮೇಲುವರ್ಗಕ್ಕೆ ಹೋದಂತೆ ಅವುಗಳ ಜಾನಪದತ್ವ ತಿಳಿಯಾಗುತ್ತ ಇಲ್ಲವೆ ಶಿಷ್ಟಮುಖಿಯಾಗುತ್ತ ನಡೆಯುತ್ತದೆ. ಉದಾ:

1. ಒಂಬತ್ತ ತಿಂಗಳ ನಿನ್ನ ತುಂಬಿಕೊಂಡು ತಿರಗೇನ
ಹಂಬಲಿಸಿ ನಿನ್ನ ಹಡದೇನ। ಸೋ
ಹಂಬಲಿಸಿ ನಿನ್ನ ಹಡದೇನ ಚಿತ್ರದ
ಗೊಂಬಿ ನಿನಗೊಪ್ಪಿಸಿಕೊಡಲ್ಹ್ಯಾಂಗ ॥

2. ಧಾರೆಯೆರೆದ ಕನಕಾಂಗಿಗೆ ಬಲರಾಮು
ಧೀರಪಾರ್ಥಗೆ ಸುಕುಮಾರಗಿವಳನು ॥ ಪಲ್ಲ ॥
ತೋರ ಹರಳವಂಕಿ ಬಾಜುಬಂದಿಗಳು
ಹೆರಳಿಗಾಭರಣವನಿಡಿಸಿದ ಮಗಳನು
ಬಂಗಾರದಂತೆ ಬಳಕುವಳು
ಶೃಂಗರಿಸುತಲ್ಲಿ ಭುಜಂಗವೇಣಿಯನು ॥

ಇವುಗಳನ್ನು ಓದಿದರೆ ಸಾಕು, ಜಾನಪದತ್ವ ಮತ್ತು ಜಾಣಪದತ್ವಗಳ ಅಂತರ ತಟ್ಟನೇ ಗಮನಕ್ಕೆ ಬರುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಸಮಾರಂಭದ ಒಂದು ಸಂದರ್ಭವನ್ನೇ ಜನಪದರು ಹಾಡನ್ನಾಗಿ ಸೃಷ್ಟಿಸಿದರೆ, ಜಾಣಪದರು ಸಂದರ್ಭಕ್ಕೆ ತಕ್ಕ ಪೌರಾಣಿಕ ಘಟನೆಗಳನ್ನೇ ಹಾಡುತ್ತಾರೆ. ಹೀಗಾಗಿ ಜಾನಪದ ಹಾಡುಗಳಲ್ಲಿ ಕಾಣುವ ವಾತಾವರಣದ ಪ್ರತಿಬಿಂಬ ಜಾಣಪದ ಹಾಡುಗಳಲ್ಲಿ ತೋರಿಬರುವುದಿಲ್ಲ. ಅಂದರೆ ಒಂದೇ ಭಾಷೆಯನ್ನಾಡುವವರ ಜಾನಪದಸಾಹಿತ್ಯದಲ್ಲಿಯೂ ಜನಪದತ್ವ ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತದೆ.

ಒಂದು ಪ್ರದೇಶದ ಒಂದು ಸಮಾಜದಂತೆ, ಅಲ್ಲಿ ಆಗಾಗ ಹುಟ್ಟುವ ಸಾಹಿತ್ಯವೂ ಕಾಲಕ್ಕೆ ತಕ್ಕ ಸಂವೇದನೆಗಳನ್ನು ಮೈಗೂಡಿಸಿಕೊಳ್ಳುತ್ತ ಸ್ವರೂಪವನ್ನು ಬದಲಿಸಿಕೊಳ್ಳುತ್ತ ಬರುತ್ತದೆ. ಇದೇರೀತಿ ಜನಪದರಲ್ಲಿಯೂ ಕಾಲಕ್ಕೆ ತಕ್ಕಂತೆ ಹೊಸಹೊಸ ಸಾಹಿತ್ಯ ಹುಟ್ಟುವುದರ ಜೊತೆ ಹಳೆಯ ಸಾಹಿತ್ಯವೂ ಹೊಸತಾಗುತ್ತ ನಡೆಯುವುದೊಂದು ವಿಶೇಷ. ಹೀಗಾಗಿ ಜಾನಪದಸಾಹಿತ್ಯದಲ್ಲಿ ಕಾಲವೂ ಪ್ರಧಾನಪಾತ್ರವಹಿಸುವುದೆಂದು ಹೇಳಬೇಕು. ಒಟ್ಟಿನಲ್ಲಿ ಪ್ರದೇಶಬದ್ಧ– ಸಮಾಜಬದ್ಧ– ಕಾಲಬದ್ಧವಾಗಿರುವುದು ಯಾವುದೇ ಜಾನಪದಸಾಹಿತ್ಯದ ಪ್ರಧಾನಲಕ್ಷಣವಾಗಿರುತ್ತದೆ. ಇಲ್ಲಿ ಗಮನಿಸಬೇಕಾದ ಇನ್ನೂ ಎರಡು ಸಂಗತಿಗಳಿವೆ. ಅವು : ಸಂದರ್ಭ ಮತ್ತು ವ್ಯಕ್ತಿ.

**ಸಂದರ್ಭ :** ಜಾನಪದಸಾಹಿತ್ಯ ಸಂದರ್ಭದ ಮಧ್ಯದಲ್ಲಿ ಮಾತ್ರ ಸರಿಯಾದ ರೂಪದಿಂದ ಪ್ರಕಟವಾಗುತ್ತದೆ. ಅಂದರೆ ಉತ್ಸವ ಉತ್ಸಾಹ ಇತ್ಯಾದಿ ಸಂದರ್ಭಗಳ ಹೊರಗಿಟ್ಟು ಪದ್ಯವನ್ನು ಹಾಡಿದರೆ, ಗದ್ಯವನ್ನು ಹೇಳಿದರೆ ಅವುಗಳ ಪರಿಣಾಮದಲ್ಲಿ ವ್ಯತ್ಯಾಸವಾಗ ಬಹುದು. ಉದಾ :


ಎಣ್ಣೆಯ ನೀ ಕೊಡಕ ಸಣ್ಣೆರಿವಿ ಕವದಂಗ
ತುಂಬೇತಿ ಹೆಣ್ಣಿನ ಬಳಗವು । ಸೋ
ತುಂಬೇತಿ ಹೆಣ್ಣಿನ ಬಳಗವು ಕಣ್ಣೀರ
ಸಣ್ಣ ಮುತ್ತಾಗಿ ಸುರದಾವ ।

ಮದುವೆಯ ಹಂದರಲ್ಲಿ ಮಗಳನ್ನು ಧಾರೆ ಎರೆದು ಕೊಡುವ ಸಂದರ್ಭದಲ್ಲಿ ಕರುಳನ್ನು ಕಿತ್ತುತರುವ ಈ ಹಾಡು ಸಂದರ್ಭಬಾಹಿರವಾದಲ್ಲಿ ತನ್ನ ಶಕ್ತಿಯನ್ನು, ಅಭಿವ್ಯಕ್ತಿಯ ಪರಿಣಾಮವನ್ನು ಕಳೆದುಕೊಳ್ಳುವುದು ತೀರ ಸಹಜವೇ ಸರಿ.

ಕೆಲವು ಸಲ ಗೆಜ್ಜೆ, ವಾದ್ಯ, ಕೋಲು, ಕುಣಿತಗಳ ಪರಿಕರದೊಂದಿಗೆ ಮಾತ್ರ ಹಲವು ಹಾಡುಗಳು ಸಮಗ್ರ ಪರಿಣಾಮಬೀರುತ್ತವೆ. ಇಂಥವುಗಳನ್ನು ಪರಿಕರದಿಂದ

ಹೊರಗಿಟ್ಟು ಸಂಗ್ರಹಿಸಿದರೆ ದಂಡಿ, ಬಾಸಿಂಗ, ಅರಿಷಿಣ, ಕುಂಕುಮವಿಲ್ಲದೆ ಮಾಡಿದ ಮದುವೆಯಂತೆ ಸೊಗಸುಕಳೆದುಕೊಳ್ಳುತ್ತವೆ. ಕಾರಣ ಪರಿಸರ, ಪರಿಕರಗಳೆಂಬ ಅಂಶ-ಗಳೂ ಸಂಪಾದನೆಯ ಸಮಯದಲ್ಲಿ ಪ್ರಮುಖವೆನಿಸುತ್ತವೆ.

**ವ್ಯಕ್ತಿ :** ಜಾನಪದ ಸಾಹಿತ್ಯಸಂಪಾದನೆಯ ಸಂದರ್ಭದಲ್ಲಿ ವ್ಯಕ್ತಿ ಅಂದರೆ ನಿವೇದಕ (Informant) ತುಂಬ ಮುಖ್ಯನಾದವನು. ಭಾರತೀಯ ಪರಂಪರೆಯಲ್ಲಿ ಸ್ತ್ರೀ, ಪುರುಷ, ಬಾಲಕ– ಈ ಮೂರು ಘಟಕಗಳು ತೀರ ಪ್ರತ್ಯೇಕವಾಗಿ ನಿಂತು, ಸ್ವತಂತ್ರವಾಗಿ ಬೆಳೆಯುವುದರಿಂದ ಇವರ ಜೀವನದಂತೆ ಇವರ ಸಾಹಿತ್ಯವೂ ತೀರ ಪ್ರತ್ಯೇಕ ಗುಣನಿಷ್ಠವಾಗಿರುತ್ತದೆ. ಅಂದರೆ ಸ್ತ್ರೀನಿಷ್ಠ, ಪುರುಷನಿಷ್ಠ, ಬಾಲಕನಿಷ್ಠವಾಗಿ ಹುಟ್ಟುತ್ತದೆ; ಹಬ್ಬುತ್ತದೆ. ಹೀಗಾಗಿ ಈ ವರ್ಗಗಳಿಗೆ ಸಂಬಂಧಪಟ್ಟ ವ್ಯಕ್ತಿಗಳ ಮೂಲಕವೇ ಅವರ ಸಾಹಿತ್ಯದ ನಿಜಸ್ವರೂಪ ದರ್ಶನವಾಗುತ್ತದೆ. ಆದುದರಿಂದ ಇಲ್ಲಿ ಒಬ್ಬರ ಹಾಡನ್ನು ಇನ್ನೊಬ್ಬರಿಂದ ಸಂಗ್ರಹಿಸುವುದು ಅಸಮಂಜಸವೆನಿಸುತ್ತದೆ. ಉದಾ : ಸ್ತ್ರೀಯರಿಂದ ಹಂತಿಹಾಡು, ಪುರುಷರಿಂದ ಬೀಸುವ ಹಾಡು. ಇದಲ್ಲದೆ ಸ್ತ್ರೀಪುರುಷರಲ್ಲಿಯೇ ಕೆಲವರು ವಿಶಿಷ್ಟಹಾಡುಗಳನ್ನು ಮಾತ್ರ (ಪುರುಷರಲ್ಲಿ ಕುರುಬರು ಡೊಳ್ಳಿನ ಹಾಡು, ಸ್ತ್ರೀಯರಲ್ಲಿ ಕಬ್ಬಿಲರು ಜೋಕುಮಾರನ ಹಾಡು) ಹೇಳುತ್ತಿರುತ್ತಾರೆ. ಇಲ್ಲಿಯೂ ಒಂದು ವರ್ಗದ ಹಾಡನ್ನು ಹೇಳುವವರಿಂದ ಬೇರೊಂದು ವರ್ಗದ ಹಾಡನ್ನು ಪಡೆಯು-ವುದು ಸರಿಯೆನಿಸದು. ಈ ವರೆಗಿನ ವಿವೇಚನೆಯನ್ನು ಹೀಗೆ ಚಿತ್ರಿಸಬಹುದು.



ಹೀಗೆ 'ವ್ಯಕ್ತಿ'ಯು 'ಸಂದರ್ಭ'ನಿಷ್ಠವಾಗಿ ನಿಂತು, ಕಾಲ, ದೇಶ, ಸಮಾಜಬದ್ಧನಾಗಿ ವ್ಯಕ್ತ ಪಡಿಸುವಲ್ಲಿ ಅಂದರೆ ಕಾಲ, ದೇಶ, ಸಮಾಜ, ಸಂದರ್ಭ, ವ್ಯಕ್ತಿ– ಈ 'ಐದು ಸೂತ್ರ'ಗಳು ಪರಸ್ಪರ ಛೇದಿಸುವಲ್ಲಿ ಒಂದು ಜಾನಪದರಚನೆಯ ಸತ್ಯರೂಪ ಸಾಕ್ಷಾತ್ಕಾರವಾಗುತ್ತದೆ. ಹೀಗಾಗಿ ಯಾವುದೇ ಜಾನಪದಸಾಹಿತ್ಯದ ಪ್ರಕಾರವನ್ನು ಈ ಐದು ಅಂಶಗಳಿಂದ ಹೊರಗಿಟ್ಟು ಸಂಪಾದಿಸಕೂಡದು. ಹಾಗೆ ಹೊರಗಿಟ್ಟು ಸಂಪಾದಿಸುವುದೆಂದರೆ ಲವಣ ರುಚಿಯನ್ನು ತೆಗೆದು ಹಾಕಿ ಉಪ್ಪು ಸಂಗ್ರಹಿಸಿದಂತಾಗುತ್ತದೆ.

## II

ಹೀಗೆ ಪಂಚಸೂತ್ರಗಳಿಗೆ ಬದ್ಧನಾಗಿ ಸಂಗ್ರಹಿಸುವಲ್ಲಿ ಸಂಪಾದಕನಿಗೆ ಕಾಡುವು-ವೆಂದರೆ ಪಾಠಾಂತರ (Variants) ಮತ್ತು ರೂಪಾಂತರಗಳು (Versions). ಇವುಗಳ ಪರಿಜ್ಞಾನವಿಲ್ಲದಿದ್ದರೆ ಅವನು ಸಂಪಾದನಕಾರ್ಯವನ್ನೇ ಕೆಡಿಸಿಬಿಡುತ್ತಾನೆ.

ಸಾಹಿತ್ಯ ಲಿಖಿತವೇ ಇರಲಿ, ಅಲಿಖಿತವೇ ಇರಲಿ ರೂಪಾಂತರ ಮತ್ತು ಪಾಠಾಂತರ ಗಳು ಅನಿವಾರ್ಯ. ಯಾವುದೇ ಭಾಷೆಯಲ್ಲಿ ಒಂದು 'ವಸ್ತು'ವನ್ನಾಶ್ರಯಿಸಿ ಹುಟ್ಟಿದ ಬೇರೆಬೇರೆ ರಚನಾವ್ಯತ್ಯಾಸಗಳು ರೂಪಾಂತರ, ಒಂದು 'ರಚನೆ'ಯನ್ನಾಶ್ರಯಿಸಿ ಹುಟ್ಟಿದ ಬೇರೆಬೇರೆ ಭಾಷಿಕವ್ಯತ್ಯಾಸಗಳು ಪಾಠಾಂತರ. ಜಾನಪದ ಸಾಹಿತ್ಯಸಂಪಾದಕನಿಗೆ ಇವುಗಳ ಸ್ಪಷ್ಟ ತಿಳುವಳಿಕೆ ಮೊದಲ ಅಗತ್ಯವಾಗಿದೆ. ಇಲ್ಲವಾದರೆ ವಸ್ತುಸಾದೃಶ್ಯಭ್ರಾಂತಿಯಿಂದ ರೂಪಾಂತರಗಳನ್ನೂ ಪಾಠಾಂತರಗಳೆಂದು ಗ್ರಹಿಸಿ ಆ ಬೇರೆಬೇರೆ ರಚನೆಗಳನ್ನು ಮಿಶ್ರ ಗೊಳಿಸುವ ಅಪಾಯವಿದೆ. ಫಿನ್‌ಲ್ಯಾಂಡಿನ ಜಾನಪದ ಮಹಾಕಾವ್ಯವಾದ 'ಕಲೇವಾಲ' ವನ್ನು ಎಲಿಯಾಸ್ ಲೋನಾರ್ಟ್ ಹೇಗೆ ಸಂಪಾದಿಸಿರುವನೋ ನನಗೆ ಸ್ಪಷ್ಟವಿಲ್ಲ. ಕನ್ನಡದಲ್ಲಿ ಹಲವು ಮೂಲಗಳಿಂದ ಒಂದೆರಡು ಜಾನಪದ ನೀಳ್ಗವನಗಳನ್ನು ಪುನ-ರ್ರಚಿಸಿದ್ದು, ಅವು ಹತ್ತಾರು ತುಂಡುಗಳ ತೇಪೆವಸ್ತ್ರವಾಗಿರಲು ಸಾಧ್ಯವಿದೆ. ಮಲೆಯ ಮಾದೇಶ್ವರ ಕಾವ್ಯದ ಸಂಪಾದನೆಯನ್ನು ಕುರಿತು "ಮಲೆಯ ಮಾದೇಶ್ವರ ಕಾವ್ಯದ ಹತ್ತು ಪಾಠಗಳ ಒಟ್ಟು ಸಾಲುಗಳ ಮೊತ್ತ 75,600 ಸಾಲುಗಳಿಗೂ ಹೆಚ್ಚಾಗಿದ್ದು ಶುದ್ಧಪಾಠವೊಂದನ್ನು ಸಿದ್ಧಗೊಳಿಸಿದಾಗ ಸು. 25,000 ಸಾಲುಗಳಷ್ಟಾಯಿತು"[6] ಎಂಬ ಮಾತು ತುಂಬ ವಿಚಿತ್ರವಾಗಿ ತೋರುತ್ತದೆ. ಹೀಗಾಗಿ "ಒಂದು ಕಥೆ ದೇಶದಿಂದ ದೇಶಕ್ಕೆ ಕಾಲದಿಂದ ಕಾಲಕ್ಕೆ ಪ್ರಸಾರಗೊಳ್ಳುವಾಗ ಕಥೆಗಾರರ ವೈಯಕ್ತಿಕ ಅಭಿರುಚಿ ಹಾಗೂ ಸಾಮರ್ಥ್ಯಕ್ಕನುಗುಣವಾಗಿ ನಿರಂತರವಾಗಿ ಬದಲಾವಣೆ ಹೊಂದುತ್ತದೆ. ಈ ಕಾರಣದಿಂದ ಒಂದೇ ಕಥೆಯು ಹಲವಾರು ಭಿನ್ನರೂಪವನ್ನು (Variants) ಗುರುತಿಸಲು ಸಾಧ್ಯ. ಈ ಭಿನ್ನರೂಪಗಳನ್ನು ಸಂಗ್ರಹಿಸಿ, ಚಾರಿತ್ರಿಕ–ಭೌಗೋಲಿಕ ವಿಧಾನದಿಂದ

---

6. ಮಲೆಯ ಮಾದೇಶ್ವರ—ಪ್ರಸ್ತಾವನೆ. ಪು. ೭೩.

(Historic-Geographical method) ಜಾನಪದ ವಿದ್ವಾಂಸರು ಒಂದು ಕಥೆಯ ಮೂಲರೂಪ ಏನಿತ್ತು ಎಂಬುದನ್ನು ಗುರುತಿಸುತ್ತಾರೆ................ ಈ ವಿಧಾನದ ಮೂಲಕ ಕಂಡುಹಿಡಿದ ಒಂದು ಕಥೆಯ ಮೂಲರೂಪವನ್ನೇ (Arche type) ಕಥಾವರ್ಗ (tale type) ಎಂದು ಕರೆಯಲಾಗುತ್ತದೆ. ಕಥಾವರ್ಗವನ್ನು ಕಂಡುಹಿಡಿಯುವ ಕಾರ್ಯ ಗ್ರಂಥಸಂಪಾದನಶಾಸ್ತ್ರದಲ್ಲಿ ಪರಂಪರಾನುಗತ ಹಸ್ತಪ್ರತಿಗಳ ಸಹಾಯದಿಂದ ಮಾತೃಕೆ (exempler) ಯನ್ನು ಪುನರ್ರಚಿಸಿದಷ್ಟೇ ಕಷ್ಟದ ಕೆಲಸ................ ಒಂದು ಕಥಾವರ್ಗವನ್ನು ನಿರ್ಧರಿಸಬೇಕಾದರೆ ಆ ಕಥೆಯ ಎಷ್ಟೆಷ್ಟು ಭಿನ್ನ ಪಾಠಗಳು ದೊರೆತರೆ ಅಷ್ಟಷ್ಟು ಅನುಕೂಲ"[7] ಎಂದು ಹೇಳುವ ಮಾತುಗಳು ನಮಗೆ ನಿರ್ದಿಷ್ಟ ನೆಲೆಯನ್ನು ಮುಟ್ಟಿಸುವುದು ಸಂದೇಹ.

ತ್ರಿಪದಿಯಂತಹ ಬಿಡಿ ಮುಕ್ತಕಗಳಿಗಿಂತ ನೀಳ್ಗವನಗಳಲ್ಲಿ ರೂಪಾಂತರ ರಚನೆಗಳು ಹೆಚ್ಚು. ಅಲ್ಲಿ ಒಂದು ಕಥೆ ಅಥವಾ ವಸ್ತುವಿಗೆ ಬೇರೆಬೇರೆಯವರಿಂದ ಅಖಂಡ ಹಾಡುಗಳು, ಖಂಡಹಾಡುಗಳು ಹುಟ್ಟಿರುತ್ತವೆ. ಇವು ಒಂದೇ ಛಂದೋಮಟ್ಟದಲ್ಲಿದ್ದರೆ ಅಖಂಡ+ಅಖಂಡ, ಅಖಂಡ+ಖಂಡ, ಖಂಡ+ಖಂಡ ಹಾಡುಗಳು ಪರಸ್ಪರ ಸೇರಿಕೊಳ್ಳಬಹುದು. ಇಲ್ಲವೇ ಒಂದೇ ಅಖಂಡ ಹಾಡು ಎರಡು ಇಲ್ಲವೆ ಹಲವು ಖಂಡಗಳಾಗಿ ವ್ಯವಹರಿಸಬಹುದು. ಕರ್ನಾಟಕದಲ್ಲಿ ಒಂದೇ ವಸ್ತುವಿನ ಸುತ್ತ ಹುಟ್ಟಿದ ಅನೇಕ ಖಂಡ ಇಲ್ಲವೇ ಅಖಂಡ ಹಾಡುಗಳು ಬಹಳಷ್ಟು ಸಿಗುತ್ತವೆ. ಉದಾ : ಡಾ. ಬೆಟಗೇರಿ ಕೃಷ್ಣಶರ್ಮ ಶೋಧಿಸಿದ 'ಕೆರೆಗೆ ಹಾರ'ವು ಬಾವಿಗಾಗಿ ಸೊಸೆಯ ಬಲಿ, ಅಣಜಿ ಹೊನ್ನಮ್ಮ, ಒಡ್ಡರ ಬೋಯಿ, ಕುಣಿಗಲು ಕೆರೆ, ಹುಳಿಯಾರು ಕೆಂಚಮ್ಮ– ಹೀಗೆ ಈಗಿನ ಮಟ್ಟಿಗೆ 6 ರೂಪಾಂತರಗಳಲ್ಲಿ ಸಿಗುತ್ತವೆ. ಡಾ. ಡಿ. ಎಲ್. ಎನ್. ಸಂಪಾದಿತ 'ಗೋವಿನಕಥೆ'ಯು ಗೋವಿನಹಾಡು ಕೋಲೆಹಾಡು, ಆಕಳ ಹಾಡು, ಕವಲೆಹಾಡು, ಆಕಳಪದ. ಕವಲಿಹಾಡು, ಗೋಪ್ಯಮ್ಮ, ಕವಲಿಹಾಡು, ಗೋಪ್ಯಮ್ಮ– ಹೀಗೆ ಈಗಿನ ಮಟ್ಟಿಗೆ 10 ರೂಪಾಂತರಗಳಲ್ಲಿ ಸಿಗುತ್ತದೆ.[8]

ಇಂಥ ಹಾಡುಗಳನ್ನು ಸಂಪಾದಿಸುವಾಗ ಬೇರೆಬೇರೆ ರೂಪಾಂತರಗಳನ್ನು ಕಲಿಹಾಕಿ ಪಾಠಾಂತರದಂತೆ ಬಳಸಿಕೊಳ್ಳಬಾರದು. ಹಾಗಾದರೆ ಶಿಷ್ಟಪದಸಾಹಿತ್ಯಸಂಪಾದನೆಯಂತೆ ಒಂದು ರೂಪಾಂತರಕ್ಕೆ ಸಂಬಂಧ ಪಟ್ಟ ಬೇರೆ ಬೇರೆ ಪಾಠಾಂತರಗಳನ್ನು ಸಂಗ್ರಹಿಸಿ. ಅವುಗಳ ಬಲದಿಂದ ಯೋಗ್ಯವಾದ ಒಂದುಪಾಠವನ್ನು ನಿರ್ಣಯಿಸಿ. ಉಳಿದವುಗಳನ್ನು ಅಡಿಯಲ್ಲಿ ಕೊಡಬೇಕೇ ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಇದಕ್ಕೆ ಉತ್ತರ ಹೀಗೆ ಹೇಳ

7. ಸಂಕೀರ್ಣ ಜನಪದ ಕಥೆಗಳು, ಮುನ್ನುಡಿ, XVIII.
8. ಜನಪದ ಗೀತೆಗಳಲ್ಲಿ ಗೋವಿನಕಥೆ (ಶಾಲಿನಿ ಭಟ್) ಕರ್ನಾಟಕ ಭಾರತಿ 10—2.

ಬಹುದು: ಮೇಲೆ ವಿವರಿಸಿದ ಐದೂ ಘಟಕಗಳ ಭೇದನದಲ್ಲಿ ಲಭ್ಯವಾದ ಪಾಠವೊಂದು ಅರ್ಥಯುಕ್ತವಾಗಿದ್ದರೆ ಇನ್ನೊಂದು ಪಾಠವನ್ನು ಸಂಗ್ರಹಿಸುವ ಗೋಜಿಗೆ ಹೋಗ-ಬಾರದು. ಅದು ನಿವೇದಕಜನ್ಯ ಅಶುದ್ಧ ಪಾಠ, ಕೆಲವೊಮ್ಮೆ ಪ್ರದೇಶಮಾನ್ಯ ಅಶುದ್ಧ ಪಾಠವಿದ್ದರೆ ಮಾತ್ರ ಬೇರೊಂದು ಯೋಗ್ಯಪಾಠಕ್ಕಾಗಿ ಪ್ರಯತ್ನಿಸಬೇಕು.

## III

ಶಿಷ್ಟಸಾಹಿತ್ಯಕ್ಕಿಂತ ಜಾನಪದಸಾಹಿತ್ಯಕ್ಕೆ ಪಾಠಾಂತರ ಹೆಚ್ಚು. ಆ ಲಿಖಿತ ಸಾಹಿತ್ಯದಲ್ಲಿ ಪಾಠಾಂತರ ದೋಷವೆನಿಸುತ್ತಿದ್ದರೆ ಈ ಅಲಿಖಿತ ಸಾಹಿತ್ಯದಲ್ಲಿ ಪಾಠಾಂತರಗಳಾಗುವುದೇ ಗುಣವೆನಿಸುತ್ತದೆ. ನೆಲದ ರುಚಿ ಜಲಕ್ಕೆ ಬರುವಂತೆ ಕಾಲದೇಶಾದಿಗಳ ಬಣ್ಣ ಮತ್ತು ನಿವೇದಕನ ಜನಿತ ಶುದ್ಧ-ಅಶುದ್ಧ ಪಾಠಗಳು ಜಾನಪದ ಸಾಹಿತ್ಯಕ್ಕೆ ಉಂಟಾಗುತ್ತವೆ. ಅದರಲ್ಲಿಯೂ ಪದ್ಯ ಅಲ್ಪಪ್ರಮಾಣದಲ್ಲಿ ಪಾಠಾಂತರಗಳನ್ನು ತಾಳುತ್ತಿದ್ದರೆ, ಗದ್ಯ "ನಿಪ್ಪೆಗೊಮ್ಮೆ ನಿತ್ಯಮರಣ ಎದ್ದಸಲ ನವೀನ ಜನನ" ಎಂಬಂತೆ ಹುಟ್ಟುವಾಗಲೆಲ್ಲ ಹೊಸಸೃಷ್ಟಿ ಪಡೆಯುತ್ತದೆ.

ಜಾನಪದಸಾಹಿತ್ಯದಲ್ಲಿ ಕಾಣುವ ಎಲ್ಲ ಪಾಠಾಂತರಗಳು ಶುದ್ಧಪಾಠಾಂತರಗಳು, ಅಶುದ್ಧಪಾಠಾಂತರಗಳು ಎಂದು ಎರಡು ಬಗೆಯಾಗಿದ್ದು, ಶುದ್ಧಪಾಠಾಂತರಗಳು ಮತ್ತೆ ಉದ್ದೇಶಿತ ಮತ್ತು ಅನುದ್ದೇಶಿತವೆಂದು, ಅಶುದ್ಧ ಪಾಠಾಂತರಗಳು ಅಮಾನ್ಯ ಮತ್ತು ಮಾನ್ಯವೆಂದು ಎರಡು ತೆರನಾಗಿವೆ.

**ಉದ್ದೇಶಿತ ಶುದ್ಧಪಾಠಾಂತರ :** ಶಿಷ್ಟಪದಸಾಹಿತ್ಯದಲ್ಲಿ ಉದ್ದೇಶಿತ ಪಾಠಾಂತರ ಪ್ರಮಾದವಾದರೆ ಇಲ್ಲಿ ಅದು ಅಪ್ರಮಾದ, ಅನಿವಾರ್ಯ, ಅತ್ಯವಶ್ಯ. ಅದಕ್ಕಾಗಿಯೇ ಜಾನಪದಸಾಹಿತ್ಯದಲ್ಲಿ ಐತಿಹಾಸಿಕ ಭೌಗೋಲಿಕ ಸಂಗತಿ, ದೇವತಾನಾಮ, ಪ್ರಾದೇಶಿಕ ವ್ಯಕ್ತಿನಾಮ– ಮೊದಲಾದುವುಗಳನ್ನು ಉದ್ದೇಶಪೂರ್ವಕವಾಗಿ ಬದಲಾವಣೆ ಮಾಡಿಕೊಳ್ಳುವುದು ದೋಷವೆನಿಸುವುದಿಲ್ಲ, ಚೌರ್ಯವೆನಿಸುವುದಿಲ್ಲ. ಹೀಗಾಗಿ ಒಂದು ನಾಡಿನ ಒಂದು ಮೂಲೆಯಲ್ಲಿಯ ಹಾಡು ಇನ್ನೊಂದು ಮೂಲೆಯಲ್ಲಿ ಇಂಥ ವ್ಯತ್ಯಾಸಗಳಿಂದ ಬಳಕೆ ಯಾಗುತ್ತಿದ್ದರೆ ಅದಕ್ಕೆ ಯಾರದೂ ಅಭ್ಯಂತರವಿಲ್ಲ; ಇರಬಾರದು. ಉದಾ :

ಬ್ಯಾಸಗಿ ದಿವಸಕ ಬೇವಿನ ಮರ ತಂಪ  
ಭೀಮರತಿಯೆಂಬ ಹೊಳಿ ತಂಪ । ಹಡದವ್ವ  
ನೀ ತಂಪ ನನ್ನ ತವರೀಗಿ ॥

ಉತ್ತರ ಕರ್ನಾಟಕದಲ್ಲಿಯ ಈ ಹಾಡು

ಬೇಸಗೆ ದಿವಸಕ ಬೇವಿನ ಮರ ತಂಪ
ವೇದವತಿಯೆಂಬ ಹೊಳೆತಂಪ । ಹಡದವ್ವ
ನೀ ತಂಪು ನನ್ನ ತವರೀಗಿ ॥

ಎಂದು ದಕ್ಷಿಣಕರ್ನಾಟಕದಲ್ಲಿ ಪಾಠಾಂತರದೊಂದಿಗೆ ಕೇಳಿಸುತ್ತಿರುವುದು ಅದೋಷವೆಂದೇ ಹೇಳಬೇಕು. ಇಂಥ ಮುಕ್ತಕಗಳು, ನೀಳ್ಗವನಗಳು ಪ್ರದೇಶದಿಂದ ಪ್ರದೇಶಕ್ಕೆ ಮನೆಯಿಂದ ಮನೆಗೆ ಉದ್ದೇಶಿತ ಪಾಠವ್ಯತ್ಯಾಸದಿಂದ ಚಲಿಸುತ್ತಿರುವುದು ಸರ್ವಮಾನ್ಯವೇ ಸರಿ. ಇಲ್ಲಿ ಭೀಮರತಿ, ವೇದವತಿ– ಹೀಗೆ ಪಾಠವ್ಯತ್ಯಾಸಗಳಿದ್ದ ಪದ್ಯಗಳು ಸಿಕ್ಕ ಮಾತ್ರಕ್ಕೆ ಅವುಗಳನ್ನು ಸ್ವತಂತ್ರರಚನೆಗಳೆಂದು ಪರಿಗಣಿಸುವುದು ಪ್ರಮಾದವಾಗುತ್ತದೆ. ಅನೇಕರ ಸಂಕಲನಗಳಲ್ಲಿ ಇಂಥ ಉದ್ದೇಶಿತ ಪಾಠಾಂತರಗಳಿಂದ ಶೋಭಿಸುವ ಪುನರುಕ್ತಪದ್ಯಗಳು ಗಣನೀಯ ಪ್ರಮಾಣದಲ್ಲಿ ಕಂಡುಬರುವುದು ವಿಷಾದದ ಸಂಗತಿ. ಉದಾ :

ಊದಿಗಿ ದ್ಯಾವಮ್ಮ ನಾಡಿಗಿ ದೊಡ್ಡಾಕಿ ।
ನಾಗಳ ಗೋದಿ ಉಡಿಯಕ್ಕಿ । ಹಾಯ್ಕೊಂಡು
ನಾಗಯ್ಯಗ ಹಾಲ ಎರದಾಳೋ ॥

ನಾಗಾಯಿ ಯಲ್ಲಮ್ಮ ನಡುವಿರಲಿ ದೊಡ್ಡಾಕಿ ।
ನಾಗಳ ಗೋದಿ ಉಡಿಯಾಗ । ಹಾಕ್ಕೊಂಡು
ನಾಗರಿಗಿ ಹಾಲ ಎರಿದಾಳೋ ।[9]

ಇವುಗಳನ್ನು ಸ್ವತಂತ್ರ ರಚನೆಗಳೆಂದು ಭಾವಿಸಿ ಎರಡು ಬೇರೆ ಬೇರೆ ಪದ್ಯಗಳಂತೆ ಅಚ್ಚು ಹಾಕಿಸುವುದಕ್ಕಿಂತ ಮೇಲೆ ಹೇಳಿದ ೫ ಸೂತ್ರಗಳಿಗೆ ಬದ್ಧವಾದ ಶುದ್ಧಪಾಠವೊಂದನ್ನು ಸ್ವೀಕರಿಸುವುದೇ ಇಲ್ಲಿ ಶಾಸ್ತ್ರೀಯವೆನಿಸುತ್ತದೆ. ಇಂಥ ಪ್ರಸಂಗಗಳಲ್ಲಿ ಭಿನ್ನಪಾಠಾಂತರದ ಪ್ರಶ್ನೆಯೇ ಬರುವುದಿಲ್ಲ.

**ಅನುದ್ದೇಶಿತ ಶುದ್ಧಪಾಠಾಂತರ :** ಜಾನಪದಸಾಹಿತ್ಯ ಪ್ರದೇಶದಿಂದ ಪ್ರದೇಶಕ್ಕೆ ಹೊರಳುವಾಗ ಅನುದ್ದೇಶಿತವಾಗಿ ಪ್ರಾದೇಶಿಕ ಭಾಷೆಯ ರೂಪ ಮತ್ತು ಧ್ವನಿಗಳನ್ನು ಮೈಗೂಡಿಸಿಕೊಳ್ಳುತ್ತದೆ. "ಏಕಂ ಸತ್ ವಿಪ್ರಾ ಬಹುಧಾ ವದಂತಿ" ಎಂಬಂತೆ ಪ್ರಾಂತಕ್ಕೆ ತಕ್ಕ ರೂಪ ಪಡೆಯುತ್ತದೆ. ಉದಾ :

ಅಡಗಿ ಮಾಡಂದರ । ಅರುವತ್ತು ಗಂಗಾಳ
ಬೆಳಗತೀನತ್ತೀ ಬೈಬ್ಯಾಡ । ತವರವರು
ಸರಮುತ್ತ ಮಾಡಿ ಸಲವ್ಯಾರ ॥

9. ಉತ್ತರ ಕರ್ನಾಟಕದ ಹಂತಿಯ ಹಾಡುಗಳು ಪು. 13—15.

ಅಡಗಿ ಮಾಡಂದರ ಅರವತ್ತು ಪರಿಯಾನ ।
ಅರಿಯೆ ಕಾಣತ್ತೆ ಅಡಗೀಯ ನಮ್ಮಪ್ಪಾ
ಸರಮುತ್ತ ಮಾಡೀಯ ಕಳಗೀದಾ ॥

ಈ ಎರಡೂ ಹಾಡುಗಳಿಗೆ "ಒಡಲೆರಡು, ಒಂದೆ ಜೀವ". ಹೀಗೆಯೇ ತಾಯಿಬೇರನು ಕತ್ತರಿಸಿಕೊಳ್ಳದೆ ತಂತುಬೇರನ್ನಾಶ್ರಯಿಸಿ ಬೇರೆ ಬೇರೆ ಪದ್ಯಬಳ್ಳಿಗಳು ಅನುದ್ದೇಶಿತ ಪಾಠಾಂತರ ಹೊಂದಿ ದೇಶದಿಗ್ದೇಶಗಳಲ್ಲಿ ಅಂಕುರಿಸಿ ಅರಳಿರುತ್ತವೆ.[10]

ಪ್ರದೇಶನಿಷ್ಠಪಾಠಾಂತರದಂತೆ ಪ್ರದೇಶನಿಷ್ಠಧ್ವನಿಮಾಂತರವೂ ಅನುದ್ದೇಶಿತವಾಗಿ ಇಣುಕುತ್ತದೆಯೆಂಬುದು ಗಮನಿಸಬೇಕಾದ ಸಂಗತಿ.' ಉದಾ : ಹಾದಿ ಹಿಡಿದು ಹೋಗತಾನ ಹಾಡ್ಯಾಡಿ ಅಳತಾನ → ಆದಿ ಇಡದು ಓಗತಾನ ಆಡ್ಯಾಡಿ ಅಳತಾನ. ಸಣ್ಣೆಳಿ ಸರಪಳಿ ಬಂಗಾರದ ಕೋಡಣಸು → ಸನ್ನೆಳಿ ಸರಪಳಿ ಬಂಗಾರದ ಕೋಡನಸು.

ಮೂರನೆಯದಾಗಿ ಜಾನಪದ ಸಾಹಿತ್ಯದ ಹಾಡುಗಾರಿಕೆ ಅಥವಾ ಹೇಳುಗಾರಿಕೆಗಳೂ ಅನುದ್ದೇಶಿತ ಪಾಠಾಂತರವನ್ನುಂಟು ಮಾಡುತ್ತವೆ. ಉದಾ :

1. **ಪುಂಡಾನ** ಎತಗೋಳು । ಹಿಂಡೀನ ಮೆಯ್ದಾವ ।

2. **ಬೆಳ್ಳಾನ** ಬಸವಣ್ಣ । ಎಲ್ಲೀಗಿ ಹೋಗಿದ್ದಿ ।
   **ಎಲ್ಲಾರ** ನೆದರ ನಿನ ಮ್ಯಾಲ ।

3. ಹಾಡ ಇಲ್ಲಿಗಿ ಸರುವ ನೀಡೊ **ನಮ್ಮಗ** ವರವ ।

4. ಲಿಂಗಪೂಜಾ**ನಾಗತಾದಣ್ಣ**

5. ಸಿಂಬಿಯ **ವನದನ್ನ** ಅರಗಿಳಿಯೆ ।

ಇಂಥ ಅನುದ್ದೇಶಿತ ಪಾಠಾಂತರಗಳು ಆಯಾ ಪ್ರದೇಶಗಳಲ್ಲಿ ಮಾನ್ಯತೆ ಪಡೆದಿರುವುದರಿಂದ ಶುದ್ಧರೂಪಗಳೇ ಆಗಿದ್ದು, ೫ ಸೂತ್ರಗಳ ಒರೆಗಲ್ಲಿಗೆ ಹಚ್ಚಿ ಸ್ವೀಕರಿಸುವುದೇ ಇಲ್ಲಿ ಶಾಸ್ತ್ರೀಯವೆನಿಸುತ್ತದೆ. ಇಲ್ಲಿಯೂ ಭಿನ್ನಪಾಠಾಂತರದ ಪ್ರಶ್ನೆ ಉದ್ಭವಿಸುವುದಿಲ್ಲ.

---

10. ಕೆಲವು ಸಲ ಒಂದು ಪ್ರಾಂತಭೇದದಲ್ಲಿಯೇ ಒಂದು ರಚನೆಗೆ ಅನೇಕ ಅನುದ್ದೇಶಿತ ಪಾಠಾಂತರಗಳು ಸಿಗಬಹುದು. ಉದಾ : ಕೊಡಲಿ ಕಾವು ಕುಲಕ್ಕೆ ಸಾವು. ಕೊಡಲಿ ಕಾವು ಕುಲಕ್ಕೆ ಮೃತ್ಯು. ಕೊಡಲಿಯ ಕಾವು ಕುಲಕ್ಕೆ ಮೂಲ.
ಈ ಗಾದೆ ಮಾತುಗಳನ್ನು ನೋಡಬಹುದು.

ಒಟ್ಟಿನಲ್ಲಿ ಉದ್ದೇಶಿತ ಶುದ್ಧಪಾಠಾಂತರ, ಅನುದ್ದೇಶಿತ ಶುದ್ಧಪಾಠಾಂತರ ಪ್ರಸಂಗಗಳಲ್ಲಿ ಸಂಪಾದಕನಿಗೆ ವರ್ಜನ, ಸ್ವೀಕರಣ, ಪರಿಷ್ಕರಣ, ಸಂದೇಹದ ಚರ್ಚೆಗೆ ಅವಕಾಶವೇ ಇಲ್ಲ. ಈ ಸೂತ್ರಗಳಿಗೆ ಬದ್ಧವಾಗಿ ಬಂದ ಯಾವುದೂ ಒಂದು ಪಾಠ ಸ್ವೀಕರಾರ್ಹವೇ ಸರಿ. ಆದರೆ ವರ್ಜನ, ಸ್ವೀಕರಣ, ಪರಿಷ್ಕರಣ ಸಂದೇಹದ ಚಿಂತನೆ ನಡೆಯುವುದು ಅಶುದ್ಧ ಪಾಠ ಲಭ್ಯವಾದ ಪ್ರಸಂಗದಲ್ಲಿ.

**ಅಮಾನ್ಯ ಅಶುದ್ಧಪಾಠಾಂತರಗಳು :** ನಿವೇದಕನಿಂದ ಮಾತ್ರ ಅರ್ಥ ಕೆಟ್ಟಿರುವ, ಪ್ರದೇಶದಿಂದ ಅಮಾನ್ಯವಾಗಿರುವ ಅನುದ್ದೇಶಿತಪಾಠಗಳಿವು. ಈಗ ಅರ್ಥವತ್ತಾದ ಪಾಠಕ್ಕೋಸುಗ ಇನ್ನೊಬ್ಬ ನಿವೇದಕನನ್ನು (ಇನ್ನೊಂದು ಹಸ್ತಪ್ರತಿಯನ್ನು ಬಳಸಿಕೊಳ್ಳು- ವಂತೆ) ಮೊರೆಹೊಗಬೇಕಾಗುತ್ತದೆ. ಉದಾ :

1. ಗಜಮುಖ ಗಣಪತಿ ಮಾಡುವೆ ನಿಮಸ್ತುತಿ ।
ಪಾವನ ಮಾಡೊ ಪರಮೇಶ । ನಿನ ಮಗ
ಪಾರೋತಿಪುತ್ರ ಗಣಪತ್ಯೋ ॥ [11]

ಈ ಪದ್ಯದ ಅರ್ಥ ಸಂದೇಹದಿಂದ ಕೂಡಿದೆ. ಇಲ್ಲಿ 'ನಿನ ಮಗ' ದ ಸ್ಥಾನದಲ್ಲಿ 'ನೀ ನಮಗ' ಎಂಬ ಸ್ವೀಕಾರಯೋಗ್ಯ ಪಾಠಾಂತರ ಇನ್ನೊಬ್ಬನಿಂದ ಸಿಗುತ್ತದೆ. ಇವುಗಳಲ್ಲಿ ಒಂದು ಸ್ವೀಕರಣವೆನಿಸಿ ಮೇಲೆ, ಇನ್ನೊಂದು ವರ್ಜನವೆನಿಸಿ ಕೆಳಗೆ ಎಡೆಪಡೆಯುತ್ತದೆ. ಇಂಥ ಇನ್ನೊಂದು ಉದಾಹರಣೆ :

ಹಾದಿಗಿ ಕಲ್ಹಾಕಿ ಹಾಡಿ ಬೀಸಾಕಿನ್ಯಾರ
ಲಾಲಕುಂಕುಮದ ಹೆಣಗಳೊ । ಮರಿಯಮ್ಮ
ಹಾಡಿ ಬೀಸ್ಯಾಳೊ ಅರಿಷಿಣ ॥ [12]

ಮರಿಯಮ್ಮ ಇಲ್ಲಿ ಹೆಣಗಳನ್ನು ಬೀಸಿದಳೋ ? ಅರಿಷಿಣವನ್ನು ಬೀಸಿದಳೋ ? ಎಂಬ ಸಂದೇಹ ಹುಟ್ಟುತ್ತದೆ. ಆಗ ಬೇರೆ ನಿವೇದಕನನ್ನು ಅವಲಂಬಿಸಿ 'ಹೆಣಗಳೊ' ಎಂಬುದಕ್ಕೆ ಬದಲು 'ಹೆಣಮಗಳೊ' ಎಂಬ ಯೋಗ್ಯಪಾಠವನ್ನು ದೊರಕಿಸಿಕೊಂಡು ಇವುಗಳಲ್ಲಿ ಒಂದು ವರ್ಜನ, ಇನ್ನೊಂದು ಸ್ವೀಕರಣವೆಂದು ಭಾವಿಸಬೇಕು.

---

11. ಉತ್ತರ ಕರ್ನಾಟಕದ ಹಂತಿಯ ಹಾಡುಗಳು. ಪುಟ : ೩.
12. ಉತ್ತರ ಕರ್ನಾಟಕದ ಹಂತಿಯ ಹಾಡುಗಳು. ಪುಟ : ೧೭.

**ಮಾನ್ಯ ಅಶುದ್ಧಪಾಠಾಂತರಗಳು:** ಅರ್ಥ ಕೆಟ್ಟಿರುವ ಆದರೂ ಪ್ರದೇಶದಿಂದ ಮಾನ್ಯವಾಗಿರುವ ಅನುದ್ದೇಶಿತ ಪಾಠಗಳಿವು. ಇಲ್ಲಿ ಯಾವುದೇ ನಿವೇದಕನಿಂದ ಬೇರೆ ಯೋಗ್ಯಪಾಠಗಳು ಸಿಗುವುದಿಲ್ಲ. ಆಗ ಊಹೆಯಿಂದ ಇಂಥವನ್ನು ತಿದ್ದಿಕೊಳ್ಳ ಬೇಕಾಗುತ್ತದೆ. ಇದು ಪರಿಷ್ಕರಣ. ಈಗ ಪರಿಷ್ಕೃತ ಪಾಠವನ್ನು ಚೌಕಕಂಸಿನಲ್ಲಿ ಮೇಲೆ, ತಿರಸ್ಕೃತ ಪಾಠವನ್ನು ಕೆಳಗೆ ಇಡಬೇಕು. ಉದಾ :

ದೊಡವಿಯೊಳ್ ಕುಡುತನಯ
ಒಡೆಯ ಭೀಮೇಶನ ।

ಎಂಬುದು ಎಲ್ಲ ದೊಡ್ಡಾಟಗಳ ಸ್ತುತಿಪದ್ಯ. ಸಾರ್ವತ್ರಿಕವಾಗಿ ಹಾಡಲ್ಪಡುತ್ತಿರುವ, ಅರ್ಥವೇ ಹೊರಡದ ಈ ಪದದ ಪಾಠ ಎಲ್ಲಿಯೋ ಕೆಟ್ಟಿರಲು ಸಾಕು. ಬಳ್ಳಾರಿ ಜಿಲ್ಲೆಯ 'ಕುಡುತಿನಿ' ಎಂಬುದು ಬಯಲಾಟಗಳ ಜನ್ಮಭೂಮಿ; ಅಲ್ಲಿಯ "ಭೀಮೇಶನ ಸ್ತುತಿ"ಯಿದು ಎಂಬಿವೇ ಮೊದಲಾದ ಇತಿಹಾಸ ಗೊತ್ತಿದ್ದರೆ ಮಾತ್ರ ಈ ಪಾಠವನ್ನು 'ಕುಡುತನಯ'ಕ್ಕೆ ಬದಲು 'ಕುಡು[ತಿನಿ]ಯ' ಎಂದು ತಿದ್ದಿಕೊಳ್ಳಲು ಸಾಧ್ಯವಾಗುತ್ತದೆ. ಇಂಥ ಇನ್ನೊಂದು ಉದಾಹರಣೆ :

ಶ್ರೀ ಆರ್. ಜಿ. ಕುಲಕರ್ಣಿ ಅವರು ಸಂಪಾದಿಸಿದ 'ಶ್ರೀಕೃಷ್ಣ ಪಾರಿಜಾತ'[13] ಕೃತಿಯ ಮೊದಲ ಪಾದವಾದ "ಜಯಸಾಗರಾತ್ಮ ಜಯಕುಂಕುಮಾಂಕಿತ ವಕ್ಷ" ಇದನ್ನು "ಜಯಸಾಗರಾತ್ಮ[ಜೆ]ಯ ಕುಂಕುಮಾಂಕಿತ ವಕ್ಷ" ಎಂದೂ ಎರಡನೆಯ ಪಾದವಾದ "ಜಯ ಇಂದಿರಾಧಾರ ಅಮೃತಭಕ್ಷೆ" ಇದನ್ನು "ಜಯ ಇಂದಿರಾ[ಧ]ರ ಅಮೃತಭಕ್ಷ" ಎಂದೂ ಪರಿಷ್ಕರಿಸಿಕೊಳ್ಳುವುದು ಯೋಗ್ಯವಾದುದು. ಆದರೆ ಇಂಥ ಗೋಜಿಗೆ ಹೋಗದೆ,

1. ಮುಂಗೋಡಿನ ಬಸವಣ್ಣ ಮೂರೇಣಿನ ಸರಪಳಿ ।
ಜಂಗ ಜಡಿಸ್ಯಾರೋ ಕೊರಳಿಗಿ । ಬಸವಣ್ಣ
ಮಾರಿಗಾಕ್ಯಾರೋ ಮುಖಮ್ಯಾಲೋ ।

2. ಮುಂಗೋಡಿನೆತ್ತಿಗಿ ಮುರಗಿಯ ಸರಪಳಿ
ಜಂಗ ಜಡಿಸ್ಯಾರೋ ಕೊರಳಿಗೊ । ಬಸಪ್ಪನ
ಮಾರಿಗಾಕ್ಯಾರೋ ಮಕುಬಾರ ॥

---

13. ಶ್ರೀ ಕೃಷ್ಣ ಪಾರಿಜಾತ – (ಪ್ರ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು) ಪು. ೧೧೭.

3. ಮುಂಗೋಡಿನೆತ್ತಿಗಿ ಮುರಗಿಯ ಸರಪಳಿ ।
ಜಂಗ ಜಡಿಸ್ಯಾರೊ ಕೊರಳಿಗೆ । ಬಸವಣ್ಣ
ಮಾರಿಗಚ್ಯಾರೊ ಮುಖಮಲೋ ॥[14]

ಈ ರೀತಿ ಒಂದೇ ಸಂಕಲನದಲ್ಲಿ ಕೈಗೆಸಿಕ್ಕ ಒಂದೇ ಮೂಲದ ಮೂರು ಪದ್ಯಗಳನ್ನು ಒಟ್ಟುವುದು ಪುಟಗಳ ಅಪವ್ಯಯ.

ಹೀಗೆ ಸಂಪಾದಕನಿಗೆ ಪಾಠವನ್ನು ತಿದ್ದುವ ಸ್ವಾತಂತ್ರವಿದ್ದರೂ ಆತನು

ನಿದ್ದಿಗಣ್ಣಲಿ ಕಂಡೆ । ಸದ್ದಗುರುವಿನ ಪಾದ
ಎದ್ದುನೋಡಿದರ ನಿರಬಯಲು । ಗುರುರಾಯ
ರುದ್ದರನ ಮೈಮೆ ತಿಳಿಯಾವ ॥

ಎಂಬಂತಹ ಪದ್ಯಗಳಲ್ಲಿಯ ತದ್ಭವವನ್ನಾಗಲೀ, ಪ್ರಾಂತಭೇದವನ್ನಾಗಲೀ ತಿದ್ದುಪಡಿ ಮಾಡುವದು ತನ್ನ ಕರ್ತವ್ಯವೆಂದು ಭಾವಿಸಿ ಹಾಗೆ ಮಾಡಬಾರದು. ಹಾಗೆ ಮಾಡಿದರೆ ಜಾನಪದ ನವಿಲಿನ ಗರಿಗಳನ್ನು ಸರಿಗೊಳಿಸಲು ಬಯಸಿ ಕತ್ತರಿಸಿದಂತಾಗುತ್ತದೆ. ಆದುದರಿಂದ ಕೆಲವೊಮ್ಮೆ ಸಮಾಜಮಾನಿತ "ದೋಸಮನೆ ಗುಣದ ವೊಲುದ್ಭಾಸಿಸಿ"ಯೂ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇದಲ್ಲದೆ ಇನ್ನು ಕೆಲವರು "ಸಕಲ ಲಕ್ಷಣಕಾಗಿ ಬಿರುಸು ಮಾಡುವ" ಪ್ರಯತ್ನಕ್ಕೂ ತೊಡಗಿದುದುಂಟು. ಉದಾ :

ತೊಟ್ಟಿಲ ಹೊತ್ಗೊಂಡು ತವರ್ಬಣ್ಣ ಉಟಗೊಂಡು
ಅಪ್ಪ ಕೊಟ್ಟೆಮ್ಮಿ ಹೊಡಕೊಂಡು । ತವರೂರ
ತಿಟ್ಟತ್ತಿ ತಿರಗಿ ನೋಡ್ಯಾಳ ॥

ಎಂಬ ತ್ರಿಪದಿಯನ್ನು ಪ್ರಾಸಪಾಲನೆಗಾಗಿ,

ಉಟ್ಕಂಡ್ ತಾರ್ಬಣ್ಣ ಹೊತ್ಕಂಡ್ ತೊಟ್ಟಿಲ
ಹೊಡ್ಕಂಡ್ ಅಪ್ಪ ಕೊಟ್ಟೆಮ್ಮಿ । ತವರೂರ
ತಿಟ್ಟತ್ತಿ ನಿತ್ತು ನೋಡ್ಯಾಳು ॥ [15]

---

14. ಉತ್ತರಕರ್ನಾಟಕದ ಹಂತಿಯ ಹಾಡುಗಳು. ಪು. ೩೮, ೫೨, ೧೭.
15. ಮದ್ದುಂಟೆ ಜನನ ಮರಣಕ್ಕೆ. ಪುಟ. ೩.

ಎಂದು ತಿದ್ದುಪಡಿ ಮಾಡಿದುದು ದೋಷಯುಕ್ತ ಸಂಪಾದನೆಯೆಂದೇ ಹೇಳಬೇಕು. 'ಏಕೆಂದರೆ ಎಷ್ಟೋ ಸುಂದರ ತ್ರಿಪದಿಗಳಲ್ಲಿ ಪ್ರಾಸವಿರುವದಿಲ್ಲ, ವಡಿಯೂ ಇರುವದಿಲ್ಲ. ಕಾರಣ ಇಂಥ ಪ್ರಯತ್ನಗಳು ಕುಂಬಳ ಕಾಯಿಗೆ ಕಬ್ಬಿಣದ ಕಟ್ಟು ಕೊಟ್ಟಂತಾಗಬಹುದು. ಕೆಲವು ಸಲ ಎಷ್ಟು ಪ್ರಯತ್ನಿಸಿದರೂ ಸಮಾಜಮಾನಿತ ಒಂದು ಅಶುದ್ಧಪಾಠದ ಪರಿಷ್ಕರಣ ಸಾಧ್ಯವಾಗದಿದ್ದರೆ ಅದು 'ಸಂದೇಹ' ವೆನಿಸಿಕೊಳ್ಳುತ್ತದೆ. ಇಂಥ ಪಾಠದ ಮುಂದೆ ವರ್ತುಲ ಕಂಸಿನಲ್ಲಿ ಪ್ರಶ್ನೆಚಿಹ್ನೆ ಇಡಬೇಕು.
ಉದಾ :

ಮಂದೇನು ಕೊಟ್ಟೀತ । ಮನವೇನು ತಣದೀತ
ಮಂಜಾನದಾನ (?) ಗಿರಿಮಲ್ಲ । ಕೊಟ್ಟರ
ಮನಿ ತುಂಬಿ ನಮ್ಮ ಮನ ತುಂಬಿ

ಸಂದೇಹಗಳನ್ನು ತೆಗೆದುಹಾಕಿ ಅರ್ಥವಾಗುವ ಹೊಸ ಪದಗಳನ್ನು ಸೇರಿಸಲು ಜನಪದರಿಗೆ ಸ್ವಾತಂತ್ರ್ಯವಿರುವುದರಿಂದ, ಅವರು ಹಾಗೆ ಮಾಡುವುದರಿಂದ ಜಾನಪದ ಸಾಹಿತ್ಯದಲ್ಲಿ ಸಂದೇಹಗಳು ಕಡಿಮೆಯೆಂದೇ ಹೇಳಬೇಕು.

ಹೀಗೆ ಸ್ವೀಕರಣ, ವರ್ಜನ, ಪರಿಷ್ಕರಣ, ಸಂದೇಹ– ಈ ನಾಲ್ಕು ವಿಧಾನಗಳಲ್ಲಿ ಈ ಸಂಪಾದನಕಾರ್ಯ ಮುನ್ನಡೆಯಬೇಕಾಗುತ್ತದೆ. ಒಟ್ಟಿನಲ್ಲಿ ಜಾನಪದ ಸಾಹಿತ್ಯವನ್ನು ಸಂಪಾದಿಸುವುದೆಂದರೆ ಪಂಚಸೂತ್ರ ಬದ್ಧವಾದ ಅರ್ಥಶುದ್ಧವಾದ ಪಾಠವನ್ನು ನಿರ್ಣಯಿಸುವುದೇ ಹೊರತು ಶಿಷ್ಟಪದ ಸಾಹಿತ್ಯ ಸಂಪಾದನೆಯಂತೆ ಮೂಲ ಪಾಠವನ್ನು ನಿರ್ಣಯಿಸುವುದಲ್ಲ. ಹಾಗೆ ನೋಡಿದರೆ ಜಾನಪದ ಸಾಹಿತ್ಯಕ್ಕೆ 'ಅಧಿಕೃತ ಪಾಠ' ವೇ ಇರಲಾರದು; ಇರಬಾರದು.

## IV

ಸಂಪಾದನ ಕಾರ್ಯದಲ್ಲಿ ಪಾಠವನ್ನು ಹೇಗೆ ಸೋಸಿಕೊಳ್ಳಬೇಕೆಂದು ತಿಳಿದು ಕೊಂಡ ತರುವಾಯ ಅದರ ಪ್ರಕಟನವಿಧಾನದ ಬಗ್ಗೆ ವಿಚಾರಿಸಬಹುದು. ಇಂದು ಜಾನಪದ ಸಾಹಿತ್ಯವನ್ನು ಬರವಣಿಗೆಯ ಮೂಲಕ ಪ್ರಕಟಿಸುತ್ತಲಿದ್ದೇವೆ. ಆದರೆ ಆಡು ಮಾತಿನ ಮಾಧ್ಯಮವಾಗಿರುವ ಜಾನಪದ ಸಾಹಿತ್ಯವನ್ನು ಬರವಣಿಗೆ ಮಾಧ್ಯಮಕ್ಕೆ ಇಳಿಸಿಕೊಳ್ಳುವ ಕಾರ್ಯವನ್ನು ಹೇಗೆ ನಿರ್ವಹಿಸುವುದು ? ಇದು ಜಾನಪದ ಸಾಹಿತ್ಯ

ಸಂಪಾದಕರನ್ನು ಕಾಡಿದ, ಹಾಡುತ್ತಲಿರುವ ಪ್ರಶ್ನೆಯಾಗಿದೆ. ಆಡುವ ಭಾಷೆ ಬರವಣಿಗೆಯಲ್ಲಿ ತನ್ನ ಕೆಲವು ಅಂಶಗಳನ್ನು ಕಳೆದುಕೊಳ್ಳುವಂತೆ ಹಾಡುವ ಅಥವಾ ಹೇಳುವ ಜಾನಪದ ಸಾಹಿತ್ಯವೂ ಬರವಣಿಗೆಯಲ್ಲಿ ಕೆಲವು ಅಂಶಗಳನ್ನು ಕಳೆದುಕೊಳ್ಳುತ್ತದೆ. ಒಂದು ಜಾನಪದ ರಚನೆಯನ್ನು ಹೇಳುವಾಗ ಅಥವಾ ಹಾಡುವಾಗ ವ್ಯಕ್ತಗೊಳ್ಳುವ ಧ್ವನಿಯ ಏರಿಳಿತ, ಆಂಗಿಕ ಹಾವಭಾವಗಳು ಅದಕ್ಕೆ ಪ್ರಭಾವಶಾಲಿ ವ್ಯಕ್ತಿತ್ವವನ್ನು ತುಂಬುತ್ತವೆ. ಆದೇ ರಚನೆಯನ್ನು ಬರವಣಿಗೆಗೆ ಇಳಿಸಿಕೊಂಡರೆ ಇವೆಲ್ಲ ಹೋಗಿ ಶಾಪ ಗ್ರಸ್ಥ ಅಜಗರನಂತೆ ನಿಶ್ಚೇಷ್ಟವಾಗುತ್ತದೆ. ಅದಕ್ಕಾಗಿಯೇ "ಜಾನಪದ ಸಾಹಿತ್ಯವನ್ನು ಕೇಳುವಾಗ ಸಿಗುವ ಸುಖ ಓದಿದಾಗ ಸಿಗುವುದಿಲ್ಲ" ವೆನ್ನುವುದು. ಈ ಆರೋಪದಿಂದ ಮುಕ್ತವಾಗಬೇಕಾದರೆ ಅದನ್ನು ಸಾಧ್ಯವಾದಷ್ಟು ಮೂಲ ರೂಪದಲ್ಲಿ ಸಮರ್ಪಕವಾಗಿ ಹಿಡಿದುಕೊಳ್ಳಬೇಕು.

ಇಲ್ಲಿಯ "ಹಿಡಿದುಕೊಳ್ಳಬೇಕು" ಎಂಬ ಮಾತು ಚಿಂತನೀಯವಾಗಿದೆ. ಸಾಹಿತ್ಯ, ಭಾಷೆಯಲ್ಲಿ ಹೊಡೆಬಿಚ್ಚುವ ಕಲೆಯಾದರೂ ಶಿಷ್ಟಪದ ಸಾಹಿತ್ಯ ಲಿಪಿವ್ಯವಸ್ಥೆಗೆ ಒಳಪಟ್ಟು ಹುಟ್ಟುತ್ತದೆ; ಜಾನಪದ ಸಾಹಿತ್ಯ ಧ್ವನಿವ್ಯವಸ್ಥೆಗೆ ಒಳಪಟ್ಟು ಹುಟ್ಟುತ್ತದೆ. ಆದುದರಿಂದ ವಾಕಸಂಪ್ರದಾಯತೆ ಮತ್ತು ನಿತ್ಯಪರಿವರ್ತನಶೀಲತೆಗಳು ಆಡುಭಾಷೆಯಂತೆ ಜಾನಪದ ಸಾಹಿತ್ಯಕ್ಕೂ ಲಕ್ಷಣಗಳಾಗಿರುವ ಕಾರಣ ಆಡುಮಾತನ್ನು ಹಿಡಿದಿಡುವ ಎರಡು ವಿಧಾನಗಳಾದ ಲಿಪಿಬದ್ಧಗೊಳಿಸುವಿಕೆ ಮತ್ತು ಧ್ವನಿಮುದ್ರಣಗೊಳಿಸುವಿಕೆಗಳನ್ನು ಜಾನಪದ ಸಾಹಿತ್ಯಕ್ಕೂ ಅನ್ವಯಿಸಬಹುದು. ಅಂದರೆ ಆಡುಭಾಷೆಯನ್ನು ಹಿಡಿದಿಡುವಂತೆ ಜಾನಪದ ಸಾಹಿತ್ಯವನ್ನು ಹಿಡಿದಿಡುವುದೇ ಸೂಕ್ತ ಕ್ರಮವಾಗಿದೆ.

ಭಾಷಾವಿಜ್ಞಾನಿಗಳು ಭಾಷೆಯನ್ನು ಹಿಡಿದಿಡಲು ಧ್ವನಿಲಿಪಿಯನ್ನು (Phonetic script) ಬಳಸುತ್ತಾರೆ. ಧ್ವನಿಲಿಪಿಯು ಸ್ಥೂಲಧ್ವನಿಲಿಪಿ (Broad phonetic script) ಸೂಕ್ಷ್ಮಧ್ವನಿಲಿಪಿ (narrow phonetic script) ಎಂದು ಎರಡು ತೆರನಾಗಿದೆ. ಇವುಗಳಲ್ಲಿ ಒಂದು, ಭಾಷೆಯ ಸ್ಥೂಲರೂಪವನ್ನು ಹಿಡಿದರೆ ಇನ್ನೊಂದು ಸ್ಥೂಲದೊಂದಿಗೆ ಸೂಕ್ಷ್ಮರೂಪವನ್ನೂ ಹಿಡಿಯುತ್ತದೆ. ಇವುಗಳಲ್ಲಿ ಈ ಸೂಕ್ಷ್ಮ ಧ್ವನಿಲಿಪಿಯಿಂದ ಜಾನಪದಗದ್ಯವನ್ನು ಹಿಡಿಯಬಹುದು. ಆದರೆ ಪದ್ಯಕ್ಕೆ ಇನ್ನೂ ಹೆಚ್ಚಿನದಾಗಿ ಸ್ವರಪ್ರಸ್ತಾರದ ನೆರವು ಬೇಕಾಗುತ್ತದೆ. ಆದುದರಿಂದ ಇಲ್ಲಿ ಸ್ವರಪ್ರಸ್ತಾರವೆಂಬ ಹೆಚ್ಚಿನ ಸಂಕೇತಗಳನ್ನೂ ಬಳಸಬೇಕಾಗುತ್ತದೆ. ಕನ್ನಡ ಸೂಕ್ಷ್ಮಧ್ವನಿಲಿಪಿಯನ್ನು ನಾವು ಇನ್ನೂ ರೂಪಿಸಿಕೊಳ್ಳಬೇಕಾಗಿದೆ ಎಂಬುದನ್ನು ಬಿಟ್ಟರೂ ಈ ಸೂಕ್ಷ್ಮ ಧ್ವನಿಲಿಪಿ ಮತ್ತು ಸ್ವರಪ್ರಸ್ತಾರಗಳ ಬಳಕೆ ತುಂಬ ಯಾಂತ್ರಿಕವಾಗಬಹುದೇನೋ ವಿಚಾರಿಸಬೇಕು.


ಹೀಗೆ ಸೂಕ್ಷ್ಮವನ್ನು ಹಿಡಿಯಬೇಕೆಂದು ಎಷ್ಟು ಪ್ರಯತ್ನಿಸಿದರೂ ಅತಿಸೂಕ್ಷ್ಮಗಳು ಉಳಿದುಕೊಂಡು ಬಿಡುತ್ತವೆ. ಕಾರಣ ಜಾನಪದಸಾಹಿತ್ಯದ ನಿಜವಾದ ಸಂಪಾದನಾ-ಕಾರ್ಯವೆಂದರೆ (ಕೆಲವುಟ್ಟಿಗೆ ಇದೂ ಅಸಮರ್ಪಕ) ಧ್ವನಿಮುದ್ರಣಕಾರ್ಯವೇ ಆಗಿದೆ. ಇದರಿಂದ ಗದ್ಯಪಾಠವನ್ನು Supra segmental feature ಸಹಿತ, ಪದ್ಯಪಾಠವನ್ನು Supra segmental feature ಮತ್ತು ಧಾಟಿಸಹಿತ ರಕ್ಷಿಸಿಕೊಂಡತಾಗುತ್ತದೆ. ಒಟ್ಟಿನಲ್ಲಿ

1. ಕಾಲ, ದೇಶ, ಸಮಾಜ, ಸಂದರ್ಭ, ವ್ಯಕ್ತಿ– ಎಂಬ ಪಂಚಸೂತ್ರಮಾನಿತ ಮತ್ತು ಅರ್ಥವತ್ತಾದ ಪಾಠವನ್ನು ಸ್ವೀಕರಿಸಬೇಕು.

2. ಈ ಸ್ವೀಕರಣವನ್ನು ಸರ್ವಸಮರ್ಪಕವಾದ ಮಾಧ್ಯಮದ (ಈಗಿನ ಮಟ್ಟಿಗೆ ಧ್ವನಿ ಮುದ್ರಿಕೆಯು) ಮೂಲಕ ಪ್ರಕಟಿಸಬೇಕು.

ಹೀಗೊಮ್ಮೆ ಸಂಪಾದಿಸಿದರೆ ಜಾನಪದಸಾಹಿತ್ಯಸಂಪಾದನೆಯ ಕಾರ್ಯ ಮುಗಿದೇ-ಬಿಟ್ಟಿತೆನ್ನುವಂತಿಲ್ಲ. ಶಿಷ್ಟಸಾಹಿತ್ಯ ಅರ್ಥದೃಷ್ಟಿಯಿಂದ ''ಇದು ನಿಚ್ಚಂ ಪೊಸತು'' ಆಗಿದ್ದರೆ ಜಾನಪದಸಾಹಿತ್ಯ ಅರ್ಥ ಮತ್ತು ರೂಪವೆಂಬ ಉಭಯದೃಷ್ಟಿಯಿಂದಲೂ ''ಇದು ನಿಚ್ಚಂ ಪೊಸತು'' ಆಗುತ್ತಲಿರುತ್ತದೆ. ಕಾರಣ ಕೆಲವು ಮೈಲುಗಳ ಅಂತರ ದಲ್ಲಿಯೇ ಕೆಲವು ವರ್ಷಗಳ ಅಂತರದಲ್ಲಿಯೇ ಈ ಸಂಪಾದನಕಾರ್ಯ ಮತ್ತೆಮತ್ತೆ ನಡೆಯಬೇಕಾಗುತ್ತದೆ. ಇದಲ್ಲದೆ ಜಾನಪದಸಾಹಿತ್ಯಸಂಪಾದನಕಾರ್ಯವನ್ನು ಆಯಾ ಪ್ರದೇಶದ ಜನಪದವ್ಯಾಸಂಗಿಗಳಿಗೆ ಬಿಟ್ಟುಕೊಡಬೇ ಒಂದೇ ಪ್ರದೇಶದವರು ಎಲ್ಲ ಪ್ರದೇಶ ಗಳ ಗುತ್ತಿಗೆ ಹಿಡಿದರೆ ಅಲ್ಲಲ್ಲಿಯ ಎಷ್ಟೋ ಸೂಕ್ಷ್ಮ ಪಲಕುಗಳು ಅವರ ಕಿವಿಗೆ ಕೇಳದೇ ಮನಸ್ಸಿಗೆ ಮುಟ್ಟದೆ ಹೋಗಬಹುದು. ಆದುದರಿಂದ ಜಾನಪದಸಾಹಿತ್ಯ ಸಂಪಾದನೆ ಯಲ್ಲಿ ಪಾಳೆಯಗಾರಿಕೆ ಅಪಾಯಕಾರಿಯೆಂದೇ ಹೇಳಬೇಕು.

ಕೊನೆಯದಾಗಿ ಪ್ರಕಟನ ವ್ಯವಸ್ಥೆಯ ಬಗೆಗೆ ಕೆಲವು ಮಾತುಗಳು. ಒಬ್ಬ ವ್ಯಕ್ತಿ ಯಿಂದಲೋ ಅನೇಕ ವ್ಯಕ್ತಿಗಳಿಂದಲೋ ಪಡೆದು ಪರಿಷ್ಕರಿಸಿದ ಜಾನಪದಸಾಹಿತ್ಯವನ್ನು ವರ್ಗೀಕರಣಗೊಳಿಸಿ ಬೇರೆಬೇರೆ ಪುಸ್ತಕಗಳ ಮೂಲಕ ಇಲ್ಲವೆ ಒಂದೇ ಪುಸ್ತಕದಲ್ಲಿ ಉಪಶೀರ್ಷಿಕೆ ಕೊಟ್ಟು ಪ್ರಕಟಿಸಬೇಕು. ಇದನ್ನು ಬಿಟ್ಟು ಕೈಗೆ ಸಿಕ್ಕ ಸಾಹಿತ್ಯವನ್ನು ಕಲಸುಮೇಲೋಗರದಂತೆ ಪ್ರಕಟಿಸಿದರೆ ಅಲ್ಲಿ ಒಂದು ಬಗೆಯ ಅವ್ಯವಸ್ಥೆ ಕಂಡು ಬಂದು ಅಭ್ಯಾಸಿಗೆ ತೊಂದರೆಯುಂಟಾಗುತ್ತದೆ. ಆದುದರಿಂದ ಸ್ಥೂಲ ಮಾರ್ಗ ದರ್ಶನಕ್ಕಾಗಿ ವಾಗ್ರೂಪದ ಜನಪದವನ್ನು ಹೀಗೆ ಬಿಡಿಸಿಹೇಳಬಹುದು.


ವಾಗ್ರೂಪದ ಜನಪದ
ಜಾನಪದ ಭಾಷೆ
ಜಾನಪದ ಸಾಹಿತ್ಯ
ಶ್ರವ್ಯ
ದೃಶ್ಯ
ಗದ್ಯ
ಪದ್ಯ
ಹಗಲು
ರಾತ್ರಿ
ಹಿರಿಯ ಪ್ರಕಾರ
ಕಿರಿಯ ಪ್ರಕಾರ
ಗಾದೆ
ಒಗಟು
ಒಡಪು
ಗಂ.ಹಾಡು
ಹೆಂ.ಹಾಡು
ಮ.ಹಾಡು
ಸೂತ್ರ
ಛಾಯೆ
ವ್ಯಕ್ತಿ
ಕಥೆ
ಬಯಲಾಟದ ಮಾತು
ಉಪಜೀವನ
ಉತ್ಸವ
ಉತ್ಸಾಹ
ಮೂಡಲಪಾಯ
ಪಡುವಲಪಾಯ
ಪೌರಾಣಿಕ
ಐತಿಹಾಸಿಕ
ಸಾಮಾಜಿಕ
ಉಪಜೀವನ
ಉತ್ಸವ
ಉತ್ಸಾಹ
ಹಬ್ಬ ಹುಣ್ಣಿವೆ
ಮಂಗಲ ಪ್ರಸಂಗ
ದೊಟ್ಟಾಟ
ಸಣ್ಣಾಟ
ಸದರ ಮಾತು
ಸಂಭಾಷಣೆ ಮಾತು
ದುಡಿಮೆ
ವಿರಾಮ
ದುಡಿಮೆ
ವಿರಾಮ
ಯಕ್ಷಗಾನ
ಪ್ರಸಂಗ
ಬಡಗಪಾಯ
ತೆಂಕಪಾಯ
ಬಡಗತಿಟ್ಟು
ತೆಂಕತಿಟ್ಟು

ಜಾನಪದಸಾಹಿತ್ಯ ಸಂಪಾದನೆಗೂ ಆದಿಯಲ್ಲಿ ಪ್ರಸ್ತಾವನೆ ಅಂತ್ಯದಲ್ಲಿ ಅನುಬಂಧಗಳು ಅತ್ಯವಶ್ಯ. ಆದರೆ ನಮ್ಮ ಬಹಳಷ್ಟು ಪ್ರಸ್ತಾವನೆಗಳು ಆತ್ಮಪ್ರಶಂಸೆಯ ಅತಿರೇಕಗಳೋ ಇಲ್ಲವೆ ಅನ್ಯಭಾಷೆಯ ಅನುಕರಣಗಳೋ ಎನಿಸಿಬಿಟ್ಟವೆ. "ಇವರಿಗೆ ಸ್ವಂತ ಆಲೋಚನೆಗಿಂತ ಇಂಗ್ಲೀಷ ವ್ಯಾಮೋಹ ಹೆಚ್ಚು. ಇಂಗ್ಲೀಷ Balladಗೆ ಮೊದಲು "ಲಾವಣಿ" ಎಂದು ತಪ್ಪಾಗಿ ಅನುವಾದಿಸಿಕೊಂಡು, ಅದನ್ನು ಉಳಿಸಿಕೊಳ್ಳುವುದಕ್ಕೆ ವ್ಯರ್ಥಸಾಹಸ ಮಾಡುತ್ತಿದ್ದಾರೆ"[16] ಇವೇ ಮೊದಲಾದ ಆರೋಪಗಳನ್ನು ಇಲ್ಲಿ ಉದಾಹರಿಸಬಹುದು. ಹೀಗೆಯೇ ಅನೇಕ ಆತ್ಮಸ್ತುತಿ–ಪರನಿಂದೆ, ಅನ್ಯಪ್ರಭಾವಗಳು ಪ್ರಸ್ತಾವನೆಯ ಪುಟಗಳನ್ನು ತುಂಬಿದ್ದು ವಿಷಾದದ ಸಂಗತಿಯಾಗಿದೆ. ಕಾರಣ ಕನ್ನಡ ಜಾನಪದಸಾಹಿತ್ಯದ ಬಗ್ಗೆ ಸ್ವೋಪಜ್ಞ ಸಂಶೋಧನೆ (Original research) ಯನ್ನೊಳಗೊಂಡ ತಾತ್ವಿಕಗ್ರಂಥಗಳು ಹುಟ್ಟಿದಷ್ಟೂ ಈ ಭಾಗ ಬೆಲೆ ಪಡೆಯುತ್ತದೆ.

"ಅನುಬಂಧ" ನಿರೂಪಕರ ಪರಿಚಯ ವೈಶಿಷ್ಟ್ಯಗಳನ್ನು, ಸಾಹಿತ್ಯದ ಸಂದರ್ಭ–ಸಂಪ್ರದಾಯಗಳನ್ನು, ಟಿಪ್ಪಣಿ ಪದಕೋಶ ಇತ್ಯಾದಿಗಳನ್ನು ಒಳಗೊಳ್ಳಬೇಕು. ಇಂಥ ಅನುಬಂಧಗಳು ಅಭ್ಯಾಸಿಗೆ ತುಂಬ ಸಹಾಯಕಾರಿಯೆಂದು ಬೇರೆ ಹೇಳಬೇಕಿಲ್ಲ.

ಜಾನಪದಸಾಹಿತ್ಯವು ಸಾಹಿತ್ಯ, ಭಾಷಾಶಾಸ್ತ್ರ, ಮಾನವಶಾಸ್ತ್ರ, ಸಮಾಜಶಾಸ್ತ್ರ ಮೊದಲಾದವುಗಳ ವಸ್ತುವಾಗಿರುವುದರಿಂದ ಸಂಪಾದಕನಿಗೆ ಇವುಗಳ ಆಳವಾದ ಜ್ಞಾನ ಅವಶ್ಯವಿದೆ. ಅಂದರೆ ಶ್ರೇಷ್ಠಭಾಷಾವಿಜ್ಞಾನಿಗಳಾದ ಗ್ರಿಮ್‌ಸಹೋದರರೂ ಶ್ರೇಷ್ಠ ಮಾನವಶಾಸ್ತ್ರಜ್ಞ ಜೇಮ್ಸ್ ಜಾರ್ಜ್ ಫ್ರೇಜರ್ ಮೊದಲಾದವರೂ ಜಾನಪದ ಕ್ಷೇತ್ರಕ್ಕೆ ಮೂಲಭೂತ ಕಾಣಿಕೆ ನೀಡಿರುವುದನ್ನು ನೆನೆದರೆ, ಜಾನಪದಸಾಹಿತ್ಯಸಂಪಾದನಕ್ಷೇತ್ರವನ್ನು ಸಾಹಿತಿಗಳ ಜೊತೆ ಇಂದು ಭಾಷಾವಿಜ್ಞಾನಿ, ಸಮಾಜಶಾಸ್ತ್ರಜ್ಞ ಮೊದಲಾದವರು ಪ್ರವೇಶಿಸುವುದು ಅವಶ್ಯವಿದೆಯೆನಿಸುತ್ತದೆ. ಈ ಜಿಜ್ಞಾಸುಗಳ ಸಂಯುಕ್ತ ದುಡಿಮೆಯಿಂದ 'ಸಂಪಾದನೆ' ಗಳು ಶಾಸ್ತ್ರಶುದ್ಧವಾಗುವುದರಲ್ಲಿ ಸಂದೇಹವಿಲ್ಲ.*

---

16. ಕರ್ನಾಟಕದ ಜನಪದ ಕಾವ್ಯಗಳು (ಡಿ. ಲಿಂಗಯ್ಯ) ಪು. ೩೭.

* ೧೯೭೭–೭೮ನೆಯ ವರ್ಷದ "ರಾಷ್ಟ್ರೀಯ ಉಪನ್ಯಾಸ"ಗಳ ಅಂಗವಾಗಿ ಮದ್ರಾಸ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ನೀಡಿದ "ಸಾಹಿತ್ಯ ಸಂಪಾದನೆ" ಎಂಬ ಮೂರು ಉಪನ್ಯಾಸಗಳ ಒಂದು ಭಾಗ ಈ ಲೇಖನ. ಈ ಅವಕಾಶವನ್ನು ನೀಡಿದ ವಿಶ್ವವಿದ್ಯಾಲಯದ ಧನಸಹಾಯ ಆಯೋಗಕ್ಕೂ, ಮದ್ರಾಸ ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೂ ಅದರ ಮುಖ್ಯಸ್ಥರಾದ ಡಾ. ಕೆ. ಕುಶಾಲಪ್ಪಗೌಡ ಅವರಿಗೂ ಕೃತಜ್ಞತೆಗಳು.

# ಶಾಸನಪದ ಸೂಚಿ

● ಚೆನ್ನಕ್ಕ ಎಲಿಗಾರ

## 'ವ' ವಿಭಾಗ

## 'ವ' ವಿಭಾಗ

## 'ವ' ವಿಭಾಗ

## 'ವ' ವಿಭಾಗ



## 'ಶ' ವಿಭಾಗ

## 'ಶ' ವಿಭಾಗ

## 'ಶ' ವಿಭಾಗ



## 'ಸ' ವಿಭಾಗ

## 'ಸ' ವಿಭಾಗ

## 'ಸ' ವಿಭಾಗ

## 'ಸ' ವಿಭಾಗ

## 'ಸ' ವಿಭಾಗ

## 'ಸ' ವಿಭಾಗ

## 'ಸ' ವಿಭಾಗ

## ‘ಸ’ ವಿಭಾಗ



## ‘ಹ’ ವಿಭಾಗ

## 'ಹ' ವಿಭಾಗ

## 'ಹ' ವಿಭಾಗ

## 'ಹ' ವಿಭಾಗ

## 'ಹ' ವಿಭಾಗ

## 'ಹ' ವಿಭಾಗೆ



( ಮುಂದುವರಿದಿದೆ. )

# ಮಹಾಸತಿ ವೀರದಿಮ್ಮಮ್ಮ :

● ಕೃಷ್ಣಮೂರ್ತಿ ಹನೂರ

ಅಕ್ಷರ ರೂಪಕ್ಕಿಳಿದಿರುವ ಜನಪದ ಕಥನ ಗೀತೆಗಳಲ್ಲಿ ಐತಿಹಾಸಿಕ ವಸ್ತುಗಳನ್ನೇ ಆಧಾರವಾಗಿಟ್ಟುಕೊಂಡು ರಚಿತವಾಗಿರುವ ಕಥೆಗಳು ತುಂಬ ವಿರಳ. ಕೇವಲ ಅಲ್ಲೊಬ್ಬ ಇಲ್ಲೊಬ್ಬ ಪಾಳೆಯಗಾರರನ್ನು ಕುರಿತು ಕೆಲವು ಗೀತೆಗಳು ಮಾತ್ರ ದೊರೆತಿವೆ. ನಾಡಿನ ಇತಿಹಾಸದ ಪರಂಪರೆಯತ್ತ ದೃಷ್ಟಿ ಹರಿಸಿದರೆ ಈಗ ದೊರೆತಿರುವ ಐತಿಹಾಸಿಕ ಕಥನ ಗೀತೆಗಳು ಎಷ್ಟು ಕಡಿಮೆ ಎನ್ನುವದು ಮನವರಿಕೆಯಾಗದಿರದು. ಐತಿಹಾಸಿಕ ವ್ಯಕ್ತಿಗಳಾದ ಕುಮಾರರಾಮ,ಪಿರಿಯಾಪಟ್ಟಣದ ವೀರರಾಜು ದೊರೆ, ಚಿತ್ರದುರ್ಗದ ಮದಕರಿ ನಾಯಕ, ಕಿತ್ತೂರಚೆನ್ನಮ್ಮ, ಸಂಗೊಳ್ಳಿರಾಯಣ್ಣ, ಮಾಗಡಿ ಕೆಂಪೇಗೌಡಾ, ಸರ್ಜಪ್ಪನಾಯಕ ಮುಂತಾದವರನ್ನು ಕುರಿತ ಸ್ವಲ್ಪ ಮಟ್ಟಿನ ಸಾಹಿತ್ಯ ಮಾತ್ರ ಪ್ರಕಟಿವಾಗಿದೆ. ಕಥನ ಕವನಗಳ ಎಲ್ಲ ಲಕ್ಷಣಗಳನ್ನೂ ಒಳಗೊಂಡಿರುವ ಈ ಗೀತೆಗಳು ನಾಡಿನ ಇತಿಹಾಸ ದೃಷ್ಟಿಯಿಂದಲೂ ಜನಪದಸಾಹಿತ್ಯ ದೃಷ್ಟಿಯಿಂದಲೂ ಅಪೂರ್ವವಾದ ಗೀತೆಗಳು.[1]

ಈ ಐತಿಹಾಸಿಕ ಗೀತೆಗಳ ಜತೆಗೆ ಚಿತ್ರದುರ್ಗಜಿಲ್ಲೆಯ ಪೂರ್ವಕ್ಕಿರುವ ಹರ್ತಿ ಬಯಲಿನ [2] ಮಹಾಸತಿಯರ ಕಥನಗೀತೆಗಳನ್ನೂ ಸೇರಿಸಬಹುದು. ಇತರ ಕಡೆಗಳಲ್ಲೂ ಮಹಾಸತಿಯರನ್ನು ಕುರಿತ ಕಥನ ಗೀತೆಗಳು ಅಪರೂಪಕ್ಕೆ ದೊರೆಯುತ್ತವಾದರೂ ಹರ್ತಿ ಬಯಲಿನಲ್ಲಿ ಈ ರೀತಿಯ ಗೀತೆಗಳ [3] ಸಂಖ್ಯೆ ಹಾಗೂ ಹಾಡುವವರೂ ಹೆಚ್ಚು ದೊರೆಯುತ್ತಾರೆ.

---

1. ಈ ಅಭಿಪ್ರಾಯವನ್ನು ಪರಮೇಶ ಅವರ 'ಐತಿಹಾಸಿಕ ಕಥನಗೀತೆಗಳ ಸಂಗ್ರಹಣೆ' ಎಂಬ ಲೇಖನದಿಂದ ತೆಗೆದುಕೊಳ್ಳಲಾಗಿದೆ.
2. ಚಿತ್ರದುರ್ಗ ಜಿಲ್ಲೆಯ ಪೂರ್ವ ಭಾಗಕ್ಕೆ ಕೆಲವು ಸ್ಥಳಗಳ ಸೀಮೆಯನ್ನು 'ಹರ್ತಿಬಯಲು' ಎಂದು ಪಾವಗಡ 40ನೆಯ ಶಾಸನ ಕರೆಯುತ್ತದೆ. '........ ಹರತಿಯ ವೀರ ಹೊಟ್ಟಂಣ ನಾಯಕರಿಗೆ ಪಾಲಿಸಿದಂತ ರಾಯಸ್ತದ ನಿರೂಪದ ಪಟ್ಟಿಪ್ರತಿ ಪೂರ್ವ, ನಿಮಗೆ ಸಲುವಂತಾ ಸೀಮೆ ದೊಡೇರಿ, ಸೀರೆಹ, ತಾವರೆಗೆರೆ, ಪಿರಿಯೂರು. ಅಯಿಮಂಗಲ, ನಿಡುಗಲ್ಲು. ಯಿದಕೆ ಸಲುವಂತಾ ಸೀಮೆ.......' ಹೀಗೆಂದು ಶಾಸನ ಹರ್ತಿಬಯಲ ಸೀಮೆಯನ್ನು ಹೇಳುತ್ತದೆ. ಇದರಿಂದ ಈ ಪ್ರದೇಶದ ಅಳತೆಯಲ್ಲಿ ಸಿಕ್ಕುವ ಕಥನಗೀತೆಗಳನ್ನೆಲ್ಲ ಸಂಗ್ರಹಿಸಿ 'ಹರ್ತಿಯ ಬಯಲ ಜನಪದ ಕಥನಗೀತೆಗಳು' ಎಂದು ಹೆಸರಿಸಲಾಗಿದೆ. Pavagada-46 Vol. XII E.C. ಕಾಲ : 1640 A. D.
3. ಮಹಾಸತಿಯರನ್ನು ಕುರಿತು ಬಹಳವಾಗಿ ಪ್ರಚಲಿತವಿರುವವೇಂದರೆ ಕೊಂಡದ ಕಾಟವ್ವ, ಕೊಂಡದ ಚಿತ್ರವ್ವ, ವೀರಚಿಕ್ಕಣ್ಣ, ಕೊಂಡದ ಕೆಂಚವ್ವ. ಇವುಗಳಲ್ಲಿ ವೀರದಿಮ್ಮವ್ವನ ಕಥನ ಗೀತೆಯೇ ವಿಸ್ತಾರವಾದುದು.

ಪ್ರಸ್ತುತ ವೀರದಿಮ್ಮವ್ವನ ಹಾಡು ಹರ್ತಿ ಕೋಟೆ, ಹಿರಿಯಟ್ಟಿ, ಮದನ ಕುಂಟೆ ಗ್ರಾಮಗಳಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಗೀತೆಯಲ್ಲಿ ಬರುವ ಇತರ ಗ್ರಾಮಗಳೆಂದರೆ ಧರ್ಮ-ಪುರ, ಬೂತನ ಗುಡಿ, ಸಾಣೆಕೆರೆ, ಹಾಗೂ ಹಿಂದಿನ ಕಾಲಕ್ಕೆ ಒಂದು ಪಾಳೆಯ ಪಟ್ಟಾಗಿದ್ದ ಸಿರಾ. ಈ ಎಲ್ಲ ಸ್ಥಳಗಳೂ ಸುಮಾರು ಹದಿನೈದು ಮೈಲಿಗಳ ಅಂತರದಲ್ಲಿಯೇ ಇವೆ. ಕಥೆ ಮುಖ್ಯವಾಗಿ ನಡೆಯುವದು ಹಿರಿಯಟ್ಟಿ ಮತ್ತು ಹರ್ತಿಕೋಟೆ ಸ್ಥಳಗಳಲ್ಲಿ. ಕಥಾ-ನಾಯಕ ನಾಗಣ್ಣನ ಸ್ಥಳ ಹಿರಿಯಟ್ಟಿಯಾದರೆ ತಿಮ್ಮವ್ವಳದು ಹರ್ತಿಕೋಟೆ. ಆಕೆ ಮದುವೆಯಾಗಿ ಗಂಡ ವೀರ ನಾಗಣ್ಣನ ಮನೆಗೆ ಬಂದಳೆನ್ನುವದಾದರೆ, ಹಿರಿಯ ಟ್ಟಿಗೆ ನಾಗಣ್ಣ ಸಾಣೆಕೆರೆಯ ಲಡಾಯಿಯಲ್ಲಿ ತೀರಿ ಕೊಂಡ ನಂತರ ತಿಮ್ಮವ್ವ ಕೊಂಡವೇರ ಬಯಸಿ ಮಹಾಸತಿಯಾದುದು. ಹಿರಿಯಟ್ಟಿ ಹಾಗೂ ಮದನ ಕುಂಟೆ ಗ್ರಾಮದ ಮಧ್ಯಸ್ಥಳ ದಲ್ಲಿ ಈಗಲೂ ತಿಮ್ಮವ್ವ ಕೊಂಡಕ್ಕೆ ಬಿದ್ದ ಸ್ಥಳವನ್ನು ಸ್ಪಷ್ಟವಾಗಿ ಗುರುತಿಸಬಹುದು. ಕೊಂಡದ ಅಗಲಕ್ಕೆ ಎತ್ತರವಾದ ಜಗುಲಿಯೊಂದು ಕಟ್ಟಲ್ಪಟ್ಟಿದೆ. ಜಗುಲಿಯ ಪಕ್ಕಕ್ಕೆ ಹಿರಿದಾದ ಸಾಕಷ್ಟು ವಯಸ್ಸಾಗಿರುವಂತ ಬನ್ನಿಯ ಮರವೊಂದು ಬೆಳೆದಿದೆ. ಜಗುಲಿಯ ಹಿಂದಕ್ಕೆ ಮಾಸ್ತಿಕಲ್ಲು ನಿಲ್ಲಿಸಲ್ಪಟ್ಟಿದೆ. ಆ ಕಲ್ಲು ತಿಮ್ಮವ್ವ ಹಾಗೂ ನಾಗಣ್ಣ ಇವರ ದೆಂಬುದು ಸ್ಪಷ್ಟ. ತಿಮ್ಮವ್ವಳ ತುರುಬನ್ನು ಸುಂದರವಾಗಿ ಬಿಡಿಸಲಾಗಿದ್ದು, ಜಡೆ ನಡುವಿನ ಹಿಂಭಾಗದಲ್ಲಿ ಹೊರಕ್ಕೆ ಕಾಣಿಸುವಂತಿದೆ. ತಿಮ್ಮವ್ವ ಒಂದು ಕೈಯಲ್ಲಿ ಕನ್ನಡಿಯನ್ನು, ಮತ್ತೊಂದು ಕೈಯಲ್ಲಿ ನಿಂಬೇಹಣ್ಣನ್ನೂ ಹಿಡಿದಿದ್ದಾಳೆ. ಪಕ್ಕದಲ್ಲಿಯೇ ನಾಗಣ್ಣ ಮಲ್ಲ ಗಚ್ಚೆ ಹಾಕಿದವನಾಗಿ ಬಲಗೈಯಲ್ಲಿ ಬಿಲ್ಲು ಹಿಡಿದಿದ್ದಾನೆ. ಇಲ್ಲಿಗೆ ಪೂಜೆ ಪುನಸ್ಕಾರಗಳು, ಹರಕೆಗಳೂ ಸಲ್ಲುವುದುಂಟು. ಮಕ್ಕಳಿಲ್ಲದವರೂ ಇಲ್ಲಿಗೆ ಹರಕೆ ಕಟ್ಟಿಕೊಳ್ಳುತ್ತಾರೆ.[4]

ಈ ಸ್ಥಳದಿಂದ ಸುಮಾರು ಐವತ್ತು ಅರುವತ್ತು ಹೆಜ್ಜೆಗಳ ದೂರಕ್ಕೆ ಮತ್ತೊಂದು ಮಾಸ್ತಿಕಲ್ಲು ಇರಿಸಲ್ಪಟ್ಟಿದೆ. ಅದರ ಪಕ್ಕಕ್ಕೆ ಜಗುಲಿಯಾಗಲಿ, ಯಾವುದೇ ರೀತಿಯ ರಕ್ಷಣೆಯಾಗಲಿ ಇಲ್ಲ. ಅದರ ಬಗೆಗೂ ಗ್ರಾಮಸ್ಥರು ಒಂದು ವಿವರಣೆ ಕೊಡುತ್ತಾರೆ.[5]

**ಕಥೆಯ ಹಿನ್ನೆಲೆ :** ಈ ಗೀತೆಯನ್ನು ಹಾಡುವವರು ಐದು ಭಾಗಗಳಲ್ಲಿ ಹಾಡು-ತ್ತಾರೆ. ವೀರ ನಾಗಣ್ಣ ಹಿರಿಯಟ್ಟಿಯಲ್ಲಿನ ಹಾಲು ಮಜ್ಜಿಗೆ ಮಾರುವ ಕಾಯಕದ ಜಂಪ-ವ್ವಳ ಮಗ. ತಾಯಿಯದು ಹಾಲು ಮಾರುವ ಕಾಯಕವಾದರೆ ನಾಗಣ್ಣನದು ದನ

---

4. ಮದನ ಕುಂಟೆ ಗ್ರಾಮದ ಸ್ವಲ್ಪ ದೂರಕ್ಕಿರುವ ಕೊಂಡದ ಸ್ಥಳಕ್ಕೆ ಕರೆದುಕೊಂಡು ಹೋಗಿ ವಿವರಣೆಯನ್ನೆಲ್ಲ ಕೊಟ್ಟವರು ಗ್ರಾಮದ ಪ್ರೈಮರಿ ಶಾಲೆಯ ಅಧ್ಯಾಪಕರಾದಂಥ ಡಿ. ತಿಮ್ಮಯ್ಯನವರು ಹಾಗೂ ಅವರ ಸ್ನೇಹಿತರಾದ ಸಿ. ವೀರಪ್ಪನವರು.

5. ಈ ಮಾಸ್ತಿಕಲ್ಲಿನ ವಿಚಾರವಾಗಿ ಮುಂದಿನ ಪುಟದ 'ಕಿಚ್ಚಿಗಂಜೋರ ಮಗನಲ್ಲ' ಟಿಪ್ಪಣಿಯ ವಿವರಣೆಯನ್ನು ನೋಡಿ.

ಕಾಯುವ ಕಾಯಕ. ಮೇಯುವ ದನಗಳ ಮೇಲೆ ಎರಗಿ ಬರುವ ಹುಲಿಯನ್ನು ಎತ್ತಿ ಕುಕ್ಕುವಷ್ಟು ಪರಾಕ್ರಮಿ. ಸಿರಾದವರೆವಿಗೂ ಹೋಗಿ ಅರಮನೆಯ ಪಂಜರದ ಹುಲಿಯನ್ನು ಹೊಡೆದ. ಪಾಳ್ಯೆಗಾರ ರಂಗಣ್ಣನಾಯಕ ಚಿನ್ನದಸತ್ತಿಗೆ, ಭೂಚಕ್ರದ ಕೊಡುಗೆ ಕೊಟ್ಟು ಸತ್ಕರಿಸಿದ. ಮತ್ತೆ ನಾಗಣ್ಣ ತನ್ನ ಸಣ್ಣ ದಂಡಿನೊಡನೆ ಹರ್ತಿ ಕೋಟೆಗೆ ಹೋಗಿ ಅಲ್ಲಿ ಊರ ಹೆಬ್ಬಾಗಿಲಿನಲ್ಲಿ ತಮ್ಮ ಚಲ್ಲಣ, ಚಡಾವು ಕಟ್ಟಿ ಎಲ್ಲರನ್ನೂ ಯುದ್ಧಕ್ಕೆ ಕರೆದು ಸೋಲಿಸುತ್ತಿದ್ದ. ಕಂಕಜಟ್ಟಿ ಬಾಣತಂಮ್ಮ ಇವರನ್ನು ಕೊಂದು ಕೀರ್ತಿಗಳಿಸಿದ. ಇಂಥ ವೀರನನ್ನು ವಿವಾಹವಾಗಲು ಬಯಸಿದವರು ಹಲವು ಹೆಂಗೂಸುಗಳು. ಹರ್ತಿ ಕೋಟೆಯ ತಿಮ್ಮವ್ವನೊಡನೆ ನಾಗಣ್ಣನ ವಿವಾಹವಾಯಿತು. ಕೆಲವು ವರ್ಷಗಳಲ್ಲಿಯೇ ನಾಗಣ್ಣ ಸಾಣೆ ಕೆರೆಯ ಬಳಿ ಯುದ್ಧದಲ್ಲಿ ತೀರಿ ಕೊಂಡ. ತಿಮ್ಮವ್ವ ತನ್ನ ಎರಡು ಮಕ್ಕಳನ್ನೂ ಬಂಧು ಬಳಗವನ್ನೂ ಬಿಟ್ಟು ಕೊಂಡಕ್ಕೆ ನಡೆದು ಮಹಾಸತಿಯಾದಳು.

## ಗೀತೆಗೆ ಸಂಬಂಧಿಸಿದ ಕೆಲವು ಟಿಪ್ಪಣೆಗಳು :

**ಸಿರಾದ ರಂಗಣ್ಣನಾಯಕ :** ನಾಗಣ್ಣನ ಪರಾಕ್ರಮವನ್ನು ಪರೀಕ್ಷಿಸಿದವನು ಸಿರಾದ ರಂಗಣ್ಣನಾಯಕನೆಂದು ಗೀತೆಯಲ್ಲಿ ಆರಂಭಕ್ಕೇ ಬರುತ್ತದೆ. ಸಿರಾ ತಾಲ್ಲೋಕಿನ ನಾಲ್ಕು ಶಾಸನಗಳಲ್ಲಿ ರಂಗಣ್ಣನಾಯಕರುಗಳು ನಾಲ್ಕು ಜನ ಬರುತ್ತಾರೆ.[6] ಕ್ರಮವಾಗಿ. ರಂಗಪ್ಪನಾಯಕ, ಇಮ್ಮಡಿರಂಗಪ್ಪನಾಯಕ, ಕಸ್ತೂರಿರಂಗಪ್ಪರಾಜ, ಮುಮ್ಮಡಿರಂಗಪ್ಪ ನಾಯಕ ಎಂಬುದಾಗಿ. ಈ ನಾಲ್ಕು ಜನರಲ್ಲಿ ಯಾರನ್ನು ಈ ಕಥನಗೀತೆಯ–

ಬಾಲಾನ ಇಡಿದ ಗಳಿಗೇಲಿ ಬಾಲಾಗ ಬಂದುನ
ನಾರೀಗೆ ಬಂದುನ ಮನಿಯಾಗೆ । ರಂಗಣ್ಣ ನಾಯ್ಕ
ಬಮ್ಮಣ್ಣಗ್ವಾಲೇಯ ಬರೆದಾನೆ ॥

–ಎನ್ನುವ ಪದ್ಯ ನಿರ್ದೇಶಿಸುತ್ತದೋ ತಿಳಿದು ಬರುವದಿಲ್ಲ, ಆದರೂ ಈ ಘಟನೆ ನಡೆದು ಸುಮಾರು ಮುನ್ನೂರೈವತ್ತು ವರ್ಷಗಳು ಸಂದಿರಬಹುದೆಂದು ಊಹಿಸಬಹುದು.

6. ಸಿರಾ 53ರ ಶಾಸನದಲ್ಲಿ ರಂಗಪ್ಪನಾಯಕನ ಉಲ್ಲೇಖವಿದೆ. ಕಾಲ 1580
,, 84ರ ,, ಇಮ್ಮಡಿ ರಂಗಪ್ಪನಾಯಕ ,, ,, 1612
,, 64ರ ,, ಕಸ್ತೂರಿ ರಂಗಪ್ಪರಾಜ ,, ,, 1621
,, 54ರ ,, ಮುಮ್ಮಡಿ ರಂಗಪ್ಪನಾಯಕ ,, ,, 1626
ಮೇಲಿನನಾಲ್ಕು ಶಾಸನಗಳೂ ದಾನಶಾಸನಗಳು–E. C. Vol. 12

**ಹಾಲು ಗುಡ್ಡದಯ್ಯ :** ಹಾಲುಗುಡ್ಡದಯ್ಯ ಅಥವಾ ಹಾಲುಗುಡದಪ್ಪ ಮದನ ಕುಂಟೆ ಗ್ರಾಮದ ಜನಗಳ ಮನೆದೇವರು. ಹಾಲು ಗುಡ್ಡದ ಬಳಿಯೇ ಇರುವ ಗುಡಿಯ ನಿಂಗಣ್ಣ ದೇವರಿಗೆ ಹಾಲುಗುಡ್ಡದಪ್ಪ ಎಂದು ಹೆಸರು ಬಂದಿದೆ. ಈ ದೇವರ ಮೇಲೆ ಪ್ರಚಲಿತವಿರುವ ಕಥನಗೀತೆ ಬಹಳ ದೀರ್ಘವಾದುದು. ಸುಮಾರು ನೂರು ಪುಟಗಳಷ್ಟು ವಿಸ್ತಾರವಾಗಿ ಹಬ್ಬಿಕೊಂಡು ಐತಿಹಾಸಿಕ, ಕಾಲ್ಪನಿಕ ಹಾಗೂ ಕುತೂಹಲ ಘಟನೆಗಳನ್ನೊಳಗೊಂಡಿದೆ ಈ ಕಥನ ಗೀತೆ. ಈ ಹಾಲು ಗುಡ್ಡದಯ್ಯನ ಕಥೆ ಬೇರೆ ಕಡೆಗಳಲ್ಲಿ ನಿಂಗಣ್ಣ 'ಸೆರೆ ಹೋದದ್ದು' ಎಂಬ ಹೆಸರಿನಲ್ಲಿ ಸಿಗುತ್ತದೆ. ಮದನ ಕುಂಟೆ ಗ್ರಾಮದ ಗೊಲ್ಲ ಮತಸ್ಥರು ಹಾಲು ಗುಡ್ಡದಯ್ಯನಿಗೆ ಭಕ್ತರಾಗಿ ನಡೆದುಕೊಳ್ಳುತ್ತಿದ್ದಾರೆ.

**ಸಂದಗಾನಿ ಹಾಗೂ ಕರಡಿನೋರು :** ವೀರದಿಮ್ಮವ್ವ ಗೀತೆಯನ್ನು ಹಾಡುವವರು ಗೊಲ್ಲ ಮತಸ್ಥರು. ಈ ಮತದಲ್ಲಿ ಸಾಕಷ್ಟು ಉಪಕುಲಗಳುಂಟು. ಈ ಉಪಕುಲಗಳಲ್ಲಿ ಚಿಕ್ಕಮುತ್ತಿ ಸಂದಮುತ್ತಿ ಎಂಬುವು ಎರಡು ಪ್ರಮುಖ. ಚಿಕ್ಕಮುತ್ತಿಯ ಕುಲಕ್ಕೆ ಮತ್ತೆರಡು ಉಪ ಕುಲಗಳು : ಮಾರಗಾನಿ ಹಾಗೂ ಪಚ್ಚುಗೊಲ್ಲರು ಸೇರುತ್ತವೆ. ಸಂದಮುತ್ತಿ ಕುಲಕ್ಕೆ ಮುದ್ದೇರು, ಬಮ್ಮಗಳೋರು, ಉಪ್ಪುಗಳೋರು, ಸಜ್ಜೇರು, ಕ್ವಾಣಸೋರು, ಕರಡಿನೋರು, ಹಾಗೂ ದ್ಯಾವರೋರು. ಕಥನಗೀತೆಯಲ್ಲಿ ಸಂದಗಾನಿ ಕುಲಕ್ಕೆ ಸೇರಿದ ನಾಗಣ್ಣನಿಗೂ ಕರಡಿನೋರ ಕುಲಕ್ಕೆ ಸೇರಿದ ತಿಮ್ಮವ್ವನಿಗೂ ವಿವಾಹ ಸಂಬಂಧ ಏರ್ಪಡುತ್ತದೆ. ಆದರೆ ಕೆಲವು ಉಪಕುಲಗಳ ನಡುವೆ ಕೊಳುಕೊಡುಗೆಗಳ ಸಂಬಂಧವಿಲ್ಲ.[7] **'ಕಿಚ್ಚುಗಂಜೋರ ಮಗಳಲ್ಲ'** ಹಾಗೂ **'ದಿಡ್ಡಿ ಬಾಗಿಲ ಆಕುಸ್ತ' :**[8] ಪತಿಯು ತೀರಿಕೊಂಡಾಗ ಸತಿ ಕೊಂಡಕ್ಕೆ ಹೋಗುವುದು ಸಹಜವಾಗಿದ್ದಂತೆ, ಕೆಲವರು ಕೊಂಡದವರೆಗೆ ಹೋಗಿ ಧಗಧಗಿಸಿ ಉರಿವ ಬೆಂಕಿಯನ್ನು ಕಂಡು ಹಿಮ್ಮೆಟ್ಟಿ ಓಡುತ್ತಿದ್ದು, ತಪ್ಪಿಸಿಕೊಳ್ಳಲಿಕ್ಕೆ ಪ್ರಯತ್ನಿಸುತ್ತಿದ್ದುದೂ ಉಂಟು. ಅಂಥವರನ್ನು ಕೊಂಡದ ಸುತ್ತ ನೆರೆದ ಜನ ಓಡಿಹೋಗಿ ಹಿಡಿತಂದು ಕೊಂಡಕ್ಕೆ ಅನಿವಾರ್ಯವಾಗಿ ನೂಕುತ್ತಿದ್ದರು. ಆಕೆಯಬಗ್ಗೆ ಜಿಗುಪ್ಸೆಯನ್ನೂ ತಾಳುತ್ತಿದ್ದರು. ಕೆಲವರು ನಾಳೆ ಕೊಂಡಕ್ಕೆ ಬೀಳುವವಿದ್ದರೆ ರಾತ್ರಿಯೇ ಊರು ಬಿಟ್ಟು ಓಡಿಹೋಗುವ ಸಂದರ್ಭವೂ ಇರುತ್ತಿತ್ತು. ಅಂಥ ಸಂದರ್ಭದಲ್ಲಿ ಊರ ಹಿರಿಯರು ಗ್ರಾಮದ ಹೊರಗಿನ ದಿಡ್ಡಿಬಾಗಿಲನ್ನು ಹಾಕಿಸಿಬಿಡುತ್ತಿದ್ದರು. ಇದನ್ನೇ ಹೇಳುವ ಕಥನಗೀತೆಯ ಪದ್ಯ :

---

7. ಈ ವಿಚಾರವನ್ನೆಲ್ಲ ತಿಳಿಸಿದವರು ಚಿಕ್ಕೇನಹಳ್ಳಿ ಗೊಲ್ಲರಟ್ಟಿಯ ಸಿರಿಯಜ್ಜಿ.

8. '................ ಹೀಗೆ ಗಂಡನಜೊತೆ ಸಾಯದಿದ್ದವರನ್ನು ಜನ ನಿಕೃಷ್ಟವಾಗಿ ನೋಡುತ್ತಿದ್ದರು ............' ಎಂಬ ಬಾರ್ಬೋಸನ ಹೇಳಿಕೆಯನ್ನು ಡಾ॥ ಎಂ. ಚಿದಾನಂದಮೂರ್ತಿಯವರು ತಮ್ಮ 'ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು' ಎಂಬ ಪುಸ್ತಕದಲ್ಲಿ ಕೊಟ್ಟಿರುತ್ತಾರೆ. ಅಲ್ಲದೆ ಈ ಟಿಪ್ಪಣಿಯ ವಿಚಾರವಾಗಿ ಕೆಲವು ಮಾಹಿತಿಗಳನ್ನು ಆರ್. ಶೇಷಶಾಸ್ತ್ರಿಯವರು ತಿಳಿಸಿರುತ್ತಾರೆ.

ಕದ್ದುವೋದಾಳೆಂದು ದಿಡ್ಡಿಗಳ ಆಕುಸ್ತ
ಕದ್ದುವೋಗೋರ ಮಗಳಲ್ಲ। ಕಾಟೇಗೌಡ
ದಿಡ್ಡಿಬಾಗುಲ ತಗುಸಯ್ಯ॥ —ಎಂಬುದಾಗಿ ಬರುತ್ತದೆ.

ಅಲ್ಲದೆ ವೀರದಿಮ್ಮವ್ವನ ಮಹಾಸತಿಕಲ್ಲಿನಿಂದ ಸ್ವಲ್ಪದೂರಕ್ಕಿರುವ ಇನ್ನೊಂದು ಕಲ್ಲಿನಬಗ್ಗೆ ಮದನಕುಂಟೆ ಗ್ರಾಮದ ಜನ, ಆಕೆಯೂಕೂಡ ಗಂಡತೀರಿಕೊಂಡು ಕೊಂಡಕ್ಕೆ ಬೀಳುವವಳಾಗಿ ಬಂದಳೆಂದೂ, ಉರಿವಬೆಂಕಿ ನೋಡಿ ಹಿಂದಕ್ಕೆ ಓಡಲು ಹವಣಿಸಿದಾಗ, ಕೆಲವರು ಜುಟ್ಟುಹಿಡಿದು ಎಳೆದುತಂದು ಕೊಂಡಕ್ಕೆ ನೂಕಿದರೆಂದು ಹೇಳುತ್ತಾರೆ. ಆದರೆ ಎರಡು ಘಟನೆಗಳು ನಡೆದ ಕಾಲದಲ್ಲಿ ಸ್ವಲ್ಪ ಅಂತರವಿರಬಹುದೇನೋ!

**ಗೀತೆಯ ಸಂಗ್ರಹ :** ಹಿರಿಯೂರು ತಾಲ್ಲೋಕು ಮದನಕುಂಟೆ ಗ್ರಾಮದಲ್ಲಿ ಇದನ್ನು ಸಂಗ್ರಹಿಸಲಾಯಿತು. ಈ ಗ್ರಾಮಕ್ಕೆ ವಾಹನಸಂಪರ್ಕವಿಲ್ಲ. ವಾಹನಸಂಚಾರದ ರಸ್ತೆಯಿಂದ ಸುಮಾರು ಎರಡು ಮೂರು ಮೈಲಿ ನಡೆದರೆ ಕೇವಲ ನೂರು, ನೂರೈವತ್ತು ಗುಡಿಸಲುಗಳ ಸ್ಥಳ ಸಿಕ್ಕುತ್ತದೆ. ಈ ಸ್ಥಳ ಮದನಕುಂಟೆ ಗ್ರಾಮಕ್ಕೆ ಸುಮಾರು ಒಂದು ಫರ್ಲಾಂಗ್ ದೂರದಲ್ಲಿ ಒಂದು ಕಾಲಕ್ಕೆ ಅಳಿದು ಹೋದ ಒಂದು ಊರಿದೆ. ಕಟ್ಟಿದ್ದ ದೇವಸ್ಥಾನಗಳೆಲ್ಲ ಬಿದ್ದುಹೋಗಿವೆ. ಪಾಳುಬಿದ್ದ, ಉರುಳಿಹೋದ ಮನೆಗಳನ್ನೂ ಕಾಣಬಹುದು. ವೀರಗಲ್ಲುಗಳು, ವಿಗ್ರಹಗಳು ಅನಾಥವಾಗಿ ಬಿದ್ದಿವೆ. ಗ್ರಾಮಸ್ಥರು ಇದನ್ನು 'ಹಾಳೂರು' ಎಂದು ಕರೆಯುತ್ತಾರೆ. ಅಲ್ಲಿನ ಹಿರಿಯರಾರಿಗೂ ಅಲ್ಲಿ ಊರಿದ್ದುದಾಗಲಿ, ಜನ ವಾಸಿಸುತ್ತಿದ್ದ ನೆನಪಾಗಲಿ ಇಲ್ಲ.

ವೀರದಿಮ್ಮವ್ವ ಗೀತೆಯನ್ನು ಹಾಡಿದವರು ಶಾಂತಮ್ಮ ಮತ್ತು ಕರಿಯಮ್ಮ. ಇವರು ಮುಮ್ಮೇಳಗಾರರಾಗಿ ಹಾಡುತ್ತಿರಬೇಕಾದರೆ ಹಿಮ್ಮೇಳಗಾರರಾಗಿ[9] ಸಿರಿಯಮ್ಮ. ಗಿಡ್ಡಮ್ಮ, ಚಿಕ್ಕಮ್ಮ ಕುಳಿತಿದ್ದರು. ಸಂಗ್ರಹಮಾಡುವಲ್ಲಿ ಮೊದಲು ಗದ್ಯರೂಪದಲ್ಲಿ (ರಾಗವಿಲ್ಲದೆ) ಹೇಳಿಸಿ ಅನಂತರ ರಾಗದ ಧಾಟಿಯಲ್ಲಿ ಹಾಡಿಸಿ ರೆಕಾರ್ಡ್ ಮಾಡಲಾಯಿತು. ಮೊದಲು ಒಮ್ಮೆ ಗದ್ಯರೂಪದಲ್ಲಿ ಹೇಳಿಸುವದೇಕೆಂದರೆ, ರಾಗವಾಗಿ ಹಾಡಲು ತೊಡಗಿದಾಗ ಕೆಲವು ಪದಗಳು ಕಿವಿಗೆ ಕೇಳಿಸದಂತೆ ತೇಲಿಹೋಗುತ್ತವೆ. ಅಂಥ

9. ಈ ಪರ್ತಿಬಯಲಿನಲ್ಲಿ ಯಾವುದೇ ಗೀತೆಯನ್ನು ಹಾಡಬೇಕಾದರೆ ಹಾಡುವವರು ತಮ್ಮನ್ನು ಮುಮ್ಮೇಳ ಹಿಮ್ಮೇಳಗಾರರನ್ನಾಗಿ ವಿಭಾಗಿಸಿಕೊಳ್ಳುತ್ತಾರೆ. ಮುಮ್ಮೇಳದವರೆಂದರೆ ಕಥೆ ಸಂಪೂರ್ಣವಾಗಿ ಹಾಡಲಿಕ್ಕೆ ಬರುವವರು. ಹಿಮ್ಮೇಳದವರಿಗೆ ಕಥೆ ಹಾಡಲಿಕ್ಕೆ ಬಾರದಿರಬಹುದು. ಹಾಗೆಬರದೇ ಇರುವುದರಿಂದ ಹಿಮ್ಮೇಳಗಾರರಾಗಿಹಾಡಿ ಕಥೆಯನ್ನು ಸಂಪೂರ್ಣವಾಗಿ ಹಾಡಲಿಕ್ಕೆ ಕಲಿತುಕೊಳ್ಳುತ್ತಾರೆ. ಮುಮ್ಮೇಳದವರು ಕಲಿಸುವವರಾಗಿಯೂ ಹಿಮ್ಮೇಳದವರು ಕಲಿಯುವವರಾಗಿಯೂ ಇರುತ್ತಾರೆ.

ಪದಗಳನ್ನು ಗುರುತಿಸಲು ಒಮ್ಮೆ ಗದ್ಯದಲ್ಲಿ ಹೇಳಿಸಿ ಅನಂತರ ರೆಕಾರ್ಡ್ ಮಾಡ-ಲಾಗುತ್ತಿತ್ತು. ಒಂದೊಂದು ಕಡೆ, ಹಾಡಿಸದೆ– ರೆಕಾರ್ಡ್ ಕೂಡ ಮಾಡದೆ ಗದ್ಯದ ಧಾಟಿಯಲ್ಲೇ ಹೇಳಿಸಿ ಬರೆದುಕೊಂಡದ್ದೂ ಆಗಿದೆ. ಆದರೆ ಸಂಧಿ ಅಥವಾ ಒಂದು ಭಾಗ ಮುಗಿದು ಇನ್ನೊಂದು ಭಾಗ ಆರಂಭಿಸುವಲ್ಲಿ ತಪ್ಪದೆ ರೆಕಾರ್ಡ್ ಮಾಡಲಾಗಿದೆ. ಏಕೆಂದರೆ ಅಲ್ಲಿ ರಾಗದ ಧಾಟಿ ಬದಲಾಗುವ ಸಂಭವವಿದ್ದು, ಬೇರೆ 'ದನಿ' ಎತ್ತಿಕೊಳ್ಳುತ್ತಾರೆ.

**ಸೊಲ್ಲುಗಳು ಅಥವಾ ದಣೆಗಳು :** ಈ ಕಥನಗೀತೆಗೆ ಮೂರು ಸೊಲ್ಲುಗಳಿವೆ. ಅವು ಕ್ರಮವಾಗಿ,

ಆಡಬ್ಯಾಡಡಿಕೆ ಜೂಜನಾಗಣ್ಣ
ಬ್ಯಾಡಂದರೂನು ಕೇಳಾದೋದ ॥
ಈರಾನೆ ಗೆದ್ದು ಬಾರೋ ಕಾಳಗವ
ಈರಣ್ಣಾನೆ ನೀ ಗೆದ್ದೇಬಾರೋ ॥
ಬಾಳೇಯ ಅಣ್ಣಾ ನೋಡೆ ಅವಳು
ಆಕಿರುವ ಬಲದ ಕಾಸೇ ನೋಡೆ ॥

ಎಂದು ಬರುತ್ತದೆ. ಮೊದಲನೆಯ ಸೊಲ್ಲು ವೀರನಾಗಣ್ಣ ಪಂಜರದ ಹುಲಿ-ಯನ್ನು ಹೊಡೆದು ಸಿರಾದ ರಂಗಣ್ಣನಾಯಕನನ್ನು ಮೆಚ್ಚಿಸಿ ಬಹುಮಾನ ಪಡೆಯುವ-ವರೆಗೆ ಹೇಳುತ್ತಾರೆ. ಎರಡನೆಯ ಸೊಲ್ಲನ್ನು ನಾಗಣ್ಣ ಹರ್ತಿಕೋಟೆಗೆ ಹೋಗಿ ಕಂಕಜೆಟ್ಟಿ, ಬಾಣಂತಮ್ಮರನ್ನು ಗೆದ್ದು ಬರುವ ಹಾಗೂ ಅತ ತಿಮ್ಮವ್ವನನ್ನು ವಿವಾಹವಾಗುವ ವರೆಗೆ ಹಾಡುತ್ತಾರೆ. ಮೂರನೆಯ ಸೊಲ್ಲನ್ನು ನಾಗಣ್ಣ ತೀರಿಕೊಂಡನಂತರದಿಂದ ಆರಂಭಿಸಿ ತಿಮ್ಮವ್ವ ಕೊಂಡಕ್ಕೆ ಬೀಳುವವರೆಗೂ ಹಾಡುತ್ತಾರೆ.

**ಹಾಡಿದವರನ್ನು ಕುರಿತು ಕಿರುಸಂದರ್ಶನ :**

ಪ್ರ. : ಕರಿಯಮ್ಮ, ನಿನ್ನ ವಯಸ್ಸೆಷ್ಟು ?
ಉ. : ಗೊತ್ತಿಲ್ಲ.
ಪ್ರ. : ನಿನ್ನ ಮದುವೆ ಆಗಿ ಎಷ್ಟುವರ್ಷ ಆಗಿರಬಹುದು ?
ಉ. : ಎಚ್ಚು ಕಮ್ಮಿ ಮುವತ್ತೊರ್ಸದ್ ಮ್ಯಾಲೆ.
ಪ್ರ. : ನಿಂಗೆ ಮದುವೆ ಆದುದ್ದು ಎಷ್ಟನೇ ವಯಸ್ಸಿನಲ್ಲಿ ?
ಉ. : ಗೊತ್ತಿಲ್ಲ. ಆದಾಗ ಸುಮಾರು ಅತ್ತದ್ನೈದಾಗಿತ್ತು ಅನ್ಸಳಿ.

ಪ್ರ. : ನಿನ್ನ ಮತ ಯಾವ್ದು ?

ಉ. : ಗೊಲ್ರುಗೊಳಮತ

ಪ್ರ. : ನೀನು ಹಾಡಿದ್ಯಲ್ಲ ತಿಮ್ಮವ್ವನಕತೆ ! ಅದರಲ್ಲಿ ಬರೋ ಆ ತಿಮ್ಮವ್ವ ನಾಗಣ್ಣನೂ ನಿಮ್ಮಮತಕ್ಕೆ ಸೇರಿದೋರಲ್ಲವಾ ?

ಉ. : ಅವ್‌ದು. ನಮ್ಮ ಮತದವ್ರೇ. ಅದ್ಕೆ ನಾವು ಅವ್ರಮ್ಯಾಲೆ ಪದ ಏಳದು.

ಪ್ರ. : ಬೇರೆ ಮತದವರ ಮೇಲೆ ಪದ ಹೇಳೋದಿಲ್ವ?

ಉ. : ಹೂಂ, ಇಲ್ಲ. ನಮ್ಮ ಮತದೋರ ಪದವೆ ಏಳದು.

ಪ್ರ. : ನೀನು ಯಾರ ಹತ್ತಿರ ಈ ಪದ ಕಲಿತದ್ದು.

ಉ. : ತಿಮ್ಮಜ್ಜಿತವು. ನಾ ಸ್ಯಾನೆ ಚಿಕ್ಕವ್ಳಾಗಿದಾಗ್ಲೇ ಕಲ್ತೆ ಅನ್ಕಳಿ.

ಪ್ರ. : ಸುಮಾರು ಯಾವ ವಯ್ಸಿನಲ್ಲೇ ಕಲಿಯೋಕೆ ಶುರುಮಾಡ್ದೆ? ಹೇಗೆ ಕಲ್ತೆ ?

ಉ. : ಲಗ್ಣ ಆದ ಮ್ಯಾಲೆ ಕಲ್ತಕಳಕೆ ಸುರುಮಾಡುದ್ದು. ಕಳೆ, ಕುಯ್ಲು, ನಾಟಿ ಅಂತ ವೋಗಾಗ ಕಲ್ತೆ. ತಿಮ್ಮಜ್ಜಿ ಇದೇ ಊರವ್ಳು. ವಯ್ಸು ಆಗಿತ್ರ. ನಾ ಆದ್ಮೇಲೆ ಏಳವ್ರು ಯಾರು ಇಲ್ಲ. ಕಲ್ತ್ಕಳ್ರಿ ಅಂತಿದ್ಲು. ಕಲುಸ್ತ್ಲು.

ಪ್ರ. : ಆ ಅಜ್ಜಿ ಹೇಳಕೊಟ್ಟಂಗೆ ಹೇಳಿದ್ದೀಯೋ ಅಥವಾ ಏನಾದ್ರೂ ಸೇರಿಸಿ, ಇಲ್ಲ ಬಿಟ್ಟು ಹೇಳಿದ್ದೀಯೋ ?

ಉ. : ನಾಯೇನೂನು ಸೇರ್ಸಿಲ್ಲ. ಬುಟ್ಟೂ ಇಲ್ಲ. ಅವಜ್ಜಿ ಏಳ್ಕೊಟ್ಟಂಗೆ ಆದೆ.

ಪ್ರ. : ನೋಡು ಕರಿಯಮ್ಮ, ಈ ಕಥೆ ವೀರ ದಿಮ್ಮವ್ವನ್ನ ಕುರುತದ್ದು ಅಲ್ವ ? ಅವ್ಳಗಂಡ ತೀರ್ಕಂಡಮೇಲೆ ಕೊಂಡಕ್ಕೆ ಬೀಳೋವಳ ಕಥೆ ಅಲ್ವ ?

ಉ. : ಅವ್‌ದು. ಗಂಡ ಸತ್ಮೇಲೆ ಅವ್ಳು ಕೊಂಡಕ್ಕಾಯ್ತಳೆ ಅಂತ ಪದದೊಳಗೇ ಬಂತಲ್ಲ.

ಪ್ರ. : ನಾಗಣ್ಣ ಸತ್ತ ಅಂತೇಳಿ ತಿಮ್ಮವ್ವ ಕೊಂಡಕ್ಕೆ ಬಿದ್ಕೊಂಡ್ಲಲ್ಲ, ಸರಿಯಾ ? ನಿಂಗೇನೂ ಅನ್ನಿಸಲ್ವ ?

ಉ. : ಗಂಡ ಅನ್ನುವ್ನು ತೀರ್ಕಂಡಮ್ಯಾಲೆ ಅವ್ಳು ಕೊಂಡಕ್ಕಬಿದ್ಕಂಡುದ್ದೇ ಸರಿ.

ಪ್ರ. : ಯಾಕೆ ? ಅದ್ಹೇಂಗೆ ಸರಿ ಅಂತ ನಿಂಗೆ ಅನ್ನಿಸುತ್ತೆ ?

ಉ. : ಗಂಡ ತೀರ್ಕಂಡ ಮ್ಯಾಲೆ ಮುಂಡೆಯಾಗಿ ಎಂತ್ರ ಇರ್ಬಾರ್ದು.

ಪ್ರ. : ಯಾಕೆ ಇರ್ಬಾರ್ದು ? ಈಗೆಲ್ಲ ಗಂಡ ತೀರ್ಕಂಡವ್ರು ಬದುಕಿಲ್ವ ? ಬೆಂಕಿಗೆ ಬಿದ್ದು ಸಾಯದು ಸರೀನಾ ?

ಉ. : ಈಗೆಲ್ಲ ಕಾಲ ಕೆಟ್ಟೋಯ್ತು. ಗಂಡ ತೀರ್ಕಂಡ ಮ್ಯಾಲೆ ಬದುಕ್‌ಬಾರ್ದು. ಕೂಡಿದವ್ಳಿಗೆ ಸರ್ವುವೂ ಗಂಡ್ನೆ. ಯಾರಿದ್ರೂನು ಗಂಡನ್ಸಮ ಬರಂಗಿಲ್ಲ. ಕುಂಕ್ಮ, ಅರಿಷ್ಣ, ಕತ್ತಿನ ತಾಲಿ ಎಲ್ಲ ಅವುನ್ದೆ. ಅವಿಲ್ಲ, ಅವ್ನಿಲ್ಲ ಅಂದ್ಮೇಕೆ ವೋಗದೇ ಸರಿ.

ಪ್ರ. : ಸರಿ. ಗಂಡ ತೀರ್ಕೊಂಡಂತಾವ್ಳಿಗೆ ಬೆಳೆದ ಮಕ್ಕಳಿದ್ದು ಎಲ್ಲ ಅನುಕೂಲ-ವಿದ್ದು ಸುಖವಾಗಿರೋದಾದ್ರೆ ಯಾಕೆ ಬದುಕಬಾರ್ದು ?

ಉ. : ಅಯ್ಯ ಯ್ಯಾರಿಗ್ಯಾರಿಲ್ಲ, ನಾಯಿಗ ನಂಟಿಲ್ಲ ಅಂದಂಗೆ ಯ್ಯಾರಿಗ್ಯಾರೂ ಇಲ್ಲ. ಮಕ್ಳೇನ ? ಮರಿಯೇನ ? ಅವ್ರವ್ರಕತೆ ಅವ್ರವ್ರುದು. ಗಂಡಸತ್ತ ಅಂದ್ರೆ ಅವ್ಳುದು ಈನಾಯದ ಬಾಳೆ. ಅಪ್ಪ ಅವ್ನ ಅಟ್ಟಿ ಸೇರಬೈದಾ ? ಅತ್ತೆ ಮಾವ್ನ ಅಟ್ಟೀಲಿ ಇರಬೈದಾ ? ಮಕ್ಳು ಮರಿ ಲಗ್ನ ಆಗಗಂಟ, ಆಮ್ಯಾಲೆ ಅವ್ರವ್ರ ದಾರಿ ಅವು ನೋಡ್ಕತವೆ. ಮುಂಡ್ಯಾಗಿ ಬಾಳಕಿಂತ ಸತ್ತು ಗಂಡನಿಂದ್ಲೆ ವೋಗಿ ಅವುನ್ನೇ ಸೇರ್ಕಳದು ಉತ್ಮ. ಅಂದಲದ ಪಲ್ಲಕ್ಕಿ ಮ್ಯಾಲೆ ಕೂತು ಮೆರಸತ್ತಿದ್ರು ಆ ಬಾಳು ಬ್ಯಾಡ.

ಪ್ರ. : ಈಗ ನಿಮ್ಮ ಮತದಲ್ಲಿ ಚಿಕ್ಕವಯಸ್ಲೇ ಗಂಡ ತೀರ್ಕಂಡವ್ಳು ಇರ್ತಳೆ ಅನ್ಕೊ. ಅವ್ಳು ತಿರ್ಗಿ ಮದುವೆ ಆಗಕ್ಕೆ ಬಿಡ್ತೀರಾ ?

ಉ. : ಉಂಟ, ಎಲ್ಲಾರ ? ಒಂದ್ಸತಿ ಲಗ್ನ ಆಯ್ತು ಅಂದ್ಮೇಕೆ ತೀರೊಯ್ತು. ಗಂಡ ಸತ್ತ ಅಂದ್ರೆ ಇನ್ನೊಂದ್ ಲಗ್ನ ಆಗಾಂಗಿಲ್ಲ. ಸಾಯಗಂಟ ಮುಂಡೆಬಾಳೆ. ಅಂಗೇನಾರ ಅವ್ಳು ಇನ್ನೊಂದ್ ಲಗ್ನ ಆಗವ್ಳು ಅಂದ್ರೆ. ಮತ ಬುಡ್ಸಿ, ಬಈಸ್ಕಾರ ಆಕ್ತರೆ ಕುಲದೋರು. ಬೆಂಕಿನು, ನೀರ್ನು, ಕೊಡಂಗಿಲ್ಲ. ....

ಹಾಡಿದವಳ ಮನೆದೇವರು, ಆಚರಿಸುವ ಸಂಪ್ರದಾಯಗಳು. ಜಾತಿ ಇವುಗಳ ಬಗೆಗೆ ಪ್ರಶ್ನಿಸಬೇಕೆಂದುಕೊಂಡೆನಾದರೂ. ಆಕೆ, ಕೇಳಿದ ಪ್ರಶ್ನೆಗಳಿಗೆಲ್ಲ ಉತ್ತರಿಸುವ ಸ್ಥಿತಿ-ಯಲ್ಲಿರಲಿಲ್ಲ. ಪ್ರಶ್ನೆಗಳನ್ನು ಕೇಳುತ್ತಿದ್ದಂತೆ ತನ್ನ ತಾಳ್ಮೆಯನ್ನು ಕಳೆದುಕೊಳ್ಳುತ್ತ ಬರುತ್ತಲಿದ್ದಳು. ಕಾರಣ ಕಥನಗೀತೆಯ ಮೂರು, ನಾಲ್ಕನೆಯ ಭಾಗವನ್ನು ಅಂದರೆ ತಿಮ್ಮವ್ವ ಲಗ್ನವಾಗಿ ಗಂಡನ ಹಿಂದೆ ಹೊರಡುವ ಭಾಗವನ್ನು ಹಾಗೂ ಆಕೆ ಕೊಂಡಕ್ಕೆ ನಡೆ ಯುವ ಸಂದರ್ಭವನ್ನು ಅತ್ಯಂತ ಭಾವುಕವಾಗಿ ಹಾಡಿದ್ದಳು. ಆಕೆಯ ಕಣ್ಣಿನಲ್ಲಿ ನೀರು ನಿರಂತರವಾಗಿ ಸುರಿಯುತ್ತಿತ್ತು. ಹಾಡು ನಿಲ್ಲಿಸಿದನಂತರವೂ ಮುಂದುವರೆದಿತ್ತು. (ಆಕೆ

ತನ್ನ ಎಷ್ಟು ಜನ ಹೆಣ್ಣು ಮಕ್ಕಳಿಗೆ ಮದುವೆಮಾಡಿ ಕಳಿಸಿದ್ದನ್ನ ನೆನೆಸಿಕೊಂಡಿರಬಹುದು ಎನಿಸಿತಾದರೂ, ಆ ಪ್ರಶ್ನೆಕೇಳುವ ಗೋಜಿಗೇ ಹೋಗಲಿಲ್ಲ.) ಹಾಡುಗಾರಿಕೆಯನಂತರ ಎಷ್ಟು ಅನಿವಾರ್ಯವಾಗಿ ಮೇಲಿನ ಪ್ರಶ್ನೆಗಳನ್ನೆ ಕೇಳಲಾಯಿತೋ ಅಷ್ಟೇ ತಾಳ್ಮೆ ತಪ್ಪಿದ ಮನಸ್ಸಿನಿಂದ ಉತ್ತರಿಸುತ್ತಿದ್ದಳು.

---

**ಸೂಚನೆ :** ಈ ಗೀತೆಯನ್ನು ಸಂಗ್ರಹಿಸುವಲ್ಲಿ ಗ್ರಾಮಸ್ಥರಾದ ಡಿ. ತಮ್ಮಯ್ಯ ಹಾಗೂ ಸಿ. ವೀರಪ್ಪನವರು ಬಹಳವಾಗಿ ಸಹಕರಿಸಿದ್ದಾರೆ. ವೀರದಿಮ್ಮವ್ವ ಕೊಂಡಕ್ಕೆ ಬಿದ್ದ ಸ್ಥಳವನ್ನು ತೋರಿಸಿ ಅದರ ಬಗ್ಗೆ ವಿವರಣೆಯನ್ನು ಕೊಟ್ಟಿದ್ದಾರೆ. ಅಲ್ಲದೆ ಸಂಗ್ರಹಕಾರ್ಯದಲ್ಲಿ ಸಹಕರಿಸಿದ ಇತರರು, ಹಿರಿಯರೂ, ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕರೂ ಆದಂಥ ಶ್ರೀ ಬೆಳಗೆರೆ ಕೃಷ್ಣಶಾಸ್ತ್ರಿಗಳು ಮತ್ತು ಶ್ರೀ ಮ. ನ. ಪ್ರಭಾಕರ್ ಅವರುಗಳು.

# ಮಹಾಸತಿ ವೀರದಿಮ್ಮವ್ವ ಕಥನಗೀತೆ

ಕಸ್ಟಬಂದರ ವಿಸ್ಟು[1] ಅಂಬುತ ನ್ಯನದೇನು
ಮತ್ತೇನ ಕೊಡುವೇ ಸ್ರೀ ಅರಿಯೇ । ಕೊಡು ನಮಗ
ವೊತ್ತರಳೀದಂತೆ ಪದುವೀಯ ॥ ೧ ॥

ಲಿಂಗಾನ ನ್ಯನದಾರೆ ಬಂಗಾರ ಕೊಡುವೋನು
ಕಂದಗಳಾ ಕೊಡುವೋನು ಮನಿತುಂಬ । ಇರಿಯಟ್ಟಿ
ಲಿಂಗಾ ಜಂಗಮನ ನ್ಯನದಾರೆ ॥ ೨ ॥

ಯೋಗೀಯ ನ್ಯನದಾರೆ ಬಾಗ್ಯಾವ ಕೊಡುವಾನು
ಬಾಲಾರ ಕೊಡುವೋನು ಮನಿತುಂಬ । ಇರಿಯಟ್ಟಿ
ಯೋಗಿ ಜಂಗಮನ ನ್ಯನದಾರೆ ॥ ೩ ॥

## ಭಾಗ ಒಂದು

ಚಿಕ್ಕಸೀರ್ಯಾಕ ಅಕ್ಕಯ್ಯಮಜ್ಜಿಗೊತ್ತು
ಅಕ್ಕಯ್ಯಸಿಂದೆ ಮಗ ನಡೆದ । ನಾಗಣ್ಣ
ಕಟ್ಟಿದ್ದ ವುಲಿಯಾ ವಡೆದಾನೆ[2] ॥ ೪ ॥

ರಾಯ ಸೀರ್ಯಾಕ ಅಕ್ಕಯ್ಯಮಜ್ಜಿಗೊತ್ತು
ಅಕ್ಕಯ್ಯನಿಂದೆ ಮಗ ನಡೆದ । ನಾಗಣ್ಣ
ಸಾಕೀದಂತ ವುಲಿಯ ವಡೆದಾನೆ ॥ ೫ ॥

ತಂದೇಯಿಂದೆ ವೋಗಿ ನಿಂಬೇಯಣ್ಣ ಬೇಡಿ
ಪಂಜರದ ವುಲಿಯ ವಡೆದಾನು । ವೊಗುವಂತ
ಕಂದಯ್ಯನ್ಯಾರ ಮಗನಮ್ಮ ॥ ೬ ॥

---

1. ವಿಷ್ಣು ಅನ್ನುವ ಪದ ಹಾಡುವವರ ಬಾಯಲ್ಲಿ 'ವಿಸ್ಟು' ಎಂದಾಗಿದೆ.
2. ಪ್ರಾರ್ಥನಾ ಪದ್ಯಗಳ ನಂತರದ ಎಲ್ಲ ಪದ್ಯಗಳು ನಾಗಣ್ಣನ ಪರಾಕ್ರಮವನ್ನು ಕುರಿತೇ ಹೇಳುವಾಗಿವೆ.

ತಾಯಿಂದೆ ವೋಗಿ ಬಾಳೇಯಣ್ಣ ಬೇಡಿ
ಆಳುದ್ದ ವುಲಿಯ ವಡೆದಾನು । ವೊಗುವಂತ
ಬಾಲಯ್ಯನ್ಯಾರ ಮಗನಮ್ಮ ॥ ೭ ॥

ಚಿಕ್ಕ ಸೀರ್‍ಯಾದ ಚಿತ್ತಾರದ ಪ್ಯಾಟ್ಯಾಗ
ಕಟ್ಟಿದ್ದ ವುಲಿಯಾ ವಡೆದಾನು । ವೊಗುವಂತ
ಪುತ್ರಾನಿಡಿದು ತನ್ನೀರರಮನಿಗೆ ॥ ೮ ॥

ಬಾಲಾನ ಇಡಿದ ಗಳಿಗೇಲಿ ಬಾಲಾಗ ಬಂದುನ
ನಾರೀಗೆ ಬಂದುನ ಮನಿಯಾಗೆ । ರಂಗಣ್ಣನಾಯ್ಕ[3]
ಬಮ್ಮಣ್ಣಗ್ವಾಲೇಯ ಬರೆದಾನೆ ॥ ೯ ॥

ಅತ್ತೆಂಟು ಪಂಚಂಗ ಎತ್ತಿಗೇರಿಕಂಡು
ಬ್ಯಾಗಾನೆ ಬಮ್ಮಣ್ಣ[4] ಬರುತ್ತಾನೆ । ಕೆಳುತಾನೆ
ನಾರೀಗೆ ಬಂದಂತಾವಣುಗಾಳ ॥ ೧೦ ॥

ಅಟ್ಟಿ ನಿಂಗಣ್ಣಾನ ಪಟ್ಟಾದ ಪೂಜಾರಿ
ಮತ್ತವನ ತಡೆದಾ ಬಗೆಯೇನು । ರಂಗಣ್ಣಾ
ನಿನ್ನ ಸೊಲ್ಲಿಂದೇ ಉರುದಾವು ॥ ೧೧ ॥

ಆಲುಗುಡದಪ್ಪನ[5] ಪೂಜಾರಿಮಗನಂತೆ
ನೀನವನ ಪಡೆದಾ ಬಗೆಯೇನು । ರಂಗಣ್ಣಾ
ನಿನ್ನ ಆನೇಯ ಸೊಲ್ಲಿಂದೆ ಉರುದಾವೊ ॥ ೧೨ ॥

ಇದ್ದನಾರೀಯು ಇದ್ದಂಗೆ ಆದಾರೆ
ದೀರ ಕೀರುತಿಯು ಪಡೆದೀಯು । ಪಟ್ಟಾದ
ಸತ್ತಿಗೆ ಕೊಟ್ಟು ಕಳುವೇನು ॥ ೧೩ ॥

---

3. ಸಿರಾದ ನಾಲ್ಕು ಶಾಸನಗಳಲ್ಲಿ ಉಲ್ಲೇಖಿವಾಗಿರುವ ನಾಲ್ಕು ಜನ ರಂಗಣ್ಣನಾಯಕರಲ್ಲಿ ಈತ ಒಬ್ಬನಾಗಿರುತ್ತಾನೆ.
4. ಪರಾಕ್ರಮಿ ನಾಗಣ್ಣನನ್ನು ರಂಗಣ್ಣನಾಯಕ ಸೆರೆಹಿಡಿಸಿದ್ದರಿಂದ ಆತನ ಅರಮನೆಯಲ್ಲಿ ಕಷ್ಟ ಪರಂಪರೆಗಳು ಒದಗಿದವು. ಆತನ ಹೆಂಡತಿಗೆ ಕಾಯಿಲೆ ಅಡರಿತು. ಇದಕ್ಕೆ ಅರಮನೆಯ ಬ್ರಾಹ್ಮಣರನ್ನು ಕರೆಸಿ ಕೇಳಿದ. ಆ ಬ್ರಾಹ್ಮಣರಲ್ಲಿ ಒಬ್ಬನು ಬಮ್ಮಣ್ಣ. ಈ ವಿಚಾರವನ್ನು ಹಾಡಿದವರೇ ತಿಳಿಸಿರುತ್ತಾರೆ.
5. ಹಾಲುಗುಡ್ಡದಪ್ಪನ ಪೂಜಾರಿಯ ಮಗನೇ ವೀರನಾಗಣ್ಣ.

ಆಗಿದ್ದ ನಾರೀಯು ಆಗಿದ್ದಂಗೆ ಅದಾರೆ
ಎಸರು ಕೀರುತಿಯು ಪಡೆದೀಯ । ಚನ್ನಾದ
ಸತ್ತಿಗೆ ಕೊಟ್ಟು ಕಳುವೇನು ॥ ೧೪ ॥

ಅಟ್ಟೀಯ ಗೊಲ್ಲಾನು ಮತ್ತೇನು ಬಲ್ಲಾನು
ನಿಸ್ತ್ರೀ ಪ್ರಾಣಾವ ಉಳಿಸಿದರೆ ॥ ಬೂಚಕ್ರದ
ಸತ್ತಿಗೆ ಕೊಟ್ಟು ಕಳುವೇನು ॥ ೧೫ ॥

ಚಿನ್ನಾದ ಚತ್ರಿಕೆ ಇನ್ನು ಒಬ್ಬರಿಗಿಲ್ಲ
ಕೆನ್ನೆ ಮ್ಯಾಲೆ ಆಡ ಅಳದೀಯ । ಬೂಚಕ್ರದ
ಕೊಡಗ ರಂಗಣ್ಣ ಕಳುವ್ಯಾನು ॥ ೧೬ ॥

ಪಟ್ಟಾದ ಚತ್ರಿಕೆ ಮತ್ತೆ ಒಬ್ಬರಿಗಿಲ್ಲ
ನೆತ್ತಿ ಮ್ಯಾಲೆ ಆಡ ಅಳದೀಯ । ಬೂಚಕ್ರದ
ಸತ್ತಿಗೆಯ ರಂಗಣ್ಣ ಕಳುವ್ಯಾನು ॥ ೧೭ ॥

ವುಲಿಯ ಪಡದು ವುಲಿಚರ್ಮ ವೊದ್ದವನೆ
ವುಲಿನಾಗಣ್ಣ ಬಲುಬಂಟ । ಸೀರ್ಯಾದ
ವುಲಿಯಾ ಕೊಂದ ದೀರಾ ಇವನಂತೆ ॥ ೧೮ ॥

ನರಿಯಾ ಪಡದವನೆ ನರಿಚರ್ಮ ವೊದ್ದವನೆ
ನರಿಯಾ ನಾಗಣ್ಣ ಬಲುಬಂಟ । ಸೀರ್ಯಾದ
ನರಿಯಾ ಕೊಂದ ದೀರಾ ಇವನಂತೆ ॥ ೧೯ ॥

ಕೆಟ್ಟ ನಾಯಿ ನಮ್ಮ ಮುಟ್ಟ ಬಂದವಂದು
ಕುಟ್ಟೀದೆ ನಾನು ಮೊಳಕೈಲಿ । ಆ ವುಲಿ
ಬೆಟ್ಟದುದ್ದಾಕ ಬಿದ್ದಾತೋ ॥ ೨೦ ॥

ಪಟ್ಟೆನಾಯಿ ನಮ್ಮ ಮುಟ್ಟಾಕ ಬಂದವಂದು
ಮಡಗೀದೆ ನಾನು ಮೊಣಕೈಲಿ । ಆ ವುಲಿ
ಮಾಳಿಗುದ್ದಾಕ ಬಿದ್ದಾತೋ ॥ ೨೧ ॥

## ಭಾಗ ಎರಡು

ತೆಕ್ಕೆ ಮಡಿಕ್ಯೋನು ಸೊಪ್ಪಿನುಕ್ಕಡದೋನು
ಅಪ್ಪ ನಾಗಣ್ಣ ವುಲುದೂರ । ಕಂಡಿಅಳ್ಳ
ವೊಬ್ಬೇಲಿ ಬೆಳಗಾ ತಿರುವವನೆ ॥ ೨೨ ॥

ಆಲು ಅರಿವೇಯ ತೂಗಿ ಎಗಲಿಗಾಕಿ
ಈರನಾಗಣ್ಣ ವುಲುದೂರ । ಕಂಡಿಅಳ್ಳ
ವಾರೇಲಿ ಬೆರಗಾ ತಿರುವವನೆ ॥ ೨೩ ॥

ಕರಿಯಾ ಕಂಬಳಿ ಕಯ್ಯಾಗ ಪೀರಂಗಿ
ವೋದಾನಿರಿಯಟ್ಟಿ ಉದಿಯಾಕ । ಲಕ್ಕಣ್ಣ
ತಾಯಿ ಜಂಪವ್ನ ಕರೆದಾನು ॥ ೨೪ ॥

ಯಾರಪ್ಪ ಕರೆದೀರೆ ಎಂತಪ್ಪ ಕರೆದೀರೆ
ಏನು ಕಾರಣಕೆ ಕರೆದೀರಿ । ........
........................ ॥ ೨೫ ॥

ಏನು ಕಾರಣಕೆ ಕರಿಲಿಲ್ಲ ಎಂತು ಕರಿಲಿಲ್ಲ
ಚಿಕ್ಕಂದೀಲಿ ನಾವು ಗೆಣೆಯಾರು । ಅಡೆದವ್ವ
ಎತ್ತಲೋಗ್ಯವನೆ ಇರಿಯಣ್ಣ ॥ ೨೬ ॥

ಸಣ್ಣಕ್ಕಿ ಅನ್ನ ಸರಳೆಮ್ಮೆ ನೊರೆಯಾಲು
ಉಣಾಲಕ್ಕಣ್ಣ ಬಗಸೇಲಿ । ಅಂದಾತೆ
ಈಗಾಲುಂಡು ಬಂದೇವಸಿವಿಲ್ಲ ॥ ೨೭ ॥

ಚಿಕ್ಕಾಕಂಡಿಅಳ್ಳ[6] ಚಿತ್ತಾರದ ಕಾವುಲಿಗೆ
ಅಪ್ಪಾ ನಾಗಣ್ಣ ವುಲುದೂರ । ವೋಗಿನ್ನ
ಇಪ್ಪತ್ನಾಕು ದಿನವೂ ಆಯ್ತು ॥ ೨೮ ॥

---

6. ಲಕ್ಕಣ್ಣ ಅಥವಾ ಪರಗೋಪಿ ವೀರನಾಗಣ್ಣನ ಬಾಲ್ಯ ಸ್ನೇಹಿತ. ಕರಿಯ ಕಂಬಳಿ ಹೊದ್ದು, ಕೈಯಲ್ಲಿ ಫಿರಂಗಿ ಹಿಡಿದು ಸ್ನೇಹಿತನನ್ನು ಕಾಣಲು ಬರುತ್ತಾನೆ. ಹಿರಿಯಟ್ಟಿಯಲ್ಲಿಲ್ಲದ ನಾಗಣ್ಣ ಕಂಡಿ ಹಳ್ಳದ ಬದಿಯಲ್ಲಿ ದನಕಾಯುವ ಕಾಯಕದಲ್ಲಿರುತ್ತಾನೆ.

ರಾಯಕಂಡಿಅಳ್ಳ ರೂವಾರದ ಕಾವುಲಿಗೆ
ಈರನಾಗಣ್ಣ ವುಲುದೂರ । ವೋಗಿನ್ನ
ನಲವತ್ನಾಕು ದಿನವಾಯ್ತು ॥ ೨೯ ॥

ಕಂಡಿಅಳ್ಳ ಗಿಡದಾಗ ಕಂಡೀರಿ ನಾಗಣ್ಣಾನ
ಗಿಂಡಿ ಗೊಂಡೇವು ನಿಲುವಂಗಿ । ಚಿಪ್ಪಗೊಡಲಿ
ಕಂಡೀರಿ ನಾಗಣ್ಣ ಗಿಡದಾಗೆ ॥ ೩೦ ॥

ಜಾಲಿಅಳ್ಳ ಗಿಡದಾಗೆ ನೋಡೀರಿ ನಾಗಣ್ಣ
ಸಾಲೆ ಮುಂಡಾಸಣ ನಿಲುವಂಗಿ । ಚಿಪ್ಪಗೊಡಲಿ
ನೋಡೀರಿ ನಾಗಣ್ಣ ಗಿಡದಾಗ ॥ ೩೧ ॥

ಜಾಲಿ ಕೊಕ್ಕೆಸಾಕಿ ಜಾವಗಾಲನಿಟ್ಟು
ಮೂಡ ಮೊಕನಾಗಿ ನಿಂತವನೆ । ನಾಗಣ್ಣ
ಬ್ಯಾಗಾನೆ ಕಂಡಾನೆ ಸರಗೋವಿ ॥ ೩೨ ॥

ಯಾರಪ್ಪ ಮಾನ್ಯವರು ಎಂತಪ್ಪ ಮಾನ್ಯವರು
ನಮ್ಮಡಿಗೆ ನೆರುಳು ತಗುಲ್ಯಾವು । ಮಾನ್ಯವರು
ಗೆಣೆಗಿಂಬಾಗಿ ಬರಬೇಕು ॥ ೩೩ ॥

ಅಕ್ಕ ಮಾರಿಯಾಣೆ ಅಟ್ಟಿ ಸಿಂಗ ನಾಣೆ
ತಪ್ಪಿದರೆ ನಮ್ಮ ಗುರುದೇವ್ನ । ಪಾದದಾಣೆ
ಎತ್ತಿದನೇ ಕವಣೇಯ ಸ್ವಬುದಿಂದ ॥ ೩೪ ॥

ಬೆಳ್ಳೀಯ ಕವಣ್ಗೆ ಬಿಚ್ಚಿ ಬೆರಳಿಗೆ ಸೂಡಿ
ಇಟ್ಟಾನೆ ಅಲ್ಲಿ ವಲಗಲ್ಲ । ನಾಗಣ್ಣ
ಎತ್ತಿದನೆ ಕವಣೆ ಸ್ವಬದಿಂದ ॥ ೩೫ ॥

ಯಾರಪ್ಪ ಮಾನ್ಯವರು ಎಂತಪ್ಪ ಮಾನ್ಯವರು
ಬುದ್ದಿ ಬುದ್ದಿ ದಮ್ಮಯ್ಯ ನಾನಿನ್ನ ಮಗನೆ । ಸರಗೋವಿ
ಲಕ್ಕಣ್ಣ ಜಿನ್ನಕ್ಕ ಬಂದೇನು ದಯವಾಗೋ ॥ ೩೬ ॥

ಆಗ ಈಗುಂದಾರೆ ಇಷ್ಟೊಂದು ಕೋಪವ್ಯಾಕ
ಎತ್ತಿದ ಕವಣೆ ಇಳುಸಲ್ಲ । ಅರ್ತಿಯ
ಜೊತ್ತಾಲದ ಮರಕ ಕಯ್ಯಿಟ್ಟ ॥ ೩೭ ॥

ಆಸೆವಂತನಾಗೋ ಅಟ್ಟಿಗೆ ಬಲ್ಲಿದನಾಗೋ
ಸ್ಯಾವಂತಿಗ್ಯಾಗೋ ಸುಕಿಬಾಳೋ । ಬ್ಯಾಡನ ತಲೆಯ
ಜ್ಯಾಲಿ ಕೊಕ್ಕೀಲಿ ತರಲೋಗೋ ॥ ೩೮ ॥

ಅರ್ತಿಬಾಗುಲಾಗ ಕೊಂಬು ತ್ವಾರಣಕಟ್ಟಿ
ಈನಾಯದ್ವಾಲೆ ಬರೆದವರೆ । ಜಂಗುಮರು
ಈಬುತ್ತಿ ದರುಸದಲೇ ಮನಗವರೆ ॥ ೩೯ ॥

ಚಿಕ್ಕರ್ತಿ ಬಾಗುಲಾಗೆ ಕೊಂಬು ತ್ವಾರಣಕಟ್ಟಿ
ಪಂತದ್ವಾಲಿಗಳ ಬರೆದವರೆ । ಜಂಗುಮರು
ಮಜ್ಜಣ ಮಾಡವಲೆ ಮನಗವರೆ ॥ ೪೦ ॥

ಈನಾಯದ ಮಾತಕೇಳಿ ಇರಬಾರದರಗಳಿಗೆ
ಕೂಗಾಕಿ ಆಡಕರದವನೆ । ನಾಗಣ್ಣ
ಅತ್ತ್ಯಾನಿರಿಯಟ್ಟಿ ವಲಬೇಲಿ ॥ ೪೧ ॥

ವಚ್ಚದ ಮಾತಕೇಳಿ ಅಟ್ಟುಣ್ಣ ಬಾರದರಗಳಿಗೆ
ಕೆಕ್ಕಂದು ಆಡ ಕರೆದಾನೆ । ನಾಗಣ್ಣ
ಅತ್ತ್ಯಾನಿರಿಯಟ್ಟಿ ವಲಬೇಲಿ ॥ ೪೨ ॥

ಇಂಡೀನ ಮೊನೆಗಾರ ದಂಡಿಗೋಗ್ಯೆವಾನೆ
ಕೆಂದೂಳೆದ್ದಾವೋ ಸಿವಸಿವನೆ । ಜಂಪವ್ವ
ಮುಂಬಾಗಲಲಿ ಬಾಯ ಬಿಡುತಾಳೆ ॥ ೪೩ ॥

ಆಡೀನ ಮೊನೆಗಾರ ನಾಡೀಗೋಗ್ಯೆದಾನೆ
ಈ ದೂಳೆಲ್ಲೀದೋ ಸಿವಸಿವನೆ । ಜಂಪವ್ವ
ಓಣ್ಯಾಗ ಬಂದು ಬಾಯ ಬಿಡುತಾಳೆ ॥ ೪೪ ॥

ಚಿಕ್ಕ ದರ್ಮಪುರಕ ಅತ್ತಿ ಗೋಗ್ಯೆದಾಳೆ
ಆಡೊಂದೇ ಜಾವ ನಿಲುದೊಡಿಯೋ ॥ ೪೫ ॥

ಅವಳೇನು ಬಂದಾಳು ನಾನೇನು ನಿಂತೇನು
ಚಂದ್ರ ಸುರನಾರಿ ಸರಳಂಬು । ಮರಗಲ್ಲು
ವಂದಿಸುತಾವು ವೊಂಟೇವು ॥ ೪೬ ॥

ರಾಯ ದರ್ಮಪುರಕ ನಾದುನೋಗೈದಾಳೆ
ಆಡೊಂದೇ ಜ್ಯಾವ ನಿಲುದೊಡಿಯೋ ॥ ೪೭ ॥

ಅವಳೇನು ಬಂದಾಳು ನಾನೇನು ತಡದೇನು
ಸುಕ್ರನಾರಿ ಸರಳಂಬು । ಮರಗಲ್ಲು
ರುಕ್ಕಳುಸುತಾವೆ ಎದಿಯಾಗ[7] ॥ ೪೮ ॥[7]

ಇಂಡು ತಂದು ನಾಗಣ್ಣ ಮುಂದ್ಯಾಗ ಬಿಟ್ಯಾನೆ
ಬಂದಂತ ತಂಗ್ಯವ್ನ ಕೇಳ್ಯಾನೆ । ನಾಗಣ್ಣ
ತಂಗ್ಯಮ್ಮ ನೀರ ಕೊಡುಬಾರೆ ॥ ೪೯ ॥

ಆಡುತಂದು ನಾಗಣ್ಣ ಓಣ್ಯಾಗ ಬಿಟ್ಯಾನೆ
ಓದೋನು ತಾಯವ್ನ ಅರುವ್ನನಿಗೆ । ಕೇಳ್ಯಾನು
ತಾಯಮ್ಮ ನೀರ ಕೊಡುಬಾರೆಂದು ॥ ೫೦ ॥

ಓಬೇನಳ್ಳಿ ಗುಡಿಗೋಗಿ ಗುಡಿಯಾಗೆ
ನಾಗಣ್ಣ ನಲವತ್ತೆಳಗಾಯಿ ವಡೆಸೀದ ॥ ೫೧ ॥

ಕರಿಯಕಲ್ಲ ನೆಡುಸಿ ಕುದುರೆಗಾಲ ವೊಯ್ಸಿ
ಕರಿ ಓಬೇನಳ್ಳಿ ಗುಡಿಗೋಗಿ । ನಾಗಣ್ಣ
ಅರುವತ್ತೆಳಗಾಯಿಯ ವಡೆಸ್ಯಾನೆ ॥ ೫೨ ॥

ನಿಂಗಣ್ಣಾಗೆತ್ತಿದ ಕಯ್ಯ ಮುಂದೆ ಮೂಸ್ಯವರಿಗೆತ್ತು
ಎಡದಲ್ಲಿ ವೋಗಿ ಬಲದಲ್ಲಿ ಬರುವಂತ । ತಾಯಿ
ಈ ನಾಗಣ್ಣಾಗೆತ್ತು ಅಸ್ತಾವ ॥ ೫೩ ॥

---

7. ನಾಗಣ್ಣ ಹರ್ತಿಕೋಟೆಯ ಕಂಕಜಟ್ಟಿ, ಬಾಣಂತಮ್ಮ ಇವರುಗಳ ಮೇಲೆ ಯುದ್ಧಕ್ಕೆ ಹೋಗುತ್ತಿರುವುದನ್ನು ಈ ಪದ್ಯಗಳು ವಿವರಿಸುತ್ತವೆ.

ಅತ್ತು ಕಾಯಿತಂದು ಕುಟ್ಟಿ ಪೂಜೆ ಮಾಡಿ
ಚಿಕ್ಕ ತಾವಂದಿ ಜಗಳಾಕ । ವೋಗಿಬರುತೀನಿ
ಪುಸ್ಪ ಕೊಡುವಮ್ಮ ಬಲಗಡಿಗೆ ॥ ೫೪ ॥

ಆರು ಕಾಯಿತಂದು ವಡದು ಪೂಜೆಮಾಡಿ
ಸಾಳೆ ತಾವಂದಿ ಜಗಳಾಕ । ವೋಗಿಬರುತೀನಿ
ಪೂವ ಕೊಡುವಮ್ಮ ಬಲಗಡಿಗೆ ॥ ೫೫ ॥

ಸತ್ತ್ಯವ್ವ ಕೊಟ್ಟವೂವ ನೆತ್ತಿಮ್ಯಾಲಿಟಿಕಂಡು
ಠಾಯ ತಾವಂದಿ ಜಗಳಾಕ । ವೋಗಿಬರುತೇನಿ
ವೂವ ಕೊಡಮ್ಮ ಬಲುಗಡಿಗೆ ॥ ೫೬ ॥

ಆನೆ ಸುಂಗರವಾದವು ವೋಗಿನೋಡನು ಬನ್ನಿರಿ
ಮಾಳೀಗೆ ಕಾಲಮುರಿಯಾನೆ । ನಾಗಣ್ಣಾನ
ಏಳುನೂರಾನೆ ವೊಠವೊರಟಾವು ॥ ೫೭ ॥

ಒಂಟೆ ಸುಂಗೆರವಾದವು ವೊಂಟು ನೋಡನು ಬನ್ನಿರೆ
ಮಂಟಪದ ಕಾಲಮುರಿಯೊಂಟೆ । ನಾಗಣ್ಣಾನ
ಎಂಟು ನೂರೊಂಟೆ ವೊಠವೊಠಟಾವು ॥ ೫೮ ॥

ಒಂದಾನೆ ಎರಡಾನೆ ವೊಂಗಿಸಿದ ಬಿಳಿಯಾನೆ
ಕೊಂಬಿಲ್ಲಾದ ಮರಿಯಾನೆಗಳು । ನಾಗಣ್ಣಾನ
ಎಂಬತ್ತು ನೂರಾನೆ ವೊಠವೊಠಟಾವು ॥ ೫೯ ॥

ಮೂರಾನೆ ನಾಕಾನೆ ರೂಡಿಸ್ತ ಬಿಳಿಯಾನೆ
ಕೋಡಿಲ್ಲದ ಮರಿಯಾನೆ । ನಾಗಣ್ಣಾನ
ಏಳುನೂರಾನೆ ವೊಠವೊಠಟಾವು ॥ ೬೦ ॥

ಅತ್ತು ಮೊಳದ ಪಾಗ ಸುತ್ತಿ ಸುಂಗವಿಟ್ಟು
ಅಟ್ಟೀಯ ನೆರಳ ನಿಜನೋಡಿ । ನಾಗಣ್ಣ
ಮತ್ತೊಠಟಾನೋ ಜಗುಳಾಕ ॥ ೬೧ ॥

ಬಳ್ಳೊಳ್ಳಿ ಊಡುಗ್ವಾರೆ ಬೆಳ್ಳಿನಾವಜರು
ಎಲ್ಲಿಗೊರಟೀರೋ ಗೆಳೆಯಾರು । ತಾವಂದಿ
ಕಲ್ಲುಕೋಟೇಯು ಜಗಳಾಕ ॥ ೬೨ ॥

ಕಾಳುಗವಂದಾರೆ ಕಲಿಯಾದ ಆರ್ತಿಸೀಮೆ
ಆಳೊರಟಾವಡಕೆಸಸಿಯುಂಗ । ನಾಗಣ್ಣ
ತಾನೊರಟವನೆ ನವುಲಗರಿಯುಂಗೆ ॥ ೬೩ ॥

ಇಂದು ನಾಗಣ್ಣ ದಂಡಿಗೋದಾನಂದು
ಉಂಡಡಕೆಯನೊಯ್ದು ಮಡುಲಿಗೆ । ತಾವಂದಿ
ದಂಡಿನ ಮ್ಯಾಲೆ ತಿರುಗುಂದ ॥ ೬೪ ॥

ನಾಳೆ ನಾಗಣ್ಣ ಕಾಳಗಕ್ಕೋಗೋನಂದು
ವೋಳಡಕೆಯನೊಯ್ತು ಮಡುಲಿಗೆ । ನಾಗಣ್ಣ
ಕೂಳಾನ ಮ್ಯಾಲೆ ತಿರುಗಿ ಬೀಳಂದ ॥ ೬೫ ॥

ದಂಡಿಗೋಗಲುವಾಗ ತಂದೆ ಪಾದಕ ಸರಣು
ತಂದೆ ನಮ್ಮ ಕಾಳಗ ಗೆಲಲನ್ನು । ನಾಗಣ್ಣ
ತಂದೆ ಪಾದಕ ಸರಣೆಂದ ॥ ೬೬ ॥

ಕಾಳಗಕ್ಕೋಗಲುವಾಗ ತಾಯಿಪಾದಕ ಸರಣೆಂದು
ತಾಯಿ ನಮ್ಮ ಕಾಳಗವೇ ಗೆಲಲಂದು । ನಾಗಣ್ಣ
ತಾಯಿ ಪಾದಕ ಸರಣೆಂದ ॥ ೬೭ ॥

ದಂಡಿಗೋಗಲುವಾಗ ತಂಗಿಗೇನಿರಲೆಂದು
ಬಿಂದಿಗೊನ್ನು ಕಾಲುಮಂಚ । ತಂಗ್ಯಮ್ಮ
ನಾಗವ್ವಾಗಿರಲೆಂದು ತಗುದಿಟ್ಟ ॥ ೬೮ ॥

ಕಾಳಗಕ್ಕೋಗಲುವಾಗ ತಾಯಿಗೇನಿರಲಂದು
ಜೋಳಿಗೊನ್ನು ಕರುವೆಮ್ಮೆ । ಕಾಲುಮಂಚ
ತಾಯಿ ಜಂಪವ್ವಗೆ ಇರಲೆಂದು ॥ ೬೯ ॥

ದಂಡಿಗೋಗಲುವಾಗ ತಂಗಿ ಏನಂದವಳೆ
ಇಂದು ಅಣ್ಣಯ್ಯ ಬಲುಜತನ । ತಾವಂದಿ
ನೀನು ನಿಂಬೇಯ ಮರಗೊಳ್ಳೊ ॥ ೭೦ ॥

ಇಂದೇನ ತಂಗ್ಯಮ್ಮ ನೀನುಡಿದೆಯಲ್ಲ
ವೈರಿ ಎದಿಮ್ಯಾಲೆ ಗುಂಡು । ಮೂಡಿದಂಗ
ನಾ ಮಾಡಿ ಬರ್ತೀನಿ ಕಾಣೆ ॥ ೭೧ ॥

ಕಾಳಗಕ್ಕೋಗಲುವಾಗ ತಾಯಿ ಏನಂದಾಳೆ
ನಾಳೆ ನನ ಕಂದ ಬಲು ಜತನ । ತಾವಂದಿ
ಬಾಳೇಯ ನೀನು ಮರಗೊಳ್ಳೊ ॥ ೭೨ ॥

ಬಾಳೇಯ ಮರೆಗೊಳ್ಳಾಕ ಅಡದೇನೆ ನನ್ನಮ್ಮ
ಬೋರು ಬೋರೆಂಬ ವೈರೀಯ । ಸೊಲ್ಲು
ತಿರುಗ ಮೂಡದಂಗ ಮೂಡಿ ಬರುತೀನಿ ॥ ೭೩ ॥

ಆಸೆವಂತನಾಗೋ ಅಟ್ಟಿಗೆ ಬಲ್ಲಿದನಾಗೋ
ಸ್ವಾವಂತಿಗ್ಯಾಗೋ ಸುಕಿಬಾಳೋ । ಬ್ಯಾಡನ ತಲೆಯ
ಈರ ನಾಗಣ್ಣ ತಳಲೊಂಟಾನೋ ॥ ೭೪ ॥

ಕಾಳೇಯ[8] ವುಡುಗಾರ ಕರೆಸ್ಯಾನು ಗೊಲ್ಲ ತಾನು
ಏನೆಂದು ಕಾಳೇಯ ಇಡಿದೀರೋ । 'ಅಂದಾಗಲು
ಕಾಳೇಯ ಇಡಿದಾರೋ ವುಡುಗಾರು ॥ ೭೫ ॥

ಅಗೆಯಾರ ಗಂಡ ಇಕುಳು ಜವದಿರ ಮಿಂಡ
ಜಗಬಿರುದಿನೋನು ಸಂದಗಾನಿ । ಔದೆಂದು
ಬಿರುದಿನೆಗ್ಗಾಳೆಗಳ ಇಡುದಾರು ॥ ೭೬ ॥

ಏಗ್ಗಾಳೆ ವುಡುಗ ಮುದ್ದು ಸಂಪನ್ನ
ಮುದ್ದುರಿಸಿ ಕಾಳೆ ಇಡುದಾರೆ । ನಾಗಣ್ಣ
ಮುದ್ದಿನುಂಗುರವ ತಗುದಿಟ್ಟ ॥ ೭೭ ॥

ಕಾಳೇಯ ವುಡುಗಾರು ಲೋಲಸಂಪನ್ನಾಗೆ
ಲೋಲುಸಿ ಕಾಳೇಯ ಇಡಿದಾರು । ನಾಗಣ್ಣ
ಅವರಿಗೆ ಕಾಲ ಪೆಂಡಯ್ವ ತಗುದಿಟ್ಟ ॥ ೭೮ ॥

ನಡಿನಡಿ ಮದ್ದಾನೆ ನಡಿಸೂಳು ಮದ್ದಾನೆ
ನಡಿಗೆ ಮದ್ದಾನೆ ಕೈತಾಳು । ನಾಗಣ್ಣ
ಗುಡುಗುಟ್ಟುತ ಅರ್ತಿಗೆ ಇಳುದಾನೆ ॥ ೭೯ ॥

---

8. ಕಾಳೆ ಎಂದರೆ ಕಹಳೆ ಎಂದರ್ಥ. ನಾಗಣ್ಣ ಕಾಳಗಕ್ಕೆ ಹೋಗುತ್ತಿರುವ ಸಂದರ್ಭದಲ್ಲಿ ಕಹಳೆಯವರು ಅವನ ಬಿರುದನ್ನು ಬಾರಿಸುತ್ತಾರೆ.

ವೂವು ನೋಡಿ ವುಣಸೇಯಕಾಯಿ ನೋಡಿ ಕಡಲೇಯ
ಆರಂಬಾವ ನೋಡೆ ಅರ್ತಿೀಯ । ವೂರಾಮುಂದೆ
ಆನೇಯ ನಾಗಣ್ಣ ಇಳುದಾನೆ ॥ ೮೦ ॥

ಆಡೀನ ಇಂಡನ್ನೆ ಕಾದು ಕಂಡು ನೀನಿದ್ದೆ ನಾಗಣ್ಣ
ಬ್ಯಾಡಾನ ಗೊಡವೆ ನಿನಗ್ಯಾಕೋ । ಬಾಲಾನೆ
ತಾಯೀಗೆಮಗ ನಾಗಿ ಇರಲೋಗೋ ॥ ೮೧ ॥

ಗೋಗಾಳ ಕಾದು ಕಂಡು ನೀನಿದ್ದೆ ನಾಗಣ್ಣ
ಕಂಕಾನ ಗೊಡವೆ ನಿನಗ್ಯಾಕೋ । ಪುತ್ರಾನೆ
ತಂದೇಗೆ ಮಗನಾಗಿ ಇರಲೋಗೊ ॥ ೮೨ ॥

ಸಪ್ಪೇ ಬೆಳ್ಳುಳ್ಳಿ ತಕ್ಕಡೀಲಿ ತೂಗೋನೆ
ಕೆಟ್ಟ ಜಂಗಮಗೆ ಬಲುಮಾತು । ನಾಗಣ್ಣ
ಬಿಟ್ಟಾನೆ ತನ್ನ ವುರಿಗಣ್ಣು ॥ ೮೩ ॥

ಕೊಟ್ಟೀಗೆ ಮನಿಯಾಗೆ ರೊಟ್ಟೀಯ ಸುಡುವೋಳೆ
ಕಪ್ಪೀನ ಕಿವಿಯ ಮದನಾರಿ । ಜಂಪವ್ವ
ನಿನ್ನ ಪುತ್ರ ಕಾಳಗಕೆ ಕಲಿಯಾದ ॥ ೮೪ ॥

ಸುಕ್ರವಾರದ ಸಂತ್ಯಾಗ ನಿನ್ನಿದ್ಯ ನಾಗಣ್ಣ
ನಿನ್ನಿರುಳೀ ಕಂಡೆ ಅರ್ತಿೀಯ । ವೂರಮುಂದೆ
ಚಿನ್ನಾವೆ ಬೆಳ್ಯಾಗಿ ವೊಳೆವೋನೆ ॥ ೮೫ ॥

ಮಾಳೀಗೆ ಮನೆಯಾಗೆ ಗಾರೀಗೆ ಮಾಡೋಳೆ
ವಾಲೇಯ ಕಿವಿಯ ಮದನಾರಿ । ಜಂಪವ್ವ
ನಿನ್ನ ಬಾಲ ಕಾಳಗಕೆ ಕಲಿಯಾದ ॥ ೮೬ ॥

ಚಿಕ್ಕಾನಾಗಣ್ಣ ಚಿಕ್ಕೋನನ್ನಾದೀರಿ
ಕಿತ್ತಿ ಪೆಳೆಯಾಗ ಅಡಗ್ಯವನೆ । ತಾವಂದಿ
ತಿಪ್ಪ್ಯಾಗ ಕೋಳ ತಿರುಗ್ಯವನೆ ॥ ೮೭ ॥

ಸಣ್ಣೋನಃ ನಾಗಣ್ಣ ಸಣ್ಣೋನನ್ನಾದೀರಿ
ಬಾಳೇಯ ಪೆಡೆಯಾಗ ಅಡಗ್ಯವನೆ । ತಾವಂದಿ
ವೋಣ್ಯಾಗ ಕೋಳ ತಿರುಗ್ಯವನೆ ॥ ೮೮ ॥

ಆದಿ ಬೀದಿಗಳ ಅಯವಾಗಿ ಮಾಡಿಸವನೆ
ಜೂಜೀಗೆ ನಾಗಣ್ಣ ನಿಂತ । ಬಾಣಂತಮ್ಮ
ಜೇಬಿಗಂಡ್ಯಾಗೆದರಿ ನುಸ್ತವನೆ ॥ ೮೯ ॥

ಜೇಬಿಗಂಡ್ಯಾಗೆದರಿ ನುಸ್ತವನ ನಾಗಣ್ಣ
ಕೈಯ್ಯಾಗಳ ಕೊಕ್ಕೀನಾಕಿ ಎಳದವನೆ ॥ ೯೦ ॥

ಸಂದಿಗೊಂದಿಗಳ ಅಂದವಾಗಿ ಮಾಡಿಸವನೆ
ಕಾಳಗಕ ನಾಗಣ್ಣ ನಿಂತವನೆ । ಬಾಣಂತಮ್ಮ
ಜೇಬಿಗಂಡ್ಯಾಕ ನುಸ್ತವನೆ ॥ ೯೧ ॥

ಅಳ್ಳ ಅಳ್ಳ ಗುಂಟೆ ವುಲ್ಲೆ ಎಜ್ಜೆಕಂಡು
ವುಲ್ಲೆಲ್ಲ ನಮ್ಮ ಸಂದಗಾನಿ ।[9] ನಾಗಣ್ಣ
ಅಳ್ಳಕ ಬಿಟ್ಟವನೆ ತನನಂಡು ॥ ೯೨ ॥

ಕಟ್ಟೆಕಟ್ಟೆಗುಂಟ ದುತ್ರಿ ಎಜ್ಜೆಕಂಡು
ದುತ್ರೆ[10]ಲ್ಲಿ ನಮ್ಮ ಎಜ್ಜೆ । ಸಂದಗಾನಿ
ನಾಗಣ್ಣ ಬಿಟ್ಟವನೇ ಏರದಂಡ ॥ ೯೩ ॥

ಅಣ್ಣತಮ್ಮಗಳು ಉಣ್ಣದೆ ಜಗಳಕೋಗಿ
ಅಣ್ಣ ಬಿಟ್ಟು ತಮ್ಮ ಬರಲಿಲ್ಲ । ನಾಗಣ್ಣ
ಸಣ್ಣ ಮರುಳಾಗ ಸವಾಲಿಕ್ಕಿ ॥ ೯೪ ॥

ಅಪ್ಪಾ ಮಕ್ಕಳು ವಪ್ಪಾಕ ಜಗಳಕೋಗಿ
ಅಪ್ಪನ ಬಿಟ್ಟು ಮಗನೆ ಬರಲಿಲ್ಲ । ತಾವಂದಿ
ಉಕ್ಕು ಮರುಳಾಗ ಸವಾಲಿಕ್ಕಿ ॥ ೯೫ ॥

ನಡಿನಡಿ ಮದ್ದಾನೆ ನಡಿನೂರು ಮದ್ದಾನೆ
ನಡಿಗೆ ಮದ್ದಾನೆ ಕೈತಾಳ । ನಾಗಣ್ಣ
ನಡಿಯೆಂದರ್ತೀಯ ಇಳುದಾನೆ ॥ ೯೬ ॥

---

9. ನಾಗಣ್ಣ ಗೊಲ್ಲರ ಜಾತಿಯಲ್ಲಿ ಸಂದಗಾನಿ ಉಪಕುಲಕ್ಕೆ ಸೇರಿದವನು.
10. ದುತ್ರಿ ಎಂದರೆ ಕ್ರೂರಮೃಗ.

ಇಂದು ಅರ್ತೀಯ ಜಂಗುಮರಂದಾರು
ಮುಂಬಲ್ಲ ಸುಲದು ಮಡಿವುಟ್ಟು । ಜಂಪವ್ವ
ನಿನ್ನ ಕಂದಗಾರುತಿಯ ಬೆಳಗ್ಯಾರು ॥ ೯೭ ॥

ರಾಯ ಅರ್ತೀಯ ಯೋಗಿಯೋರಂದಾರು
ತಾವಲ್ಲ ಸುಲದು ಮಡಿವುಟ್ಟು । ಬಾಲಾಗೆ
ಅವರೆಲ್ಲರಾರುತಿಯ ಬೆಳಗ್ಯಾರು ॥ ೯೮ ॥

ಕಂದಿಕೆರೆಗೋಗಿ ಬಿಂದೀಗೆ ಪೊನ್ನಾಗಿ
ತಂದೆ ನಾಗಣ್ಣ ದೊರೆಯಾಗಿ । ಬಂದಾರೆ
ಮಂಗಳಾರುತಿ ಬೆಳಗೇವು ॥ ೯೯ ॥

ಸಾಣೆಕೆರೆಯೂರಾಲಿ ಜೋಳಿಗೊನ್ನಾಗಿ
ವೀರ ನಾಗಣ್ಣ ದೊರಿಯಾಗಿ । ಬಂದಾರೆ
ಪೂವಿನಾರುತಿಯ ಬೆಳಗೇವು ॥ ೧೦೦ ॥

## ಭಾಗ ಮೂರು

ಆನೆ ಮ್ಯಾಲೆ ಬರುವೋರು ಜೋಡ್ಯಾರು ನಾಗಣ್ಣ
ಜೋಡೀಲಿ ಕುದುರೆ ಐನೂರು । ತಿಮ್ಮವ್ವಾಗ
ಬೇಡ ಬಂದಾರೆ ದೊರಿಗಾಳು ॥ ೧೦೧ ॥

ಕಟ್ಟೆಮ್ಯಾಲೆ ಬರುವೋರು ಜೋಡ್ಯಾರು ನಾಗಣ್ಣ
ಜೊತ್ತೀಲಿ ಕುದುರೆ ಐನೂರು । ತಿಮ್ಮವ್ವನ
ಒಪ್ಪ ಬಂದವರೆ ದೊರೆಗಾಳು ॥ ೧೦೨ ॥

ಒಪ್ಪ ಬಂದರಾಕೆ ಕುಟ್ಟಕೋಗೈದಾಳೆ
ಪಟ್ಟಸಾಲ್ಯಾಗ ಅವರಣ್ಣ । ಕುತುಕಂಡು
ಕುಟ್ಟುತಾಡೋ ತಂಗಿನ ಕೊಡಲಾರಸಂದ ॥ ೧೦೩ ॥

ಬೇಡಬಂದರಾಕೆ ಆಡಕೋಗೈದಾಳೆ
ಸಾಮುಸಾಲ್ಯಾಗೆ ಅವರಣ್ಣ । ಕುತುಕಂಡು
ಆಡುಂಬ ತಂಗಿನ ಕೊಡಲಾರೆನಂದ ॥ ೧೦೪ ॥

ದೊಡ್ಡೋರ ಮನೆಯಿಂದ ದೊಡ್ಡೋರು ಬಂದ್ಯೆದಾರೆ
ಎಬ್ಬಾಗುಲಿಂದ ಪೊರಗವರೆ । ಬೀಗಾರು
ಬಂದಾ ಕಾರಣವಾ ನಮಗೇಳಿ ॥ ೧೦೫ ॥

ಏನು ಕಾರಣವಿಲ್ಲ ಎಂತು ಕಾರಣವಿಲ್ಲ
ರಾಯ ಕರಡೋರ ಅರಮನೆ । ವಳಗಿರುವ
ಕನ್ನೆತಿಮ್ಮವ್ವನ ಕೊಡಬೇಕು ॥ ೧೦೬ ॥

ದೊರೆಗಳೋರ ಮನೆಗೆ ದೊರೆಗಳು ಬಂದ್ಯೆದಾರೆ.
ತಲೆಬಾಗುಲಿಂದ ಪೊರಗವರೆ । ಬೀಗಾರು
ಬಂದಾ ಕಾರಣವಾ ನಮಗೇಳಿ ॥ ೧೦೭ ॥

ಏನು ಕಾರಣವಿಲ್ಲ ಎಂತು ಕಾರಣವಿಲ್ಲ
ಸೆಟ್ಟಿಕರಡನೋರ[11] ಅರಮನೆ । ವಳಗಿರುವ
ನಿಸ್ತ್ರೀ ತಿಮ್ಮವ್ವನ ಕೊಡಬೇಕು ॥ ೧೦೮ ॥

ದೊಡ್ಡೋರ ಮನೆಗೆ ದೊಡ್ಡೋರು ಬಂದ್ಯೆದೀವಿ
ದೊಡ್ಡ ಒಂದಲಕ ಎಸರಿಡಿರಿ । ಸಂದನೋರ
ದೊಡ್ಡೋರೆಂಬೋರೆ ಸುಕಿಯೂಟ ॥ ೧೦೯ ॥

ಕೊಟ್ಟೆನೆಂದನವರಣ್ಣ ಕೊಡೆನೆಂದ ಒಬ್ಬಣ್ಣ
ಪಟ್ಟ ಸಾಲ್ಯಾಗೆ ಇರಿಯಣ್ಣ । ಕುತುಕಂಡು
ಕೊಟ್ಟೆನೆಂದು ಈಳ್ಯಾವ ಇಡಿದಾನೆ ॥ ೧೧೦ ॥

ಚಿಕ್ಕಪ್ಪ ಚಿಕ್ಕಮ್ಮ ಚಿಕ್ಕ ಸ್ವಾದರಮಾವ
ಉಪ್ಪರಿಗೆ ವಳಗೆ ವಳಮಾತು । ಮಾತನಾಡಿ
ಚಿಕ್ಕಪ್ಪನಂದಾ ಕೊಡಬವುದು ॥ ೧೧೧ ॥

ಸಂದನೋರ ಪುತ್ರ ಕಾಳಗದಾಗ ಮಡುದಾನಂದು
ದೊಡ್ಡಪ್ಪ ದೊಡ್ಡಮ್ಮ ದೊಡ್ಡ । ಸ್ವಾದರಮಾವ
ವಾಪುರಿಗೆ ವಳಗೆ ವಳ ಮಾತಾಡಾರೆ ॥ ೧೧೨ ॥

---

11. ಕರಡಿನೋರು ಎಂಬುದೂ ಒಂದೆ ಲೇಖನದಲ್ಲಿ ತಿಳಿಸಿದಂತೆ ಗೊಲ್ಲರಲ್ಲಿ ಉಪಕುಲ. ಕರಡಿನೋರ ಕುಲಕ್ಕೆ ಸೇರಿದ ತಿಮ್ಮಪ್ಪನಿಗೂ ಸಂದನೋರ ಕುಲದ ನಾಗಣ್ಣನಿಗೂ ವಿವಾಹ ಏರ್ಪಡುತ್ತದೆ.

ಮಾತನಾಡಿ ದೊಡ್ಡಪ್ಪನಂದ ಕೋಡಬ್ಯಾಡಿ ॥

ಅಕ್ಕೀಯ ಅನ್ನಾಕ ಒಪ್ಪಾದ ಮಾತೀಗೆ
ಅಪ್ಪಯ್ಯ ನನ್ನ ಕೊಡದೀರಿ । ಸಂದನೋರ
ಪುತ್ರ ಕಾಳಗದಾಗ ಮಡುದಾನು ॥ ೧೧೩ ॥

ಆಲು ಅನ್ನಾಕ ಮೋವಾದ ಮಾತೀಗೆ
ಅವ್ವಾ ನನ್ನ ಕೊಡದೀರೇ । ಸಂದನೋರ
ಬಾಲ ಕಾಳಗವ ಮಾಡುವೋನು ॥ ೧೧೪ ॥

ಬಳೆಯ ತೊಡುವಾಗ ಬಲಗಡೆಯೆ ಸೀತಾರು
ಬಾಗಿಲಾಗ ಗೌಳಿ ನುಡುದಾವೆ । ಸಂದನೋರ
ಬಾಲ ಕಾಳಗವ ಮಾಡುವೋನು ॥ ೧೧೫ ॥

ಕುಪ್ಪಸವ ಇಡುವಾಗ ಬೆಕ್ಕಡ್ಡಲಾದವು
ವುತ್ರಾಸದ ಗೌಳಿ ನುಡುದಾವೆ । ಸಂದನೋರ
ಕಂದಾ ಕಾಳಗವಾ ಮಾಡೋನು ॥ ೧೧೬ ॥

ಕೊಟ್ಟೆನಂದ ಒಬ್ಬಣ್ಣ ಕೊಡೆನಂದ ಒಬ್ಬಣ್ಣ
ಪಟ್ಟೆಸಾಲ್ಯಾಗ ಅವರಿರಿಯಣ್ಣ । ಕರಿಯಣ್ಣ
ಕೊಟ್ಟೆನೆಂದೀಳ್ಯಾವ ಇಡಿದಾನೆ ॥ ೧೧೭ ॥

ಆರಾಳೊಕ್ಕಲು ಕೂಡಿ ಜ್ಯಾಡೀಯ ನೇಸ್ಯಾರೆ
ಅಕ್ಕೀಲಿ ಅಸೆಯ ಬಳಿದಾರೆ । ತಿಮ್ಮವ್ವಾನ
ಸೆಂಜೀಲಿ ದಾರೇಯನೆರುದಾರೆ ॥ ೧೧೮ ॥

ಅತ್ತಾಳೊಕ್ಕಲು ಕೂಡಿ ಸೀರೆಯ ನೇಸ್ಯಾರೆ
ನುಚ್ಚೀಲಿ ಅಸೆಯ ಬರೆಸ್ಯಾರೆ । ನಮ್ಮನಿಯ
ಪುತ್ರಮ್ಮಾನಿಂದು ಮದುಮಗಳು । ೧೧೯ ॥

ಕಾಲುಂಗ್ರ ಕಡಿಸೂಸ್ತ್ರ ಏಳೊನ್ನಿನ ತಾಳಿ
ದೀರ ಅರ್ಜುಣರ ಮಗಳು । ತಿಮ್ಮವ್ವಾಗೆ
ತಾಳೀಯ ಕಟ್ಟಲು ಸಿವ ಬಂದ ॥ ೧೨೦ ॥

ಕಂಕಳ ಕಡಿ ಸೂಸ್ತ್ರ ಎಂಟೊನ್ನಿನ ತಾಳಿ
ಬಂಟಲರುಜುಣರ ಮಗಳು । ತಿಮ್ಮವ್ವಾಗೆ
ಕಂಕಳುದರುಸಲು ಸಿವಬಂದ ॥ ೧೨೧ ॥

ಸಂಜೆ ಬೆಳುದಿಂಗಳು ಮುಂದಿಬ್ಬರಾರೋರು
ಗಂದಾದ ಬಟ್ಟಲು ಇಡಕಂಡು । ತಿಮ್ಮವ್ವನ
ಸಂಜೇಲಿ ದಾರೇಯನೆರುದಾರು ॥ ೧೨೨ ॥

ಎಳಿಯಾ ಬೆಳುದಿಂಗಳು ವಳಗಿಬ್ಬರಾರೋರು
ಗಳಿಗೆ ಬಟ್ಟಲ ಇಡಕಂಡು । ತಿಮ್ಮವ್ವಾಗೆ
ಬೆಳುಗೀಲಿ ದಾರೇಯನೆರುದಾರು ॥ ೧೨೩ ॥

ದಾರೆವೊತ್ತಿಗೆ ಯ್ಯಾರ್‍ಯಾರು ಬರಬೇಕು
ಅಡುದಂತ ತಾಯಿ ಇರಿಯಪ್ಪ । ಸ್ವಾದರಮಾವ
ದಾರೇಯ ವೊತ್ತಿಗೆ ಬರಬೇಕು ॥ ೧೨೪ ॥

ವುಡುಕೋ ವತ್ತಿಗೆ ಯಾರ್‍ಯಾರು ಬರಬೇಕು
ಅಡುದಂತ ತಾಯಿ ಇರಿಯಪ್ಪ । ಸ್ವಾದರಮಾವ
ವುಡುಕೋ ವತ್ತಿಗೆ ಬರಬೇಕು ॥ ೧೨೫ ॥

ಸಪ್ಪರದಡಿಯಲಿ ವತ್ತಿ ಬೀಸೋಗಾಳಿ
ಮತ್ತೊಂದೆ ಜಾವ ನಿಲುಗಾಳಿ । ನಮ್ಮನಿಯ
ತಿಮ್ಮವ್ವನ ದಾರೆಯೆರುದೇವು ॥ ೧೨೬ ॥

ಅಂದುರ ದಡಿಲಿ ವಂದಿಬೀಸೋಗಾಳಿ
ಇನ್ನೊಂದೆ ಜಾವ ನಿಲುಗಾಳಿ । ನಮ್ಮನಿಯ
ಬಾಲಮ್ಮನ ದಾರೇಯೆರುದೇವು । ೧೨೭ ॥

ಮುಟ್ಟೇರಿ ಮುಟ್ಟೇರಿ ದಾರೇಯ ಕುಡುಕೇಯ
ಮುಕ್ಕಣ್ಣನು ಸಿವಮುಟ್ಟಿ । ದಾರೆ ಕುಡಿಕೆ
ಮತ್ತೆ ಮುಟ್ಟಿ ದಾರೆಎರುದಾರೆ ॥ ೧೨೮ ॥

ತನ್ನೀರಿ ತನ್ನೀರಿ ತನ್ನೀರಾಲಿನ ಕುಡುಕೇಯ
ಚೆನ್ನಣ್ಣ ಮುಟ್ಟಿ ಸಿವ ಮುಟ್ಟಿ । ದಾರೆ ಕುಡಿಕೆ
ಇನ್ನು ಮುಟ್ಟಿ ದಾರೆಯೆರುದಾರೆ ॥ ೧೨೯ ॥

ಇಂದುಲ ಕಂಬಾಕ ನಂದಿಗೀಸ್ವರ ನಿಂತು
ಮುಂದುಲ ಕಂಬಾಕ ಸಿವನಿಂತು । ಅವರಿಬ್ಬರಿಗೆ
ನೆಂಬುಗೆಯ ಮಾಡಿ ಸಿವನೆ ಅರುಗಾದ ॥ ೧೩೦ ॥

ಆಚೆ ಕಂಬಾಕ ರೂಡಿಗೀಸ್ವರ ನಿಂತು
ಈಚೆ ಕಂಬಾಕ ನಂದಿಗೇಸ್ವರ ನಿಂತು । ಅವರಿಬ್ಬರಿಗೆ
ಬಾಸೆ ಮಾಡಿಸಿದ ಸಿವನೇ ಅರುಗಾದ ॥ ೧೩೧ ॥

* * * * *

## ಭಾಗ ನಾಲ್ಕು

ಸಣ್ಣೋಳು ನಮ್ಮಗಳು ಬಣ್ಣ ಉಡಲರಿಯಳು
ಗಿನ್ನಲು ಬೆಳಗೋದೆ ಅರಿಯಳು । ಕಲಿಸಿಕೊಂಬ
ಅವರ ಸಣ್ಣತ್ತೆ ಯಾರಮ್ಮ ಬರವಿಳಿ ॥ ೧೩೨ ॥

ಚಿಕ್ಕೋಳು ನಮ್ಮಗಳು ಪಟ್ಟೆ ಉಡಲರಿಯಳು
ಗಿನ್ನಲು ಬೆಳಗೋದೆ ಅರಿಯಳು । ಕಲಿಸಿಕೊಂಬ
ಅವರ ಸಣ್ಣತ್ತೆ ಯಾರಮ್ಮ ಬರವಿಳಿ ॥ ೧೩೩ ॥

ರನ್ನಾದ ಬಾಚಣಿಗೆ ಚಿನ್ನಾದ ಸೀರಣಿಗೆ
ಕೆನ್ನೇಲಾಕ್ಯಾರೆ ಬಿಗಿ ಜಡೆಯ । ತಿಮ್ಮವ್ವಾನ
ಗಂಡಾನ ಮನಿಗೇ ಕಳಿಸ್ಯಾರೆ ॥ ೧೩೪ ॥

ಮುತ್ತೀನ ಸೀರಣಿಗೆ ರತ್ನಾದ ಬಾಚಣಿಗೆ
ನೆತ್ತೀಲಾಕ್ಯಾರೆ ಬಿಗಿ ಜಡೆಯ । ತಿಮ್ಮವ್ವಾನ
ಅವರತ್ತೇರರಮನಿಗೇ ಕಳಿಸ್ಯಾರೆ ॥ ೧೩೫ ॥

ಸಂದೂಕಾದಾಗಳ ಕೊಂಡಿ ಚಿಂತಾಕ
ತಂದು ಕೊಡಿರಿ ಮಗಳೀಗೆ । ಮನ ಮುತ್ತ
ಮಡುಲಕ್ಕಿ ತಂಗ್ಯಮ್ಮಗೊಯ್ಯೀರಿ ॥ ೧೩೬ ॥

ಪೆಟ್ಟಿಗ್ಯಾಗಳ ಪಟ್ಟೇದ ಸೀರೀಯ ತಗುದು
ಕೊಟ್ಟು ಇರಿಸೀರಿ ಮಗಳೀಗೆ । ಮನಮುತ್ತು
ಮಡುಲಕ್ಕಿಪೊಯ್ಯೀರಿ ಮಗಳೀಗೆ ॥ ೧೩೭ ॥

ಅಣ್ಣಗಳಾವಲದಾಗ ಸಣ್ಣಮಲ್ಲಿಗೆ ಸಾವುರ
ಇನ್ಯಾರೆ ತಂಗಿ ಮುಡುವೋರು । ಅಂದಿನ್ನ
ಅವಣ್ಣ್ಯಯ್ಯಗಳ ದುಕ್ಕ ಗನವಾಗಿ ॥ ೧೩೮ ॥

ಅವರಪ್ಪಗಳ ವಲದಾಗೆ ಬುಟ್ಟಮಲ್ಲಿಗೆ ಸಾವುರ
ಮತ್ಯಾರೆ ಮಗಳೇ ಮುಡುವೋರು ಅಂದಿನ್ನ
ಅವರಪ್ಪಯ್ಯಗೆ ದುಕ್ಕ ಗನವಾಗಿ ॥ ೧೩೯ ॥

ತುಪ್ಪಾನ್ನವ ಅವರಪ್ಪನ ಕೊಟೆ ಉಂಡು
ಅಪ್ಪಯ್ಯ ನಾವು ಅಗಲೇವು । ಅಂದು
ಅಪ್ಪಯ್ಯನ ಕೂಡಾಡಿ ಅಳುತಾಳೆ ॥ ೧೪೦ ॥

ಆಲು ಅನ್ನಾವ ಅವರಣ್ಣನ ಕೊಟೆ ಉಂಡು
ಅಣ್ಣಯ್ಯ ನಾವು ಅಗಲೇವು । ತಂಗಿ
ಅಣ್ಣನ ಕೂಡಾಡಿ ಅಳುತಾಳೆ ॥ ೧೪೧ ॥

ಅಡೆದಾರೆಣುಮಗಳ ಕರೆದಾರೆ ದ್ಯಾವರೆಸರ
ವಡಲು ಬರುದು ಮನೆ ಬರುದು । ಎಣುಮಕ್ಕಳ
ಅಡಿಬಾರದೇಳು ಜಲುಮಾಕ ॥ ೧೪೨ ॥

ಎತ್ತಾರೆ ಎಣುಮಗಳ ಕಟ್ಟಿದರೆ ದ್ಯಾವರೆಸರ
ವೊಟ್ಟೆ ಬರುದು ಮನೆ ಬರುದು । ಎಣು ಮಕ್ಕಳು
ವುಟ್ಟಬಾರದೇಳು ಜಲುಮಾಕ ॥ ೧೪೩ ॥

ಅಡೆದಪ್ಪ ತನಮಗಳ ತೊಡಿಯ ಮೇಲೇರಿಸಿಕಂಡು
ಕಡೆಯಾ ಕಣ್ಣೀರ ವರೆಸೂತ । ಎಣುಮಕ್ಕಳು
ವುಟ್ಟಬಾರದೇಳು ಜಲುಮಾಕಂದ ॥ ೧೪೪ ॥

ಎತ್ತಪ್ಪ ತನ ಮಗಳ ಪಕ್ಕೇಲಿ ಕೂರಿಸಿಕಂಡು
ಬೆಟ್ಟೇಲಿ ಕಣ್ಣೀರ ವರೆಸೂತ । ಎಣುಮಕ್ಕಳು
ವುಟ್ಟಬಾರದೇಳು ಜಲುಮಾಕಂದ ॥ ೧೪೫ ॥

ಎಣುಮಗಳ ಯಾಕಡದೇ ನನ್ನತಂದೆ
ಎಣ್ಣ್ಯಾಗ ಬತ್ತಿ ಉರುದಂಗ । ಮಾನುವರ
ಕಣ್ಣಾಗ ನಾವು ಉರುದೇವು ॥ ೧೪೬ ॥

ಅಡೆದೋಳು ನನ ತಾಯಿ ಅಣೆಯಲಿ ಬರಿಲಿಲ್ಲ
ಅರುಗೀಲಿ ಒಬ್ಬಾಳು ಇದಿರಂಡೆ । ಕುತುಕಂಡು
ಸರಿಬಂದಾ ಬರೆಯಾ ಬರೆದಾಳು ॥ ೧೪೭ ॥

ಎತ್ತೋಳು ನನತಾಯಿ ನೆತ್ತೀಲಿ ಬರಿಲಿಲ್ಲ
ಅತ್ತರಲ್ಲೊಬ್ಬಾಳು ಇದಿಮುಂಡೆ । ಇಚ್ಚೆ ಬಂದ
ಬರೆಯಾ ಬರದು ಕೂತವಳೇ ॥ ೧೪೮ ॥

ಆನಂದಪುರದಾಗ ಏನೆಂದು ಸಾರವಳೇ ಮುಂಡೆ
ತಾಯುಡೆದ ಮಗಳು ಎರವರಿಗೆ । ಆಗಲಂದು
ಸಾರಿ ಡಂಗುರವ ಪಡಿಸ್ಯಾಳು ॥ ೧೪೯ ॥

ಆನಂದಪುರದಾಗ ಏನಂದು ಸಾರವಳಿ ರಂಡೆ
ತಾಯುಡೆದ ಮಗಳು ಎರವರಿಗೆ । ಆಗಲಂದು
ಸಾರಿದವಳ ಪಡಲಿಂದೇ ಉರಿಯಾಲಿ ॥ ೧೫೦ ॥

ಊರಾ ಮುಂದಲ ವುಣಸೇ ಕಾಯಾಗಿ ಅಣ್ಣಾಗಿ
ದ್ವಾರೆ ಅಣ್ಣಾಗಿ ಉದುರ್‍ಯಾವೆ । ಎಣು ಮಗಳ
ದೂರ ಕೊಟ್ಟ್ಯಾಕೆ ತಾಯಿ ಅಳುತೀಯೆ ॥ ೧೫೧ ॥

ಅತ್ತಿರ ಬಂದಾವೇನೆ ಅತ್ತಿರವಿದ್ದಾವೇನೆ
ವುಚ್ಚೀನೆ ತಾಯಿ ಮರುಳೇನೆ । ಗ್ವಾಡೆಮ್ಯಾಗಳ
ಚಿತ್ತಾರ ನೋಡಿ ಮರಿಯಮ್ಮ ॥ ೧೫೨ ॥

ಚಿತ್ತಾರ ನೋಡಿದರೆ ಮರೆತೇನೇನೆ
ಚಿಕ್ಕೊಂದಿಲಿ ಸಾಕಿ ಎಳವೀಲಿ । ಅಜಾಸೊಯ್ದು
ಎತ್ತಾಪೊಟ್ಟೆ ನಿನ್ನಾ ಬಿಟ್ಟಾತೇನೆ ॥ ೧೫೩ ॥

ಬನ್ನೀಯ ಮರತಂಕ ಬನ್ನೀರಿ ಗೆಳತೇರ
ಅಲ್ಲಿಂದಿಂದಾಕ ತಿರುಗೀರಿ । ಮನೆಗೋಗಿ
ನನ್ನವ್ವನ ಸುಮ್ಮಾನಿರಿಸೀರೆ ॥ ೧೫೪ ॥

ಬಾಳೇಯ ಮರತಂಕ ಬನ್ನೀರೆ ಗೆಳತೇರ
ಅಲ್ಲಿಂದಿಂದಾಕ ತೀರುಗೀರಿ । ಮನೆಗೋಗಿ
ಅಡೆದವ್ವನ ಸುಮ್ಮಾನಿರಿಸೀರೆ ॥ ೧೫೫ ॥

ಅಲ್ಲಿ ಅಲ್ಲಿಗೆ ಮಲ್ಲಿಗೆ ಕಾಲೇಣಿ
ಅಲ್ಲಿಂಚಾಕ ಕಯಿಲಾಸ । ವಳಗಿರುವ
ಎಲ್ಲ ಜಂಗುಮರಿಗೆ ಸರಣೆಂದು ॥ ೧೫೬ ॥

ಅತ್ತು ಅತ್ತುರಕೆ ಮುತ್ತಿನ ಕಾಲೇಣಿ
ಅತ್ತಿಂದಾಚೇಕ ಕಯಿಲಾಸ । ವಳಗಿರುವ
ಅಪ್ಪಾ ಜಂಗುಮರಿಗೆ ಸರಣೆಂದು ॥ ೧೫೭ ॥

ಅತ್ತಾಲೆ ಸರಣೆನ್ನಿ ಇತ್ತಾಲೆ ಸರಣೆನ್ನಿ
ಸುತ್ತಲ ದೇವರಿಗೆ ಸರಣೆನ್ನಿ । ತಿಮ್ಮವ್ವ
ಗಂಡಾನ ಮನಿಗೆ ಪೊರಟಾಳೆ ॥ ೧೫೮ ॥

ಅಲ್ಲೀನೆ ಸರಣೆನ್ನಿ ಇಲ್ಲೀನೆ ಸರಣೆನ್ನಿ
ಎಲ್ಲ ದೇವರಿಗೆ ಸರಣೆನ್ನಿ । ನಿನ ಬಾಗಾದ
ನಿಂಗಣ್ಣಾನ ವಂದುಸಿ ಸರಣೆನ್ನಿ ॥ ೧೫೯ ॥

* * * * *

## ಭಾಗ ಐದು

ಅಕ್ಕಾ ತಿಮ್ಮವ್ವನ ಸಕ್ಕರಿ ಸುಲಿವಲ್ಲಿಗೆ
ಚಿಕ್ಕಾ ಸಾಣೆಕೆರೆಯ ಬಿಳಿಯೆಲೆ । ತರಲೋಗಿ
ಈರ ನಾಗಣ್ಣ ಮಡುದವನೆ ॥ ೧೬೦ ॥

ತಾಯಿ ತಿಮ್ಮವ್ವಾನ ನ್ಯಾರೆನ್ನ ಸುಲುವಲ್ಲೀಗೆ
ರಾಯ ಸಾಣೆಕೆರೆಯ ಬಿಳಿಯೆಲೆ । ತರಲೋಗಿ
ಅಪ್ಪ ನಾಗಣ್ಣ ಮಡುದಾನೆ ॥ ೧೬೧ ॥

ಮಡುದಾನೆಂಬುದ ಕೇಳಿ ಮಡಿಯಾ ತಗುದುಟ್ಟ್ಯಾಳು
ಇಡುದಾಳು ಕನ್ನಡಿಯಾ ಬಲಗೈಲಿ । ನಾಗಣ್ಣಾನ
ಅಡಿಗೇಯ ರಾಣಿ ಪೊರಟವಳೇ ॥ ೧೬೨ ॥

ಸತ್ತಾನೆಂಬುದ ಕೇಳಿ ಪಟ್ಟೆ ತೆಗುದುಟ್ಟವಳೆ
ಇಟ್ಟಾಳು ಕನ್ನಡಿಯಾ ಬಲಗೈಲಿ । ನಾಗಣ್ಣಾನ
ಪಟ್ಟಾದ ರಾಣಿ ಪೊರಟವಳೆ ॥ ೧೬೩ ॥

ತುಪ್ಪಾ ಕಾಸ್ಯಾಳೆ ಉಪ್ಪರಿಗೆಯನೇರ್ರ್ಯಾಳೆ
ಮತ್ತೇನು ಸಿವನೇ ಬಲುಗಲವು । ಕಾಳಗದಾಗೆ
ಅತ್ತೇರ ಮಗ ಮಡುದಾನೆ ॥ ೧೬೪ ॥

ಆಲು ಕಾಸ್ಯಾಳೆ ಮಾವುರಿಗೆಯ ನೇರ್ಯಾಳೆ
ಮ್ಯಾಲೇನು ಸಿವನೇ ಬಲುಗಲವು । ಕಾಳಗದಾಗೆ
ಮಾವಾನಮಗನೇ ಮಡುದಾನೆ ॥ ೧೬೫ ॥

ಒಂದಾನೆತ್ತಿ ಕೆಂಡು ಒಂದನೆಡಸಿ । ಕೆಂಡು
ಗಂಡಾನ ಕಾಣಿರೋ ಜನರೆಲ್ಲ । ಸಾಣೆಕೆರೆಯ
ಮುಂಡ ಬಿದ್ದಾವೆ ರಣದಾಗೆ ॥ ೧೬೬ ॥

ಒಂದಾ ನೆಡಸಿಕೆಂಡು ಒಂದಾನೆತ್ತಿಕೆಂಡು
ರಾಯನ ಕಾಣಿರೋ ಜನರೆಲ್ಲ । ಸಾಣೆಕೆರೆಯಲಿ
ಬಾಕು ಬಿದ್ದಾವೋ ರಣದಾಗೆ ॥ ೧೬೭ ॥

ಕಟ್ಟೀಯ ಇಂದೆ ಬಟ್ಟೇಯ ಸೆಣಸೋಳೆ
ಬೆಟ್ಟಿನುಂಗುರದ ಅಗಸೋತಿ । ಸಾಣೆಕೆರೆಯ
ಸುದ್ದೀಯನೇಳೆ ನಮಗೀಟು ॥ ೧೬೮ ॥

ನಾವೇನು ಏಳೇವು ನೀಯೇನು ಕೇಳೀಯೆ
ಸಾವುರ ಕುದುರೆ ಸರದಾರನು । ಮ್ಯಾಲೆ
ರಾವುತ ನಾಗಣ್ಣ ಮಡುದವನೇ ॥ ೧೬೯ ॥

ಏರೀಯ ಇಂದೆ ಸೀರೇಯ ಸೆಣೆವೋಳೆ
ನೀಲದುಂಗುರದ ಅಗಸೋತಿ । ಸಾಣೆಕೆರೆಯ
ಆವುಳಿಯಾನೇಳೆ ನಮಗೀಟು ॥ ೧೭೦ ॥

ನಾವೇನು ಏಳೇವು ನೀವೇನು ಕೇಳೀರಿ
ಲಕ್ಷಕೆ ಕೊಂಡ ಕುದುರೇಯ । ಮ್ಯಾಗಳೆ
ರಾವುತ ಈರ ನಾಗಣ್ಣ ಮಡುದವನೆ ॥ ೧೭೧ ॥

ಅತ್ತೇರ ಮಗ ಮಡಿದ ಪುತ್ರ ಜಲ್ಲುಕ ಮಡಿದ
ಅತ್ತೆ ಜಂಪವ್ನ ಮಗ ಮಡಿದ । ನಾಗಣ್ಣ
ಮುತ್ತೀನ ಚತ್ರಿಕೆ ನೆರಳಾಗಿ ॥ ೧೭೨ ॥

ಮೂವಾನ ಮಗ ಮಡುದ ಪ್ರಾಣಾಜಲ್ಲುಕ ಮಡಿದ
ಮೂವಾ ನಾಗಪ್ಪಾನ ಮಗ ಮಡಿದ । ನಾಗಣ್ಣ
ನೀಲೀಯ ಚತ್ರಿಕೆ ನೆರುಳಾಗಿ ॥ ೧೭೩ ॥

ಬಿದ್ದಾನು ನಾಗಣ್ಣ ಬಿಳಿಯಂಗಿ ಮೇಲಾಗಿ
ವಜ್ಜುರದ ಬಾಕು ಅಡಿಯಾಗಿ । ಸಾಣೆಕೆರೆಲಿ
ಬಿದ್ದಾನು ಸೂರಿದಗೆ ಎದುರಾಗಿ ॥ ೧೭೪ ॥

ಮಡುದಾನು ನಾಗಣ್ಣ ಇಡಿವಂಬು ಮೇಲಾಗಿ
ಇಡಿದಿದ್ದ ಬಾಕು ಅಡಿಯಾಗಿ । ನಾಗಣ್ಣ
ಮಡಿದ ಸೂರಿಪಗೆ ಎದುರಾಗಿ ॥ ೧೭೫ ॥

ಕಟ್ಟೇಯ ಇಂದಾಲ ಬಿಚ್ಚೋಲೆಗರಿಗಾಳ
ಮ್ಯಾದಾರಾರೋಗಿ ಕೊಯ್ತನ್ನಿ । ತಿಮ್ಮವ್ವಾನ
ತಾಯೀಗೆ ವಾಲೆ ಬರಿಯಾನು ॥ ೧೭೬ ॥

ಏರೀಯ ಇಂದಾಲ ವಾಲೇಯ ಗರಿಗಾಳ
ಮ್ಯಾದಾರರೋಗಿ ಕೊಯ್ತನ್ನಿ । ತಿಮ್ಮವ್ವಾನ
ಅವರಿರಿಯಣ್ಣಾಗೆ ವಾಲೆ ಬರಿಯಾನು ॥ ೧೭೭ ॥

ಕಾಲೆಲ್ಲ ಕೆಂದೂಳು ಮೋರೆಲ್ಲ ಕಿರುಬೆವ್ರು
ಏನು ತಂದೆ ಸುದ್ದಿ ಬೆಸು ಮಗನೆ । ನೀನಿಂದು
ಸುದ್ದಿ ತಂದಣ್ಣಾಗೆ ಮಜ್ಜಿಗೆಯುಮುಯು ॥ ೧೭೮ ॥

ಬಾಳೀನ ಸುದ್ಯಲ್ಲ ಬದುಕೀನ ಸುದ್ಯಲ್ಲ
ಏನು ಏಳಾಲಮ್ಮ ವಡಲುರಿಯ । ತಿಮ್ಮವ್ವ
ಸನ್ನಾರದ ಕಾಡ ವೊಗುತಾಳೆ ॥ ೧೭೯ ॥

ಕಾಡ ವೊಗುವಾಕ ಚಿಕ್ಕಪ್ಪ ನಾಯಕನಾಣೆ
ಪಟ್ಟೀದ ಕಲ್ಲಾಣೆ ಪ್ರಜೆಯಾಣೆ । ತಿಮ್ಮವ್ವಾನ
ವೊಟ್ಟೀ ಮ್ಯಾಲಾಡೋ ಮಗನಾಣೆ ॥ ೧೮೦ ॥

ಕೊಂಡಾ ವೋಗುವಾಕ ಚಿಕ್ಕಪ್ಪನಾಣೆ
ಜಂಗುಮರಾಣೆ ಜನರಾಣೆ । ತಿಮ್ಮವ್ವಾನ
ತೋಳಿವ ಮ್ಯಾಲಾಡೋ ಮಗನಾಣೆ ॥ ೧೮೧ ॥

ಬಳ್ಳ್ಯೋಳು ತಿಮ್ಮವ್ವ ಬಲ್ಲನೇರಿಕೆಂಡು
ಬಳ್ಳಿ ಮಲ್ಲಿಗೆ ಮುಡಕಂಡು । ಬೂತನ ಗುಡಿಯು
ಅಳ್ಳಿದಾಗ ತಿಮ್ಮವ್ವ ಮೆರೆದಾಳೆ ॥ ೧೮೨ ॥

ಅಸನಾದ ತಿಮ್ಮವ್ವ ಬಸುವಾನೇರಿ ಕಂಡು
ಎಸಳು ಮಲ್ಲಿಗೆ ಮುಡಕಂಡು । ಬೂತನ ಗುಡಿಯು
ಸೊಸಿ ಬೇವಿನಾಗ ಮೆರುದಾಳೆ ॥ ೧೮೩ ॥

ಬಾಳೆಗಳು ನಿಮಗಾಯ್ತು ಕಿರುನೆಲ್ಲಿ ನಿಮಗಾಯ್ತು
ಚಿಕ್ಕಂದಿನ ಬದುಕು ನಿಮಗಾಯ್ತು । ಇರಿಯಟ್ಟಿ
ಎಚ್ಚೀನ ಕೊಂಡಾವು ನನಗಾಯ್ತು ॥ ೧೮೪ ॥

ಕಿತ್ತುಲಿ ನಿಮಗಾಯ್ತು ಕಿರುನೆಲ್ಲಿ ನಿಮಗಾಯ್ತು
ಚಿಕ್ಕಂದಿನ ಬದುಕು ನಿಮಗಾಯ್ತು । ಇರಿಯಟ್ಟಿ
ಎಚ್ಚೀನ ಕೊಂಡಾವು ನನಗಾಯ್ತು ॥ ೧೮೫ ॥

ಅರುಗೀದ ವಲದಾಗ ಅರುಗಾದ ವಲದಾಗ
ಅರುಗೀಲಿ ಬರುವಾನೆ ಅವರಣ್ಣ । ಕರಿಯಣ್ಣ
ಅರುವತ್ತು ಕೊಟ್ಟೇನು ನಿಲು ತಂಗಿ ॥ ೧೮೬ ॥

ಅರವತ್ತು ವನ್ನು ತುರುಬಿನ ಬೆಲೆಯಲ್ಲ
ದುರುಗಾವನಾಳೋ ಮಗ ದೂರಾದ । ಪೊಗುತೀನಿ
ಇರುಬೀನ ಕಿಚ್ಚ ಕೊಡುವಣ್ಣ ॥ ೧೮೭ ॥

ಬಿತ್ತೀದ ವಲದಾಗ ಬಿತ್ತಾದ ವಲದಾಗ
ಬುಟ್ಟಿ ರಾಜುಣದ ವಲದಾಗ । ತಿಮ್ಮವ್ವಾನ
ಕೊಟ್ಟಿ ಅಣವೀಗೆ ತಡೆದವರೆ ॥ ೧೮೮ ॥

ಅಣವೀಗೆ ತಡುಹಾರೆ ಇರುವೋಳು ನಾನಲ್ಲ
ದುರುಗವ ನಾಳೋ ಮಗ ದೂರ । ಪೊಗುತೀನಿ
ಇರುಬೀನ ಕಿಚ್ಚು ಕೊಡುದಾಗಿ ॥ ೧೮೯ ॥

ಅಣ್ಣ ಕರಿಯಣ್ಣ ಬಣ್ಣ ತಂದು ಕೊಡು
ಇನ್ನು ಬಂದು ನಿನ್ನೂರ ಪೊಗುವಲ್ಲೆ । ಕರಡಿನೋರ
ಎಣುಮಕ್ಕಾಳೊಂದಿಗೆ ಇರವೊಲ್ಲೆ ॥ ೧೯೦ ॥

ಅಪ್ಪ ಕರಿಯಣ್ಣ ಪಟ್ಟೀಯ ತಂದುಕೊಡೋ
ಮತ್ತೆ ಬಂದು ನಿನ್ನೂರ ಪೊಗುವಲ್ಲೆ । ಕರಡಿನೋರ
ಚಿಕ್ಕ ಮಕ್ಕಳೊಳಗೆ ಇರವಲ್ಲೆ ॥ ೧೯೧ ॥

ಅಣ್ಣಗಳ ವಲದಾಗ ಅಣ್ಣೀಯು ಬೆಳೆಯಾಲಿ
ನಮ್ಮಾವುಗಳ ವಲದಾಗ । ಕೊಡಗೀನ
ಸಣ್ಣ ರಾಜುಣವೇ ಬೆಳಿಯಾಲಿ ॥ ೧೯೨ ॥

ಅಪ್ಪಗಳ ವಲದಾಗ ಉತ್ರಾಣಿ ಬೆಳೆಯಾಲಿ
ಚಿಕ್ಕ ಮಾವುಗಳ ವಲದಾಗ । ಕೊಡಗೀನ
ಬುಟ್ಟ ರಾಜುಣವೇ ಬೆಳಿಯಾಲಿ ॥ ೧೯೩ ॥

ಉಪ್ಪರಿಗೆ ಇಂದೆ ಕಪ್ಪ ತಗುದಿಡುವೋಳೆ
ಪುತ್ರಾಗೆ ಮೊಲಿಯಾ ಕೊಡುವೋಳೆ । ತಿಮ್ಮವ್ವ
ಅಪ್ಪ ಬಂದವನೆ ಮೊಕ ತೋರೆ ॥ ೧೯೪ ॥

ಅಪ್ಪಾ ಬಂದಾರೇನು ಕಪ್ಪಾ ತಂದಾರೇನು
ಒಪ್ಪೀದ ಬದುಕು ಅವರೀಗೆ । ಆದಾರೆ
ಕಿಚ್ಚಿನ ಕೊಂಡ ನನಗಾಯ್ತು ॥ ೧೯೫ ॥

ಅಳ್ಳಿ ಗೆಳತೇರು ಕೋಳ್ಳೀರಿ ನಿಮ್ಮೊಳ್ಳವ
ಒಳ್ಳೊಳ್ಳೆ ಸಾದೆ ಬರಬೇಕು । ಬೈಗಿನ ಕಡೆಯ
ಉಳ್ಳಿ ಗುಗ್ರಿಯ ತಿನಬೇಕು ॥ ೧೯೬ ॥

ಅಟ್ಟೀಯ ಗೆಳತೇರು ಕೊಟ್ಟೇನು ನಿಮಗೀಳ್ಯಾವ
ಗಟ್ಟ್ಯನ್ನ ಸಾದೆ ಬರಬೇಕು । ಬೈಗಿನ ಕಡೆಯ
ರೊಟ್ಟಿ ಗುಗ್ರಿಯ ತಿನಬೇಕು ॥ ೧೯೭ ॥

ಕುಣಿವಾ ಕುಂಬಳಂಚು ಮೆರೆವ ಪಟ್ಟೇಸೀರೆ
ಕೊಂಡಾಕೋಗಲುವಾಗ ಚಂದ್ರಗಾವಿ । ಬಣ್ಣವ
ತಂದಾರು ತಿಮ್ಮವ್ವಾನ ತೌರವರು ॥ ೧೯೮ ॥

ಬಾಳೇಯ ಮರಕ ಬಾಲಗ ತೊಟ್ಟಿಲಕಟ್ಟಿ
ಬಾಲಯ್ಯ ಬಾಲ ಅಳದೀರೊ । ಬೈಗಿನ ಕಡೆಲಿ
ಅಂಗುಳಾರಿದರೆ ಮೊಲಿಯಿಲ್ಲ ॥ ೧೯೯ ॥

ನಿಂಬೇಯ ಮರಕ ಕಂದಗ ತೊಟ್ಟಿಲಕಟ್ಟಿ
ಕಂದಯ್ಯ ಕಂದ ಅಳದೀರೋ । ಬೈಗಿನ ಕಡೆಲಿ
ಅಂಗುಳಾರಿದರೆ ಮೊಲಿಯಿಲ್ಲ ॥ ೨೦೦ ॥

ನಿಂಬೇಯ ಮರವೇ ನೀನೆಂದಿಗೆ ನೆರಳಾದೀಯೆ
ನನ್ನ ಕಂದಯ್ಯ ಕರಿಯಣ್ಣ । ಕರುಗಳ
ಕಾಯೊತ್ತಿಗೆ ನೀನು ನೆರಳಾಗು ॥ ೨೦೧ ॥

ಬಾಳೆಯ ಮರವೇ ನೀನ್ಯಾವಾಗ ನೆರಳಾದೀಯೆ
ನನ್ನ ಬಾಲಯ್ಯ ನಾಗಣ್ಣ ಕರುಗಾಳ । ಕಾಯೊತ್ತಿಗೆ
ಬಾಳೇಯ ಮರವೇ ನೀನು ನೆರಳಾಗು ॥ ೨೦೨ ॥

ಉಪ್ಪಾಕೀದ ಸೊಪ್ಪು ಮತ್ತೀಟು ಕೊಡಿರಮ್ಮ
ತೊತ್ತೀನ ಮಕ್ಕಳನ್ನದೀರೆ । ಮುದಿಯವ್ವ
ನಿಂಗೆ ಪುತ್ರನ ಕೊಡುತೀನಿ ಕಡನಾಗಿ ॥ ೨೦೩ ॥

ಅಲೊಯ್ದ ಸೊಪ್ಪ ಮ್ಯಾಲೀಟು ಕೊಡಿರಮ್ಮ
ಸವತಿ ಮಕ್ಕಳೆಂದು ಅನದೀರಿ । ಗಿರಿಯವ್ವ
ನಿಂಗೆ ಬಾಲನ ಕೊಡತೀನಿ ಕಡನಾಗಿ ॥ ೨೦೪ ॥

ಕಿಚ್ಚು ಮಾಡೋರು ಎಚ್ಚಾಗಿ ಮಾಡೀರಿ
ಮಟ್ಟಸ ನೋಡಿ ಮನೆ ನೋಡಿ । ಮಾಡಿದವರಿಗೆ
ಮಕ್ಕಳ ಸಂತಾನವ ಕೊಡತೀನಿ ॥ ೨೦೫ ॥

ಗುಂಡಿ ಮಾಡೋರು ಇಂಬಾಗಿ ಮಾಡಿ
ಗುಂಡೀಗೆ ಮಾಡಿ ಮನೆ ನೋಡಿ । ಮಾಡಿದೋರಿಗೆ
ಗಂಡು ಸಂತಾನವ ಕೊಡುತೀನಿ ॥ ೨೦೬ ॥

ಕದ್ದು ಪೋದಾಳೆಂದು ದಿಡ್ಡಿಗಳ ಅಕುಸ್ತ
ಕದ್ದು ಪೋಗೋರ ಮಗಳಲ್ಲ । ಕಾಟೇಗೌಡ
ದಿಡ್ಡಿ ಬಾಗುಲು ತಗುಸಯ್ಯ ॥ ೨೦೭ ॥

ಓಡಿಪೋದಾಳೆಂದು ರಾಡುಗಳ ಅಕುಸ್ತ
ಓಡಿಪೋಗೋರಾ ಮಗಳಲ್ಲ । ಕಾಟೇಗೌಡ
ರಾಡು ಬಾಗುಲ ತಗುಸಯ್ಯ ॥ ೨೦೮ ॥

ಕಿಚ್ಚಿಗಂಜೋಳೆಂದು ಅಚ್ಚಡವ ಮರಿಗೊಂಡು
ಕಿಚ್ಚಿಗೆದರೋರ ಮಗಳಲ್ಲ । ಕಾಟೇಗೌಡ
ಅಚ್ಚಡದ ತೆರಿಯಾ ತಗುಸಯ್ಯ ॥ ೨೦೯ ॥

ಕೆಂಡಕ್ಕೆದುರಾಳೆಂದು ಕಂಬಳಿಯಾ ತೆರೆಗಟ್ಟಿ
ಕೆಂಡಕೆದರೋರ ಮಗಳಲ್ಲ । ಕಾಟೇಗೌಡ
ಕಂಬಳಿ ತೆರಿಯಾ ತಗುಸಯ್ಯ ॥ ೨೧೦ ॥

ಎಣ್ಣೇಯ ಕೊಡ ಉಳ್ಳುಳ್ಳಿ ಬೇಯೋವಾಗ
ರೆಂಬೆ ತಿಮ್ಮವ್ವ ಮೆರಿವಾಗ । ಸಂದನೋರ
ಕಂದನೆತ್ತೋರು ಮನಿಗೋಗಿ ॥ ೨೧೧ ॥

ತುಪ್ಪಾದ ಕೊಡ ಉಕ್ಕುಕ್ಕಿ ಬೇಯೋವಾಗ
ಸಿಸ್ತ್ರೀ ತಿಮ್ಮವ್ವ ಮೆರಿವಾಗ । ಸಂದನೋರ
ಪುತ್ರಾನೆತ್ತೋರು ಮನಿಗೋಗಿರಿ ॥ ೨೧೨ ॥

ಕಿಚ್ಚು ಮಾಡೋರು ಎಚ್ಚಾಗಿ ಮಾಡೀರಿ
ಕಿಚ್ಚು ವಡಲ ಕಿಚ್ಚಿಗೆ ಕಿರಿದಂದು । ತಿಮ್ಮವ್ವ
ಅತ್ತೀಯ ಮರನೊಂದಾ ಕಡಿಸ್ಯಾಳೆ ॥ ೨೧೩ ॥

ಕೊಂಡ ಮಾಡೋರು ಇಂಬಾಗಿ ಮಾಡೀರಿ
ವಡಲಕೊಂಡಕೀ ಕೊಂಡ ಕಿರಿವಂದ । ತಿಮ್ಮವ್ವ
ಗಂಡಾಲದೊಂದು ಮರವಾ ಕಡಿಸ್ಯಾಳೆ ॥ ೨೧೪ ॥

ಬೆಟ್ಟದಂತೆ ಕೊಂಡಾಕ ಬೆಟ್ಟಿನೋಟು
ಮುಚ್ಚಲುಗಲ್ಲು ನ್ಯಾರನ್ನೋವು । ಕಡಿಸ್ಯಾನೆ
ಕೊಂಡಾದ ತಿಮ್ಮವ್ವ ಮೆರೆದಾಳೆ ॥ ೨೧೫ ॥

ಆಳುದ್ದ ಕೊಂಡಾಕ ಗೇಣುದ್ದ ಮುಚ್ಚುಲುಗಲ್ಲು
ಬಾವ ಕಾಟಯ್ಯ ಕಡಿಸ್ಯಾನೆ । ಅದರಂದಾಕೆ
ನಾಮುನಿ ತಿಮ್ಮವ್ವ ಮಡುದಾಳೆ ॥ ೨೧೬ ॥



ಮಹಾಸತಿ ದಿಮ್ಮವ್ವನ - ಆಕೆಯ ಪತಿಯ ಚಿತ್ರವಿರುವ ಮಾಸ್ತಿಕಲ್ಲು.

ಕಟ್ಟೀ ಕಲ್ಲತ್ತಿ ಕೆಟ್ವೇನೆನ್ನಲುದೀರಿ
ಕಟ್ಟಾಣೆ ತಿಮ್ಮವ್ವ ಕಲಿಯಾಗಿ । ಅರ್ತೀಯ
ದಿಕ್ಕೆಲ್ಲ ಮೆಚ್ಚಿ ಮೇರಿಬೇಕು ॥ ೨೧೭ ॥

ಏರಿ ಕಲ್ಲನತ್ತಿ ಎದರೇನನ್ನಲುದೀರಿ
ದಾಯಾಳಿ ತಿಮ್ಮವ್ವ ಕಲಿಯಾಗಿ । ಇರಿಯಟ್ಟಿ
ರಾಜ್ಯಾವೆ ಮೆಚ್ಚಿ ಮೆರೆಯೀತು ॥ ೨೧೮ ॥

ಇಂದ್ಲೋರು ಮನಗವರೆ ಮುಂದ್ಲೋರು ಮನಗಿಲ್ಲ
ರೆಂಬೆ ತಿಮ್ಮವ್ವ ಮೆರಿವಾಗ । ಸಂದನೋರು
ಚಂದ್ರ ಕುಲದೋರು ಮಲಗಿಲ್ಲ ॥ ೨೧೯ ॥

ಆಕಡೆಯೋರು ಮನುಗವರೆ ಈಕಡಿಯೋರು ಮನಗಿಲ್ಲ
ಕಾತ ತಿಮ್ಮವ ಮೆರಿವಾಗ । ಸಂದನೋರ
ರೀತಿ ಕುಲದೋರು ಮನುಗಿಲ್ಲ ॥ ೨೨೦ ॥

ಕೊಂಡದ ಸುತ್ತ ಒಂದು ನಿಂಬೆ ಮರ
ಕಳ್ಳರು ಕೊಯ್ವಾಗ ಕಸುಗಾಯಿ । ತಿಮ್ಮವ್ವ
ನಿನ ಗಂಡ ಕೊಯ್ವಾಗ ಗಜನಿಂಬೆ ॥ ೨೨೧ ॥

* * * * *

## ಮಂಗಳ

ನುಗ್ಗೆ ಕಾಯಂಗೆ ಇಗ್ಗೀವ ಕಿರುಜಡೆ
ರುದ್ರಾನೆ ನನ್ನಯ್ಯ ಗದ್ದೀಗೆನೇರೋ
ಮಜ್ಜಿಗೆಯುರಿವೆ ಬೇಡಿ ಪುತ್ರ ಸಂತಾನ ಬೇಡಿ
ಎಚ್ಚೀಗೆ ಕೊಡೊ ನನ್ನ ಇರಿಯಟ್ಟೀಗೆ
ಜಯ ಮಂಗಳಾ ರಾಮ ಸುಬ ಮಂಗಳಾ ॥ ೨೨೨ ॥

ತಗಸೇಯ ಕಾಯಂಗೆ ಸೊಗುಸೀದ ಕಿರುಜಡೆ
ಸೊಗಸೇನೋ ನನ್ನಯ್ಯ ಮಂಚಾವನೇರೋ
ಆಲರಿವೆ ಬೇಡಿ ಬಾಲ ಸಂತಾನವ ಬೇಡಿ
ಏಳೀಗೆ ಕೊಡೋ ನನ್ನ ಇರಿಯಟ್ಟೀಗೆ
ಜಯ ಮಂಗಳಾ ರಾಮ ಸುಬ ಮಂಗಳಾ ॥ ೨೨೩ ॥

ಕಂಬೀಯ ಪಾದಾಕ ತುಂಬಾ ಸರಪಣಿ ಜಂಗು
ನಿಂಬೇ ಕಾಯೋಟು ಲಿಂಗ ವುದಿಯಯ್ಯ ಲಿಂಗ
ಚಿತ್ತವನಿಡಿದು ನಲುದಾಡೋ ಸ್ವಾಮೀಗೆ
ರೆಂಬೇ ಕನ್ನಿಕೇರು ಆರುತಿಯಾ ನೆತ್ತೀರೆ ॥
ಜಯ ಮಂಗಳಾ ರಾಮ ಸುಬ ಮಂಗಳಾ ॥ ೨೨೪ ॥

* * * * * *

# ಒರೆಗಲ್ಲು

**ಆಕೆ – ಆತ :**

ಕನ್ನಡದಲ್ಲಿ ಎರಡು ರೀತಿಯ ಪುರುಷಾರ್ಥಕ ಸರ್ವನಾಮಗಳಿವೆ.

೧) ಸ್ವತಂತ್ರ ಶಬ್ದಗಳುಳ್ಳ ಪುರುಷವಾಚಕ ಸರ್ವನಾಮಗಳು ಈ ವರ್ಗದಲ್ಲಿ ಬರುತ್ತವೆ. ಉತ್ತಮ ಹಾಗೂ ಮಧ್ಯಮಪುರುಷ ಸರ್ವನಾಮ ರೂಪಗಳು ಇಲ್ಲಿ ಸಮಾವೇಶವಾಗುತ್ತವೆ. ಇವುಗಳ ವೈಶಿಷ್ಟ್ಯವೆಂದರೆ, ಈ ರೂಪಗಳಿಗೆ ಲಿಂಗ ವಿವಕ್ಷೆ ಯಿಲ್ಲ. ಉದಾಹರಣೆಗೆ :

| | | |
|---|---|---|
| **ಉತ್ತಮ ಪುರುಷ** | ನಾನ್ (ನಾನು) | ನಾಮ್ (ನಾವು) |
| **ಮಧ್ಯಮ ಪುರುಷ** | ನೀನ್ (ನೀನು) | ನೀಮ್ (ನೀವು) |

೨) ಸ್ವತಂತ್ರ ಶಬ್ದಗಳಲ್ಲದ ಪುರುಷವಾಚಕ ಸರ್ವನಾಮಗಳು. ದರ್ಶಕ ಸರ್ವನಾಮ ಹಾಗೂ ಪುರುಷವಾಚಕ ಸರ್ವನಾಮ ಪ್ರತ್ಯಯ ಕೂಡಿ ನಿರ್ಮಾಣವಾದ ರೂಪಗಳು ಈ ವರ್ಗದಲ್ಲಿ ಬರುತ್ತವೆ. ಈ ರೂಪಗಳಲ್ಲಿ ಲಿಂಗಭೇದ ಕಂಡುಬರುತ್ತದೆ. ಪ್ರಥಮ ಪುರುಷ ಸರ್ವನಾಮಗಳೆಲ್ಲ ಇಲ್ಲಿ ಸಮಾವೇಶವಾಗುತ್ತವೆ.

ಉದಾಹರಣೆಗೆ :

| | | |
|---|---|---|
| ಪುಲ್ಲಿಂಗ | ಅವನ್ (ಉ)<br>ಇವನ್ (ಉ) | ಅವರ್ |
| ಸ್ತ್ರೀಲಿಂಗ | ಅವಳ್ (ಉ)<br>ಇವಳ್ (ಉ) | ಇವರ್ |

| | | |
|---|---|---|
| ನಪುಂಸಕಲಿಂಗ | ಅದು | ಅವು |
| | ಇದು | ಇವು |

ಈ ರೂಪಗಳನ್ನು ಕೆಳಗಿನಂತೆ ವಿಗ್ರಹಿಸಬಹುದು.

ಆ + ಅನ್ = ಆ + ವ್ + ಅನ್ = ಅವನ್
ಆ + ಅಳ್ = ಆ + ವ್ + ಅಳ್ = ಅವಳ್
ಆ + ದು = ಅದು.

ಪುರುಷವಾಚಕ ಸರ್ವನಾಮಗಳು ಉಳಿದ ನಾಮಪದಗಳಂತೆ ವಿಭಕ್ತಿಪ್ರತ್ಯಯ ಪಡೆಯುತ್ತವೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ನಮ್ಮ ವೈಯಾಕರಣರು ದ್ರಾವಿಡ ಲಕ್ಷಣವಾದ ಹಾಗೂ ಹಳಗನ್ನಡದಲ್ಲಿ ಕಂಡುಬರುತ್ತಿದ್ದ ಮಹತ್ವದ ಲಕ್ಷಣವೊಂದನ್ನು ಉಲ್ಲೇಖಿಸದೇ ಬಿಟ್ಟಿದ್ದಾರೆ. ಅದೇಂದರೆ, ಉತ್ತಮ ಪುರುಷ ಬಹುವಚನದಲ್ಲಿ ಸಮಾವೇಶಕ ಹಾಗೂ ಅಸಮಾವೇಶಕ ಭೇದ. ಹಳಗನ್ನಡದಲ್ಲಿ ಇದಕ್ಕೆ ಉದಾಹರಣೆಯಾಗಿ ರೂಪಗಳು ದೊರೆಯುತ್ತವೆ.[1] ಮಧ್ಯಮ ಪುರುಷ ರೂಪಗಳಾದ **ನೀನ್, ನೀವ್** ರೂಪಗಳು ಹೊಸಗನ್ನಡಲ್ಲಿ **ನೀನು, ನೀವು** ಎಂದೂ, ಉತ್ತಮ ಪುರುಷ ರೂಪಗಳಾದ **ನಾನ್, ನಾಮ್** ರೂಪಗಳು **ನಾನು, ನಾವು** ಎಂದಾಗಿವೆ.

ಪ್ರಥಮ ಪುರುಷ ರೂಪಗಳು ಲಿಂಗಭೇದ ಹೊಂದಿವೆ. ಏಕವಚನದಲ್ಲಿ ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗಗಳನ್ನು ಪ್ರತಿನಿಧಿಸುವ ಮೂರು ರೂಪಗಳಿವೆ. ಉದಾಹರಣೆಗೆ, **ಅವನ್, ಅವಳ್, ಅದು.** ಈ ಮೂರು ದೂರದಲ್ಲಿರುವ ವಕ್ತಿ, ವಸ್ತುವನ್ನು ನಿರ್ದೇಶಿಸುತ್ತವೆ. ಇದಕ್ಕೆ ಭಿನ್ನವಾಗಿ ಸಮೀಪದಲ್ಲಿರುವ ವ್ಯಕ್ತಿ, ವಸ್ತುವನ್ನು ನಿರ್ದೇಶಿಸುವ **ಇವನ್, ಇವಳ್, ಇದು** ರೂಪಗಳು ದೊರೆಯುತ್ತವೆ. ದೂರ. ಸಮೀಪಗಳ ನಡುವಿನ ಇನ್ನೊಂದು ರೀತಿಯ ರೂಪಗಳೂ ಇವೆ. **ಊವನ್** (ಆಂಡಯ್ಯ), **ಊಮನೆ** (ಸೂಕ್ತಿಸುಧಾರ್ಣವ) ಮುಂತಾಗಿ ಮಧ್ಯವರ್ತಿ ರೂಪಗಳೂ ಇವೆ, ಕೇಶಿರಾಜ **ಉವನ್, ಉವಳ್, ಉದು** ಎಂದು ಈ ಮಧ್ಯವರ್ತಿ ರೂಪಗಳನ್ನು ಕೊಡುತ್ತಾನೆ. ಏಕವಚಿನದ ಮೂರು ರೀತಿಯ ರೂಪಗಳಿಗೆ ಬದಲಾಗಿ ಬಹುವಚನದಲ್ಲಿ ಎರಡೇ ರೀತಿಯ ರೂಪಗಳಿವೆ. ಬಹುವಚನದಲ್ಲಿ ಮಾನವ, ಮಾನವೇತರ ಎಂಬ ಭೇದವಿದೆ. ಪುಲ್ಲಿಂಗ, ಸ್ತ್ರೀಲಿಂಗ ರೂಪಗಳು ಮಾನವ

---

1. ಅ) ಆರ್. ನರಸಿಂಹಾಚಾರ್. –History of Kannada Language P. 84
   ಬ) ಡಾ. ಕೆ. ಕೆ. ಗೌಡ. –Pronouns in Vaddāradhane-Indian Linguistics.

ಬಹುವಚನದಲ್ಲಿಯೂ ನಪುಂಸಕಲಿಂಗರೂಪಗಳು ಮಾನವೇತರ ಬಹುವಚನದಲ್ಲಿಯೂ ಸಮಾವೇಶವಾಗುತ್ತವೆ.

ಈ ವರೆಗೆ ವಿವೇಚಿಸಿದ ರೂಪಗಳು ನಮಗೆ ಯಾವ ತೊಂದರೆಯನ್ನೂ ಒಡ್ಡುವ-ದಿಲ್ಲ.

ಇನ್ನೊಂದು ರೀತಿಯ ಪ್ರಥಮ ಪುರುಷ–ಅದೂ ಏಕವಚನ–ರೂಪಗಳಿವೆ. ಅಲ್ಲಿಯೂ ದೂರ, ಸಮೀಪವನ್ನು ಅನುಸರಿಸಿ ಎರಡು ರೀತಿಯ ರೂಪಗಳಿವೆ. ಅವೆಂದರೆ,

ಆತ — ಈತ
ಆಕೆ — ಈಕೆ

ಇಲ್ಲಿ ನಾನು ವಿಚಾರಮಾಡಲು ಉದ್ದೇಶಿಸಿರುವುದು ಈ ರೂಪಗಳನ್ನು ಕುರಿತು.

**ಆಕೆ :–**

**ಆಕೆ, ಈಕೆ, ಊಕೆ** ನಮ್ಮ ವೈಯಾಕರಣರು ಕೊಟ್ಟ ಸ್ತ್ರೀಲಿಂಗ ರೂಪಗಳು. ಪ್ರಥಮ ಪುರುಷದ ಈಗಾಗಲೇ ವಿವರಿಸಿದ ರೂಪಗಳಂತೆಯೇ ಇವನ್ನೂ ವಿವರಿಸ-ಬಹುದು.

ಆ + ಕೆ
ಈ + ಕೆ
ಊ + ಕೆ

ಇಲ್ಲಿ ಆ, ಈ, ಊ ರೂಪಗಳು ದರ್ಶಕ ಸರ್ವನಾಮಗಳು. ಅಲ್ಲಿ ಯಾವ ಸಮಸ್ಯೆಯಿಲ್ಲ. ಈಗ ಸಮಸ್ಯೆ ಅಡಗಿರುವುದು ಅವುಗಳಲ್ಲಿಯ ಇನ್ನೊಂದು ಘಟಕವಾದ **ಕೆ** ರೂಪದಲ್ಲಿ

ತಮಿಳಿನಲ್ಲಿ **ಕೆಯ್** ಎಂಬ ಶಬ್ದವಿದೆ. ಸ್ತ್ರೀಲಿಂಗ ಸೂಚಕವಾದ ಆ ಶಬ್ದ ಸ್ವತಂತ್ರವಾಗಿಯೂ, ಇತರ ಶಬ್ದಗಳೊಡನೆ ಸೇರಿಯೂ ಬಳಕೆಯಾಗುತ್ತಿತ್ತು.
ಉದಾಹರಣೆಗೆ,

ಕೆಯ್ — ಸಹೋದರಿ
ತಂಗೆಯ್ — ಸಹೋದರಿ

ಕಾಲ್ಡ್‌ವೆಲ್ ಅವರ ಪ್ರಕಾರ **ತಾನ್** ರೂಪದಿಂದ ಆದರಾರ್ಥದಲ್ಲಿ ಬಳಕೆಯಾಗುವ **ತಂಗೆಯಳ್** — 'ತಂಗಿ' ಶಬ್ದವಿದೆ. **ಕೆಯಳ್** ಶಬ್ದದ ಮೂಲ ಅಸಂದಿಗ್ಧವಾಗಿಲ್ಲ. ಆದರೂ, ಅದು ಸಾಮಾನ್ಯವಾಗಿ 'ಸ್ತ್ರೀ' ಅರ್ಥದಲ್ಲಿ ಬಳಕೆಯಾಗುತ್ತದೆ. (ಮಂಗೆಯಳ್– 'ಹುಡುಗಿ' ರೂಪದಲ್ಲಿಯೂ ಈ **ಕೆಯಳ್** ರೂಪ ಇದ್ದಂತೆ ಕಾಣುತ್ತದೆ.) ಆದರೂ ಇದಕ್ಕೆ ವಿರುದ್ಧವಾಗಿ ತಮಿಳು ಕವಿಗಳು ಬಳಸಿರುವ **ಕೆಯೆಯಳ್** ಶಬ್ದದಲ್ಲಿಯೂಈ **ಕೆಯಳ್** ರೂಪವಿರುವುದನ್ನು ಕಾಣಬಹುದು[2].

ಕನ್ನಡದಲ್ಲಿ **ತಂಗೆಯಳ್**[3], **ತಂಗೆ**[4] ರೂಪಗಳನ್ನು ಪಂಪ ಬಳಸಿರುವುದನ್ನು ಕಾಣಬಹುದು. ಪದಾಂತ್ಯ **ಎ** ಧ್ವನಿ ಇ ಆಗುವುದು ಕನ್ನಡದ (ವಿಶೇಷವಾಗಿ ಉತ್ತರ ಕರ್ನಾಟಕದ) ಒಂದು ಸಾಮಾನ್ಯ ಲಕ್ಷಣ. ಈ ಕಾರಣಕ್ಕಾಗಿ ಆ ರೂಪ ಈಗ **ತಂಗಿ** ಆಗಿದೆ. ಇದೆ ರೀತಿ, **ಕೆಯಳ್** ರೂಪದಲ್ಲಿಯ **ಯಳ್** ಬಿದ್ದುಹೋಗಿ **ಕೆ** ರೂಪ ಉಳಿದಿದೆ. ದರ್ಶಕ ಸರ್ವನಾಮ ರೂಪಗಳಾದ **ಆ, ಈ, ಊ** ರೂಪಗಳೊಡನೆ ಈ **ಕೆಯಳ್** ಸೇರಿ, ಈಗಿರುವ **ಆಕೆ, ಈಕೆ,** (ಊಕೆ) ರೂಪಗಳು ಬೆಳೆದು ಬಂದಿವೆ. ಅಂದರೆ **ಆಕೆ** ಅಂದರೆ ಆ ಹೆಂಗಸು, **ಈಕೆ** ಅಂದರೆ ಈ ಹೆಂಗಸು.

**ಆತ :–**

ಇಲ್ಲಿಯೂ ಮೂರು ರೂಪಗಳಿವೆ. ಅವೆಂದರೆ, ಆತ, ಈತ, (ಊತ). ಇವನ್ನೂ ಹಿಂದಿನಂತೆಯೇ

ಆ + ತ
ಈ + ತ
ಊ + ತ

ಎಂದು ವಿಗ್ರಹಿಸಬಹುದು. ಹಿಂದಿನಂತೆಯೇ ಮೊದಲನೆಯ ಘಟಕ ದರ್ಶಕ ಸರ್ವನಾಮ. ಎರಡನೆಯ ಘಟಕ **–ತ**. ಈ **–ತ** ಏನೆಂಬುದೇ ಈಗ ಸಮಸ್ಯೆ. ನಮ್ಮ ವ್ಯಾಕರಣಗಳಲ್ಲಿ ಕಂಡುಬರುವ ಈ ಪದಗಳ ಹಳೆಯ ರೂಪಗಳು **ಆತನ್, ಈತನ್, ಊತನ್**. ಇವುಗಳಲ್ಲಿಯ ದರ್ಶಕ ಸರ್ವನಾಮ ಘಟಕವನ್ನು ತೆಗೆದುಬಿಟ್ಟರೆ –ತನ್ ಉಳಿಯುತ್ತದೆ. ಈ **–ತನ್** ರೂಪ ಆತ್ಮಾರ್ಥಕ ಸರ್ವನಾಮ ರೂಪವಾದ **–ತಾನ್** ರೂಪದೊಡನೆ

---

2. ಕಾಲ್ಡ್‌ವೆಲ್ –ಪು. ೪೦೦
3. ಪಂ. ಭಾ. ೨–೪೩–೫; ೮–೯೭–೫
4. ಅದೇ. ೩–೧೧–೫

ಸಂಬಂಧ ಹೊಂದಿದೆ ಎಂದು ಹೇಳಬಹುದು. ಅಂದರೆ ಈ ರೂಪಗಳು **ಆತಾನ್, ಈತಾನ್, ಊತಾನ್** ಎಂದಿರಬೇಕು. ಮುಂದೆ ಅವು ಬದಲಾವಣೆ ಹೊಂದಿ. **ಆತನ್, ಈತನ್, ಊತನ್** ಎಂದಾದವು. ಈ ರೂಪಗಳ ಬೆಳವಣಿಗೆಯನ್ನು ಕೆಳಗಿನಂತೆ ತೋರಿಸಬಹುದು.

ಆ + ತಾನ್ > ಆ + ತನ್ > ಆ + ತ > ಆತ
ಈ + ತಾನ್ > ಈ + ತನ್ > ಈ + ತ > ಈತ

ಈ ರೂಪಗಳಲ್ಲಿಯ ಪದಾಂತ್ಯ ಅನುನಾಸಿಕ ಬಿದ್ದು ಹೋಗಿರುವುದು ಅಪವಾದಾತ್ಮಕ ಲಕ್ಷಣವೇನಲ್ಲ. ಇಂಥ ಪ್ರಕ್ರಿಯೆ ಉಳಿದೆಡೆಯಲ್ಲಿಯೂ ಕಂಡುಬರುತ್ತದೆ. **ಅವನ್, ಇವನ್** ರೂಪಗಳಲ್ಲಿಯ ಅಂತ್ಯ **ನ್** ಲೋಪಹೊಂದಿ, **ಅವ, ಇವ** ಎಂಬ ರೂಪಗಳು ಬಳಕೆಯಾಗುತ್ತಿರುವುದು ನಮಗೆ ಅರಿಯದ ವಿಷಯವೇನಲ್ಲ.

ಮೇಲಿನ ವಿವೇಚನೆಯಿಂದ ಈ ರೂಪಗಳ ನಿಷ್ಪತ್ತಿಯ ಜೊತೆಗೆ ಇನ್ನೂ ಒಂದು ಹೊಸ ಅಂಶ ಬೆಳಕಿಗೆ ಬರುತ್ತದೆ. ಸನ್ಮಾನಾರ್ಥದಲ್ಲಿಯೂ ಬಳಕೆಯಾಗುತ್ತಿದ್ದ ಆತ್ಮಾರ್ಥಕಗಳು ಈ ವರೆಗೆ ಉತ್ತಮ, ಮಧ್ಯಮ ಪುರುಷಗಳಲ್ಲಿ ಮಾತ್ರ ಇವೆಯೆಂದು ನಮ್ಮ ವೈಯಾಕರಣರು ಅಷ್ಟರ ಮಟ್ಟಿಗೆ ವಿವೇಚನೆ ಮಾಡಿದರು. ಈ ಮೇಲಿನ ವಿವೇಚನೆಯಿಂದ ಈ ಆತ್ಮಾರ್ಥಕ– ಇನ್ನೂ ಖಚಿತವಾಗಿ ಸನ್ಮಾನಾರ್ಥಕಗಳು– ಪ್ರಥಮಪುರುಷದಲ್ಲಿಯೂ ಕಂಡುಬರುತ್ತವೆ ಎಂಬುದನ್ನು ನಾವೀಗ ಪ್ರಸ್ಥಾಪಿಸಬಹುದು. ಇದಕ್ಕೆ ಇನ್ನೂ ಒಂದು ಆಧಾರ ಆ ರೂಪಗಳಲ್ಲಿಯೇ ಇದೆ. ಅದೆಂದರೆ **ಆತ, ಈತ** ರೂಪಗಳು ಏಕವಚನದಲ್ಲಿ ಮಾತ್ರ ಇವೆಯೆಂಬುದು ಗಮನಾರ್ಹ. ಬಹುವಚನದಲ್ಲಿ ಗೌರವಸೂಚನೆ ಇದ್ದೇ ಇದೆ. ಸನ್ಮಾನಾರ್ಥಕ ಏಕವಚನವನ್ನು ಆ ಸಂದರ್ಭದಲ್ಲಿ ಬಳಸಲು ಈ ರೂಪಗಳು ಬಳಕೆಯಾಗುತ್ತಿದ್ದವು. ಉದಾಹರಣೆಗೆ : ವಡ್ಡಾರಾಧನೆಯಲ್ಲಿ ಬಳಕೆಯಾದ ಈ ರೂಪಗಳ ಕೆಳಗಿನ ಸಂದರ್ಭಗಳನ್ನು ಗಮನಿಸಬಹುದು.

'ಆ ಜಂಬೂದ್ವೀಪದ ಭರತ ಕ್ಷೇತ್ರದೊಳ್ ವತ್ಸೆಯೆಂಬುದು ನಾಡಲ್ಲಿ ಕೌಸಂಬಿಯೆಂಬುದು ಪೊೞಲನಾಳ್ವೊನತಿಬಳನೆಂಬರಸ**ನಾತನ** ಮಹಾದೇವಿ ಮನೋಹರಿ' (ಪು. ೨ ಸಾಲು ೮)

'ಎಲ್ಲಾ ಓದುಗಳುಮಂ ಬಲ್ಲೊ**ನಾತಂ** ನಿಮ್ಮನೋದಿಸಿ ಯೋಗ್ಯರಂ ಮಾಡುವಂತಿರೆ.' (ಪು. ೩ ಸಾಲು ೪)

**'ಈತಂ** ಭವ್ಯನೆಂದರಿದು'. (ಪು. ೫ ಸಾಲು ೧೦)

ಕನ್ನದ ಬಾಗಿಲೊಳಾ ಬಾಳನಡ್ಡಮಿಟ್ಟು ಪಿಡಿದಿರ್ದು ಪುಗುವ ಕಳ್ಳನ ಮೂಗನರಿ **ದೊಡವಂ** ಪೊಱಮಟ್ಟು.' (ಪು. ೧೯ ಸಾ. ೩)

**ಆತ, ಈತ** ರೂಪಗಳು ದೊಡ್ಡ ವ್ಯಕ್ತಿಗಳ ವಿಷಯದಲ್ಲಿಯೂ, **ಅವಂ** ರೂಪ ಕಳ್ಳ ಮುಂತಾದವರ ವಿಷಯದಲ್ಲಿಯೂ ಬಳಕೆಯಾಗುತ್ತಿರುವುದು ಮೇಲಿನ ನಮ್ಮ ನಿರ್ಣಯಕ್ಕೆ ಪುಷ್ಟಿಯನ್ನೊದಗಿಸುತ್ತದೆ.

ನಮ್ಮ ಕಾವ್ಯಗಳಲ್ಲಿ ಬರುವ **ಆತ, ಈತ** ರೂಪಗಳನ್ನು ಬರಿ ಪ್ರಥಮ ಪುರುಷ ಏಕವಚನ ರೂಪಗಳೆಂದು ಅರ್ಥೈಸದೆ ಈ ಅರ್ಥದಲ್ಲಿ ಈಗ ನೋಡಬೇಕು.

ಈಗಲೂ ಬಳ್ಳಾರಿ, ರಾಯಚೂರು ಪ್ರದೇಶಗಳಲ್ಲಿ ಎಂಥ ದೊಡ್ಡ ವ್ಯಕ್ತಿಗೂ ಆತ ಎಂದೇ ಬಳಸುತ್ತಿರುವುದನ್ನು ಗಮನಿಸಬಹುದು.

— **ಜಯವಂತ ಕುಳ್ಳಿ**

●

# ಗ್ರಂಥಾವಲೋಕನ

● ನಿಂಗಣ್ಣ ಸಣ್ಣಕ್ಕಿ

## ೧) ಹಕ್ಕಿನೊಡೆಯರ ಹಾಡು :

ಮೇಘಮಿತ್ರ; ಮಿತ್ರ ಭಾರತಿ ಪ್ರಕಾಶನ, ಅಗಷ್ಟ ೧೯೭೭; ಪು. ೬೮; ಬೆಲೆ : ಮೂರು ರೂಪಾಯಿಗಳು.

'ಮೇಘಮಿತ್ರ' ಎಂಬ ಕಾವ್ಯನಾಮದಿಂದ ಪ್ರೊ. ಪಿ. ವ್ಹಿ. ವಜ್ರಮಟ್ಟಿಯವರ 'ಅಗ್ನಿತುಷಾರ' ಕನ್ನಡ ಕೃತಿಯಿಂದ, 'ಮಿಟ್ಟೀಕೆ ಫೂಲ' ಹಿಂದಿ ಕೃತಿಯಿಂದ ಕನ್ನಡದಲ್ಲಿ ಹೆಸರುವಾಸಿಯಾಗಿದ್ದಾರೆ. ಈಗ '**ಹಕ್ಕಿನೊಡೆಯರ ಹಾಡು**' ಎಂಬ ಅವರ ಕವಿತಾ ಸಂಕಲನವು ವಾಡಿಕೆಯ "ನವ್ಯ" ಕವಿತೆಗಳ ಪದ್ಧತಿಯಿಂದ ಬೇರೆಯಾಗಿ ನಿಂತಿಲ್ಲವಾದರೂ ಕವಿಯು ವಾಸ್ತವಿಕ ಜೀವನದ ಅಂಶಗಳನ್ನು ನಿಚ್ಚಳವಾಗಿ ಬಿಚ್ಚಿ ಚಿತ್ರಿಸಿದ್ದಾನೆ.

'ಹಕ್ಕಿನೊಡೆಯರ ಹಾಡು' ಸಂಕಲನ, ಇಪ್ಪತ್ತೇಳು (ಲಲಿತಾ ದಲಿತಾ ೧ ಮತ್ತು ೨ ಸೇರಿ) ಕವನಗಳನ್ನು ತುಂಬಿಕೊಂಡಿವೆ. 'ಹಕ್ಕಿನೊಡೆಯರ ಹಾಡು' ಕವಿತೆಯೊಂದೇ ಎರಡುನೂರಾತೊಂಬತ್ತಾರು ಸಾಲುಗಳಿಂದ ಕೂಡಿಕೊಂಡಿದೆ. ಕವಿಯು ಭಾವನೆಯು ತನ್ನ (ವ್ಯಕ್ತಿಯ) ಹಕ್ಕಿನಿಂದ ದೇಹದ ಹಕ್ಕಿನವರೆಗೆ ಹೋರಾಟ ನಡೆಸಿವೆ. ಅನ್ಯಾಯ–ಅಸತ್ಯ ಕಂಡು ಕವಿವಾಣಿ ಗುಡುಗಿದೆ. 'ಈ ರಕ್ತ ನಮ್ಮದು ದಾನ ಧರ್ಮದ್ದಲ್ಲ; ಹಿಂದು ದೇಶದ ಮೇಲೆ ಹಿಂದುಗಳದೇ ಹಕ್ಕು, ಬೆವರು ಸುರಿಸವರೆಲ್ಲ ಹಕ್ಕುದಾರರು ಇಲ್ಲಿ' ಎಂಬ ಮಾತುಗಳು ಪ್ರಗತಿಯ ವೈಚಾರಿಕತೆಯನ್ನೂ ಪ್ರಜ್ಞೆಯನ್ನೂ ಬೀರಿವೆ.

ನಗರದ ಕ್ಲಬ್ಬು–ಲಾಜಿಂಗಗಳಲ್ಲಿ ನಡೆಯುವ ವಿಲಾಸವನ್ನು ಕಂಡು ಕವಿ ಮೇಘಮಿತ್ರ ಗುಡುಗಿದ್ದಾರೆ. ಗುಡಿಸಿಲಿನಲ್ಲಿರುವ ಹಾಗೂ ಮಹಡಿಯ ಮೇಲೆ ಮೇಲಾಟವಾಡುವ ಜನಗಳ ಅಂತರ ತಗ್ಗಬೇಕೆನ್ನುವ ಮನ ಸ್ಪಷ್ಟವಾಗಿ ತೋರಿದೆ.

ಶೋಷಕ–ಶೋಷಿತ ಸಂಬಂಧಿತ ವಸ್ತುಗಳೇ ಕವನಗಳಾಗಿವೆ. ಜಾತಿ, ಭಾಷೆ, ಪ್ರಾಂತ, ದೇವರು, ಶಾಸ್ತ್ರ, ಅಹಿಂಸೆ ಕ್ರಾಂತಿ ಇತ್ಯಾದಿಗಳನ್ನು ಉಪಯೋಗಿಸಿ ಜನಕ್ಕೆ ಕ್ರಾಂತಿಯ ಬೋಧೆ ಸೂಚಿತವಾಗಿ ಕಾಣುತ್ತದೆ.

'ಲಲಿತಾ ದಲಿತಾ' ಕವಿತೆ, ಪ್ರಗತಿಶೀಲರ ಹಾಡು. ಹಾಗೆಯೇ 'ಸಂಪೂರ್ಣ ಕ್ರಾಂತಿ'! ಈ ಕವಿ ಮಾರ್ಕ್ಸವಾದವನ್ನು ಒಪ್ಪಿದವನು. ಆದರೆ ಕಾವ್ಯದ ಧ್ವನಿ ಗುಡುಗಿದಂತೆ ಜನತೆ ಕೇಳಿ ತಿಳಿದರೆ, ಅನ್ಯಾಯ–ಅಸತ್ಯಗಳನ್ನು ಹರೆದೊಗೆದು ನ್ಯಾಯ–ಸತ್ಯದ ಮೇಲೆ ಬಾಳಬಹುದು. ಆಗ ಕವಿ ಕಾವ್ಯ ಸಾರ್ಥಕ. ನಮ್ಮ ಜನ ಅನೇಕ ಜಡ್ಡುಗಳಿಂದ ಜಜ್ಜಿ ಹೋಗಿದ್ದಾರೆ. ಚರ್ಮ ದಪ್ಪಾಗಿ ತೊಗಲಿನಂತಾಗಿದೆ! ಕವಿಯ ಕೂಗು ಮೈ ಮಿದುಳಿಗೆ ತಾಗಬಹುದೇ ? ಎಂಬ ಪ್ರಶ್ನೆ ಎದುರು ನಿಲ್ಲುವುದು.

'ಮಕ್ಕಳಿವರೇ ಅಮ್ಮ ಮಕ್ಕಳಿವರು!' ಕವಿತೆ ಗರ್ಭಿತ ಹಾಡಾದರೂ ಶಸ್ತ್ರದ ಬಲ ತಂದುಕೊಳ್ಳುವ ಪ್ರಯತ್ನ ಸಾಗಿವೆ.

ಕವಿ, ಕನ್ನಡ, ಹಿಂದಿ ಇಂಗ್ಲಿಷ, ಸಂಸ್ಕೃತ ಭಾಷೆಗಳನ್ನು ಬಲ್ಲವನಾದುದರಿಂದ: ಕನ್ನಡದ ಕವನಗಳನ್ನು ರಚಿಸುವಾಗ, ಬೇರೆ ಭಾಷೆಗಳ ಉಕ್ತಿಗಳನ್ನು ಬಳಸಿ ಒಂದು ಗಟ್ಟಿಯನ್ನು ಮಾಡಲು ಹೊರಟಿರುವನು. ಆದರೆ ಇವೆಲ್ಲವುಗಳ ತಾರತಮ್ಯ ಸೇರಿದರೂ ಓದುಗರಿಗೆ ತೊಡಕು ಎನಿಸದಿರದು. ಟ್ಯೂಬು–ಪಂಕ್ಚರು=ಪ್ಯಾಚು!! ಮತ್ತು ಅಂತರಾತ್ಮಾ ಉವಾಚ! ಭಾರತ ಮಾತಾ ಉವಾಚ! ಕವಿತೆಗಳು ಭಾಷೆಗಳ ಮಿಶ್ರಗಳನ್ನು ಹೊಂದಿದವುಗಳಾಗಿವೆ. ಭಾಷೆಗಳನ್ನು ಬಲ್ಲವರಿಗೆ ಒಂದು ರೀತಿ ತಿಳಿದರೂ, ಓದಿ ಮುಗಿಸಿದಾಗ, ಉಳಿಯುವದಿಲ್ಲ! ಕೆಲವು ಕವಿತೆಗಳು ಕೇವಲ ವ್ಯಂಗ್ಯ ಗೀತೆಗಳಾಗುತ್ತವೆ. 'ಕೊಳೆತ ಸಂಸ್ಕೃತಿ'ಯಲ್ಲಿ ಸಿಕ್ಕವರ ಬಗ್ಗೆ ಪಾರಾಗುವ ವ್ಯವಸ್ಥೆಯನ್ನುಹೇಳ ಬೇಕಾಗಿತ್ತು!

ಬಿಜಾಪೂರ ಪ್ರದೇಶದ ಮಣ್ಣಿನ ವಾಸನೆಯೊಂದಿಗೆ ಬೆಳೆದ ಕವಿ ಮೇಘಮಿತ್ರರು ಹಕ್ಕು ಮತ್ತು ಹೋರಾಟವನ್ನು 'ಹಕ್ಕಿನೊಡೆಯರ ಹಾಡು' "ಸರ್ವರಿಗೆ ಸಮಬಾಳು" ಎಂಬ ಉಕ್ತಿಯನ್ನು ಎತ್ತಿ ತೋರಿಸಿದೆ. ಇವರ ಜಾನಪದ ಶಿಲ್ಪ ಪ್ರಗತಿಯ ಹಾದಿಯನ್ನು ಹಿಡಿದದ್ದು ಸ್ತುತ್ಯವಾಗಿದೆ.

### ಚೇತನ (ಕವನ ಸಕಲನ):

ಸಂ. 'ಸಾಹಿತ್ಯಾನಂದ', –ಕೆ. ವಿರೂಪಾಕ್ಷಗೌಡ; ನಿವೇದಿತ ಪ್ರಕಾಶನ, ಬೆಂಗಳೂರು: ೧೯೭೬; ಪುಟ : ೧೧೭; ಬೆಲೆ : ಎಂಟು ರೂಪಾಯಿಗಳು.

ಇಬ್ಬರು ಸಂಪಾದಕರು ಸೇರಿ ಬಳ್ಳಾರಿ ಜಿಲ್ಲೆಯ ಇಪ್ಪತ್ತೊಂದು ಕವಿಗಳ ಕೃತಿಗಳನ್ನು ಪ್ರಕಟಿಸಿದ್ದೇ 'ಚೇತನ'ವಾಗಿದೆ.

ಪ್ರಾರಂಭದಲ್ಲಿ, ಹಿಮನಾ ಅವರ ಕವಿತೆಗಳು ಯಾವುದನ್ನೂ ಖಚಿತವಾಗಿ ಹೇಳುವುದಿಲ್ಲ. "ಭುವಿ ಇಂದು ನಾಕ"! ಕವಿತೆಯಲ್ಲಿ 'ಬಾಲಭಾಸ್ಕರ ತನ್ನ ಲಕ್ಷ ಕರಗಳ

ಚಾಚಿ !' ಎಂದು ಹೇಳುವುದು ಸರಿಯಲ್ಲ. ಅಸಂಖ್ಯಾತ ಕರಗಳನ್ನು ಹೀಗೆ ಊಹಿಸು-ವುದು ಯೋಗ್ಯವೆನಿಸಲಾರದು. ಪ್ರಾರಂಭದ ಸಾಲುಗಳು ಕವಿಯ ತಾಳ್ಮೆಗೆ ನಿದರ್ಶನ-ಗಳಾಗಿವೆ.

'ವಿಷವ ನೀಡು
ಕುಡಿವೆ ನಾನು
ಅಮೃತ ನನ್ನ ಜೀವನ'

ಮುದೇನೂರ ಸಂಗಣ್ಣ ಅವರ 'ಗೋಣಸು' ಕವಿತೆ ಆಡು ಮಾತಿನ ಬಳಕೆಯೊಂದಿಗೆ ಸವಿ-ಯಾಗಿದೆ. ತಿಂಗಳ ಸೂಡಿದನ್ನರ ತ್ರಿವಿಕ್ರಮನ ಹೆಜ್ಜೆ ಮಾತ್ರ ಪ್ರಯತ್ನ ಪೂರ್ವಕ ರಚನೆ.

ಕೆ. ಚನ್ನಬಸವನಗೌಡರ 'ನುಡಿದೇವಿ'; ಸೂಗೂರೇಶರ 'ಹಂಸಗೀತೆ', ಮೂರ್ತಿ-ಯವರ 'ಆಧುನಿಕತೆ', ಸ್ವಯಂಭೂ ಅವರ 'ನಾನು ಮೇಷ್ಟ್ರು ಆಗುವೆನು', ನರಸಿಂಹ ಕುಮಾರರು 'ಕನ್ನಡ ನಾಡು'; ಕೆ. ಎಚ್. ಶ್ರೀಧರರ 'ಅನ್ನ ತಿನ್ನುವ ಜಾತಿ'; ಬ. ಮ. ತಾ. ಬೃಹನ್ಮಠರ ಕವಿತೆಗಳು. ಗುರು ಅವರ 'ಪ್ರೇಮಗೀತೆ'; ನಾ. ಮ. ಬಸವ ರಾಜ ಬಸವಣ್ಣ ಕವಿತೆ, ಕಲ್ಲೇಶ ಇಟಗಿಯವರ 'ದಳ್ಳಾಳಿ' ಕವಿತೆ, ವಿ. ಎಲ್. ಜೋಶಿ 'ಪಥಿಕ', ಕೆ. ವಿರುಪಾಕ್ಷಗೌಡರ 'ಕೋರಿಕೆ', ಎಚ್. ಎಮ್. ಮರುಳ ಸಿದ್ಧಯ್ಯನವರ 'ಹನಿಗವನಗಳು' ಕವಿತಾ ಮಟ್ಟದವುಗಳೆಂದು ಕರೆಯಬಹುದು. ಇವರೆಲ್ಲ ಭಾವದ ಜಂಜಾಟದ ನವ್ಯದ ಪರಿಸರದ ಸ್ಪಂದನಕ್ಕೆ ನಿಂತವರು. ಹೊ. ಮ. ಪಂಡಿತಾರಾಧ್ಯರ 'ಸೂಳೆ' ವೈಚಾರಿಕವಾದುದು. ನ. ಮ. ಕೋ. 'ಸೋಗಿಯವರ ಬದುಕುವಾಸೆ' ವೈಚಾರಿ ಕತೆಯ ಬೆವರು.

ಕೆ. ಬಿ. ಹನಮಂತರಾಯರು 'ತಾಳ–ತಂಬೂರಿ'ಯಲ್ಲಿ ಜಾನಪದ ಪದಪುಂಜ-ಗಳನ್ನೆಲ್ಲ ಬಳಸಿಕೊಂಡಿದ್ದಾರೆ.

ಉದಾ :– ಅಂಗೈಯಲ್ಲಾಡುವ ಹಕ್ಕಿ
ಮುಂಗೈಯಲ್ಲಾಡುವ ಹಕ್ಕಿ
ರಾಮು ರಾಮು ಎಂಬೋ ಹಕ್ಕಿ
ಮುದ್ದಿನ ಮಾತಿನ ಹಕ್ಕಿ

ಈ ಸಾಲುಗಳನ್ನು ಬಳ್ಳಾರಿ ಭಾಗದ ವೃತ್ತಿಗಾಯಕರು ತಲೆಮಾರುಗಳಿಂದ ಹಾಡುತ್ತ ಬಂದಿದ್ದಾರೆ.

ಸಾಹಿತ್ಯಾನಂದರು 'ನನ್ನದು ಇದು ಈ ಕನ್ನಡನಾಡು' ಎಂಬ ಕವಿತೆಯನ್ನು ಭಾವ-ಗೀತೆಯ ಧಾಟಿಯಲ್ಲಿ ಹಾಡಿಕೊಂಡಿದ್ದಾರೆ. 'ರಾಮು ನಾಮು ಜಾಣ್ಮೆ' 'ಈ ಇವು !', 'ಹಾದಿ' 'ಸತ್ತ ಜನರೇ, ಸತ್ತ ಜನರೇ' ಮತ್ತು 'ಶಿಗಣೆ' ಈ ಕವಿತೆಗಳಲ್ಲಿ ನವ್ಯದ ಮಿಡಿತ ಇದೆ.

# ಸಂಪಾದಕೀಯ

## ಕುಲಪತಿಗಳ ವಿದೇಶ ಸಂಚಾರ

ನಮ್ಮ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ಸದಾಶಿವ ಒಡೆಯರವರು ಈ ಹಿಂದೆಯೇ ಉಚ್ಚ ಶಿಕ್ಷಣ ಹಾಗೂ ಆಡಳಿತ ತಜ್ಞರೆಂಬ ಕಾರಣದಿಂದಾಗಿ ಆಮಂತ್ರಿತರಾಗಿ ಇಂಗ್ಲಂಡ್, ಅಮೇರಿಕಾ ದೇಶಗಳಿಗೆ ಹೋಗಿ ಬಂದವರು. ಈಗ ಕುಲಪತಿಗಳಾದ ಮೂರು ತಿಂಗಳಲ್ಲಿಯೇ ಮತ್ತೊಮ್ಮೆ ಕೆನಡಾ ದೇಶದ ವೆಂಕೋವರದಲ್ಲಿ ಹೋದ ಅಗಸ್ಟ ೧೬ ರಿಂದ ೨೪ ರ ವರೆಗೆ ಜರುಗಿದ ಕಾಮನ್‌ವೆಲ್ಥ ವಿಶ್ವವಿದ್ಯಾಲಯಗಳ ಕುಲಪತಿಗಳ ಸಮ್ಮೇಳನದಲ್ಲ ಭಾಗವಹಿಸುವ ಭಾಗ್ಯ ಒದಗಿಬಂದಿತು. ಕಾಮನ್‌ವೆಲ್ಥ ವಿಶ್ವವಿದ್ಯಾಲಯಗಳ ಸಮಸ್ಯೆಗಳನ್ನು, ಅದರಲ್ಲಿಯೂ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ವಿಶೇಷವಾಗಿ ಅನ್ವಯಿಸುವವನ್ನು, ಅಲ್ಲಿ ಚರ್ಚಿಸಲಾಯಿತೆಂದು ತಿಳಿದುಬರುತ್ತದೆ. ಅವುಗಳಲ್ಲಿ ಅತಿ ಮಹತ್ವದ ವಿಷಯವಾಗಿದ್ದ "ರಾಷ್ಟ್ರೀಯ ಅಭಿವೃದ್ಧಿಯಲ್ಲಿ ವಿಶ್ವವಿದ್ಯಾಲಯಗಳ ಪಾತ್ರ" ಎಂಬುದರ ಚರ್ಚೆಯಲ್ಲಿಯೂ, ಕಾಮನ್‌ವೆಲ್ಥ ವಿಶ್ವವಿದ್ಯಾಲಯಗಳ ನಿರ್ವಾಹಕ ಮುಖ್ಯಸ್ಥರ ಸಭೆಯಲ್ಲಿಯೂ ಶ್ರೀ ಒಡೆಯರವರು ಪ್ರಭಾವಶಾಲಿಗಳಾಗಿ ಭಾಗವಹಿಸಿದರೆಂದೂ ಕೇಳುತ್ತೇವೆ. ಈ ಅಭಿಮಾನಾಸ್ಪದ ಸಾಧನೆಗಾಗಿ 'ಭಾರತಿ' ಯು ಅವರಿಗೆ ಸಹರ್ಷ ಅಭಿನಂದನೆಗಳನ್ನು ಸಲ್ಲಿಸುತ್ತದೆ.

## ಡಾ. ಕಾರಂತರಿಗೆ ಸನ್ಮಾನ

ಕಳೆದ ದಿನಾಂಕ ೧೭-೯-೧೯೭೮ ರಂದು ವಿಶ್ವವಿದ್ಯಾಲಯದ ಪರವಾಗಿ ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ. ಶಿವರಾಮ ಕಾರಂತರನ್ನು ಅಭಿಮಾನ ಪೂರ್ವಕವಾಗಿ ಸನ್ಮಾನಿಸಲಾಯಿತು. ಆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿ ಶ್ರೀ ಒಡೆಯರವರು " ಡಾ. ಕಾರಂತರು ಒಂದು ವ್ಯಕ್ತಿಯಲ್ಲ; ಒಂದು ಸಂಸ್ಥೆ " ಎಂಬುದನ್ನು ಬಿಂಬಿಸುತ್ತ, ನಿಜವಾದ ಜೀವನಾನ್ವೇಷಕರಾದ ಅವರ ಹಲವು ಆಸಕ್ತಿಗಳ, ಸಾಹಸಗಳ, ಸಾಧನೆಗಳ ಪ್ರಸ್ತಾಪ ಮಾಡಿದರಲ್ಲದೆ, ಅವರ ಪ್ರಸಿದ್ಧ ಕೃತಿಗಳೆಲ್ಲದರ ಸೂಕ್ತ ಆಂಗ್ಲ ಅನುವಾದಗಳ ಅಗತ್ಯವನ್ನು ಪ್ರತಿಪಾದಿಸಿದರು. ಕಾರಂತರ ಪ್ರತಿಭೆ, ಕಾರ್ಯಸಿದ್ಧಿಗಳಿಗೆ ಜಗತ್ತಿನ ಶ್ರೇಷ್ಠ ಸಾಹಿತ್ಯ ಪ್ರಶಸ್ತಿಯಾದ ನೊಬೆಲ್ ಬಹುಮಾನವನ್ನೂ ದಕ್ಕಿಸಿಕೊಳ್ಳುವ ಅರ್ಹತೆ ಇದೆ ಎಂಬುದರಲ್ಲಿ ಸಂದೇಹವಿಲ್ಲ. ಅವರ ಅದಮ್ಯ ಚೈತನ್ಯ, ಅಪಾರ ಜೀವನನಿಷ್ಠೆ, ಗಾಢವಾದ ಲೋಕಾನುಭವಗಳು ಕಾರಂತರು ಸನ್ಮಾನಕ್ಕೆ ಇತ್ತ ಉತ್ತರದಲ್ಲಿ ವ್ಯಕ್ತವಾದವು. ಕಿರಿಯರಿಗೂ ಹಿರಿಯರಿಗೂ ಮಾರ್ಗ-



ಸನ್ಮಾನಕ್ಕೆ ಉತ್ತರ ಡಾ. ಶಿವರಾಮ ಕಾರಂತರಿಂದ

ದರ್ಶಕವಾದ ಅವರ ಮಾತುಗಳನ್ನು ಕೇಳುವದೇ ಒಂದು ಶಿಕ್ಷಣವಾಗಿತ್ತು. ಅವರ ಆ ಹಿತವಾದಕ್ಕೆ ಕೃತಜ್ಞತೆಯನ್ನೂ ಇನ್ನೂ ಬರಲಿರುವ ಘನತರ ಸಾಧನೆಗಾಗಿ ಶುಭಾಶಯಗಳನ್ನೂ 'ಭಾರತಿ' ಯು ಅರ್ಪಿಸುತ್ತದೆ.

## ಸಾಹಿತ್ಯಲೋಕದ ಭೀಷ್ಮರ ಕಣ್ಮರೆ

ಸಾಲಿ ರಾಮಚಂದ್ರರಾಯರೆಂದರೆ ಸಾತ್ವಿಕತೆಗೆ ಇನ್ನೊಂದು ಹೆಸರು. ನಿರಂತರ ಹೋರಾಟದ್ದಾದರೂ ಅವರದು ನಿಡಿದಾದ ಬಾಳು, ಶಿಕ್ಷಕರಾಗಿ, ಸಾಹಿತಿಗಳಾಗಿ, ಪತ್ರಕರ್ತರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯ. ತೊಂಭತ್ನಾಲ್ಕನೇ ವರ್ಷದಲ್ಲಿ ಪದಾರ್ಪಣ ಮಾಡಿದ ಕೆಲ ದಿನಗಳಲ್ಲಿಯೇ, ಕಳೆದ ಅಕ್ಟೋಬರ ೩೧ ರ ರಾತ್ರಿ, ಅವರು ನಿಧನ ಹೊಂದಿದರೆಂಬ ವಾರ್ತೆ ಅವರ ಅಪಾರ ಶಿಷ್ಯವರ್ಗವನ್ನೂ, ಸಾಹಿತ್ಯ ಪ್ರೇಮಿಗಳನ್ನೂ ಶೋಕಾಕುಲರನ್ನಾಗಿ ಮಾಡಿತು. ಭಾವಜೀವಿಗಳಾಗಿದ್ದ ಅವರ ಶಿಷ್ಯ ವಾತ್ಸಲ್ಯ, ಕನ್ನಡದ ಪ್ರೇಮ, ಭಕ್ತಿ ಅನುಕರಣೀಯವಾಗಿದ್ದವು. ಸಾಂಸಾರಿಕ ಜೀವನದಲ್ಲಿ ಹಣ್ಣುಹಣ್ಣಾಗಿದ್ದ ಅವರು ಸಾಂಸ್ಕೃತಿಕವಾಗಿ ಮಾತ್ರ ನಿಜವಾದ 'ಹಣ್ಣಾ'ಗಿದ್ದರು, 'ಆವಿನದು ಸೊರೆ ಹಾಲ ಸೊಲ್ಲಿನು', 'ಕನ್ನಡದ ನೆಲದ ಫುಲ್ಲೆನಗೆ ಪಾವನ ತುಲಸಿ' ಎಂಬ ಅವರ ಕವಿತೆಯ ಸಾಲುಗಳನ್ನು ನೆನೆಯದ ಜನವಿಲ್ಲ. ನವೋದಯದ ಕಾಲದಲ್ಲಿಯೂ ನಡುಗನ್ನಡ ಛಂದೋಪ್ರಕಾರವಾದ ಷಟ್ಪದಿಯ ಮೇಲೆ ಅಕ್ಕರೆಯಿಟ್ಟು ಅದನ್ನೇ ಸಮರ್ಥವಾಗಿ ಬಳಸಿ ಕವಿಗಳಾಗಿ ಕೃತಾರ್ಥರಾದವರವರು; ಇಪ್ಪತ್ತಮೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಅವರು ಸಾಹಿತ್ಯದ ವಿವಿಧರೂಪಗಳಲ್ಲಿ ಕೃಷಿಗೈದಿದ್ದಾರೆ. 'ಚಿಗುರೆಲೆ', 'ಕುಸುಮಾಂಜಲಿ', 'ಚಿತ್ರಸೃಷ್ಟಿ' ಅವರ ಕವನಸಂಕಲನಗಳು. ರವೀಂದ್ರರ ಕಥೆಯ ಆಧಾರದ ಮೇಲೆ ಅವರು ರಚಿಸಿದ ಕಥನಕಾವ್ಯ 'ಅಭಿಸಾರ' 'ಜಯಗುರುದೇವ', 'ಯದುಪತಿ', ಕಾದಂಬರಿಗಳು, ಪಾಲಿಭಾಷೆಯಿಂದ ಅನುವಾದಿಸಿದ 'ಬುದ್ಧನ ಜಾತಕ ಕಥೆಗಳು' – ಹೀಗೆ ವೈವಿಧ್ಯಮಯವೂ, ಗುಣಪೂರ್ಣವೂ ಆದ ರಚನೆಗಳನ್ನು ಅವರು ನೀಡಿದರು. 'ತಿಲಾಂಜಲಿ' ಎಂಬ ಶೋಕಗೀತೆಯಂತೂ ಕನ್ನಡದ ಮೊಟ್ಟ ಮೊದಲ ಶೋಕಗೀತೆಯೆಂದು ಎಣಿಸಲ್ಪಡುತ್ತದೆ, ಸ್ವತಃ ಸಂಸ್ಕೃತ ಪಾಂಡಿತ್ಯವುಳ್ಳ ಅವರು ಸಂಸ್ಕೃತದಲ್ಲಿಯೂ ಕಾವ್ಯರಚನಾ ಸಾಮರ್ಥ್ಯವುಳ್ಳವರಾಗಿದ್ದರು. 'ಜಯಕರ್ನಾಟಕ' ಪತ್ರಿಕೆಯ ಸಂಪಾದಕೀಯ ವಿಭಾಗದಲ್ಲಿಯೂ ಅವರ ಸೇವೆ ಸಂದಿತ್ತು. ಬದುಕಿನ ಕೋಟಲೆಯನ್ನು ಸಾಹಿತ್ಯ ಸಿದ್ಧಿಯ ಸಾಹಸದಲ್ಲಿ ಮರೆತ ಅವರ ಘನ ಮನವನ್ನು ನೆನೆದಷ್ಟೂ ತೀರದು. ಅವರ ನಿಧನದಿಂದಾಗಿ ಕನ್ನಡ ನಾಡು ಹಿರಿಯ ಸಾಹಿತ್ಯ ಚೇತನವನ್ನೂ, ಮಾರ್ಗದರ್ಶಿಯನ್ನೂ ಕಳೆದುಕೊಂಡಂತಾಗಿದೆ. 'ಭಾರತಿ' ಯು ಅವರ ಆತ್ಮಕ್ಕೆ ಗೌರವ ಪೂರ್ವಕ ಶ್ರದ್ಧಾಂಜಲಿಗಳನ್ನು ಸಮರ್ಪಿಸುತ್ತಿದೆ.

○

# ಸಾದರ ಸ್ವೀಕಾರ

೧. **ಅನುಭಾವಿ ಅಲ್ಲಮ** (ಉಪನ್ಯಾಸ ಸಂಕಲನ) :
ಸಂ : ನಾ. ಲೋಕೇಶ ಒಡೆಯರ್ ಪ್ರ : ಯುವಹಿರಿಯ ವಿದ್ಯಾರ್ಥಿ ಸಂಘ, ಸಿರಿಗೆರೆ ೧೯೭೮, ಪುಟ : vi + 58, ಬೆಲೆ : ರೂ ೨-೫೦.

೨. **ಅಂಬವ್ವನ ಪದಗಳು** (ಜಾನಪದ ಗೀತ ಸಂಕಲನ) :
ಸಂ : ಎಸ್. ಎಸ್. ಹಿರೇಮಠ, ಎಚ್. ಬಾಲರಾಜು, ಪ್ರ : ಸಮತಾಪ್ರಕಾಶನ, ಹೊಸಪೇಟೆ ೧೯೭೮, ಪುಟ : ೫೭, ಬೆಲೆ : ರೂ ೨-೫೦.

೩. **ಲೀಲಾವತಿ-ಪದ್ಮಾವತಿ** (ಜಾನಪದ ಕಥಾ ಸಂಕಲನ) :
ಸಂ : ಕೃಷ್ಣಮೂರ್ತಿ ಪನೂರು, ಪ್ರ : ಚಿತ್ರದುರ್ಗ ಜಿಲ್ಲಾ ಜನಪದ ಸಾಹಿತ್ಯ ಪ್ರಕಟನಾ ಸಮಿತಿ, ಚಿತ್ರದುರ್ಗ ೧೯೭೮, ಪುಟ : ಬೆಲೆ ರೂ ೧೨-೦೦.

೪. **ಮಾಯಾಮೃಗ** (ನೀಳ್ಗಥನ ಕಾವ್ಯ) :
ಶ್ರೀನಿವಾಸ ವೆಂಕಟೇಶ ಗಲಗಲಿ ಪ್ರ : ಗಲಗಲಿ ಆ್ಯಂಡ ಸನ್ಸ, ಕಾರವಾರ ೧೯೭೮ ಪುಟ : viii + ೨೬, ಬೆಲೆ : ರೂ ೨-೫೦.

೫. **ಉರಿಲಿಂಗದೇವರ ವಚನಗಳು** :
ಸಂ : ಕಾಶಿಪುಟ್ಟ ಸೋಮಾರಾಧ್ಯ, ವೀರಣ್ಣರಾಜೂರ, ಎಸ್. ಎಸ್. ಬೂಸರಡ್ಡಿ ಪ್ರ : ಮಂಗಳಪ್ರಕಾಶನ, ಕಲ್ಯಾಣ ನಗರ, ಧಾರವಾಡ ೧೯೭೮ ಪು : ೩೨ + ೪೦ ಬೆಲೆ : ರೂ ೫-೦೦.

೬. **ಒಡಪುಗಳು** (ಕಥಾಸಂಕಲನ) :
ರಾಘವೇಂದ್ರ ಪಾಟೀಲ. ಪ್ರ : ಕನ್ನಡಸಂಘ, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು ೧೯೭೮, ಪುಟ : xiii + ೪೫, ಬೆಲೆ : ರೂ. ೪-೦೦.

೭. **ನಾನೂ ನಮ್ಮಪ್ಪನ್ಹ್ಯಾಂಗs** (ಕವನ ಸಂಕಲನ) :
ಸಿದ್ಧರಾಮ ಪೋಲೀಸ ಪಾಟೀಲ. ಪ್ರ : ಕಾಡಸಿದ್ಧೇಶ್ವರ ಪ್ರಕಾಶನ, ಡಿಕ್ಸಂಗಿ (ಬಿ) ೧೯೭೮, ಪುಟ : xii + ೪೨, ಬೆಲೆ : ರೂ. ೪-೦೦.

೮. **ಹರಡೆಕರ ಮಂಜಪ್ಪನವರು** (ಜೀವನ ಚರಿತ್ರೆ) :
ಸಿದ್ದಯ್ಯ ಪುರಾಣಿಕ. ಪ್ರ : ವೀರಶೈವ ಅಧ್ಯಯನ ಸಂಸ್ಥೆ, ಗದಗ ೧೯೭೮, ಪುಟ : ೧೩೪, ಬೆಲೆ : ರೂ. ೧-೦೦.

## ಪತ್ರಿಕೆಗಳು :

೧. ಕನ್ನಡನುಡಿ, ಸಾಹಿತ್ಯಪರಿಷತ್ಪತ್ರಿಕೆ
೨. ಜೀವನ ವಿಕಾಸ
೩. ಪರಂಜ್ಯೋತಿ
೪. ಮುನ್ನಡೆ (ದೀಪಾವಳಿಯ ವಿಶೇಷಾಂಕ)
೫. KOREAN NEWS

○

# ಈ ಸಂಚಿಕೆಯ ಲೇಖಕರು

೧ **ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳ :**
ಕನ್ನಡ ಅಧ್ಯಾಪಕರು, ಮಂಗಳಗಂಗೋತ್ರಿ, ಮಂಗಳೂರು. (ದ.ಕ.)

೨ **ವಿ. ಗೋಪಾಲಕೃಷ್ಣ :**
ದಾರಿನಾಯಕನಪಾಳ್ಯ, ತಾ : ಗೌರಿಬಿದನೂರು ಜಿ : ಕೋಲಾರ.

೩ **ಶ್ರೀ ಆರ್. ಎಸ್. ಗುರವ್ :**
ಶಾಸನ ಸಂಶೋಧನ ಲೇಖಕರು, ಕೊಪ್ಪದ ಕೆರೆ, ಧಾರವಾಡ.

೪ **ಶ್ರೀಮತಿ ವಿಜಯಶ್ರೀ ಸಬರದ :**
ಕನ್ನಡ ಅಧ್ಯಾಪಕಿ, ಅಕ್ಕಮಹಾದೇವಿ ಮಹಿಳಾ ವಿದ್ಯಾಲಯ, ಬೀದರ.

೫ **ಡಾ. ಎಂ. ಬಿ. ಕೊಟ್ರಶೆಟ್ಟಿ :**
ಪ್ರವಾಚಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೬ **ಡಾ. ಎಂ. ಎಸ್. ಲಠ್ಠೆ :**
ಅಧ್ಯಾಪಕರು, ಕನ್ನಡ ವಿಭಾಗ, ಸ್ನಾತಕೋತ್ತರ ಕೇಂದ್ರ, ಕಲಬುರ್ಗಿ.

೭ **ಶ್ರೀ ಸಣ್ಣ ನಂಜೇಗೌಡ :**
ಸಹಾಯಕ ಪತ್ರಾಗಾರಪಾಲಕ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ. ಬೆಂಗಳೂರು.

೮ **ಶ್ರೀ ಶಿವಾನಂದ ಮೂಲಿಮನಿ :**
ಕನ್ನಡ ಅಧ್ಯಾಪಕರು, ಲಿಂಗರಾಜ ಕಾಲೇಜು, ಬೆಳಗಾವಿ.

೯ ಶ್ರೀ ಜಿ. ಎಂ. ಹೆಗಡೆ :
ಕನ್ನಡ ಅಧ್ಯಾಪಕರು, ಕಿಟ್ಟೆಲ್ ಕಾಲೇಜು, ಧಾರವಾಡ.

೧೦ **ಡಾ. ಎಂ. ಎಂ. ಕಲಬುರ್ಗಿ :**
ಪ್ರವಾಚಕರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ.

೧೧ **ಕು. ಚೆನ್ನಕ್ಕ ಎಲಿಗಾರ :**
ಕನ್ನಡ ಅಧ್ಯಾಪಕಿ, ಮೃತ್ಯುಂಜಯ ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ.

೧೨ **ಶ್ರೀ ಕೃಷ್ಣಮೂರ್ತಿ ಹನೂರು :**
ಕನ್ನಡ ಅಧ್ಯಾಪಕರು, ಸರ್ಕಾರಿ ಕಲಾಕಾಲೇಜು, ಚಿತ್ರದುರ್ಗ, ೫೭೭೫೦೧.

೧೩ **ಡಾ. ಜೆ. ಎಸ್. ಕುಳ್ಳಿ :**
ಪ್ರವಾಚಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ.

೧೪ **ಶ್ರೀ ನಿಂಗಣ್ಣ ಸಣ್ಣಕ್ಕಿ :**
ಶಿಕ್ಷಕರು, ನ್ಯೂ ಇಂಗ್ಲೀಷ್ ಸ್ಕೂಲ್, ಗೋಕಾಕ.

೦